# ವಚನೋದ್ಯಾನ

(೧೫೮ ಹೊಸ ವಚನಗಳೊಂದಿಗೆ)

ಡಾ. ಸಿದ್ಧಯ್ಯ ಪುರಾಣಿಕ
('ಕಾವ್ಯಾನಂದ')

ಶ್ರೀಗಿರಿ ಪ್ರಕಾಶನ
'ಶ್ರೀಗಿರಿ' 4/5 ಎ ಅಲಿ ಆಸ್ಕರ್‌ರಸ್ತೆ
ಬೆಂಗಳೂರು - ೫೬೦ ೦೫೨

ವಚನೋದ್ಯಾನ (೧೫೮ ಹೊಸ ವಚನಗಳೊಂದಿಗೆ) : ಡಾ. ಸಿದ್ಧಯ್ಯ ಪುರಾಣಿಕ ('ಕಾವ್ಯಾನಂದ')

ಪ್ರಕಾಶಕರು :
ಶ್ರೀಗಿರಿ ಪ್ರಕಾಶನ
'ಶ್ರೀಗಿರಿ' 4/5 'ಎ' ಅಲಿ ಆಸ್ಕರ್‌ರಸ್ತೆ
ಬೆಂಗಳೂರು - ೫೬೦ ೦೫೨
✆ : ೨೨೨೬೪೩೬೧

© ಪ್ರಕಾಶಕರು

ಮೊದಲ ಮುದ್ರಣ : ೧೯೭೭
ಎರಡನೆ ಮುದ್ರಣ : ೨೦೦೦
ಮೂರನೆ ಪರಿಷ್ಕೃತ ಮುದ್ರಣ : ೨೦೧೧

ಕಾಗದ : Mysore White Paper 60 GSM

ಪುಟ : xxviii + 364 = 392

ಬೆಲೆ : ರೂ. ೧೫೦/-

ಛಾಯಾಕ್ಷರ ಜೋಡಣೆ :
ವರ್ಷಿಣಿ ಗ್ರಾಫಿಕ್ಸ್
ಬೆಂಗಳೂರು–104, ಫೋ : 9242431040

ಮುದ್ರಕರು
ಸ್ನೇಹಾ ಪ್ರಿಂಟರ್ಸ್
ನಂ. 114, 4ನೇ ಅಡ್ಡರಸ್ತೆ, ಬಿ.ಸಿ.ಸಿ. ಬಡಾವಣೆ
ಅತ್ತಿಗುಪ್ಪೆ, ವಿಜಯನಗರ 2ನೇ ಹಂತ
ಬೆಂಗಳೂರು - ೪೦. ಫೋ : 23392814
e-mail-snehaprinters@gmail.com
karthikenterprises@gmail.com

## ‘ವಚನೋದ್ಯಾನ’ದಲ್ಲಿ

ಈ ಸಂಕಲನದ ಒಂದು ವಚನ ಇದು :

ವಿದ್ಯೆ ಬಂತು, ವಿನಯ ಹೋಯ್ತು;
ಬುದ್ಧಿ ಬಂತು, ಶ್ರದ್ಧೆ ಹೋಯ್ತು ;
ಶ್ರದ್ಧೆ ಬಂತು, ವಿವೇಚನೆ ಹೋಯ್ತು ;
ಸಮೃದ್ಧಿ ಬಂತು, ಸಂಸ್ಕೃತಿ ಹೋಯ್ತು ;
ವಿಜ್ಞಾನ ಬಂತು, ಸಮಾಧಾನ ಹೋಯ್ತು ;
ಶರೀರಸ್ವಾಸ್ಥ್ಯ ಬಂತು, ಚಿತ್ತಸ್ವಾಸ್ಥ್ಯ ಹೋಯ್ತು ;
ದೀರ್ಘಾಯುಷ್ಯ ಬಂತು, ಜೀವನಸ್ವಾರಸ್ಯ ಹೋಯ್ತು ;
ಬೋಧನೆ ಬಂತು, ಸಾಧನೆ ಹೋಯ್ತು ;
ಮಾತು ಬಂತು, ಕೃತಿಯು ಹೋಯ್ತು ;
ಜಾತಿ ಬಂತು, ಪ್ರೀತಿ ಹೋಯ್ತು ;
ಸ್ವಾತಂತ್ರ್ಯ ಬಂತು, ಸೌಜನ್ಯ ಹೋಯ್ತು ;
ಸಿದ್ಧಯ್ಯ ಪುರಾಣಿಕ ಬಂದ,
ಸ್ವತಂತ್ರ ಧೀರ ಸಿದ್ಧೇಶ್ವರ ಹೋದ ! (೧೦೦)

ಇದನ್ನು ಓದುತ್ತಲೇ ಶ್ರೀ ಸಿದ್ಧಯ್ಯ ಪುರಾಣಿಕರನ್ನು ನಾನು ಮೊದಲು ಯಾವಾಗ ನೋಡಿದೆ ಎಂದುಕೊಂಡು ನೆನಪಿನ ಗಣಿಯೊಳಕ್ಕೆ ಇಳಿದೆ. ೧೯೫೫ರಲ್ಲಿ ಮೈಸೂರಿನಲ್ಲಿ ನಡೆದ ಕನ್ನಡ ಸಾಹಿತ್ಯ ಸಮ್ಮೇಳನದ ಲೇಖಕರ ಗೋಷ್ಠಿಗೆ ಅವರು ಅಧ್ಯಕ್ಷರಾಗಿದ್ದರು. ತುಂಬಿಕೊಂಡ ಕೆನ್ನೆಗಳ ಎತ್ತರದ ವ್ಯಕ್ತಿತ್ವ ಅವರದು. ತಾರುಣ್ಯ, ಉತ್ಸಾಹಗಳಿಂದ ಅವರು ಪುಟಿಯುತ್ತಿದ್ದರು. ಅವರ ಅಧ್ಯಕ್ಷ ಭಾಷಣ ಈಗಲೂ ನನಗೆ ನೆನಪಿಗೆ ಬರುತ್ತದೆ. ಆಗಿನ್ನೂ ವಿದ್ಯಾರ್ಥಿಯಾಗಿದ್ದ ನಾನು ಅವರಿಗೆ ನನ್ನ ಸಂತೋಷವನ್ನು ಸೂಚಿಸಿದ್ದೆ. ಪುರಾಣಿಕರು ತುಂಬ ಸ್ನೇಹಮಯಿಯಾಗಿ ಮಾತಾಡಿದ್ದರು. ಆದರೆ ಅದು ಹತ್ತರ ಕೂಡ ಹನ್ನೊಂದರ ಸಂದರ್ಭ.

ಮುಂದೆ ೧೯೬೪ರಲ್ಲಿ ಅವರನ್ನು ಮತ್ತೆ ನೋಡಿದೆ. ಮೈಸೂರಿನ ಕೃಷ್ಣಮೂರ್ತಿ ಪುರಂನಲ್ಲಿ ರಾಜ್ಯದ ವಯಸ್ಕರ ಶಿಕ್ಷಣ ಸಂಸ್ಥೆಯ ಅಟ್ಟದ ಮೇಲೆ. ಸಂಸ್ಥೆ ಪ್ರಕಟಿಸಿದ್ದ ಪುರಾಣಿಕರ ‘ಶರಣಚರಿತಾಮೃತ’ ಪುಸ್ತಕದ ಬಿಡುಗಡೆ ಸಮಾರಂಭ. ಅದರಲ್ಲಿ ಪುರಾಣಿಕರೂ ಭಾಗಿಗಳು. ಒಂಬತ್ತು ವರ್ಷಗಳ ಅವಧಿಯಲ್ಲಿ ಅನೇಕ ಬದಲಾವಣೆಗಳಾಗಿ ಹೋಗಿದ್ದವು. ಕನ್ನಡನಾಡಿನ ಏಕೀಕರಣವಾಗಿತ್ತು. ಹೈದರಾಬಾದ್ ಸೇವೆಯಲ್ಲಿದ್ದ ಪುರಾಣಿಕರು ಮೈಸೂರು ಸರ್ಕಾರದ ಸೇವೆಗೆ ಬಂದಿದ್ದರು. ಬಹುಶಃ ಆಗ ಅವರು ಹಣಕಾಸಿನ ಇಲಾಖೆಯಲ್ಲಿ ಅಧಿಕಾರದಲ್ಲಿದ್ದರೆಂದು ತೋರುತ್ತದೆ.

ಹಿರಿಯರೊಬ್ಬರು ನನ್ನನ್ನು ಪುರಾಣಿಕರಿಗೆ ಪರಿಚಯಿಸಿದರು. ಅದೇ ತಾನೆ ನಾನು ಅಮೆರಿಕೆಯಿಂದ ನನ್ನ ಶಿಕ್ಷಣ ಮುಗಿಸಿಕೊಂಡು ಬಂದಿದ್ದೆ. ಇದನ್ನು ತಿಳಿದು ಅವರು ಸಂತೋಷಪಟ್ಟರು. “ಏನು, ನಿಮ್ಮನ್ನು ನೋಡಿದರೆ ಅಮೆರಿಕಾದಿಂದ ಬಂದವರ ಹಾಗೆ ಕಾಣುವುದಿಲ್ಲವಲ್ಲ” ಎಂದು ಅವರು ನಗೆಯಾಡಿದ್ದು ಕಣ್ಣೆದುರು ಕಟ್ಟಿದೆ.

ಮತ್ತೆ ಒಂದು ಒಂದೂವರೆ ವರ್ಷದ ಮೇಲೆ ಅವರನ್ನು ಮಡಕೇರಿಯಲ್ಲಿ ನೋಡಿದೆ. ಆಗ ಅವರು ಅಲ್ಲಿ ಜಿಲ್ಲಾಧಿಕಾರಿಯಾಗಿದ್ದರು. ಒಂದು ಸಂಜೆ ಒಂದು ಮುಂಜಾನೆ ಅವರ ಮನೆಯಲ್ಲಿ ಆಧುನಿಕ ಸಾಹಿತ್ಯ, ಕುವೆಂಪು ಮುಂತಾದ ವಿಷಯಗಳ ಮೇಲೆ ಏನೇನೋ ಮಾತನಾಡಿದೆವು. ಅಲ್ಲಿಂದ ಕಳೆದ ಒಂದು ದಶಕದಲ್ಲಿ ನಾವು ಅನೇಕ ಸಲ ಸಂಧಿಸಿದ್ದೇವೆ ; ಸಭೆ ಸಮಿತಿಗಳಲ್ಲಿ ಸೇರಿದ್ದೇವೆ ; ರೈಲಿನಲ್ಲಿ ಒಟ್ಟಾಗಿ ಪ್ರಯಾಣ ಮಾಡಿದ್ದೇವೆ. ಕನ್ನಡ ಸಾಹಿತ್ಯ ಪರಿಷತ್ತಿನ ಕನ್ನಡ ಕೋಶದ ಸಂಪಾದಕ ಮಂಡಲಿಯಲ್ಲಿ ನಾವು ಸದಸ್ಯರಾಗಿರುವುದರಿಂದ ತಿಂಗಳಲ್ಲಿ ಒಂದೆರಡು ದಿನ ಕಲೆಯುವ ಅವಕಾಶ ಬಂದಿದೆ. ಅತಿಯಾದ ಪರಿಚಯ ತಿರಸ್ಕಾರವನ್ನು ಮೂಡಿಸುತ್ತದೆ ಎನ್ನುವುದು ಪ್ರಸಿದ್ಧವಾದ ಮಾತು. ಆದರೆ ಸಿದ್ಧಯ್ಯ ಪುರಾಣಿಕರೊಂದಿಗೆ ನನ್ನ ಪರಿಚಯ ಗಾದೆಯನ್ನು ಸುಳ್ಳಾಗಿಸಿದೆ.

ಬೇಕಾದದ್ದು ಹೋಗಿ ಬೇಡವಾದದ್ದು ಬಂತು ; ಸಹಜವಾದದ್ದು ಹೋಗಿ ಕೃತಕ ವಾದದ್ದು ಬಂತು ಎಂಬುದನ್ನು ಹೇಳುವಾಗ “ಸಿದ್ಧಯ್ಯ ಪುರಾಣಿಕ ಬಂದ, ಸ್ವತಂತ್ರಧೀರ ಸಿದ್ಧೇಶ್ವರ ಹೋದ” ಎಂದು ಪುರಾಣಿಕರು ಉದ್ಗರಿಸಿದ್ದಾರೆ. ನನ್ನ ಅನುಭವದಲ್ಲಿ ಸ್ವತಂತ್ರಧೀರ ಸಿದ್ಧೇಶ್ವರ, ಸಿದ್ಧಯ್ಯ ಪುರಾಣಿಕರ ರೂಪದಲ್ಲಿ ಪ್ರತ್ಯಕ್ಷ ಗೊಂಡಿದ್ದಾನೆ. ಯಾವ ಮೌಲ್ಯಗಳು ಕಳೆದು ಹೋದವೆಂದು ಪುರಾಣಿಕರು ಪರಿತಪಿಸುತ್ತಿದ್ದಾರೆಯೋ ಆ ಮೌಲ್ಯಗಳನ್ನೆಲ್ಲ ವಿನಯ, ಶ್ರದ್ಧೆ, ವಿವೇಚನೆ, ಸಂಸ್ಕೃತಿ, ಸಮಾಧಾನ, ಸಾಧನೆ, ಪ್ರೀತಿ, ಸೌಜನ್ಯ ನಾನು ಅವರಲ್ಲಿ ಮತ್ತೆ ಮತ್ತೆ ಕಾಣುತ್ತಿದ್ದೇನೆ. ಚಿತ್ತ ಸ್ವಾಸ್ಥ್ಯವನ್ನೂ, ಜೀವನ ಸ್ವಾರಸ್ಯವನ್ನೂ ಅವರು ಪೋಷಿಸಿಕೊಂಡು ಬಂದಿದ್ದಾರೆ. ಅಧಿಕಾರಲಾಲಸೆ ಮಹತ್ವಾಕಾಂಕ್ಷೆಗಳಿಗೆ ಬಲಿಯಾಗಿ ಈ ಗುಣಗಳನ್ನು ಕಳೆದುಕೊಂಡು, ತಮ್ಮ ಬದುಕನ್ನು ಮಾತ್ರವಲ್ಲ ಸಮಾಜ ಜೀವನವನ್ನೇ ಕೆಡಿಸುವ ರಾಕ್ಷಸ ಪ್ರವೃತ್ತಿ ನಮ್ಮ ಸುತ್ತಲೂ ತುಂಬಿಕೊಂಡಿರುವಾಗ ಪುರಾಣಿಕರಂಥವರ ವ್ಯಕ್ತಿತ್ವ ಆಸೆಯ ಕಿಡಿಗಳನ

ನ್ನು ಉಳಿಸುತ್ತದೆ; ಬದುಕಿನಲ್ಲಿ ಭರವಸೆಯನ್ನು ಮೂಡಿಸುತ್ತದೆ.

ಸ್ವತಂತ್ರಧೀರ ಸಿದ್ಧೇಶ್ವರ ಎಲ್ಲ ಕಾಲಕ್ಕೆ ಎಲ್ಲರ ಪಾಲಿಗೆ ಲಭ್ಯನಲ್ಲ. ಆದರೆ ಪುರಾಣಿಕರಂಥವರು ಬದುಕಿನ ಆ ಕೊರೆಯನ್ನು ತುಂಬಿಕೊಡುತ್ತಾರೆ. ಮಾತು ಕೃತಿಗಳ ನಡುವಿನ ಅಂತರ ಮಹಾಕಂದರವಾಗಿ ಏರ್ಪಟ್ಟು ಮಾತು ಅರ್ಥವನ್ನು ಕಳೆದುಕೊಂಡಾಗ, ಅರ್ಥವತ್ತಾದ ಮಾತುಗಳನ್ನು ನಾವು ಹುಡುಕಬೇಕಾಗುತ್ತದೆ. ಆಗ ನಮ್ಮ ಅದೃಷ್ಟದಿಂದ ಒಮ್ಮೊಮ್ಮೆ ‘ವಚನೋದ್ಯಾನ’ದ ಬಾಗಿಲು ತೆರೆಯುತ್ತದೆ.

ಸಿದ್ಧಯ್ಯ ಪುರಾಣಿಕರ ವಚನಗಳು ಕೆಲವು ವರ್ಷಗಳ ಹಿಂದೆ ಶಿಕ್ಷಣ ಇಲಾಖೆಯ ‘ಜೀವನ ವಿಕಾಸ’ ಮಾಸಪತ್ರಿಕೆಯಲ್ಲಿ ಪ್ರತಿ ತಿಂಗಳೂ ಪ್ರಕಟವಾಗುತ್ತಿದ್ದವು. ಅವನ್ನು ಓದಿ ಸಂತೋಷಿಸುತ್ತಿದ್ದವರಲ್ಲಿ ನಾನೊಬ್ಬ . ಪುರಾಣಿಕರು ಭೇಟಿಯಾದಾಗಲೆಲ್ಲ ನಾನು ನನ್ನ ಮೆಚ್ಚುಗೆ ಸೂಚಿಸುತ್ತಿದ್ದೆ. ಒಂದೆರಡು ಸಲ ಕಾಗದದಲ್ಲಿ ಬರೆದೂ ಹೇಳಿದ್ದೆ. ವಚನಗಳ ಸಂಗ್ರಹವೊಂದನ್ನು ಪ್ರಕಟಿಸಬೇಕೆಂದು ಒಮ್ಮೆ ಅವರಿಗೆ ಸಲಹೆ ಮಾಡಿದೆ, ತಾವೂ ಅದನ್ನು ಯೋಚಿಸುತ್ತಿರುವುದಾಗಿ ಹೇಳಿದ್ದರು. ಇದಾಗಿ ಆಗಲೇ ಎರಡು ಮೂರು ವರ್ಷಗಳು ಕಳೆದಿವೆ. ಈಗ ಈ ಸಂಗ್ರಹ ‘ವಚನೋದ್ಯಾನ’ ಪ್ರಕಟವಾಗುತ್ತಿದೆ. ಈ ಸಂದರ್ಭದಲ್ಲಿ ನಾಲ್ಕು ಕೆಳೆನುಡಿಗಳ ನ್ನಾಡುವುದಕ್ಕೆ ನನಗೆ ತುಂಬ ಸಂತೋಷವೆನಿಸುತ್ತದೆ. ಇಂಥದೊಂದು ಅವಕಾಶವನ್ನು ಕಲ್ಪಿಸಿಕೊಟ್ಟ ಹಿರಿಯರಾದ ಪುರಾಣಿಕರಿಗೆ ನಾನು ಕೃತಜ್ಞನಾಗಿದ್ದೇನೆ.

ಈ ಮೊದಲ ಮಾತುಗಳನ್ನು ಬರೆಯಲು ನನಗಿರುವ ಅರ್ಹತೆ ಎಂದರೆ ಅವರು ನನ್ನಲ್ಲಿಟ್ಟಿರುವ ಪ್ರೀತಿಯೊಂದೇ. ವಾಸ್ತವವಾಗಿ ಇಂಥ ಕೃತಿಗಳಿಗೆ ಪೀಠಿಕೆ ಮುನ್ನುಡಿಗಳ ಅಗತ್ಯವಿಲ್ಲ. ಅವು ಉದ್ಯಾನದ ಬಾಗಿಲಲ್ಲಿ ಕಾವಲುಗಾರನನ್ನು ನಿಲ್ಲಿಸಿದ ಹಾಗೆ. ಮೆಚ್ಚುಗೆಯ ಮಾತನ್ನಾಡುವ ಅವಕಾಶವೆಂದು ಭಾವಿಸಿದರೂ ತಪ್ಪಾಗುತ್ತದೇನೊ. ಪುರಾಣಿಕರದೇ ಮಾತು ನೆನಪಿಗೆ ಬರುತ್ತದೆ: “ಬೆಳಕಿತ್ತ ದೀಪಕ್ಕೆ ಮಾನಪತ್ರ ಕೊಡುವರಾರಯ್ಯ?” (೨೧೪). ಮಾನಪತ್ರ ಕೊಡುವ ಮೂರ್ಖರೂ ಇರಬಹುದು, ಆದರೆ ಜೀವನದಲ್ಲಿ ಜಾಣತನ ಎಂದರೆ ಬೆಳಕಿನಲ್ಲಿ ನಡೆಯುವುದಷ್ಟೇ. ಪುರಾಣಿಕರ ಪ್ರಕೃತ ಗ್ರಂಥ ಒಂದು ಬೆಳಕಿನ ಕುಡಿ.

* * *

ಎಂಟುನೂರು ವರ್ಷಗಳ ಹಿಂದೆಯೇ ಕನ್ನಡವನ್ನು ವಿಶ್ವಸಾಹಿತ್ಯದ ಔನ್ನತ್ಯಕ್ಕೇರಿಸಿದ ಸಾಹಿತ್ಯ ಪ್ರಕಾರ  ವಚನ. ಅಂಕಿತಗಳನ್ನೊಳಗೊಂಡ ಆ ಅನುಭಾವೀ ಗದ್ಯಗೀತೆಗಳು ಇಂದಿನ ನಮ್ಮ ಅನುಭವಗಳಿಗೂ ಹೊಳಪು ಕೊಟ್ಟು ಕಾಲ ದೇಶಗಳ ಕಟ್ಟನ



ನ್ನು ಒಡೆಯಬಲ್ಲ ಶಕ್ತಿಯ ಕಿಡಿಗಳು. ಈ ಸಾಹಿತ್ಯ ಪ್ರಕಾರವನ್ನು ನಮ್ಮ ಕಾಲದಲ್ಲೂ ಬಳಸಿಕೊಳ್ಳುವ ಬಗೆ ಬಗೆಯ ಪ್ರಯತ್ನಗಳು ನಡೆದಿವೆ. ಅದರ ವಿವರಗಳನ್ನು ನಾನು ಈಗಾಗಲೇ ಪ್ರೊಫೆಸರ್ ಎಸ್.ವಿ. ಪರಮೇಶ್ವರ ಭಟ್ಟರ ‘ಉಪ್ಪು ಕಡಲು’ ಎಂಬ ಏಳುನೂರು ವಚನಗಳ ಸಂಗ್ರಹಕ್ಕೆ ಬರೆದ ಮುನ್ನುಡಿಯಲ್ಲಿ ಪ್ರಸ್ತಾಪಿಸಿದ್ದೇನೆ. ಆ ವಿಷಯಗಳನ್ನು ಮತ್ತೆ ಇಲ್ಲಿ ಹೇಳಬೇಕಾದ ಅಗತ್ಯವಿಲ್ಲ.

ಬೇರೆ ಬೇರೆ ಮನೋಭಾವದ, ವಿವಿಧ ಉದ್ದೇಶಗಳ ಹಲವಾರು ಮಂದಿ ಇಂದು ವಚನಗಳನ್ನು ಬರೆಯುತ್ತಿದ್ದಾರೆ. ಡಾ॥ ಎಸ್.ವಿ. ರಂಗಣ್ಣ, ಡಾ॥ ಜಚನಿ ಮತ್ತು ಪ್ರೊ. ಪರಮೇಶ್ವರ ಭಟ್ಟರು ಈ ಕ್ಷೇತ್ರದಲ್ಲಿ ದೊಡ್ಡ ಹೆಸರು ಸಂಪಾದಿಸಿದ್ದಾರೆ. ಈಗ ಈ ಪಟ್ಟಿಗೆ ಡಾ. ಸಿದ್ಧಯ್ಯ ಪುರಾಣಿಕರೂ ಸೇರಿದ್ದಾರೆ. ತಾವು ಬರೆದ ದೊಡ್ಡ ಸಂಖ್ಯೆಯ ವಚನಗಳನ್ನು ಆಯ್ದು ಇಲ್ಲಿ ಗ್ರಂಥರೂಪದಲ್ಲಿ ಪ್ರಕಟಿಸುತ್ತಿದ್ದಾರೆ. ಇದು ಕಾಡನ್ನು ಸೋಸಿ ಉದ್ಯಾನ ಮಾಡಿದ ಕಲಾಕಾಯಕ. ಅವರಿಗೆ ಸಂಖ್ಯೆಯಲ್ಲಿ ನಂಬಿಕೆ ಇಲ್ಲ. “ಗಾತ್ರಕ್ಕೆ ಪಾತ್ರತೆಯ ಬಲಿ, ಅಗಲಕ್ಕೆ ಆಳದ ಬಲಿ, ಆಳಕ್ಕೆ ಎತ್ತರದ ಬಲಿ, ಎತ್ತರಕ್ಕೆ ಬಿತ್ತರದ ಬಲಿ” ಎನ್ನುವ ಅವರು “ಮಾಹಿತಿಯು ಸಮೃದ್ಧವಾಗುತ್ತಿರುವಂತೆಯೇ ಸನ್ಮತಿಯು ಬಡವಾಗುತ್ತಿದೆಯಯ್ಯಾ” ಎಂದು ಕೊರಗುತ್ತಾರೆ (೩೦೯). ಮಾಸಪತ್ರಿಕೆಯ ಸಂಚಿಕೆಗಳಲ್ಲಿ ಬಿಡಿಬಿಡಿಯಾಗಿ ಪ್ರಕಟಗೊಂಡಿದ್ದ ಪುರಾಣಿಕರ ವಚನಗಳು ಓದುಗರ ಮೇಲೆ ಒಟ್ಟಂದದ ಪ್ರಭಾವ ಬೀರಲು ಸಾಧ್ಯವಿರಲಿಲ್ಲ. ಈಗ ಅವು ಒಟ್ಟಾಗಿ ಪ್ರಕಟಗೊಳ್ಳುತ್ತಿರುವುದರಿಂದ ಅವುಗಳ ಆಕರ್ಷಣೆಯಿಂದ ತಪ್ಪಿಸಿಕೊಳ್ಳುವುದು ನಮಗೆ ಸಾಧ್ಯವಾಗುವುದಿಲ್ಲ. ಈ ಸಂಕಲನದ ಪ್ರಕಟಣೆಯಿಂದ ಪುರಾಣಿಕರು ನಮ್ಮ ಕಾಲದ ವಚನಕಾರರಲ್ಲಿ ತಮ್ಮದೇ ಆದ ಒಂದು ಸ್ಥಾನವನ್ನು ಪಡೆದುಕೊಳ್ಳುತ್ತಿದ್ದಾರೆ.

ಗದ್ಯಗೀತೆಗಳ ಈ ಆಧುನಿಕ ಸಾಹಿತ್ಯ ಪ್ರಕಾರವನ್ನು ‘ವಚನ’ ಪ್ರಕಾರವೆಂದು ಗುರುತಿಸಲು, ಅವುಗಳ ಲೇಖಕರನ್ನು ‘ವಚನಕಾರ’ರೆಂದು ಕರೆಯಲು ಕೆಲವರಿಗೆ ಇಷ್ಟವಿಲ್ಲ. ಈ ಮಾತುಗಳನ್ನು ಅವುಗಳ ಮೂಲ ಸಂದರ್ಭಕ್ಕೇ ಮೀಸಲಿಡಬೇಕೆಂಬುದು ಅಂಥವರ ಅಭಿಪ್ರಾಯ. ಆದರೆ ವಚನ, ವಚನಕಾರ ಎಂಬ ಮಾತುಗಳನ್ನು ರಚನೆಯ ತಾಂತ್ರಿಕ ಸ್ವರೂಪಕ್ಕೆ ಸಂಬಂಧಿಸಿದ ಅರ್ಥದಲ್ಲಿ ಮಾತ್ರ ಬಳಸಲಾಗುತ್ತಿದೆಯೇ ಹೊರತು, ಹನ್ನೆರಡನೆಯ ಶತಮಾನದ ಶರಣ ಪರಂಪರೆಯ ಮುಂದುವರಿಕೆ ಎಂಬ ಅರ್ಥದಲ್ಲಿ ಅಲ್ಲ ಎಂಬುದನ್ನು ನಾವು ನೆನಪಿಡಬೇಕು. ಒಂದು ಕಾಲದ ಸಾಹಿತ್ಯ ಇನ್ನೊಂದು ಕಾಲದಲ್ಲಿ, ಮೂಲ ಧ್ಯೇಯ ಧೋರಣೆಗಳನ್ನು ಯಥಾವತ್ತಾಗಿ ಕಾಪಾಡಿಕೊಂಡು ಪುನರಾವರ್ತನೆಗೊಳ್ಳುವುದಿಲ್ಲ ಎಂಬುದು ಸ್ಪಷ್ಟ. ರಂಗಣ್ಣ, ಜಚನಿ, ಪರಮೇಶ್ವರ ಭಟ್ಟ ಮೊದಲಾದವರ ‘ರಚನೆ’ಗಳು ಹನ್ನೆರಡನೆ ಶತಮಾನದ ವಚನಗಳ ‘ರಚನೆ’ಗೆ ಹತ್ತಿರವಾದವು. ಅಭಿವ್ಯಕ್ತಿಯ ವಿಧಾನದಲ್ಲಿ ತಾಂತ್ರಿಕ ಅಪೇಕ್ಷೆಗಳನ್ನು

ಅವು ಈಡೇರಿಸುತ್ತವೆ. ಆರಾಧ್ಯ ಅಥವಾ ಸಾಂಕೇತಿಕ ಅಂಕಿತವೊಂದು ಸೇರಿಕೊಂಡು ಪ್ರಾಚೀನ ರಚನೆಯ ಮಾದರಿಗೆ ದೃಢತೆಯನ್ನು ತರುತ್ತದೆ. ಇಂಥ ರಚನೆಗಳಲ್ಲಿ ನಾವು 'ವಚನ' ಎಂದು ಕರೆಯುವ ಹಾಗೆ ಕುವೆಂಪು ಅವರ 'ಕಿಂಕಿಣಿ'ಯ ರಚನೆಗಳನ್ನಾಗಲಿ ಆನಂದರ 'ಪಕ್ಷಿಗಾನ'ದ ರಚನೆಗಳನ್ನಾಗಲಿ 'ವಚನ'ಗಳೆಂದು ಕರೆಯಲು ಬರುವುದಿಲ್ಲ. ಅವು 'ವಚನ ಕವನಗಳು', ಎಂದರೆ 'ಗದ್ಯಗೀತೆಗಳು'. ಕೆಲವರ ರಚನೆಗಳನ್ನು ತಾಂತ್ರಿಕ ಅಗತ್ಯಗಳ ಪೂರೈಕೆಯಾಗಿರಬಹುದು; ಇನ್ನು ಕೆಲವರ ರಚನೆಗಳಲ್ಲಿ ಆಗದಿರಬಹುದು. ಆದರೆ ಸಾಮಾನ್ಯ ಸ್ವರೂಪದಲ್ಲಿ   ರೂಪಾಂಶದಲ್ಲಿ   ಇವು ವಚನಗಳೆ.

"೨೦ನೇ ಶತಮಾನದಲ್ಲಿ ಕೂಡ ಜಚನಿ, ಜ।। ಶಿವಕುಮಾರ ಸ್ವಾಮಿಗಳು, ಗಂಗಾಧರ ರಾಜಯೋಗೀಂದ್ರ ಸ್ವಾಮಿಗಳು, ಜ।। ಮಾತೆ ಮಹಾದೇವಿಯವರು, ವಿಜಯಕುಮಾರ್, ಮಹಾದೇವ ಬಣಕಾರ್ ಇತ್ಯಾದಿಯಾಗಿ ಅನೇಕರು ವಚನಗಳನ್ನು ಬರೆದರು. ಸಾಹಿತ್ಯ ರಚನೆಯಲ್ಲಿಯೇ ತೊಡಗಿದ್ದ ಕುವೆಂಪು, ತೀನಂಶ್ರೀ, ಎಸ್.ವಿ. ರಂಗಣ್ಣ, ಎಸ್.ವಿ. ಪರಮೇಶ್ವರ ಭಟ್ಟ ಇತ್ಯಾದಿಯಾಗಿ ಅನೇಕರು ವಚನಗಳನ್ನು ಬರೆದರು." ಎಂದು ಹೇಳಿ ಅಡಿ ಟಿಪ್ಪಣಿಯಲ್ಲಿ "ಈ ವಿಂಗಡಣೆ ಅನುಭಾವಿಗಳು, ಸಾಹಿತಿಗಳು ಎಂಬುದನ್ನು ಹೇಳುತ್ತದೆ" ಎನ್ನುತ್ತಾರೆ ಶ್ರೀ ವಿಜಯಕುಮಾರ್.* ಮೂಲಭೂತವಾಗಿ ಈ ವಿಂಗಡಣೆಯ ವಿಧಾನವೇ ತಪ್ಪು. ಅಲ್ಲದೆ ಒಂದು ಸಾಹಿತ್ಯ ಪ್ರಕಾರವಾದ 'ವಚನ'ಕ್ಕೂ ಈ ವಿಂಗಡಣೆಗೂ ಯಾವುದೇ ವಿಧವಾದ ಸಂಬಂಧವೂ ಇಲ್ಲ. ವಚನ ಕೇವಲ ಒಂದು ಪ್ರಕಾರ ; ಒಂದು ಅಭಿವ್ಯಕ್ತಿಯ ಕ್ರಮ. ಒಂದು ಪ್ರಕಾರವನ್ನು ಒಬ್ಬ ಲೇಖಕ ಹೇಗೆ ಬಳಸಿಕೊಳ್ಳುತ್ತಾನೆಂಬುದು ಅವನ ಶಕ್ತಿ ಸಾಮರ್ಥ್ಯಗಳಿಗೆ ಸಂಬಂಧಿಸಿದ್ದು.

ಇದೇ ಸಂದರ್ಭದಲ್ಲಿ ಮುಂದುವರಿದು ಶ್ರೀ ವಿಜಯಕುಮಾರ್ ಹೇಳುತ್ತಾರೆ: "ಇವರೆಲ್ಲಾ ವಚನಕಾರರ ಶೈಲಿಯನ್ನನುಸರಿಸುತ್ತಾರೆ, ಇಲ್ಲ ಧೋರಣೆಯನ್ನನು ಸರಿಸುತ್ತಾರೆ. ವಚನಕಾರರು ೧೨ನೇ ಶತಮಾನದ ಪ್ರಜ್ಞೆಯ ಮಿತಿಯನ್ನು ಸೂರೆ ಹೊಡೆದು ವಚನಸೃಷ್ಟಿ ಮಾಡಿದರು. ಈ ಶತಮಾನದ ವಚನಕಾರರಾದರೂ ಧೋರಣೆಯಲ್ಲಿ, ಲಯದಲ್ಲಿ ವಚನಕಾರರನ್ನೇ ಅನುಸರಿಸುತ್ತಾರಾದ್ದರಿಂದ, ಅನುಭವದ ತೀವ್ರ ತುಡಿತ ಮತ್ತು ವಚನಸೃಷ್ಟಿಯ ಅನಿವಾರ್ಯ ಇಲ್ಲವಾದ್ದರಿಂದ ಇವರ ವಚನಗಳೆಲ್ಲ ದುರ್ಬಲವಾದವು. ಅರ್ಥಾತ್ ವಚನಗಳ ದುರ್ಬಲ ಅನುಕರಣೆ ಎಂದು ಹೇಳಬೇಕಾಗುತ್ತದೆ. ಎಸ್.ವಿ. ಪರಮೇಶ್ವರ ಭಟ್ಟರಿಗಾಗಲಿ ಎಸ್.ವಿ. ರಂಗಣ್ಣನವರಿಗಾಗಲಿ ವಚನಸೃಷ್ಟಿಯಿಂದ ವೈಯಕ್ತಿಕ ತೃಪ್ತಿಯಿದೆಯೋ ವಿನಾ ಸಮಾಜ ಸುಧಾರಣೆಯ ಸಾಮೂಹಿಕ ಆಲೋಚನೆ ಇಲ್ಲ. ಅಭಿವ್ಯಕ್ತಿಯ ಅನಿವಾರ್ಯತೆ ವಚನಕಾರರಂತೆ ಇಲ್ಲ. ಒಟ್ಟಾರೆ ಹೇಳುವುದಾದರೆ ವಚನ ಶೈಲಿ ವಿರಬಹುದಾದ ಸ್ತರ ಮತ್ತು ಮಾಡಬಹುದಾದ ಕಾರ್ಯವನ್ನು ಹನ್ನೆರಡನೆ ಶತಮಾನದಲ್ಲಿಯೇ ಸೂರೆ ಹೊಡೆಯಿತಾದ್ದರಿಂದ ಮತ್ತೆ ಅದು ಪುನರಾವರ್ತನೆಯಾಗುವುದಿಲ್ಲ."

* "ಹಾಲ ತೊರೆಗೆ ಬೆಲ್ಲದ ಕೆಸರು" ಪು. ೧೯ (ಬೆಂಗಳೂರು, ೧೯೭೬).



ಈ ಅಭಿಪ್ರಾಯ ನಿಷ್ಪಕ್ಷಪಾತವಾದದ್ದಲ್ಲ ; ಹನ್ನೆರಡನೇ ಶತಮಾನದ ವಚನಗಳ ಬಗೆಗೆ ವಿಶೇಷ ಮೋಹವನ್ನು ತಾಳಿದ್ದು. ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ಸಂಸ್ಥೆ ಈಚೆಗೆ ಪ್ರಕಟಿಸಿರುವ 'ಕನ್ನಡ ಸಾಹಿತ್ಯ ಚರಿತ್ರೆ'ಯ ನಾಲ್ಕನೆಯ ಸಂಪುಟದಲ್ಲಿ ಹನ್ನೆರಡು   ಹದಿಮೂರನೆಯ ಶತಮಾನದ ಸುಮಾರು ನೂರೈವತ್ತು ಜನ ವಚನಕಾರರನ್ನು ಪಟ್ಟಿ ಮಾಡಲಾಗಿದೆ. ಈ ಎಲ್ಲ ವಚನಕಾರರ ಸಾಧನೆ   ಸಿದ್ಧಿಗಳ ಸ್ವರೂಪ ಒಂದೇ ಬಗೆಯಾಗಿದೆಯೇ ಎಂಬುದನ್ನು ನಾವು ಪರೀಶೀಲಿಸಬೇಕು. ಸಾಹಿತ್ಯಿಕವಾಗಿ, ಆಧ್ಯಾತ್ಮಿಕವಾಗಿ ಏನೂ ಅಲ್ಲದ ತೀರ ಸಾಮಾನ್ಯ ವಚನಗಳನ್ನು ಬರೆದವರು ಅವರಲ್ಲಿ ಬಹು ಮಂದಿ ಇದ್ದಾರೆ. ಅವರಿಗೆಲ್ಲ ಅನುಭವದ ತೀವ್ರ ತುಡಿತ ಇರುವುದಕ್ಕಾಗಲಿ, ಅಭಿವ್ಯಕ್ತಿಯ ಅನಿವಾರ್ಯತೆ ಇರುವುದಕ್ಕಾಗಲಿ ಆಧಾರಗಳು ಕಾಣಿಸುವುದಿಲ್ಲ. ಆ ಕಾಲದ ಪರಂಪರೆಯಲ್ಲಿದ್ದರು ಎಂಬ ಕಾರಣಕ್ಕಾಗಿ ಮಾತ್ರ ಅವರನ್ನು ವಚನಕಾರರೆಂದು ಕರೆಯಲಾಗುತ್ತದೆ, ಅಷ್ಟೆ. ವಚನವನ್ನು ಒಂದು ಸಾಹಿತ್ಯ ಪ್ರಕಾರವಾಗಿ ಪರಿಗಣಿಸಿದಾಗ, ವಚನಗಳೆಲ್ಲ ಸಮಾಜ ಸುಧಾರಣೆಯ ಕೆಲಸವನ್ನೇ ಮಾಡಬೇಕೆಂದು ಅಪೇಕ್ಷಿಸುವುದು ಸರಿಯಲ್ಲ. ಸಮಾಜ ಸುಧಾರಣೆಯಲ್ಲದೆ ಸಾಹಿತ್ಯ ಮಾಡುವ ಬೇರೆ ಕೆಲಸಗಳೂ ಇವೆಯಷ್ಟೆ? ಆಧುನಿಕರ ವಚನಗಳೆಲ್ಲ ಪ್ರಾಚೀನ ವಚನಗಳ ದುರ್ಬಲ ಅನುಕರಣೆ ಎನ್ನುವುದು ಸಲ್ಲದ ಸಾಧಾರಣೀಕರಣ. ರಂಗಣ್ಣ, ಪರಮೇಶ್ವರ ಭಟ್ಟರ ವಚನಗಳಲ್ಲಿ ಅತ್ಯುತ್ತಮ ವಚನಗಳ ಮಾದರಿಯನ್ನು ನೋಡಬಹುದು.

ಡಾ।। ಆರ್.ಸಿ. ಹಿರೇಮಠ ಅವರು ವಚನ ಪ್ರಕಾರವನ್ನು ದೊಡ್ಡ ಸೀಮಿತದಲ್ಲಿ ಬಂಧಿಸುತ್ತಾರೆ. ಅವರೆನ್ನುತ್ತಾರೆ.* "ಇತ್ತೀಚೆಗೆ ಕೆಲವು ಜನ ಸಾಹಿತ್ಯಜ್ಞರು ವಚನ ರೂಪದಲ್ಲೇ ಬರೆದದ್ದನ್ನೆಲ್ಲ ವಚನಸಾಹಿತ್ಯವೆಂದು ಕರೆಯತೊಡಗಿರುವರು. ರಂಗಣ್ಣನವರ ವಚನಗಳು, ಸಾಮಾಜಿಕ ಸಂವಚನಗಳು ಮುಂತಾದವನ್ನು ವಚನ ಸಾಹಿತ್ಯ ಚರಿತ್ರೆಗೆ ಸೇರಿಸುವ ಸಾಹಸ ಕಾರ್ಯ ನಡೆದಿರುತ್ತದೆ. ವಚನಸಾಹಿತ್ಯಕ್ಕೆ ಮೂಲನಿಧಿ ಅದರ ಬಾಹ್ಯ ರೂಪವಲ್ಲ, ಅದರ ಧಾರೆಯಲ್ಲ, ಅನುಭಾವವೇ ಅದರ ಅಂತರಂಗ. ಆ ಶಿವಾನುಭಾವ ತಂತಾನೆ ಅರಳಿ ವಚನಸಾಹಿತ್ಯವಾಗುತ್ತದೆ. ಆದುದರಿಂದ ಇದು ವಚನ ಎಂದು ಹೇಳಬೇಕಾದರೆ ಮೊದಲು ಅವರ ಸ್ಥಾಯಿ ಏನೆಂಬುದನ್ನು ನೋಡಬೇಕಾಗುತ್ತದೆ."

* ಶ್ರೀ ಮೂಜಗಂ ಅವರ "ಚಿತ್ಸುಮನ" ಗ್ರಂಥಕ್ಕೆ ಬರೆದ ಮುನ್ನುಡಿ, ಪು. ೪ (ಧಾರವಾಡ, ೧೯೭೩.)

ವೀರಶೈವ ಧರ್ಮದ ತತ್ವ, ಆಚರಣೆಗಳ ಚಿತ್ರಣಕ್ಕೆ, ಅನುಭಾವ ನಿರೂಪಣೆಗೆ ವಚನ ಸಾಹಿತ್ಯವನ್ನು ಮೀಸಲಿರಿಸುವುದು ಖಂಡಿತ ಉಚಿತವಲ್ಲ. ಇಪ್ಪತ್ತನೆಯ ಶತಮಾನದಲ್ಲಿ ವಚನ ಪ್ರಕಾರದ ವ್ಯಾಪ್ತಿ ವಿಸ್ತಾರಗೊಂಡಿರುವುದು ಸಂತೋಷದ ಸಂಗತಿ. ವಚನ ಒಂದು ಸಾರ್ವತ್ರಿಕ ಮಾಧ್ಯಮವಾಗಿ ಗರಿಗೆದರುತ್ತಿರುವುದು ಆ ಪ್ರಕಾರದ ಹೊಸ ಸಾಧ್ಯತೆಗಳಿಗೆ ಅನುವು ಮಾಡಿಕೊಟ್ಟಿದೆ. ಹೊಸಕಾಲದ ಲೇಖಕರು ತಮ್ಮ ಸಾಹಿತ್ಯಿಕ ಅಭಿವ್ಯಕ್ತಿಗೆ ವಚನ ಮಾಧ್ಯಮವನ್ನು ಇನ್ನೂ ಹೆಚ್ಚಾಗಿ ಬಳಸಿಕೊಳ್ಳಬೇಕು. ಅದು ಒಂದು ಮುಕ್ತ ಅವಕಾಶ.

* * *

ಡಾ॥ ಸಿದ್ಧಯ್ಯ ಪುರಾಣಿಕರ ಪ್ರಕೃತ ಕೃತಿ 'ವಚನೋದ್ಯಾನ'ದಲ್ಲಿ ೫೨೫ ವಚನಗಳಿವೆ. 'ಸ್ವತಂತ್ರ ಧೀರ ಸಿದ್ಧೇಶ್ವರ' ಅವರ ಅಂಕಿತ, ೫೨೩ನೆಯ ವಚನವೊಂದನ್ನು ಬಿಟ್ಟು ಮಿಕ್ಕ ಎಲ್ಲ ವಚನಗಳಲ್ಲೂ ಈ ಅಂಕಿತ ಕಾಣಿಸಿಕೊಳ್ಳುತ್ತದೆ. ಅಂಕಿತಗಳನ್ನು ಕೇವಲ ತಾಂತ್ರಿಕ ಅವಶ್ಯಕತೆ ಎಂದು ಪರಿಗಣಿಸಲಾಗದು. ಬಹು ಸಂದರ್ಭದಲ್ಲಿ ಅವು ವಚನಕಾರನ ಮನೋಧರ್ಮವನ್ನೋ, ವಚನಗಳ ರೂಪ ಸ್ವರೂಪಗಳನ್ನೋ ಧ್ವನಿಸುತ್ತವೆ. ಅಲ್ಲಮ ಅಣ್ಣ ಅಕ್ಕ ಅಂಥವರ ಅಂಕಿತಗಳನ್ನು, ವಚನಗಳನ್ನು ಗಮನಿಸಿಯೂ ಈ ಮಾತನ್ನು ಹೇಳಬಹುದು. ಪುರಾಣಿಕರ 'ಸಿದ್ಧೇಶ್ವರ'ನ ಗುಣವಾಚಕ 'ಸ್ವತಂತ್ರಧೀರ' ನಮ್ಮ ಕಾಲದ ಮಹಾ ಲಕ್ಷಣವನ್ನು ಸೂಚಿಸುತ್ತದೆ. ಸ್ವತಂತ್ರ ಪ್ರವೃತ್ತಿ, ಧೀರಗುಣಗಳು ಆಧುನಿಕ ಬದುಕನ್ನು ಆಳುತ್ತಿವೆ. ಅವು ಹೊಸ ಕಾಲದ ಬದುಕಿನ ಸೂತ್ರಗಳಾಗಿವೆ. ರಾಷ್ಟ್ರಗಳಷ್ಟೆ ಸ್ವಾತಂತ್ರ್ಯ ಪಡೆಯುವುದಲ್ಲ, ವ್ಯಕ್ತಿಯ ಜೀವನ ವಿಧಾನವೇ ಇಂದು ಸ್ವತಂತ್ರ ಮಾರ್ಗದ್ದು. ಚಂದ್ರಲೋಕದ ಆಚೆಗೂ ಹೋಗುವ ಧೀರರು ನಮ್ಮ ಸಮಕಾಲೀನರು. ಈ ಜೀವನೋದ್ದೇಶಗಳಿಗೆ ಪುರಾಣಿಕರ ಸಿದ್ಧೇಶ್ವರ ಪ್ರೇರಕನೂ, ಪೋಷಕನೂ ಆಗಿದ್ದಾನೆ. ಅವನ ಸ್ಫೂರ್ತಿಯ ಫಲವೆ ಇಲ್ಲಿನ ವಚನಗಳು. "ನನಗೆ ತೋರಿದಂತೆ ಬರೆದರೆ ಅದು ರಚನೆ, ನೀನು ತೋರಿಸಿದಂತೆ ಬರೆದರೆ ಅದು ವಚನವಯ್ಯ" (೮೭) ಎಂದು ಪುರಾಣಿಕರು ತಮ್ಮ ವಚನಗಳನ್ನು ವರ್ಣಿಸಿದ್ದಾರೆ.

ಹೊಸ ದಿಕ್ಕಿಗೆ ಮುಖಮಾಡಿರುವ ಸಾಹಿತ್ಯ ಬದುಕಿನ ವಾಸ್ತವಿಕತೆಯ ಹೆಸರಿನಲ್ಲಿ ಜೀವನದ ನಿಗೂಢ ರಹಸ್ಯಗಳನ್ನು ನಿರ್ಲಕ್ಷಿಸಿದೆ. ನಮ್ಮ ಅನುಭವಕ್ಕೆ ಬರುವುದಷ್ಟೇ ಸತ್ಯವಲ್ಲ, ಅದರಾಚೆಯ ಶಕ್ತಿಯೂ ಒಂದಿದೆ; ಅದರ ದರ್ಶನದ ಪ್ರಯತ್ನ ಸತತವಾಗಿ ನಡೆದಿದೆ ಎಂಬುದನ್ನು ಅದು ಗಮನಿಸುವುದಿಲ್ಲ. ಬುದ್ಧಿಯ ಆಳ್ವಿಕೆಗೆ ಸಿಕ್ಕಿ ಹೃದಯ ಕುಗ್ಗಿದೆ. ವಿಜ್ಞಾನವೂ ಯಾವುದೋ ಒಂದು ಹಂತದಲ್ಲಿ ನಿಲ್ಲುತ್ತದೆ. ಅದರಾಚೆಯ ಸತ್ಯಗಳನ್ನು ಕಂಡುಕೊಳ್ಳುವುದರಲ್ಲಿಯೇ ಅಧ್ಯಾತ್ಮ ನಿರತವಾಗಿದೆ. ಆ ನಿಟ್ಟಿನ ಒಬ್ಬೊಬ್ಬರ ಅನುಭವವೂ ಅನುಭಾವದ ಬೇರೆ ಬೇರೆ ಹೆಜ್ಜೆಗಳಾಗಿವೆ. ಇಂಥ ಹೆಜ್ಜೆ



ಗುರುತುಗಳನ್ನು ಪುರಾಣಿಕರ 'ವಚನೋದ್ಯಾನ'ದಲ್ಲಿ ನಾವು ಕಾಣುತ್ತೇವೆ. ಇಂದಿನ ಸಾಹಿತ್ಯಕ ಪರಿಸರದಲ್ಲಿ ಇದಕ್ಕೆ ಯಾವ ಬಗೆಯ ಸ್ವಾಗತ ಸಿಕ್ಕುತ್ತದೆ ಎಂಬುದು ಕುತೂಹಲದ ಮಾತು.

ಆಧ್ಯಾತ್ಮ ಅನುಭಾವಗಳು ಬದುಕಿನಿಂದ ಪ್ರತ್ಯೇಕಗೊಂಡಾಗ, ಕೈಗೆ ಎಟುಕದ ಅನುಭವವಾದಾಗ ಅವುಗಳಿಗೆ ಬೆಲೆ ಬರುವುದಿಲ್ಲ. ಆದರೆ ಅವು ಜೀವನದ ಅಂಗವೇ ಆದಾಗ, ನಿತ್ಯದ ನಡವಳಿಕೆಯಲ್ಲಿ ಕೂಡಿದಾಗ ಅರ್ಥವತ್ತಾಗುತ್ತವೆ. ಬೋಧನೆಯಾಗದೆ ಸಾಧನೆಯಾದಾಗ ಅವುಗಳಿಗೆ ಮಹತ್ವ ಬರುತ್ತದೆ. ಅನುಭವಕ್ಕೆ ಕಾವು ಕೂತಾಗ ಕಾವ್ಯ ಜೀವವೊಡೆಯುತ್ತದೆ. ಕವಿ ಈ ತಾಯ್ತನದ ಕೆಲಸ ಮಾಡುತ್ತಾನೆ. ಅನುಭಾವಿಯ ಕೆಲಸವಾದರೂ ಇದೇ. ಆದರೆ ಅಲ್ಲಿ ಕಣ್ಣೊಡೆಯುವುದು ಸತ್ಯ. ಈ ಸತ್ಯ ಕಾವ್ಯವಾಗಿ ರೂಪುಗೊಂಡಾಗ ಅಪೂರ್ವವಾದದ್ದಾಗುತ್ತದೆ. ಎಲ್ಲ ಅನುಭಾವಿಗಳ ಸತ್ಯ ದರ್ಶನ ಕಾವ್ಯ ಸಾಕ್ಷಾತ್ಕಾರವಾಗುವುದಿಲ್ಲ. ಕವಿ ಅನುಭಾವಿಯಲ್ಲ; ಅನುಭಾವಿ ಕವಿಯಲ್ಲ. ಆದರೆ ಕಾವ್ಯಕ್ಕೆ ಅನುಭಾವದ ಹೊಳಪು, ಅನುಭಾವಿಯ ಉದ್ಗಾರಗಳಿಗೆ ಕಾವ್ಯದ ಮೆರುಗು ಕೂಡಿದಾಗ ವಿಶೇಷ ಸೃಷ್ಟಿಯಾಗುತ್ತದೆ. ಪರಿಣಾಮವಾಗಿ ನಮಗೆ ಅತ್ಯುತ್ತಮ ವಚನಗಳೋ, ಕೀರ್ತನೆಗಳೋ ದೊರೆಯಬಹುದು. ಬಂಗಾಳಿ ಭಾಷೆಯಲ್ಲಿ 'ಬಾಉಲ್' ಹಾಡುಗಳಾಗಿಯೋ, ಅಸ್ಸಾಮಿಯಲ್ಲಿ 'ವರಗೀತ' ಗಳಾಗಿಯೋ, ಮರಾಠಿಯಲ್ಲಿ 'ಅಭಂಗ'ಗಳಾಗಿಯೋ, ತಮಿಳಿನಲ್ಲಿ 'ದಿವ್ಯ ಪ್ರಬಂಧ' ಗಳಾಗಿಯೋ, ಈ ಸೃಷ್ಟಿ ರೂಪ ತಾಳಬಹುದು. ಇಂಥದೊಂದು ಪರಂಪರೆಯನ್ನು ಪುರಾಣಿಕರು ಮುಂದುವರಿಸಿದ್ದಾರೆಂಬುದು ಸಂತೋಷದ ಮಾತು. ಅವರ ವಚನಗಳಲ್ಲಿ ಸ್ವತಂತ್ರಧೀರ ಸಿದ್ಧೇಶ್ವರನಿಗೆ ಒಪ್ಪಿತವಾದ ಹೃದಯದ ಮೊರೆ ಕೇಳಿಸುತ್ತದೆ; ಸುತ್ತಲ ಪರಿಸರಕ್ಕೆ, ಬದುಕಿನ ಅವ್ಯವಸ್ಥೆಗಳಿಗೆ ಪ್ರತಿಕ್ರಿಯೆ ತೋರುವ ಬುದ್ಧಿಯ ವಿಲಾಸವಿದೆ.

ಸ್ವತಂತ್ರಧೀರ ಸಿದ್ಧೇಶ್ವರನ ಸಾಕ್ಷಾತ್ಕಾರಕ್ಕಾಗಿ ಹಂಬಲಿಸುವ ಚೇತನವೊಂದರ ಆತ್ಮಕಥೆ ಇಲ್ಲಿದೆ. ಸ್ವತಂತ್ರಧೀರ ಸಿದ್ಧೇಶ್ವರ ಒಂದು ಅಂಕಿತ, ಅಷ್ಟೆ. ಮಹಾ ಬೆಳಗಿನ ನೂರು ಸಹಸ್ರ ಹೆಸರುಗಳಲ್ಲಿ ಅದೂ ಒಂದು. ಆ ಬೆಳಗನ್ನು ಕಾಣುವ ಬಯಕೆಯ ಆತುರ ಕಾತರಗಳು ಇಲ್ಲಿನ ವಚನಗಳಲ್ಲಿ ಅಭಿವ್ಯಕ್ತಗೊಂಡಿವೆ. ಎಂಥವನಿರಬೇಕು ಆ ಸಿದ್ಧೇಶ್ವರ ಎಂದು ಊಹಿಸುವ, ಕೇಳುವ ಒಂದು ವಚನ ಇದು:

ಬೀಜದ ಬಸಿರಿನ ಮೊಳೆಯದ ಬಳ್ಳಿಯ
ಮೂಡದ ಹೂವಿನ ಕಂಪಿನಂತಿಹೆಯೇನಯ್ಯ ?
ನವಿಲಿನ ಮೊಟ್ಟೆಯ ಹೊಟ್ಟೆಯೊಳಡಗಿಹ
ಗರಿಗಳ ಕಣ್ಣಿನ ಬಣ್ಣದಂತಿಹೆಯೇನಯ್ಯ ?
ಅಳಿದ ಚಿತ್ರಕನ ಉದ್ದೇಶಿತ ಚಿತ್ರದ
ಚೆಲುವು ಚಿಮ್ಮಿಸುವ ನಲವಿನಂತಿಹೆಯೇನಯ್ಯ ?

ಬಂಜೆಯ ಸ್ವಪ್ನದಿ ಸುಳಿಯುವ ಕಂದನ
ಮುದ್ದುಮೊಗದ ಮಂದಹಾಸದಂತಿಹೇಯೇನಯ್ಯ ?
ಕಾಣದ ಕಾಮಧೇನುವಿನ ಕರೆಯದ ಹಾಲಿನ
ಕಡೆಯದ ಬೆಣ್ಣೆಯ ಸವಿಯಂತಿಹೆಯೇನಯ್ಯ ?
ಸ್ವತಂತ್ರಧೀರ ಸಿದ್ಧೇಶ್ವರಾ,
ಈಡೇರದ ಆಸೆಗಳ ಚಿತಾಭಸ್ಮದಿ ಬೆಳೆದ
ಹೊಸ ಆಸೆಯ ಕಣ್ಣಿನ ಕಾಂತಿಯಂತಿಹೆಯೇನಯ್ಯ ? (೪)

ಅತ್ಯಂತ ಸುಂದರವಾದ ಈ ವಚನ ನಮಗೆ ಪರಿಚಿತವಾದ ಅನುಭವಗಳನ್ನು ತಟ್ಟುತ್ತದೆ ; ಜೊತೆಯಲ್ಲಿಯೇ ಅಪರಿಚಿತಾನುಭವಗಳಿಂದ ಕಂಗೆಡಿಸುತ್ತದೆ. ಭಗವಂತನನ್ನು ನೋಡಿರುವವರು ಯಾರು ? ಅವನು ಹೇಗಿದ್ದಾನೆ ? ಅವನು ಶಿವನೆ, ರಾಮನೆ, ಕೃಷ್ಣನೆ, ಮಾರಿಯೆ, ಮಸಣಿಯೆ ? ಎಲ್ಲರಂತೆ ಅವನಿಗೆ ಸಾಮಾನ್ಯ ರೂಪವುಂಟೆ ? ಇದ್ದರೆ ಅವನು ಸಾಮಾನ್ಯರಿಂದ ಬೇರೆ ಹೇಗೆ ? ಅವರವರಿಗೆ ತೋರಿದಂತೆ ಅವರವರ ಭಗವಂತ. ಮೇಲಿನ ವಚನದಲ್ಲಿ ಚಿತ್ರಿತನಾಗಿರುವ ಭಗವಂತ ಸಿದ್ಧೇಶ್ವರ ಮೂರ್ತ ಸ್ವರೂಪನಲ್ಲ, ಅಮೂರ್ತ, ಕಂಪು, ಬಣ್ಣ, ನಲವು, ಮಂದಹಾಸ, ಸವಿ, ಕಣ್ಣಕಾಂತಿ ಇಲ್ಲಿ ಅವನ ರೂಪಗಳು. ಆದರೆ ಎಂಥ ಕಂಪು ? ಮೊಳೆಯದ ಬಳ್ಳಿಯ ಮೂಡದ ಹೂವಿನ ಕಂಪು. ನಮಗೆ ಬಹಳಷ್ಟು ಹೂವುಗಳು ಗೊತ್ತು, ಅವುಗಳ ಕಂಪಿನನುಭವವೂ ಉಂಟು. ಬೀಜದೊಳಗಿರುವ ಹೂವಿನ ಕಂಪು ಎಂಥದೆಂದು ಹೇಳುವುದು? ಇದೇ ಮಾತು ಬೆಳೆಯುತ್ತಾ ಹೋಗುತ್ತದೆ ಮುಂದಿನ ಚರಣಗಳಲ್ಲಿ. ಎಲ್ಲವೂ ಅಸ್ತಿತ್ವದಲ್ಲಿರುವುವೇ ; ಇಲ್ಲಿ ಮಾತ್ರ ಅವಕ್ಕೆ ಅಸ್ತಿತ್ವವಿಲ್ಲ. ನವಿಲಿನ ಗರಿ ಮೊಟ್ಟೆಯಲ್ಲಿಯೇ ಇದೆ. ಚಿತ್ರ ಉದ್ದೇಶಿತವಾದುದಷ್ಟೆ, ಚಿತ್ರಕನೋ ಅಳಿದಿದ್ದಾನೆ. ಮಂದಹಾಸ ಬೀರುವ ಮುದ್ದು ಮೊಗದ ಕಂದ ಕಾಣಿಸಿಕೊಳ್ಳುವುದು ಬಂಜೆಯ ಸ್ವಪ್ನದಲ್ಲಿ. ಕಾಮಧೇನು ಕಾಣಿಸದು, ಹಾಲನ್ನು ಕರೆದಿಲ್ಲ, ಬೆಣ್ಣೆಯನ್ನು ಕಡೆದಿಲ್ಲ. ಕಣ್ಣ ಕಾಂತಿಯಾದರೂ ಆಸೆಯ ಕಣ್ಣಿನ ಕಾಂತಿ ; ಆ ಆಸೆಯೋ ಈಡೇರದ ಆಸೆಗಳ ಚಿತಾಭಸ್ಮದಲ್ಲಿ ಬೆಳೆದದ್ದು. ಹೆಜ್ಜೆಯಿಂದ ಹೆಜ್ಜೆಗೆ ಇಲ್ಲಿ ಅನುಭವ ಬೆಳೆಯುತ್ತದೆ. ಆ ಅನುಭವ ಕಾಣದ, ಕೇಳದ, ಕೈಗೆಟುಕದ ದಿವ್ಯಾನುಭವವಾಗುತ್ತದೆ.

ಈ ಸಿದ್ಧೇಶ್ವರನನ್ನು ಅರಿಯುವವನು ಮೊದಲು ತನ್ನನ್ನೇ ಅರಿತುಕೊಳ್ಳಬೇಕು. ಪುರಾಣಿಕರ ವಚನಗಳಲ್ಲಿ ತನ್ನನ್ನು ತಾನು ಅರಿತುಕೊಳ್ಳಬೇಕಾದ ಅಗತ್ಯದ ಮಾತು ಮತ್ತೆ ಮತ್ತೆ ಬರುತ್ತದೆ. "ನನ್ನನರಿತಿದ್ದರೆ ನಿನ್ನನರಿಯದಿರುತ್ತಿದ್ದೆನೆ?'' (೪೯) ಎಂದೂ, "ನನ್ನನರಿದು, ನನ್ನರಿವಿನಿಂದ ನಿನ್ನನರಿದು, ನಿನ್ನಿಂದ ಎಲ್ಲವನ್ನರಿದು, ಅರಿವಾಗಿ ಅರಿವ ಬೆರೆದು ಬಯಲಾಗುವುದನ್ನು ಕರುಣಿಸು'' (೪೮) ಎಂದೂ, "ಯಾರು ನನ್ನನ್ನು ಅರಿಯದಿದ್ದರೂ ನಾನು ನನ್ನನ್ನು ಅರಿಯುವಂತೆ ಅನುಗ್ರಹಿಸಯ್ಯ'' (೫೨) ಎಂದೂ



ಅವರು ಕೇಳುತ್ತಾರೆ.

ತನ್ನನ್ನು ತಾನು ಅರಿಯಲು ತೊಡಗಿದಾಗ ಮಾನವನಿಗೆ ತಾನು ಏನು ಎಂಬುದರ ಪರಿಚಯವಾಗುತ್ತದೆ. ಬೇರೆಯವರ ಬಗೆಗೇ ಕುತೂಹಲ ತಾಳಿದ್ದ ಅವನಿಗೆ ತನ್ನ ಕುಂದುಗಳೇನೆಂಬುದೂ ಗೊತ್ತಾಗುತ್ತದೆ.

ನಾನು ಕಳೆದ ಐವತ್ತು ವತ್ಸರಗಳಲ್ಲಿ
ಹಸಿವೆ, ತೃಷೆ, ವಿಷಯ, ಆಸೆ
ಆಮಿಷಗಳಿಗಾಗಿ ವರುಷ ವರುಷ,
ವಿರಾಮ, ವಿನೋದ, ಆಮೋದ,
ವಿಲಾಸ, ವಿಹಾರಗಳಿಗಾಗಿ ವರುಷ, ವರುಷ,
ಮೋಜು, ಮೆರವಣಿಗೆ, ಹರಟೆ,
ಆತ್ಮಸ್ತುತಿ, ಪರನಿಂದೆಗಳಿಗಾಗಿ ಮಾಸ, ಮಾಸ,
ಸುವಿಚಾರ, ಸದಾಚಾರ, ಸತ್ಕೃತಿಗಳಿಗಾಗಿ ದಿವಸ, ದಿವಸ,
ನಿನಗಾಗಿ ಕಳೆದ ಕಾಲ ಮಾತ್ರ ನಿಮಿಷ, ನಿಮಿಷವಯ್ಯ (೧೪೭)
ಎಂದು ಅವನು ಗೋಳಿಡುತ್ತಾನೆ. ಮಾತ್ರವಲ್ಲ,
ಮಾನವೇತಿಹಾಸದಲ್ಲಿ
ನಡೆಯದಷ್ಟು ಯುದ್ಧಗಳು
ನನ್ನೊಳಗೆ ನಡೆದಿವೆಯಯ್ಯಾ !
ಸಹರಾದಲ್ಲಿ
ಬೀಸದಷ್ಟು ಬಿರುಗಾಳಿಗಳು
ನನ್ನೊಳಗೆ ಬೀಸಿವೆಯಯ್ಯಾ !
ಸಪ್ತಸಾಗರಗಳಲ್ಲಿ
ಘಟಿಸದಷ್ಟು ಅಪಘಾತಗಳು
ನನ್ನೊಳಗೆ ಘಟಿಸಿವೆಯಯ್ಯಾ !
ಅಂತರಿಕ್ಷದಲ್ಲಿ
ಆಗದಷ್ಟು ಉಲ್ಕಾಪಾತಗಳು
ನನ್ನೊಳಗೆ ಆಗಿವೆಯಯ್ಯಾ ! (೧೫೪)

ಎಂದು ಅವನಿಗೆ ಆಶ್ಚರ್ಯವಾಗುತ್ತದೆ. ಈ ಯುದ್ಧ, ಬಿರುಗಾಳಿ, ಅಪಘಾತ, ಉಲ್ಕಾಪಾತಗಳ ಸರಮಾಲೆಯನ್ನು ಎದುರಿಸಿ ತಾನು ಉಳಿದು ಬಂದುದಕ್ಕೆ ಅವನು ಬೆರಗಾಗುತ್ತಾನೆ. "ಹೊರಗು ಪದೇ ಪದೇ ಬದಲಾಗುತ್ತಿದ್ದರೂ, ಬದಲಾಗದ ಒಳಗು ನನ್ನದಾಗಿರಲಯ್ಯ'' (೧೫೫) ಎಂದು ಕಳಕಳಿಯಿಂದ ಹಂಬಲಿಸುತ್ತಾನೆ.

"ಓಲ್ಗಾ, ಗಂಗಾ, ಮಿಸಿಸಿಪಿ, ಹೋ ಅಂಗ್ ಹೋಗಳಿಗೂ ಕಟ್ಟೆ ಕಟ್ಟಬಹುದು; ಆದರೆ ಕಣ್ಣೀರಿಗೆ ಕಟ್ಟೆ ಕಟ್ಟುವುದು ಸುಲಭ ಸಾಧ್ಯವೇನಯ್ಯ ?'' (೧೯೫) ಎಂದು ಒಂದು ವಚನದಲ್ಲಿ ಕೇಳಲಾಗಿದೆ. ಅದು ಸುಲಭಸಾಧ್ಯವಲ್ಲದಿರಬಹುದು. ಸಾಧ್ಯ

ವಾಗಿಸಲು ಪ್ರಯತ್ನಿಸುವುದು ಮಾತ್ರ ಎಲ್ಲರ ಕರ್ತವ್ಯವಾಗಿದೆ. ಈ ಕರ್ತವ್ಯ ನಿರ್ವಹಣೆಯಲ್ಲಿ ಬಗೆ ಬಗೆಯ ಕಷ್ಟ ನಷ್ಟ ತ್ಯಾಗಗಳಿಗೆ ಮನುಷ್ಯ ಸಿದ್ಧನಾಗಿರಬೇಕು. ಅವನು ಭಗವಂತನ ಕೈಯ ಉಪಕರಣವಾಗಬೇಕು. ಇಲ್ಲಿ ಭಕ್ತನ ಕೋರಿಕೆ ಹೀಗಿದೆ

ನಿನ್ನ ತಿಗರಿಗೆ ಮಣ್ಣು ಮಾಡಿಕೊಳ್ಳಯ್ಯ ನನ್ನನ್ನು
ನಿನ್ನ ಭಟ್ಟಿಗೆ ಅವಿರು ಮಾಡಿಕೊಳ್ಳಯ್ಯ ನನ್ನನ್ನು
ನಿನ್ನ ಗರಗಸಕ್ಕೆ ಮುಂಡಿಗೆ ಮಾಡಿಕೊಳ್ಳಯ್ಯ ನನ್ನನ್ನು
ನಿನ್ನ ಸಬಳಕ್ಕೆ ಸಾಣೆ ಮಾಡಿಕೊಳ್ಳಯ್ಯ ನನ್ನನ್ನು
ನಿನ್ನ ಗಾಣಕ್ಕೆ ಕಬ್ಬು ಮಾಡಿಕೊಳ್ಳಯ್ಯ ನನ್ನನ್ನು
ನಿನ್ನ ಹಂತಿಗೆ ತೆನೆ ಮಾಡಿಕೊಳ್ಳಯ್ಯ ನನ್ನನ್ನು. (೧೭೯)

"ನಿನ್ನ ಪ್ರಯೋಗಶಾಲೆಯಲ್ಲೊಂದು ಟೆಸ್ಟ್‌ಟ್ಯೂಬ್ ಆಗಲಯ್ಯ ನನ್ನ ಜೀವನ" ಎಂದೂ (೧೮೧) ಅವನು ಹೇಳುತ್ತಾನೆ.

ಪುರಾಣಿಕರು ಸ್ವತಂತ್ರಧೀರ ಸಿದ್ಧೇಶ್ವರನ ಎದುರು ತಮ್ಮ ಅಂತರಂಗದ ಪದರುಗಳನ್ನು ಬಿಚ್ಚಿಡುವ ಹಾಗೆಯೇ, ಲೋಕದ, ಸಮಾಜದ ತೊಂದರೆ ತೊಡಕುಗಳನ್ನೂ ತೋಡಿಕೊಳ್ಳುತ್ತಾರೆ. ಈ ವಚನಗಳು ಆತ್ಮಗೀತೆಗಳೂ ಹೌದು; ಸಾಮಾಜಿಕ ವಿವೇಚನೆ, ಲೋಕವಿಮರ್ಶೆಗಳೂ ಹೌದು. ಆತ್ಮನ ಕಾಳರಾತ್ರಿಯನ್ನು ಕಳೆಯಲು ತೋರುವ ತವಕವನ್ನೇ ಅವರು ಸುತ್ತಲ ಪರಿಸರವನ್ನು ಮುತ್ತಿರುವ ಕರಾಳ ಕತ್ತಲೆಯನ್ನ ತೊಳೆಯಲೂ ತೋರಿಸುತ್ತಾರೆ. ಒಂದು ದೃಷ್ಟಿಯಲ್ಲಿ ಪುರಾಣಿಕರ ವಚನಗಳು ಶುದ್ಧ ಜೀವನ ಸಂಹಿತೆಗಳಾಗಿವೆಯೆಂದರೆ ತಪ್ಪಲ್ಲ. ಮೌಲ್ಯಗಳಿಗೆ ಅವರು ಬೆಲೆ ಕೊಡುತ್ತಾರೆ ; ಆದರೆ ಮೌಢ್ಯವನ್ನೆಂದೂ ಪುರಸ್ಕರಿಸುವವರಲ್ಲ. ಹೊಸ ಕಾಲದ ಹರಿಕಾರರು ಅವರು. "ಸರ್ವರಿಗೆ ಸಮಾನಾವಕಾಶದ ಗುರಿಯ, ಸರ್ವೋದ್ಧಾರದ, ಸರ್ವಜನ ಸುಖದ ಗುರಿಯ ಮುಟ್ಟಿಯೇ ತೀರುವ" ಶಪಥ ಅವರದು (೩೨೭). ಈ ವಿಷಯದಲ್ಲಿ ಮಾತ್ರ ಅವರು ಸಿದ್ಧೇಶ್ವರನ ಆಣತಿಯನ್ನು ಮೀರಲೂ ಸಿದ್ಧ. "ನೀನು ಒಪ್ಪು ಬಿಡು" ಎಂದು ಅವರು ಹೆದರಿಸುತ್ತಾರೆ. ಬಗೆ ಬಗೆಯಾದ ಸಾಮಾಜಿಕ ದುರವಸ್ಥೆಯ ಬಗೆಗೆ ಅವರಿಗೆ ತೀವ್ರ ಅಸಮಾಧಾನವಿದೆ. ವಿವಿಧ ಓರೆಕೋರೆಗಳು, ಅನ್ಯಾಯ, ಅಸಮತೆಗಳು ಅವರನ್ನ ಕೆರಳಿಸುತ್ತವೆ, ಕೊರಗಿಸುತ್ತವೆ.

ಹೋಮರನಂಥ ವಿಶ್ವಕವಿಗಳು ಭಿಕ್ಷೆ ಬೇಡಬೇಕು
ಹೆಂಡ ಮಾರುವವರು ಲಕ್ಷಾಧೀಶರಾಗಬೇಕು
ಇದೇ ನಿನ್ನ ಸಾಮಾಜಿಕ ನ್ಯಾಯವೇನಯ್ಯಾ ?
ದುಡಿದವರಿಗೆ ದುಗ್ಗಾಣಿ, ದುಡಿಸಿಕೊಳ್ವರಿಗೆ ಅಷ್ಟೈಶ್ವರ್ಯ
ಇದುವೆ ನಿನ್ನ ಆರ್ಥಿಕ ವ್ಯವಸ್ಥೆಯೇನಯ್ಯಾ ? (೩೨೭)

ಎಂದು ಅವರು ಪ್ರಶ್ನಿಸುತ್ತಾರೆ. "ಮೂಕಜನತೆಯ ಆಗುಹೋಗುಗಳನ್ನು



ಸುಲಿಗೆಗಾರರ ಕೈಗೆ ಕೊಡುವುದೆ ಅಯ್ಯ ?" (೩೨೫), "ಸರ್ಕಾರ ದರೋಡೆಕಾರನಾದಾಗ ನೌಕರರು ನರಭಕ್ಷಕರಾಗದಿರುವರೇನಯ್ಯ ? ಸಚಿವರೇ ಸುಲಿಗೆಗಾರರಾದಾಗ ಆಪ್ತ ಸಹಾಯಕರು ಡಕಾಯತರಾಗರೇನಯ್ಯ ?" (೩೩೨), "ಊರಿಗೊಂದು ವಾಗ್ದಾನ ಮಾಡಿ ನೂರಕ್ಕೊಂದನ್ನೂ ನೆರವೇರಿಸದಿದ್ದರೆ ಡಂಗುರ ಹೊಡೆದವನಿಗಿಂತ ಕಡೆಯಲ್ಲವೆ ಅವನು?" (೩೪೯), "ಈ ಕದ್ದುಣ್ಣುವ ಕದೀಮರ ಕಳ್ಳ ಭಕ್ತಿಯ ಕಂಡು ಕದ್ದು ನಗುತ್ತಿರುವಿಯೇನಯ್ಯಾ ? ನಕ್ಕರೆ ಸಾಲದು, ಇಕ್ಕಯ್ಯಾ ಅವರನ್ನು ಇಕ್ಕುಳದೊಳಗೆ" (೩೬೧), "ತಮ್ಮ ಅಧಿಕಾರಕ್ಕೆ ವಯೋಮಿತಿಯೇ ಇರಕೊಡದೆಸ್ನವವರು ಬಡಶಿಕ್ಷಕರ ವಯೋಮಿತಿಯನ್ನೇಕೆ ಇಳಿಸುವರಯ್ಯಾ?" (೩೯೬), ಈ ಮೊದಲಾದ ಮಾತುಗಳಲ್ಲಿ ಸದ್ಯ ನಮ್ಮ ಸುತ್ತಮುತ್ತಲು ನಡೆಯುತ್ತಿರುವುದನ್ನೆಲ್ಲ ಪುರಾಣಿಕರು ಗಮನಿಸುತ್ತಾರೆ.

ಮನುಷ್ಯ ಯಾವ ಯಾವ ರೀತಿಯಿಂದ ಬಾಳುವುದನ್ನು ಕಲಿತರೂ ಸಾಲದು. ಮರಗಳೂ ಅವನಿಗೆ ಪಾಠ ಹೇಳುತ್ತವೆಂಬುದನ್ನು ಈ ವಚನ ಮನೋಹರವಾಗಿ ತಿಳಿಸುತ್ತದೆ:

ಗುಂಪುಗುಂಪಾಗಿ ಬೆಳೆದರೂ
ಗುಂಪುಗಾರಿಕೆಯ ಗಾಂಪತನವಿಲ್ಲ
ಗುಂಪುಮರಗಳಲ್ಲಿ ;
ಒಂದರ ಬಾಹು ಇನ್ನೊಂದರ ಹೆಗಲಮೇಲೆ,
ಒಂದರ ಹಸ್ತ ಇನ್ನೊಂದರ ಹಸ್ತದಲ್ಲಿ,
ಒಂದರ ನೆರಳು ಇನ್ನೊಂದರ ನೆರಳಿನಲ್ಲಿ,
ಎಲ್ಲ ಸಮರಸ ಇಲ್ಲ, ವಿರಸ !
ನರರಲ್ಲೇಕೆ ಗುಂಪುಗಾರಿಕೆ
ವಿರಸ ವಿರೋಧ ವಿಷಮತೆಗಳು
ಚಿಮ್ಮಿ ಹೊಮ್ಮುತ್ತಿರಬೇಕಯ್ಯಾ ? (೩೮೮)

"ನೀನು ಸೃಷ್ಟಿಸಿದುದ ಕೆಡಿಸಬಲ್ಲವರಿಗೆ ಕೊರತೆಯಿಲ್ಲ, ಕೆಟ್ಟುದನ್ನು ಸರಿಪಡಿಸುವವರ ಹೆಚ್ಚಿಸಯ್ಯ" (೩೩೬), "ಸಂಹಾರಕ್ಕಾಗಿ ತೊಟ್ಟ ಅವತಾರಗಳು ಸಾಕು, ಸರ್ವೋದ್ಧಾರಕ್ಕಾಗಿ ಹೊಸ ಅವತಾರಗಳ ತಳೆಯಯ್ಯಾ" (೩೪೩), ಎನ್ನುವುದು ಈ ವಚನಗಳಲ್ಲಿನ ಸತತ ಕೋರಿಕೆ. "ಪ್ರೀತಿಸಿದವರನ್ನು ಪ್ರೀತಿಸುವವ ಮಾನವ, ಪ್ರೀತಿಸದವರನ್ನೂ ಪ್ರೀತಿಸುವವ ಮಹಾಮಾನವ, ದ್ವೇಷಿಸುವವರನ್ನೂ ಪ್ರೀತಿಸುವವ ದೇವಮಾನವ" (೩೬೪), ಎನ್ನುವುದು ಇಲ್ಲಿನ ಸಂದೇಶ. ಮಾನವರೋ ದಾನವರೋ ಆಗಿ ಬಾನಿಗೇರಬೇಕೆಂದೋ ರಸಾತಳಕ್ಕೆ ಹೋಗಬೇಕೆಂದೋ ಬಯಸುವುದು ಇಲ್ಲಿನ ಗುರಿಯಲ್ಲ. "ಮಾನವರನ್ನಾಗಿ ಮಾಡಿ ಇದೇ ಸುಂದರ ಜಗತ್ತಿನಲ್ಲಿಯೇ ಉಳಿಸಿ ಬೆಳಸಿ

ಬೆಳಗಿಸಯ್ಯ’’ ಎನ್ನುವುದು ಪ್ರಾರ್ಥನೆ (೩೧೧). “ಮನುಜನ ಕಣ್ಣಿಗೆ ಮನುಜ ಮನ ’ಜನಾಗಿಯೇ ಕಾಣಿಸುವುದು ಅದೆಷ್ಟು ಕರಕಷ್ಟವಯ್ಯಾ !’’ ಎಂಬ ವಚನ (೩೧೦) ತುಂಬ ಸರಳವಾಗಿ ಪೂರ್ಣ ದೃಷ್ಟಿಯನ್ನು ಸಾರುತ್ತದೆ.

*      *      *

ಡಾ॥ ಸಿದ್ಧಯ್ಯ ಪುರಾಣಿಕರು ಶರಣ ಸಾಹಿತ್ಯ ಸಾಗರದಲ್ಲಿ ಬೇಕಾದಂತೆ ಈಜಾಡಿದವರು. ‘ಶರಣಚರಿತಾಮೃತ’ ಎಂಬ ಅವರ ಬೃಹತ್ ಗ್ರಂಥ ಹಾಗೂ ಬಸವಣ್ಣನವರ ಜೀವನ ಸಂದೇಶಗಳನ್ನು ಕುರಿತ ಈಚಿನ ಉಪನ್ಯಾಸಗಳು ಅವರ ಈ ಅನುಭವಕ್ಕೆ ಪ್ರತ್ಯಕ್ಷ ಸಾಕ್ಷಿಯಾಗಿದ್ದರೆ, ‘ವಚನೋದ್ಯಾನ’ ಪರೋಕ್ಷ ಸಾಕ್ಷಿ. ಈ ಸಂಗ್ರಹದ ಪ್ರತಿಯೊಂದು ವಚನದ ರಚನೆಯ ವಿನ್ಯಾಸದಲ್ಲಿಯೂ ಅಂದಿನ ವಚನಕಾರರ ಎರ ’ಕವನ್ನು ಕಾಣಬಹುದು. ಸಂಕ್ಷಿಪ್ತ ನಿರೂಪಣೆ, ಮೊಟಕಾದ ವ್ಯಾಕರಣ, ಆರಂಭದ ಸಾಲನ್ನೋ ಸಾಲುಗಳನ್ನೋ ಮತ್ತೆ ಮತ್ತೆ ತರುವ ರಚನಾ ವಿಧಾನ, ರೂಪಕ ಉಪಮಾನಗಳಲ್ಲಿಯೇ ಮಾತಾಡುವ ಸೊಗಸು, ವಿರೋಧಾಭಾಸದ ಹೇಳಿಕೆ ಗಳಿಂದ ರಸೋತ್ಕರ್ಷವನ್ನುಂಟುಮಾಡುವ ಜಾಣ್ಮೆ, ಸಾದೃಶ್ಯ ವೈದೃಶ್ಯಗಳ ಸ್ಥಾಪನ ’ಯಿಂದ ತೆರೆದು ತೋರುವ ಆಕರ್ಷಣೆ, ಮಾತಿನ ಅರ್ಥಗಳನ್ನು ಏರುಪೇರಾಗಿಸು ವುದರಿಂದೊದಗುವ ಉಲ್ಲಾಸಗತಿ, ಆರಾಧ್ಯ ದೈವವನ್ನು ಸಂಬೋಧಿಸುವುದರಲ್ಲಿಯೇ ಏರ್ಪಡುವ ಹೃದಯ ಸಂವಾದ ಈ ಮುಂತಾದ ವಚನ ಲಕ್ಷಣಗಳೆಲ್ಲ ಇಲ್ಲಿನ ರಚನ ’ಗಳಲ್ಲಿ ನಿಚ್ಚಳವಾಗಿ ಕಾಣುತ್ತದೆ. ಒಂದು ಬಗೆಯ ಧ್ವನಿ ಪ್ರತಿಧ್ವನಿಗಳ ಆಟವನ್ನು ಇಲ್ಲಿ ನೋಡಬಹುದಾಗಿದೆ. ಈ ಆಟ ಕೇವಲ ನಿಯಮಬದ್ಧವಾಗಿ ಆಡುವ ಆಟವಷ್ಟೇ ಅಲ್ಲ ; ನಿಯಮಗಳ ಅನುಸರಣೆಯಲ್ಲಿಯೇ ಹೊಸತನ್ನು ತೋರುವುದಾಗಿದೆ.

ಈ ವಚನಗಳು ಷಟ್‌ಸ್ಥಲ ವಚನಗಳಲ್ಲ ; ಸಪ್ತಮುಖ ವಚನಗಳು. ಈ ಮುಖಗಳು ಸಪ್ತಾಕ್ಷರಿಯಿಂದ ಏಕಾಕ್ಷರಿಯವರೆಗಿನ ಮಂತ್ರಗಳಾಗಿ ಕಾಣಿಸಿಕೊಳ್ಳು ತ್ತವೆ. “ಭಾರತ ಕರ್ನಾಟಕ, ಕನ್ನಡ ಬಸವ, ಸತ್ಯ ಸೌಂದರ್ಯ, ಪ್ರೀತಿ ನೀತಿ, ಜನತೆ, ಕಾವ್ಯ ಮತ್ತು ನೀ’’ ಎಂಬಿವೇ ಆ ಮಂತ್ರಗಳು (೪೨). ‘ವಚನೋದ್ಯಾನ’ದ ವಚನಗಳೆಲ್ಲ ಈ ಮಂತ್ರಗಳಿಗೆ ಬರೆದ ಮಾನವೀಯತೆಯ ವ್ಯಾಖ್ಯಾನವಾಗಿವೆ. ವಚನ ’ಗಳನ್ನು ಹಾಗೆಯೇ ವರ್ಗೀಕರಿಸುವುದೂ ಸಾಧ್ಯ.

ಪುರಾಣಿಕರ ವಚನಗಳಲ್ಲಿ ಬಹುಧರ್ಮಗಳಿಲ್ಲ, ಒಂದೇ ಧರ್ಮ, ಅದು ಜೀವನ ’ ಧರ್ಮ. ಬಹುಮತಗಳಿಲ್ಲ, ಒಂದೇ ಮತ, ಅದು ಮಾನವ ಮತ. ಬಹುಪಥ ಗಳಿಲ್ಲ, ಒಂದೇ ಪಥ, ಅದು ಶಿವಪಥ. ಕಾಣದ ಕೈಯೊಂದು ಕಾಯುತ್ತಿದೆ ಎಂಬ ಭಕ್ತನ ಪರಮ ಶ್ರದ್ಧೆ ಉದ್ದಕ್ಕೂ ಎದ್ದು ತೋರುತ್ತದೆ. ಈ ಶ್ರದ್ಧೆ ಮುಗ್ಧತೆಯಾದರೂ



ಬಲವಾದದ್ದು. ಅದು ಧರ್ಮಜಡವಾದದ್ದಲ್ಲ; ಜೀವನ ವಿವೇಕದ್ದು.

ತೊಟ್ಟಿಲಲ್ಲಿರುವ ಹಸುಗೂಸಿಗೂ
ತನ್ನ ತಾಯಿಯೊಬ್ಬಳಿಹಳೆಂಬ ತಿಳಿವಳಿಕೆಯಿರುವಂತೆ
ಹಟ್ಟಿಯೊಳಗಣ ಕುರಿಮರಿಗೂ
ಕಾಯ್ವ ಕುರುಬನೊಬ್ಬನಿಹನೆಂಬ ತಿಳಿವಳಿಕೆಯಿರುವಂತೆ
ನೀನು ನನಗಿರುವಿಯೆಂಬ ತಿಳಿವಳಿಕೆ ನನಗೆ !
ಕೈ ಕೆಲಸದಲ್ಲಿದ್ದರೂ
ತಾಯಿಯ ಮನ ತೊಟ್ಟಿಲದ ಕಂದನಲ್ಲಿರುವಂತೆ
ಸೃಷ್ಟಿಕಾರ್ಯನಿರತನಾಗಿಯೂ ನೀನು
ನನ್ನ ಯೋಗಕ್ಷೇಮರತನೆಂಬ ನಂಬಿಕೆ ನನಗೆ ! (೧೩೫)

ಆತ್ಮ ಚಿಂತನೆಯ ಈ ವಚನಗಳಲ್ಲಿ, ಒಂದೇ ಬಣ್ಣವನ್ನು ಬೇರೆ ಬೇರೆ ರೀತಿಯಲ್ಲಿ ಕದರಿ ವಿವಿಧ ಛಾಯೆಗಳನ್ನಾಗಿಸುವ, ಆ ಛಾಯೆಗಳಿಂದಲೇ ವರ್ಣ ವೈಭವವನ್ನು ನಿರ್ಮಿಸುವ ಕುಶಲ ಕಲಾವಿದನ ಕೈವಾಡವನ್ನು ಕಾಣಬಹುದು. ಒಂದು ಭಾವ, ಒಂದು ಅಭಿಪ್ರಾಯ ಮತ್ತೆ ಮತ್ತೆ ಬರುತ್ತದೆ. ಆದರೆ ಒಂದೊಂದು ಸಲವೂ ಅದು ಒಂದೊಂದು ರೀತಿಯದಾಗಿರುತ್ತದೆ. ಇದು ಸುಲಭವಾಗಿ ಸಾಧಿಸುವಂಥದಲ್ಲ. ಪುರಾಣಿಕರು ಇದರಲ್ಲಿ ಪೂರ್ಣ ಯಶಸ್ಸು ಪಡೆದಿದ್ದಾರೆ.

ನಮ್ಮ ಹೃದಯದ ಕದ ತಟ್ಟುವ, ನೆನಪಿನಲ್ಲಿಟ್ಟುಕೊಳ್ಳಬೇಕೆನ್ನಿಸುವ ಆಕರ್ಷಕ ಹೇಳಿಕೆಯ ಅರ್ಥವತ್ತಾದ ಮಾತುಗಳು ಮತ್ತೆ ಮತ್ತೆ ಬರುತ್ತವೆ. ನೀತಿಕಾವ್ಯದ ಒಂದು ಸಹಜ ಗುಣ ಹೀಗೆ ‘ವಚನೋದ್ಯಾನ’ದಲ್ಲಿ ಕಾಣಿಸಿಕೊಳ್ಳುತ್ತದೆ;

ಎನಿತು ಕುರೂಪಗಳು ನರರು ನಿರ್ಮಿಸಿದ ನಾಗರಿಕತೆಯಲ್ಲಿ? (೩೬)
ಸುಲಭವಾದುದೆಲ್ಲ ಶುಭಕರವಲ್ಲ (೭೦)
ಹಿಂಡಿನಲ್ಲಿರುವಾಗ, ಕುಂಜರಕ್ಕೆ ಭೀಮಬಲ
ಹಿಂಡನಗಲಿದ ಹಸ್ತಿಗೆ ಬಲೆ, ಇಲ್ಲವೆ ಬಿಲವಯ್ಯಾ ! (೮೮)
ಪರಿಪೂರ್ಣನಾಗದಿದ್ದರೂ
ಪರಿಪಕ್ವನ ಮಾಡಯ್ಯ, ತಂದೆ ! (೨೩೦)
ಗುರಿ ಘನವಾದಷ್ಟೂ ಅದರ ಗರಿಮೆ ಹೆಚ್ಚುವುದಯ್ಯಾ ! (೨೩೭)
ಬದುಕುವುದು ಬಹು ಸುಲಭ ; ಬಾಳುವುದೇ ಕಠಿಣವಯ್ಯಾ (೨೬೬)
ಗೃಹ ಕಟ್ಟುವುದು ಕಷ್ಟವೇನಲ್ಲ, ಗೃಹಸ್ಥನಾಗುವುದು ಕಷ್ಟಕರವಯ್ಯಾ (೨೬೬)
ನಿನ್ನನರಿಯುವ ಮೊದಲು ಹಲವು ಮತ, ಹಲವು ಪಥ,
ನಿನ್ನನರಿದ ಮೇಲೆ ಒಂದೆ ಮತ, ಒಂದೆ ಪಥವಯ್ಯಾ (೩೦೮)
ಅಟ್ಟರೆ ಅಡುಗೆ, ಸುಟ್ಟರೆ ಭಸ್ಮ (೩೬೩)
ಗಾಂಪರಿರುವಲ್ಲಿ ರಂಪ ಬಹಳವಯ್ಯಾ (೪೨೫)
ಜೀವಿಯಿದ್ದೆಡೆ ಕ್ಷೇತ್ರ, ಹೃದಯವಿದ್ದೆಡೆ ತೀರ್ಥ (೪೪೦)

ಅರ್ಧರಾತ್ರಿಯಲ್ಲಿ ಎದ್ದು ಹೋಗುವರೆಲ್ಲ ಗೌತಮ
ಬುದ್ಧರಾಗುವರೇನಯ್ಯಾ ? (೪೮೮)

ಪುರಾಣಿಕರ ವಚನಗಳಲ್ಲಿ ವ್ಯಂಗ್ಯ ವಿಡಂಬನೆಗಳಿಲ್ಲ, ಬೇಡಿಕೆ ಪ್ರಾರ್ಥನೆಗಳಿವೆ; ಚುಚ್ಚುವುದೂ ತಿವಿಯುವುದೂ ಇಲ್ಲ, ಮೈದಡವುವ ಮಾತೃವಾತ್ಸಲ್ಯವಿದೆ ; ಗಹಗಹಿಸುವ ನಗುವಿಲ್ಲ, ಮೃದು ಮಂದಹಾಸವಿದೆ; ವೈಭವಕ್ಕಾಗಿ ವರ್ಣನೆಯಿಲ್ಲ,

ವಸ್ತು ಸ್ಥಿತಿಗೆ ವಿಶೇಷಣಗಳಿವೆ ; ಲೋಕವನ್ನು ತಿಳಿಯುವ ಹೆಚ್ಚುಗಾರಿಕೆಯಿಲ್ಲ, ತನ್ನನ್ನು ತಿಳಿಯುವ ಹುಚ್ಚಿದೆ. ಇದು ಚಮತ್ಕಾರದ ಕಾವ್ಯವಲ್ಲ ; ಸಾಕ್ಷಾತ್ಕಾರದ ಭಾಷ್ಯ.

ವಿರಳವಾಗಿ ಪುರಾಣಿಕರು ಭಾಷೆಯೊಡನೆ ಆಡುತ್ತಾರೆ ; ಆದರೆ ಆಟಕ್ಕಾಗಿ ಭಾಷೆಯನ್ನು ಬಳಸುವುದಿಲ್ಲ. ಈ ಉದಾಹರಣೆಗಳನ್ನು ನೋಡಿ

‘ನವೀಕರಣ, ನವೀಕರಣ’ವೆಂದು
ನಲುಗುತ್ತಲಿಹರಯ್ಯ ನವಯುವಕರು ;
‘ಮಾ ನವೀಕರಣ, ಮಾ ನವೀಕರಣ’ವೆಂದು
ಯಾರೆನ್ನುವರು ?
ನಾನಂತೂ ಎನ್ನಲಾರೆ !
ಆದರೆ ‘ಮಾನವೀಕರಣ, ಮಾನವೀಕರಣ’ವೆಂದು ಎನ್ನದಿರಲಾರೆ (೨೦೩)
ಭಾರತಕ್ಕೆ ಬಹಳಷ್ಟು ‘ಬಾಬಾ’ಗಳನ್ನು ಕೊಟ್ಟಿರುವೆ
ಈಗ ಸಾಕಷ್ಟು ‘ಭಾಭಾ’ಗಳನ್ನು ಕೊಡಯ್ಯ (೪೪೮)
ಜಾರನ ಮನೆಯ
ಪಾರುಪತ್ಯಗಾರನಾಗುವುದಕ್ಕಿಂತ
ಲೆನಿನ್ನನ ಮನೆಯ
ಬಾಣಸಿಯಾಗುವುದು ವಿಹಿತವಯ್ಯಾ (೧೭೪)

ಇಂಥ ಉದಾಹರಣೆಗಳು ಹಲವು ನಮಗೆ ಹುಡುಕಿದರೂ ಸಿಕ್ಕುವುದಿಲ್ಲ. ಇದು ಪುರಾಣಿಕರು ಭಾಷೆಯ ಬಳಕೆಯಲ್ಲಿ ತೋರುವ ಗಾಂಭೀರ್ಯವನ್ನು ಸೂಚಿಸುತ್ತದೆ.

ಒಟ್ಟಿನಲ್ಲಿ ಪುರಾಣಿಕರ ವಚನಗಳು ನಮ್ಮ ಆಧುನಿಕ ಅನುಭಾವ ಸಾಹಿತ್ಯದ ಶ್ರೀಮಂತಿಕೆಯನ್ನು ಹೆಚ್ಚಿಸಿವೆ. ಈ ವಚನಗಳಲ್ಲಿ ಅಭಿವ್ಯಕ್ತವಾಗಿರುವ ದುಗುಡ ಕಳಕಳಿಗಳೇ ಬಸವಳಿದ ಬಾಳಿಗೆ ಆಸೆ ಭರವಸೆಗಳನ್ನೂ, ಸಾಂತ್ವನವನ್ನೂ ನೀಡುತ್ತವೆ. ಹೋಲಿಕೆಯನ್ನು ಹೆಚ್ಚು ಬೆಳಸದೆ ಹೇಳುವುದಾದರೆ ಮುಖ್ಯ ಆದುನಿಕ ವಚನ’ಕಾರರಾದ ಶ್ರೀ ಜಚನಿ ಅವರಲ್ಲಿ ಚನ್ನಬಸವಣ್ಣನ ಪಾರಿಭಾಷಿಕತೆಯಿದೆ ; ರಂಗಣ್ಣನ’ವರಲ್ಲಿ ಬಸವಣ್ಣನ ವ್ಯಾವಹಾರಿಕತೆಯಿದೆ ; ಪರಮೇಶ್ವರಭಟ್ಟರಲ್ಲಿ ಮಹಾದೇವಿಯಕ್ಕನ ಕಲಾತ್ಮಕತೆಯಿದೆ ; ಸಿದ್ಧಯ್ಯ ಪುರಾಣಿಕರಲ್ಲಾದರೋ ಅಲ್ಲಮನ ಅನುಭಾವ ನಿಗೂಢತೆ ಸುಳಿಯುತ್ತದೆ.



* * *

ರವೀಂದ್ರನಾಥ ಠಾಕೂರರ ಜೀವನ ಚರಿತ್ರೆಯ ಒಂದು ಪ್ರಸಂಗ ನೆನಪಾಗುತ್ತದೆ. ತರುಣ ವಯಸ್ಸಿನ ಠಾಕೂರರು ಮೊದಲ ಬಾರಿಗೆ ಮಧ್ಯಕಾಲೀನ ಲೇಖಕರ ಅನ’ಭಾವ ಗೀತೆಗಳನ್ನು ನೋಡಿದಾಗ ತಾವೂ ಏಕೆ ಅಂಥವನ್ನು ಬರೆಯಬಾರದು ಎಂದುಕೊಂಡು ಆ ಬಗೆಯ ಕೃತಿರಚನೆ ಮಾಡಿದರು. ಗೀತೆಗಳ ಕೊನೆಯಲ್ಲಿ ಗುಪ್ತ ಅಂಕಿತವನ್ನಿಡುವುದು ಆ ಕಾವ್ಯದ ಒಂದು ಪದ್ಧತಿ. ಠಾಕೂರರು ತಮ್ಮ ಹೆಸರನ್ನು ಭಾನ’ಸಿಂಹ ಥಾಕೂರ್ ಎಂದು ರೂಪಾಂತರಿಸಿಕೊಂಡರು. ಆ ರಚನೆಗಳ ಸಂಗ್ರಹ ‘ಭಾನ’ಸಿಂಹ ಥಾಕೂರೇರ ಪದಾವಲಿ’ ಎಂಬ ಹೆಸರಿನಿಂದ ಪ್ರಸಿದ್ಧವಾಯಿತು. ಇವನ್ನು ಬರೆದವರು ಯಾರು ಎಂಬ ಚರ್ಚೆಗೆ ಆರಂಭವಾಯಿತು. ತರುಣ ವಿದ್ವಾಂಸನೊಬ್ಬ ಜರ್ಮನಿಯ ವಿಶ್ವವಿದ್ಯಾನಿಲಯವೊಂದಕ್ಕೆ ಹೋಗಿ ಈ ರಚನೆಗಳ ಕರ್ತೃತ್ವದ ಮೇಲೆ ಸಂಶೋಧನೆ ಮಾಡಿ, ಲೇಖಕ ಮಧ್ಯಕಾಲದವನೆಂದು ಸ್ಥಾಪಿಸಿ, ಪ್ರಬಂಧ ಬರೆದು ಪದವಿ ಪಡೆದು ಬಂದನಂತೆ ! ಠಾಕೂರರ ತಂದೆ ಅವನ ಸಾಹಸವನ್ನು ಮೆಚ್ಚಿ ನಕ್ಕು ನೂರು ರೂಪಾಯಿಗಳ ಬಹುಮಾನ ನೀಡಿದರೆಂದು ಪ್ರತೀತಿ.

ಸಮಕಾಲೀನ ಉಲ್ಲೇಖಗಳನ್ನೊಳಗೊಂಡ ಪುರಾಣಿಕರ ವಚನಗಳನ್ನು ಬಿಟ್ಟರೆ ಮಿಕ್ಕವು ಹಳೆಯ ಯಾವನೋ ಒಬ್ಬ ವಚನಕಾರನ ಕಟ್ಟಿನಿಂದ ಕಳಚಿಕೊಂಡು ಬಂದವೆಂದು ಧಾರಾಳವಾಗಿ ಹೇಳಬಹುದು. ಆದರೆ ಇದನ್ನು ಸ್ಥಾಪಿಸಿ ಮಾನ್ಯತೆ ಪಡೆಯುವ ಅವಕಾಶ ಮಾತ್ರ ಈಗ ಇಲ್ಲವಾಗಿದೆ !

ಪುರಾಣಿಕರು ಒಂದು ವಚನದಲ್ಲಿ ಹೇಳುತ್ತಾರೆ :

ಮುನ್ನುಡಿ ಓದಿ ವಾದಿಸಿದನೊಬ್ಬ,
ಸಾದರ ಸ್ವೀಕಾರವನ್ನೋದಿ ವಾದಿಸಿದನಿನ್ನೊಬ್ಬ,
ಇಬ್ಬರೂ ಮೂಲಗ್ರಂಥವನ್ನು ಓದದವರೇ ! (೪೧೮)

ಸ್ವತಂತ್ರಧೀರ ಸಿದ್ಧೇಶ್ವರನಲ್ಲಿ ಸದ್ಯ ನನ್ನ ಪ್ರಾರ್ಥನೆ ಇಷ್ಟೆ :

“ಹಾಗಾಗದಿರಲಿ, ಪ್ರಭುವೆ”

ಹಾ.ಮಾ. ನಾಯಕ

“ಗೋಧೂಳಿ”
ಜಯಲಕ್ಷ್ಮೀಪುರಂ, ಮೈಸೂರು–೧೨

ಡಿಸೆಂಬರ್ ೨೩, ೧೯೭೭X



## ಬಾಗಿಲಲಿ ಕೈಮುಗಿವೆ

ಒಳಗೆ ಪ್ರವೇಶಿಸುವ ಮುನ್ನ ಬಾಗಿಲಲಿ ನಿನಗೆ ಕೈಮುಗಿವೆ ಓದುಗ! ನೀನು ಇಂದಿನವನಿರಬಹುದು, ನಾಳಿನವನಿರಬಹುದು, ನೂರು ವರ್ಷಗಳ ತರುವಾಯದವನಿರ ಬಹುದು ಯಾರಾದರೂ ಸರಿಯೆ, ಈ ದ್ವಾರದಲ್ಲಿ ನಿನಗೆ ನ ’ನ್ನ ನಮಸ್ಕಾರ !

ಒಳಗೆ ವಿಚರಿಸಿ ಬಂದ ಮೇಲೆ ವ್ಯರ್ಥ ಸುತ್ತಿಸುಳಿದ ಅನುಭವ ನಿನ ’ಗಾಗುವುದೋ, ಸಾರ್ಥಕ ವಿಹಾರಗೈದ ಹಾಗೆ ನಿಸುವುದೋ ನಾನರಿಯೆ. ನೀನ ’ು ಸ್ವಲ್ಪವಾದರೂ ಸಂತೃಪ್ತನಾಗಿ ಹಿಂದಿರುಗಿದರೆ ನಾನು ಧನ್ಯ; ನೀನು ನಿರಾಶನಾಗಿ ಮರಳಿದರೆ ನಿನ್ನ ಕ್ಷಮಾಗುಣ ನನಗೆ ಶರಣ್ಯ ! ಒಳಗೆ ಸುಳಿದಾಡಿದ ಮೇಲೆ ನಿನ್ನ ಅನ ’ುಭವವದಾವುದೇ ಇರಲಿ, ಈಗ ಬಾಗಿಲ ಬಳಿ ನಿನಗೆ ಈ ನತಮಸ್ತಕ ಲೇಖಕನ ನ ’ಮ್ರ ಸ್ವಾಗತ !

ನಂಬಿದರೆ ನಂಬು, ನಂಬದಿರೆ ಬಿಡು ಓದುಗ ನನಗೆ ವಚನಗಳನ್ನು ರಚಿಸಬೇಕೆಂಬ ಚಪಲವೇ ಇರಲಿಲ್ಲ. ಆ ಬಾನೆತ್ತರದ ವ್ಯಕ್ತಿತ್ವದ, ಸಾಗರೋಪಮ ಅನ ’ುಭಾವಶ್ರೀಯ ಅಂದಿನ ವಚನಕಾರರೆಲ್ಲಿ, ಈ ‘ಮರವೆಯ ಮರುಳ’ನೆಲ್ಲಿ ?

ಹೀಗಿದ್ದೂ ಹವ್ಯಾಸವಿದು ಹಠಾತ್ತಾಗಿ ಹಾರಿಬಂದು ನನ್ನ ಹೆಗಲೇರಿ ಕುಳಿತಿತು ! ಕಲಬುರಗಿ ವಿಭಾಗದ ಶಿಕ್ಷಕ ಮಿತ್ರರ ಮುಖಪತ್ರಿಕೆಯಾದ ‘ಜೀವನ ವಿಕಾಸ’ಕ್ಕೆ ಆ ಭಾಗದವನಾದ ನಾನು ಪ್ರತಿ ತಿಂಗಳೂ ಏನಾದರೂ ಕಳಿಸಲೇಬೇಕೆಂದು ಹತ್ತುವರ್ಷಗಳ ಹಿಂದೆ ಹಟ ಹಿಡಿದರು ಹಲವು ಗೆಳೆಯರು. ತಿಂಗಳು ತಿಂಗಳೂ ಏನನ್ನು ಕಳಿಸಬಲ್ಲೆನ ’ೆಂದು ಯೋಚನೆಗೊಳಗಾಗಿದ್ದಾಗ ಎಡೆಯೂರಿನ ಶಿವಯೋಗೀಶ್ವರ ಸಿದ್ಧಲಿಂಗೇಶ್ವ ರರ ದೇವಾಲಯುದಲ್ಲಿ ಇದ್ದಕ್ಕಿದ್ದಂತೆ ಎರಡು ವಚನಗಳು ಸ್ಫುರಿಸಿದುವು. ಸರಿ, ಪ್ರತಿತಿಂಗಳೂ ಐದ್ಕೈದು ವಚನಗಳನ್ನೇ ಕಳಿಸುತ್ತ ಹೋಗುವುದೆಂದು ತೀರ್ಮಾನಿಸಿದೆ. ಶ್ರೀ ಸಿದ್ಧಲಿಂಗೇಶ್ವರರ ಅನುಗ್ರಹದಿಂದ, ‘ಜೀವನ ವಿಕಾಸ’ದ ಗೆಳೆಯರ ವಿಶೇಷವಾಗಿ ಸರ್ವಶ್ರೀ ಎಸ್.ಪಿ. ಸತೀಶ, ಕೆ. ಶಾಂತಯ್ಯ, ಎ.ಕೆ. ರಾಮೇಶ್ವರರ ಎಡೆಬಿಡುವಿಲ್ಲದ ಓಲೆಗಳ, ನೆನಪೋಲೆಗಳ, ತಂತಿಗಳ ಪ್ರಭಾವದಿಂದ ಈ ನೋಂಪಿ ನಿರಾತಂಕವಾಗಿ ನ ’ಡೆದು, ‘ವಚನೋದ್ಯಾನ’ವಾಗಿ ಬೆಳೆದು ನಿನ್ನೆದುರು ನಿಂತಿದೆ. ಇದರಲ್ಲಿ ಅರಳಿರುವ

ಹಲವು ಬಗೆಯ ಹೂಗಳಿಗೆ ಪರಿಮಳವಿದೆಯೆ, ಇಲ್ಲವೆ ಎಂಬುದನ್ನು ನಿರ್ಧರಿಸುವವ ನೀನು. ಒಬ್ಬೊಬ್ಬರಿಗೆ ಒಂದೊಂದು ಪರಿಮಳ ಸೇರುತ್ತದೆ. ಇಲ್ಲಿರುವ ಹೂಗಳಲ್ಲಿ ಎಲ್ಲರಿಗೂ ಅವರವರಿಗೆ ಇಷ್ಟವಾದ ಪರಿಮಳದ ಒಂದು ಹೂವಾದರೂ ಸಿಕ್ಕೀತೆಂದು ಭಾವಿಸಿದ್ದೇನೆ. ಈ ಭಾವನೆಗೆ ಆಧಾರ ಇವುಗಳನ್ನು ಇದಾಗಲೇ ಓದಿ ಮೆಚ್ಚಿರುವ ಹಲವು ಹಿರಿಯರ ಹುರಿದುಂಬಿಸುವ ಮಾತುಗಳು.

ಈ ಹಿರಿಯರ ಹರಕೆನುಡಿಗಳಿಂದ ಉತ್ತೇಜಿತನಾಗಿ ನಾನೀ ವಚನಗಳನ್ನು ಪ್ರಕಟಿಸಲು ಮುಂದಾಗಿದ್ದರೂ ಒಂದು ಮಾತನ್ನಿಲ್ಲಿ ಒಪ್ಪಲೇಬೇಕು ನಾನು : ಈ ಹೊತ್ತಗೆಯನ್ನೆಲ್ಲ ಹುಡುಕಿದರೂ ಬಸವಾದಿ ಪ್ರಮಥರು ಉಸುರಿದಂಥ ಒಂದು ವಚನವೂ ದೊರೆಯಲಾರದು. ಈ ಕೊರತೆಯನ್ನು ಇಂದಿನ ಅನಿಸಿಕೆಗಳ, ಆಲೋಚನೆಗಳ, ಅನುಭವಗಳ ಅಭಿವ್ಯಕ್ತಿಯಿಂದ ತುಂಬಲೆಳಸಿದ ನನ್ನ ಆಸೆ ಎಷ್ಟರಮಟ್ಟಿಗೆ ಈಡೇರಿದೆಯೋ ಹೇಳಲಾರೆ.

ವಚನಗಳ ರಚನೆಯಲ್ಲಿ ಉಪಯೋಗಿಸಿರುವ ಭಾಷೆಯ ಬಗ್ಗೆ ನಾನು ನಿವೇದಿಸಿಕೊಳ್ಳುವುದಿಷ್ಟು : ಆದಷ್ಟು ಅಡಕವಾಗಿ, ಆದರೂ ಸ್ಪಷ್ಟವಾಗಿ, ಸಮುಚಿತಪದ ಭೂಯಿಷ್ಠವಾಗಿ, ಅಭಿವ್ಯಕ್ತಿ ವೈವಿಧ್ಯದಿಂದ ಸಂಪುಷ್ಟವಾಗಿ, ಹೃದ್ಯತೆಗೆ ಹತ್ತಿರವಾಗಿರಲೆಂದು ಹವಣಿಸಿದ್ದೇನೆ; ಇಲಿಯೆಟ್ಟನ ಈ ಅವಿಸ್ಮರಣೀಯ ಪಂಕ್ತಿಗಳನ್ನು ಗಮನದಲ್ಲಿರಿಸಿಕೊಂಡು ಅಂತೆ ಬರೆಯಲು ಹೆಜ್ಜೆ ಹೆಜ್ಜೆಗೂ ಹೆಣಗಿದ್ದೇನೆ :

**"every word is at home,**
**Taking its place to support the others**
**The words neither difficult nor ostentatious,**
**An easy commerce of the old and the new,**
**The common word exact without vulgarity,**
**The formal word precise but not pedantic,**
**The complete consort dancing together."**

ಆದರೂ ನಾನು ಹಾರೈಸಿದ್ದ ಭಾಷೆ ಇಲ್ಲಿ ರೂಪುಗೊಂಡಿದೆಯೆಂದು ಹೇಳಲಾರೆ. ಇಷ್ಟು ಮಾತ್ರ ನಿಜ : ಕನ್ನಡ ನುಡಿಯ ಹೊಸ ಸಾಧ್ಯತೆಗಳನ್ನು ಸೂರೆಗೊಂಡಿರದಿದ್ದರೂ ಅದರ ಇದ್ದ ಬೆಡಗುಗಳನ್ನು ಬಳಸಿಕೊಳ್ಳಲು ಬಹಳಷ್ಟು ಶ್ರಮಿಸಿದ್ದೇನೆ. ವಚನ ಸಾಹಿತ್ಯದ ಪುನರುಜ್ಜೀವನ ಪ್ರಯತ್ನಗಳು, ನವಸೃಜನ ಸಾಹಸಗಳು ಆಗಾಗ ಅಲ್ಲಲ್ಲಿ ನಡೆದಿದ್ದರೂ ಹನ್ನೆರಡನೆಯ ಶತಮಾನದ ವಚನಸಾಹಿತ್ಯದ ಸ್ವತ್ವ ಸತ್ವಗಳಾಗಲಿ, ಬೃಹತ್ತು ಮಹತ್ತುಗಳಾಗಲಿ ಮತ್ತೆ ಮೈದೋರಿಲ್ಲವೆಂಬ ಕಠೋರ ತಥ್ಯದ ನೆನಪೂ ನನಗಿಲ್ಲದಿಲ್ಲ. ಆದುದರಿಂದ, ಬಹಳ ಎಚ್ಚರಿಕೆಯಿಂದ ಒಂದೊಂದು ಸಾಲನ್ನೂ ತೀಕ್ಷ್ಣ ಪರೀಕ್ಷಣಕ್ಕೆ ಗುರಿಪಡಿಸುತ್ತ ಮುಂದುವರಿದಿದ್ದೇನೆ. ಹೀಗಿದ್ದೂ ಇವುಗಳಲ್ಲಿ ಬಯಸಿದ ಭಾಷೆ ಬರಲೇ ಇಲ್ಲವೆಂಬ ಕೊರಗು ನನಗೆ.



ಈ ವಚನಗಳ ವಿಷಯಾನುಗುಣ ವರ್ಗೀಕರಣಕ್ಕೆ ಕೈಹಾಕಿಲ್ಲ ನಾನು. ಎಷ್ಟೇ ಕಟ್ಟುನಿಟ್ಟಾದ ವರ್ಗೀಕರಣ ಮಾಡಿದರೂ ವಿಷಯಗಳ ಮೇಲು ಸೇರುವೆಯನ್ನ ತಪ್ಪಿಸಲಿಕ್ಕಾಗುವುದಿಲ್ಲ. ಅಲ್ಲದೆ, ಯಾವುದೊಂದು ವಿಚಾರಪ್ರಣಾಳಿಕೆಯನ್ನೋ, ದರ್ಶನ ವನ್ನೋ, ವಾದವನ್ನೋ ಮುಂದಿರಿಸಿಕೊಂಡು ಈ ವಚನಗಳ ರಚನೆಯಾಗಿಲ್ಲ. ಆದುದರಿಂದ ವರ್ಗೀಕರಣ ಅನಿವಾರ್ಯವೂ ಎನಿಸಲಿಲ್ಲ. ಆದರೂ ಸ್ಥೂಲವಾಗಿ ಸುಸಂಗತತೆ ಸಾಧಿಸುವಂತೆ ಯತ್ನಿಸಿದ್ದೇನೆ.

ರಚಿಸಿದ ವಚನಗಳನ್ನೆಲ್ಲ ಪ್ರಕಟಿಸುವ ಗೋಜಿಗೆ ಹೋಗಿಲ್ಲ. ನನ್ನ ನಿಕಷಕ್ಕೇ ಮತ್ತೆ ಮತ್ತೆ ತಿಕ್ಕಿ ಚೊಕ್ಕವೆನಿಸಿದುವುಗಳನ್ನು ಮಾತ್ರ ಈ ಸಂಗ್ರಹದಲ್ಲಿ ಸೇರಿಸಿದ್ದೇನೆ. ಆದರೂ ತೀರ ಸಾಮಾನ್ಯವೆನಿಸುವ ವಿಚಾರಗಳುಳ್ಳ ವಚನಗಳೂ ಇಲ್ಲಿ ಸೇರದಿಲ್ಲ. ಒಂದು ಜೀವ ನಂಬಿ ತನ್ನದಾಗಿಸಿಕೊಂಡ ಏನೆಲ್ಲವೂ ಒಂದೆಡೆಗಿರಲೆಂಬ ಹಂಬಲವಿದಕ್ಕೆ ಕಾರಣ. ಆದುದರಿಂದ ಇಲ್ಲಿ ಸಂಗ್ರಹಗೊಂಡ ವಚನಗಳೆಲ್ಲ ಕೊನೆಯವರೆಗೆ ಉಳಿವುವೆಂಬ ಭ್ರಮೆ ನನಗಿಲ್ಲ, ಉಳಿಯದಿದ್ದರೂ ಕಳವಳವೇನಿಲ್ಲ. ನಾನು ಬದುಕಿರುವಾಗಲೇ ಕೆಲವು ಕೋವಿದರು ಸಾಹಿತ್ಯದ ಈ ಪ್ರಕಾರದಲ್ಲಿ ಕೃಷಿಮಾಡಿ ಕೃತಾರ್ಥರಾಗಿದ್ದಾರೆ. ಈ ಕೃಷಿ ನಿಲ್ಲದೆ ಮುಂದುವರಿಯಲು ಈ ಕೃತಿ ನೆರವಾದರೆ ನನಗದೇ ಸಾಕು.

ಈ ವಚನಗಳಲ್ಲಿ ಕೆಲವಡೆ ಸಂಸ್ಕೃತ, ಹಿಂದೀ, ಫಾರಸೀ, ಫ್ರೆಂಚ್, ತಮಿಳು, ಮರಾಠೀ ಸಾರೋಕ್ತಿಗಳು, ಸೂಚ್ಯುಕ್ತಿಗಳು, ಸೊಳ್ನುಡಿಗಳು ಉದಾಹೃತವಾಗಿವೆ. ಇದು ಅದೆಷ್ಟು ಆಕರಗಳಿಗೆ ನಾನು ಋಣಿ ಎಂಬುದನ್ನು ಎತ್ತಿತೋರಿಸುವ ಸಾಂಕೇತಿಕ ಋಣಸ್ಮರಣೆಯೇ ಹೊರತು ನನ್ನ ವೈದುಷ್ಯವನ್ನು ಒತ್ತಿಹೇಳುವ ಹಮ್ಮಲ್ಲವೆಂದು ಬಿನ್ನವಿಸಿಕೊಳ್ಳುತ್ತೇನೆ. ಟಿಪ್ಪಣಿ ವಿಭಾಗದಲ್ಲಿ ಇವುಗಳ ಅರ್ಥವನ್ನು ಕೊಡಲಾಗಿದೆ. ಆಯಾ ವಚನಗಳ ಕೆಳಗೇ ಅರ್ಥವನ್ನು ಅಚ್ಚಿಸಬಹುದಿತ್ತು. ಆದರೆ ಅಚ್ಚಿನ ಒಟ್ಟಂದಕ್ಕೆ ಕುಂದುಬರುವುದೆಂದು ಬಲ್ಲವರು ಹೇಳಿದುದರಿಂದ ಹೀಗೆ ಮಾಡಬೇಕಾಯಿತು. ಅಸೌಕರ್ಯವೆನಿಸಿದರೆ ಕ್ಷಮಿಸು ಒಲವಿನ ಓದುಗ !

ಈ ವಚನಗಳ ಅಂಕಿತದ ಬಗ್ಗೆ ಒಂದು ಮಾತು. 'ಕೂಡಲ ಸಂಗನ ಶರಣರು ಸ್ವತಂತ್ರರು, ಧೀರರು,' ಎಂದು ಸಾರಿದ್ದಾರೆ ಬಸವಣ್ಣನವರು. 'ಸ್ವತಂತ್ರ' 'ಧೀರ' ಈ ಎರಡೂ ಪದಗಳು ಪರಮಪ್ರಿಯವಾದುವುಗಳು ನನಗೆ. ಪರಮಾತ್ಮನನ್ನೇ 'ಸರ್ವತಂತ್ರ ಸ್ವತಂತ್ರ'* ನೆಂದು, ಕರೆಯಲಾಗಿದೆ. 'ಆಹ್ಲಾದ ಮಯಿತ್ವ, ಅನನ್ಯಪರತಂತ್ರತೆ'ಗಳು ಅಭಿವ್ಯಕ್ತಿಯ ಪ್ರಮುಖ ಲಕ್ಷಣಗಳೆಂದು ಪರಿಗಣಿತವಾಗಿವೆ. ವ್ಯಷ್ಟಿ ಸಮಷ್ಟಿಗಳ ಸಂಪೂರ್ಣ ವಿಕಾಸ ಸ್ವತಂತ್ರತೆಯ ಪರಿಸರದಲ್ಲಿ ಮಾತ್ರ ಸಾಧ್ಯವೆಂಬುದು ಸರ್ವತ್ರ ಸ್ವೀಕೃತವಾಗುತ್ತಿದೆ. ಭಾರತೀಯರಂತೂ ಇದೇ ವರ್ಷ ಇದನ್ನು ಮತ್ತೆ ಮನಗಂಡಿದ್ದಾರೆ. ಇದೇ ವರ್ಷ ಈ ವಚನಗಳನ್ನು ಪ್ರಕಟಿಸಲು ಇದೂ ಒಂದು ಕಾರಣವಾಗಿದೆ. ಇನ

ನ್ನು ‘ಧೀರ’ ಶಬ್ದದ ಬಗ್ಗೆ, ಉಪನಿಷತ್ತುಗಳಲ್ಲಿ ಪದೇ ಪದೇ ಪ್ರಯೋಗವಾಗುವ ಪದವಿದು. ‘ಧಿಯಂ ಈರಯತೀತಿ’ ಮತ್ತು ‘ಧಿಯಂ ರಾ ತೀತಿ’ ಎಂದಿದರ ವ್ಯುತ್ಪತ್ತಿಯನ್ನು ಹೇಳಲಾಗಿದೆ. ‘ತಥಾಪರೇ ಚಾತ್ಮಸಮಾಧಿ ಯೋಗಬಲೇನ ಜಿತ್ವಾ ಪ್ರಕೃತಿಂ ಬಲಿಷ್ಠಾಮ್ । ತ್ವಾಮೇವ ಧೀರಾಃ ಪುರುಷಂ ವಿಷಂತಿ’ ಎಂದು ಭಾಗವತವು ಹೇಳಿದೆ. (೩–೬–೪೫) ಆದುದರಿಂದ ಸ್ವತಂತ್ರರೂ, ಧೀರರೂ ಆಗಿರದವರು ಶರಣರಾಗಲಾರರೆಂಬುದೇ ಉಪರ್ಯುಕ್ತ ಬಸವೋಕ್ತಿಯ ಅಂತರಾರ್ಥವಿರಬೇಕು. ಆದುದರಿಂದ ಈ ಎರಡು ಪದಗಳಿಗೆ ಎಡೆಯೂರಿನ ಯತೀಶ್ವರರ ಹೆಸರು ಸೇರಿಸಿ ಅಂಕಿತವನ್ನು ರೂಪಿಸಿಕೊಳ್ಳಲಾಗಿದೆ. ‘ಸಿದ್ಧೇಶ್ವರ’ ಎಂಬುದು ಸಿದ್ಧರಾಮನಿಗೂ, ಇನ್ನೂ ಅನೇಕ ಮಹಾನುಭಾವರಿಗೂ ಸಾಮಾನ್ಯವಾದ ಹೆಸರಷ್ಟೆ ?

ಯಾವ ಜನ್ಮದ ಸುಕೃತವೋ, ವಿಶ್ವಕವಿ ‘ಕುವೆಂಪು’ ಅವರು ನನ್ನ ‘ಶರಣ ಚರಿತಾಮೃತ’ಕ್ಕೆ ಮುನ್ನುಡಿ ನೀಡಿ ಹರಸಿದರು ; ಪರಮಬಂಧು ಡಾ।। ದೇ. ಜವರೇಗೌಡರು ತಮ್ಮ ‘ಸಾಹಿತಿಗಳ ಸಂಗದಲ್ಲಿ’ ನನ್ನನ್ನೂ ಸೇರಿಸಿಕೊಂಡು ಮೇಲೆತ್ತಿ ನಿಲ್ಲಿಸಿದರು; ಈಗ ಇನ್ನೊಬ್ಬ ಪರಮಬಂಧುಗಳಾದ ಡಾ।। ಹಾ.ಮಾ. ನಾಯಕರು ತಮ್ಮ ಬಿಡುವಿಲ್ಲದ ಕಾರ್ಯಭಾರದಲ್ಲಿಯೂ ಬಿಡುವು ಮಾಡಿಕೊಂಡು ಈ ‘ವಚನೋದ್ಯಾನ’ಕ್ಕೆ ಬಹುಬೆಲೆಯುಳ್ಳ ಮುನ್ನುಡಿಯನ್ನಿತ್ತು ಉಪಕರಿಸಿದ್ದಾರೆ. ‘ಜೀವನ ವಿಕಾಸ’ದಲ್ಲಿ ಈ ವಚನಗಳು ಪ್ರಕಟವಾಗುತ್ತಿದ್ದಂತೆ ಇವುಗಳನ್ನು ಆಸಕ್ತಿಯಿಂದ ಓದಿ, ಕಂಡಾಗಲೆಲ್ಲ ಮೆಚ್ಚಿಕೆಯನ್ನು ಸೂಚಿಸುತ್ತ ಪ್ರೋತ್ಸಾಹಿಸುತ್ತಿದ್ದ ಇವರೇ ಇದಕ್ಕೆ ಮುನ್ನುಡಿ ಬರೆಯಬೇಕೆಂಬುದು ನನ್ನ ಬಯಕೆಯಾಗಿದ್ದಿತು. ಇದನ್ನು ಈಡೇರಿಸಿದ ಅವರಿಗೆ ಚಿರಋಣಿ ನಾನು.

ಇದೇ ಸಂದರ್ಭದಲ್ಲಿ ನನ್ನ ಮುನ್ನಿನ ಕೃತಿಗಳಿಗೆ ಮುನ್ನುಡಿಗಳನ್ನಿತ್ತು ಉಪಕರಿಸಿದ ಮಹಾಕವಿ ಡಾ।। ದ.ರಾ. ಬೇಂದ್ರೆಯವರ, ವರಕವಿಗಳಾದ ಡಾ।। ವಿ.ಕೃ. ಗೋಕಾಕ ಹಾಗೂ ಪು.ತಿ.ನ ಅವರ, ಶ್ರೀ ಎಸ್.ಎಸ್. ಒಡೆಯರ್ ಅವರ, ನನ್ನ ಸಾಹಿತ್ಯ ಕೃಷಿಗೆ ನೀರೆರೆದ ವಿದ್ಯಾಗುರುಗಳಾದ ದಿ।। ಡಾ।। ಪಾ.ಭೀ. ದೇಸಾಯಿ, ದಿ।। ಪ್ರೊ. ಡಿ.ಕೆ. ಭೀಮಸೇನರಾವ್, ದಿ।। ವಿದ್ವಾನ್ ಮಾನ್ವಿ ನರಸಿಂಗರಾವ್ ಹಾಗೂ ಪ್ರೊ. ತವಗ ಭೀಮಸೇನರಾಯರ, ಬೆನ್ನುತಟ್ಟಿ ಮುನ್ನಡೆಸಿದ ಮಹಾಸಾಹಿತಿಗಳಾದ ಮಾಸ್ತಿ ವೆಂಕಟೇಶ ಐಯಂಗಾರ್ಯರ, ಡಿ.ವಿ.ಜಿ. ಅವರ, ಪಂಡಿತಾಗ್ರಣಿಗಳಾದ ತೀ.ನಂ.ಶ್ರೀ, ಡಿ.ಎಲ್.ಎನ್. ಅವರ, ಡಾ।। ಆರ್.ಸಿ. ಹಿರೇಮಠರ, ಡಾ।। ರಂ.ಶ್ರೀ. ಮುಗಳಿ ಅವರ, ಪ್ರೊ. ಮಾಳವಾಡರ, ಡಾ।। ಜಿ.ಎಸ್. ಶಿವರುದ್ರಪ್ಪನವರ, ಡಾ।। ಎಚ್. ತಿಪ್ಪೇರುದ್ರಸ್ವಾಮಿ ಅವರ, ಲಿಂ।। ಪ್ರೊ. ಜಿ.ಎಸ್. ಹಾಲಪ್ಪನವರ, ಶ್ರೀ ಎಚ್. ಎಲ್. ನಾಗೇಗೌಡರ, ಪಾಟೀಲ ಪುಟ್ಟಪ್ಪನವರ, ಶ್ರೀ ಜಿ. ನಾರಾಯಣರ ಇನ್ನೂ ಅಸೀಕರ ವಾತ್ಸಲ್ಯ ಪ್ರೋತ್ಸಾಹಗಳನ್ನು ಸಗೌರವ ಸ್ಮರಿಸುತ್ತೇನೆ.

---

* “ಸ್ವತಂತ್ರಃ ಸ್ವಚ್ಛಾತ್ಮಾ
ಸ್ಫುರತಿ ಸತತಂ ಚೇತಸಿ ಶಿವಃ” – ಅಭಿನವಗುಪ್ತ
“ಆತ್ಮ ಪ್ರಕಾಶ ವಪುರೇಷ
ಶಿವಃ ಸ್ವತಂತ್ರಃ” – ತಂತ್ರಾಲೋಕ



ಈ ಕೃತಿಯನ್ನು ಪ್ರಕಟಿಸಲು ಪರಿಚಿತ ಪ್ರಕಾಶಕರಾರೂ ಉತ್ಸಾಹ ತೋರಲಿಲ್ಲವಾಗಿ ‘ಶ್ರೀಗಿರಿ ಪ್ರಕಾಶನ’ ಲಾಂಛನದಡಿಯಲ್ಲಿ ನಾನೇ ಪ್ರಕಟಿಸ ಬೇಕಾಯಿತು. ಇದಕ್ಕೆ ಇನ್ನಾವ ಮಹತ್ವವೂ ಇಲ್ಲ. ನನಗೂ ಪ್ರಕಾಶಕರೊಡನೆ ವ್ಯವಹರಿಸುವ ಜಾಣ್ಮೆಯಿಲ್ಲ. ಗೆಳೆಯರೂ ಉತ್ತೇಜನವಿತ್ತರು. ಒಬ್ಬರಂತೂ ಹಣವಿತ್ತೂ ಹೆಸರು ಹೇಳಕೂಡದೆಂದು ಹಟಹಿಡಿದರು. ಹೀಗಾಗಿ ಬೇರೆ ದಾರಿಯೇ ಇಲ್ಲವಾಯಿತು. ಸಾಧ್ಯವಾದರೆ ನನ್ನೆಲ್ಲ ಕೃತಿಗಳನ್ನೂ ಕೆಲವು ಅಪ್ರಕಟಿತ ಪ್ರಾಚೀನ ಕೃತಿಗಳನ್ನೂ ಪ್ರಕಟಿಸುವ ಹಂಬಲವಿದೆ ಈ ಲಾಂಛನದಡಿಯಲ್ಲಿ. ‘ಲೋಟಸ್ ಪ್ರಿಂಟರ್ಸ್’ ತಾಳ್ಮೆಯಿಂದ ಅಂದವಾಗಿ ಅಚ್ಚಿಸಿಕೊಟ್ಟರು. ತಪ್ಪುಳಿಯದಂತೆ ಅಚ್ಚು ಮಾಡುವುದಕ್ಕೆ ಹೆಸರಾದ ಅವರೂ, ನಾನು ಅಲಕ್ಷ್ಯದಿಂದಿದ್ದುದಕ್ಕೆ ‘ಒಪ್ಪೋಲೆ’ ಜೋಡಿಸುವಂತಾಯಿತು. ಅವರಿದನ್ನು ಗಮನಿಸದೆ ಸಹನೆಯಿಂದ ಸಹಕರಿಸಿದ್ದಾರೆ. ಅವರಿಗೆ ವಂದನೆಗಳು.

– ಸಿದ್ಧಯ್ಯ ಪುರಾಣಿಕ

“ಶ್ರೀಗಿರಿ”
೪/೫ ‘ಎ’, ಅಲಿ ಆಸ್ಕರ್ ರಸ್ತೆ,
ಬೆಂಗಳೂರು – ೫೬೦ ೦೫೨

## ಎರಡನೆ ಮುದ್ರಣಕ್ಕೆ ಪ್ರಕಾಶಕರ ಮಾತು

ಬಹಳ ದಿವಸಗಳಿಂದ ನಮ್ಮ ಪೂಜ್ಯ ತಂದೆಯವರ ವಚನ ಸಂಪುಟಗಳನ್ನು ಮತ್ತೆ ಹೊರತರುವ ಆಲೋಚನೆಯಲ್ಲಿ ನಾನು ಮತ್ತು ನನ್ನ ಬಂಧುಗಳು ಇದ್ದೆವು. ನಮ್ಮ ಉದ್ದೇಶಕ್ಕೆ ಪೂರಕವಾಗಿ ಸಾಹಿತ್ಯಪ್ರಿಯರು ಮೇಲಿಂದ ಮೇಲೆ ಒತ್ತಾಯಿಸುತ್ತಲೇ ಇದ್ದರು. ಯಾವುದಕ್ಕೂ ಕಾಲ ಕೂಡಿಬರಬೇಕು. ಇದೀಗ ಆ ಯೋಗ ಬಂದಿದೆ. ಸದ್ಯಕ್ಕೆ ನಾವು ನಮ್ಮ ಪ್ರೀತಿಯ ತಂದೆಯವರ ವಚನ ಸಂಪುಟಗಳನ್ನು ಕ್ರಮಾಗತವಾಗಿ ಹೊರತರಲು ಹೊರಟಿದ್ದೇವೆ.

ಎರಡನೇ ಮುದ್ರಣ ಕೈಗೊಂಡಾಗ ಛಾಯಾಕ್ಷರ ಜೋಡಣೆ ಮಾಡಿದ ಶ್ರೀ ಗಾಯಿತ್ರಿ ಟೈಪೋಗ್ರಾಫ್ ಎಲೆಕ್ಟ್ರಿಕಲ್ ಪ್ರೆಸ್‌ನ ಮಾಲೀಕರಾದ ಶ್ರೀ ನವೀನ್‌ರವರು ಅಚ್ಚುಕಟ್ಟಾಗಿ ಕಾರ್ಯನಿರ್ವಹಿಸಿರುವರು. ನೆಲಮಂಗಲದ ಕನ್ನಡ ಗೆಳೆಯರ ಬಳಗದ ಶ್ರೀ ಎನ್. ವಿಜಯೇಂದ್ರರಾವ್‌ರವರು ಶ್ರದ್ಧೆಯಿಂದ ಈ ಕೃತಿಯ ಕರಡು ತಿದ್ದಿರುವರು. ಮುದ್ರಣದ ಕಾರ್ಯವನ್ನು ಸ್ನೇಹಾ ಪ್ರಿಂಟರ್ಸ್‌ನ ಡಾ.ಎಸ್. ವಿದ್ಯಾಶಂಕರರವರು ವಹಿಸಿಕೊಂಡಿರುವರು. ಇವರೆಲ್ಲರಿಗೂ ನಮ್ಮ ಹೃತ್ಪೂರ್ವಕವಾದ ಧನ್ಯವಾದಗಳು.

ಓದುಗರ ಪ್ರೋತ್ಸಾಹ ದೊರತಲ್ಲಿ ನಮ್ಮ ಪೂಜ್ಯ ತಂದೆಯವರ ಸಮಗ್ರ ಕೃತಿಗಳನ್ನು ಹೊರತರುವ ಯೋಜನೆ ನಮ್ಮ ಮುಂದಿದೆ.

– ಪಿ.ಕೆ. ಪುರಾಣಿಕ

"ಶ್ರೀಗಿರಿ"
೪/೫ 'ಎ' ಅಲಿ ಆಸ್ಕರ್ ರಸ್ತೆ
ಬೆಂಗಳೂರು–೫೬೦ ೦೫೨

## ಮೂರನೆ ಮುದ್ರಣಕ್ಕೆ ಪ್ರಕಾಶಕರ ಮಾತು

ನಮ್ಮ ಪೂಜ್ಯ ತಂದೆಯವರ ಮೊದಲ ವಚನ ಸಂಗ್ರಹ 'ವಚನೋದ್ಯಾನ' ೧೯೬೬ರಲ್ಲಿ ಹೊರಬಂದಿತು. ೧೯೮೮ರಲ್ಲಿ ಈ ಕೃತಿಗೆ ಕಲ್ಕತ್ತಾದ ಭಾರತೀಯ ಭಾಷಾ ಪರಿಷತ್ತು ತನ್ನ ಪ್ರತಿಷ್ಠಿತ  ಭಿಲ್ವಾರ ಪ್ರಶಸ್ತಿ ನೀಡಿ ಗೌರವಿಸಿತು. ಅದರ ಜನಪ್ರಿಯತೆಯಿಂದಾಗಿ ದ್ವಿತೀಯ ಮುದ್ರಣ ೨೦೦೦ರಲ್ಲಿ ಪ್ರಕಟವಾಯಿತು. ಸಾಹಿತ್ಯಪ್ರಿಯರ ಒತ್ತಾಸೆಯ ಕಾರಣದಿಂದಾಗಿ ಅದರ ಮೂರನೆ ಮುದ್ರಣ ಈಗ ಹೊರತರುತ್ತಿದ್ದೇವೆ. ನಮ್ಮ ಕುಟುಂಬದ ಎಲ್ಲ ಸದಸ್ಯರು ಪೂಜ್ಯ ತಂದೆಯವರ ಸಮಗ್ರ ಕೃತಿಗಳನ್ನು ಹೊರತರುವ ಮಹತ್ವದ ಯೋಜನೆಯನ್ನು ಅನುಷ್ಠಾನಕ್ಕೆ ತರಲು ಉತ್ಸಾಹದಿಂದ ಮುಂದೆ ಬಂದರು. ಇದರ ಫಲವಾಗಿ 'ಸಮಗ್ರ ಕಾವ್ಯ' ೨೦೦೮ರಲ್ಲಿ; 'ಸಮಗ್ರ ವಚನಗಳು' ೨೦೦೯ರಲ್ಲಿ; 'ಸಮಗ್ರ ನಾಟಕಗಳು' ೨೦೧೦ರಲ್ಲಿ ಹೊರಬಂದುವು. ಈ ವರ್ಷ 'ಸಮಗ್ರ ಮಕ್ಕಳ ಸಾಹಿತ್ಯ' ಹೊರತರುವ ಯೋಜನೆ ನಮ್ಮ ಮುಂದಿದೆ. ನಮ್ಮ ಈ ಎಲ್ಲ ಪ್ರಯತ್ನಗಳಿಗೆ ಸಹೃದಯಬಂಧುಗಳು ತುಂಬುಮನಸ್ಸಿನ ಪ್ರೋತ್ಸಾಹ ನೀಡುತ್ತಿರುವರು. ವಿದ್ವಾಂಸರಾದ ಡಾ.ಎಸ್. ವಿದ್ಯಾಶಂಕರ ಅವರು 'ವಚನೋದ್ಯಾನ'ದ ಮೂರನೆ ಮುದ್ರಣದ ಜವಾಬ್ದಾರಿಯನ್ನು ವಹಿಸಿಕೊಂಡಿರುವರು. ನಮ್ಮನ್ನು ಪ್ರೋತ್ಸಾಹಿಸುತ್ತಿರುವ ಎಲ್ಲರಿಗೂ ನಮ್ಮ ಹೃತ್ಪೂರ್ವಕ ಧನ್ಯವಾದಗಳು.

ವಚನೋದ್ಯಾನದ ಮೂರನೇ ಮುದ್ರಣದ ಕೊನೆಯ ಹಂತದ ಸಿದ್ಧತೆಯಲ್ಲಿದ್ದಾಗ ಯೋಗಾಯೋಗವೋ ಎನ್ನುವಂತೆ ನನ್ನ ಹಿರಿಯ ಅಕ್ಕ ಶ್ರೀಮತಿ ವಿಜಯಾ ನಂದೀಶ್ವರ ಅವರು ೧೯೯೪ರಲ್ಲಿ–ನಮ್ಮ ತಂದೆಯವರು ಲಿಂಗೈಕ್ಯರಾಗುವ ಪೂರ್ವದಲ್ಲಿ–ಕೆಲವು ವಚನಗಳನ್ನು ಯಾವುದೋ ಡೈರಿಯಲ್ಲಿ ಬರೆಯುತ್ತಿದ್ದರೆಂದು ನೆನಪಿಸಿಕೊಂಡು ನನ್ನೊಂದಿಗೆ ಮಾತಿನ ನಡುವೆ ಹೇಳಿದರು. ನನ್ನ ತಂದೆಯವರ 'ವಚನಾರಾಮ' ಕೃತಿ ಪ್ರಕಟವಾದುದು ೧೯೯೨ರಲ್ಲಿ. ನಮ್ಮ ಮನೆಯಲ್ಲಿ ತೀವ್ರ ಶೋಧ ನಡೆಸಿದಾಗ ನನಗೆ ೧೯೯೪ರ ಡೈರಿಯೊಂದು ದೊರೆಯಿತು. ಅದು ಹಲವೆಡೆ ತಿದ್ದಿದ ೧೫೪ ವಚನಗಳ ಕರಡುಪ್ರತಿ. ಮತ್ತೆ ನಾನು ನಮ್ಮ ಮನೆಯಲ್ಲಿ ಹುಡುಕಿದಾಗ ೧೯೯೦ನೇ ಇಸವಿಯ ಡೈರಿಯೊಂದು ದೊರೆಯಿತು. ಅದರಲ್ಲಿ ಮೇಲೆ ತಿಳಿಸಿದ ೧೫೪ ವಚನಗಳ ಶುದ್ಧ ಪ್ರತಿ ಸಿಕ್ಕಿತು. ತುಲನೆಮಾಡಿ ನೋಡಿದಾಗ ಈ ವಚನಗಳು ನಮ್ಮ ತಂದೆಯವರ ವಚನೋದ್ಯಾನ, ವಚನನಂದನ, ವಚನಾರಾಮಗಳಲ್ಲಿ ಸೇರ್ಪಡೆಯಾಗಿರಲಿಲ್ಲ. ಈ ಕಾರ್ಯದಲ್ಲಿ ನನ್ನೊಂದಿಗೆ ನನ್ನ ಪತ್ನಿ ಶ್ರೀಮತಿ ಲತಾ ಪುರಾಣಿಕ ಅವರು ಸಮನಾಗಿ ದುಡಿದಿರುವರು.

ದೈವದ ಇಚ್ಛೆ ಈ ೧೫೪ ಹೊಸ ವಚನಗಳು ವಚನೋದ್ಯಾನದಲ್ಲಿ ಸೇರ್ಪಡೆಯಾಗಬೇಕೆಂದಿತ್ತೋ ಏನೋ! ಸಕಾಲಕ್ಕೆ ಈ ವಚನಗಳು ಬೆಳಕಿಗೆ ಬಂದವು. ನಾವು ವಚನೋದ್ಯಾನದ ಮೂರನೆ ಮುದ್ರಣದಲ್ಲಿ ಅನುಬಂಧ ರೂಪದಲ್ಲಿ ಈ ೧೫೪ ಹೊಸ ವಚನಗಳನ್ನು ಕೊಡುತ್ತಿರುವೆವು. ಇದು ನಮಗಷ್ಟೇ ಅಲ್ಲ, ಡಾ. ಸಿದ್ಧಯ್ಯ ಪುರಾಣಿಕರ ಸಾಹಿತ್ಯಾಭಿಮಾನಿಗಳಿಗೂ ಸಂತೋಷವಾಗುತ್ತದೆಂದು ನಾವು ನಂಬಿರುವೆವು.

"ಶ್ರೀಗಿರಿ"
೪/೫ 'ಎ' ಅಲಿ ಆಸ್ಕರ್ ರಸ್ತೆ
ಬೆಂಗಳೂರು–೫೬೦ ೦೫೨

## ಪರಿವಿಡಿ


| | | |
|---|---|---|
| ವಚನೋದ್ಯಾನದಲ್ಲಿ | | iii |
| ಬಾಗಿಲಲಿ ಕೈ ಮುಗಿವೆ | | xx |
| ಪ್ರಕಾಶಕರ ಮಾತು | | xxv |
| ಪರಿವಿಡಿ | | xxvii |
| ಅರ್ಪಣೆ | | xxviii |
| ವಚನೋದ್ಯಾನ | ವ. ೧–೫೨೫ | ೧–೨೭೮ |
| ಅನುಬಂಧ | | |
| ಹೊಸ ವಚನಗಳು | ವ. ೧–೧೫೮ | ೨೭೯–೩೩೮ |
| ವಚನಾನನುಕ್ರಮಣಿಕೆ | | ೩೩೯–೩೫೨ |
| ಟಿಪ್ಪಣಿಗಳು | | ೩೫೩–೩೫೪ |
| ಡಾ. ಸಿದ್ಧಯ್ಯ ಪುರಾಣಿಕರ ಜೀವನ ವಿವರ | | ೩೫೫–೩೫೬ |
| ಡಾ. ಸಿದ್ಧಯ್ಯ ಪುರಾಣಿಕರ ಸಾಹಿತ್ಯ ಸೂಚಿ | | ೩೫೭–೩೬೧ |
| ಡಾ. ಸಿದ್ಧಯ್ಯ ಪುರಾಣಿಕರನ್ನು ಕುರಿತ ಪ್ರಕಟಿತ ಕೃತಿಗಳು | | ೩೬೨ |
| ಭಾರತೀಯ ಭಾಷಾ ಪರಿಷದ್ ಕೃತಿಗೆ ಗೌರವ ಪ್ರಶಸ್ತಿ | | ೩೬೩ |




## ಅರ್ಪಣೆ

ಪ್ರಮಥಧರ್ಮದ ಪುನರೋದಯಕ್ಕೆ
ವಚನಸಾಹಿತ್ಯದ ಪುನರುಜ್ಜೀವನಕ್ಕೆ
ಕಾರಣರಾದ
ಎಡೆಯೂರಿನ ಶಿವಯೋಗೀಶ್ವರ
ಕನ್ನಡನಾಡಿನ ಜ್ಞಾನರತ್ನಾಕರ
ಶ್ರೀ ತೋಂಟದ ಸಿದ್ಧಲಿಂಗೇಶ್ವರರಿಗೆ
ಭಕ್ತಿಪುರಸ್ಸರವಾಗಿ

# ವಚನೋದ್ಯಾನ

೧

ನೀನಿಲ್ಲದ ಮುನ್ನ ನಾನಿದ್ದೆನೆಂದು
ನಂಬದಯ್ಯ ನನ್ನ ಮನವು ;
ನಾನಿಲ್ಲದ ಮುನ್ನ ನೀನಿದ್ದೆಯೆಂದು
ನಂಬದಯ್ಯ ನನ್ನ ಮನವು ;
ನಾ ನೀ ಎಂಬ ಉಭಯವಿಲ್ಲದ ಮುನ್ನ
ಏನಿದ್ದುದೆಂಬುದ
ಏನೆಂದೊರೆವೆನಯ್ಯ
ಸ್ವತಂತ್ರಧೀರ ಸಿದ್ಧೇಶ್ವರಾ !

೨

ನಿನ್ನ ನಾಮಕರಣೋತ್ಸವಕ್ಕೆ
ನೀನೆನ್ನ ಕರೆಸದಿದ್ದರೂ
ನಾನಲ್ಲಿ ಇದ್ದೆನಯ್ಯಾ !
ಮನುಷ್ಯತ್ವ, ಮುಮುಕ್ಷುತ್ವ, ಜಿಜ್ಞಾಸೆ, ಶ್ರದ್ಧೆ, ಶಿವರತಿಯೆಂಬ
ಐವರು ಮುತ್ತೈದೆಯರು
ತೊಟ್ಟಿಲ ತೂಗಿ, ಜೋಗುಳ ಹಾಡಿ,
ನಿನಗೆ ಲಿಂಗವೆಂದು ಹೆಸರಿಟ್ಟಾಗ
ನಾನಲ್ಲಿ ಅಂಗವಾಗಿ ಉಪಸ್ಥಿತನಿದ್ದೆನಯ್ಯಾ !
ಸ್ವತಂತ್ರಧೀರ ಸಿದ್ಧೇಶ್ವರಾ,
ನೀನಿದ್ದಲ್ಲಿ ನಾನಿದ್ದೆ, ಇದ್ದೇನೆ ;
ನಾನಿದ್ದಲ್ಲಿ ನೀನಿರಲಾರೆಯೇನಯ್ಯಾ?

೩

ನಾನು ಹುಟ್ಟುವ ಮುನ್ನ
ನೀನು ಹೇಗಿದ್ದೆಯಯ್ಯಾ?
ಶಬ್ದ ಹುಟ್ಟದ ಮುನ್ನಿನ ಅರ್ಥದಂತೆ,
ವಾದ್ಯ ಹುಟ್ಟದ ಮುನ್ನಿನ ನಾದದಂತೆ,
ಕುಂಚ ಹುಟ್ಟದ ಮುನ್ನಿನ ಚಿತ್ರದಂತೆ,
ಉಳಿ ಹುಟ್ಟದ ಮುನ್ನಿನ ಶಿಲ್ಪದಂತೆ,
ದೇಹ ಹುಟ್ಟದ ಮುನ್ನಿನ ಪ್ರಾಣದಂತೆ
ಇದ್ದೆಯಯ್ಯಾ !
ಸ್ವತಂತ್ರಧೀರ ಸಿದ್ಧೇಶ್ವರಾ,
ನಾನು ಹುಟ್ಟದ ಮೇಲೆ ತಾನೆ
ಅರ್ಥಕ್ಕೆ ಶಬ್ದ, ನಾದಕ್ಕೆ ವಾದ್ಯ,
ಚಿತ್ರಕ್ಕೆ ಕುಂಚ, ಶಿಲ್ಪಕ್ಕೆ ಉಳಿ,
ನಿನಗೆ ಭಕ್ತ ದೊರೆತುದು ?

೪

ಬೀಜದ ಬಸಿರಿನ ಮೊಳೆಯದ ಬಳ್ಳಿಯ
ಮೂಡದ ಹೂವಿನ ಕಂಪಿನಂತಿಹೆಯೇನಯ್ಯ?
ನವಿಲಿನ ಮೊಟ್ಟೆಯ ಹೊಟ್ಟೆಯೊಳಡಗಿಹ
ಗರಿಗಳ ಕಣ್ಣಿನ ಬಣ್ಣದಂತಿಹೆಯೇನಯ್ಯ ?
ಅಳಿದ ಚಿತ್ರಕನ ಉದ್ದೇಶಿತ ಚಿತ್ರದ
ಚೆಲುವು ಚಿಮ್ಮಿಸುವ ನಲವಿನಂತಿಹೆಯೇನಯ್ಯ ?
ಬಂಜೆಯ ಸ್ವಪ್ನದಿ ಸುಳಿಯುವ ಕಂದನ
ಮುದ್ದುಮೊಗದ ಮಂದಹಾಸದಂತಿಹೆಯೇನಯ್ಯ ?
ಕಾಣದ ಕಾಮಧೇನುವಿನ ಕರೆಯದ ಹಾಲಿನ
ಕಡೆಯದ ಬೆಣ್ಣೆಯ ಸವಿಯಂತಿಹೆಯೇನಯ್ಯ ?
ಸ್ವತಂತ್ರಧೀರ ಸಿದ್ಧೇಶ್ವರಾ,
ಈಡೇರದ ಆಸೆಗಳ ಚಿತಾಭಸ್ಮದಿ ಬೆಳೆದ
ಹೊಸ ಆಸೆಯ ಕಣ್ಣಿನ ಕಾಂತಿಯಂತಿಹೆಯೇನಯ್ಯ ?



೫

ಎಲ್ಲ ತೋರ್ಕೆಗಳ ಹಿಂದಿರುವ ನಿತ್ಯವೆ,
ಎಲ್ಲ ತಥ್ಯಗಳ ಹಿಂದಿರುವ ಸತ್ಯವೆ,
ಎಲ್ಲ ಪರಿವರ್ತನೆಗಳ ಹಿಂದಿರುವ ಅಪರಿವರ್ತನೀಯವೆ,
ಎಲ್ಲ ವರ್ಣನೆಗಳ ಮೀರಿರುವ ಅವರ್ಣನೀಯವೆ,
ಎಲ್ಲ ವಚನಗಳ ಆಚೆ ಇರುವ ಅನಿರ್ವಚನೀಯವೆ,
ಎಲ್ಲ ಅಳಿಮೆಗಳ ಮೆಟ್ಟ ನಿಲ್ಲುವ ಉಳಿಮೆಯೆ,
ಎಲ್ಲ ಗಮ್ಯಗಳ ಗಮ್ಯವಾದ ಅಗಮ್ಯವೆ,
ಎಲ್ಲ ಗೋಚರಗಳಿಗೂ ಗೋಚರಿಸದ ಅಗೋಚರವೆ,
ಎಲ್ಲ ಪ್ರಮಾಣಗಳಿಗೆ ಪ್ರಮಾಣವಾದ ಅಪ್ರಮಾಣವೆ,
ಎಲ್ಲ ಇಂದ್ರಿಯಗಳಿಗೆ ಇಂದ್ರಿಯವಾದ,
ಚೇತನಾಚೇತನಕೆ ಚೇತನವಾದ,
ರಸಕೆ ರಸ, ಚೆಲುವಿಗೆ ಚೆಲುವು, ನನ್ನಿಗೆ ನನ್ನಿಯಾದ
ಸಚ್ಚಿದಾನಂದವೆ,
ಅನಾದಿ ಅನಂತವೆ,
ಏಕಮೇವಾದ್ವಿತೀಯವೆ,
ವಿಶ್ವ ಗೇಹ, ವಿಶ್ವ ದೇಹ, ವಿಶ್ವಾತ್ಮ , ವಿಶ್ವಾತೀತವೆ,
ಸ್ವತಂತ್ರಧೀರ ಸಿದ್ಧೇಶ್ವರವೆ !

೬

ನಿನಗೆ ನಾಮವಿಲ್ಲ
ಎಲ್ಲ ನಾಮಗಳೂ ನಿನ್ನವೇ ;
ನಿನಗೆ ರೂಪವಿಲ್ಲ–
ಎಲ್ಲ ರೂಪಗಳೂ ನಿನ್ನವೇ ;
ನಿನಗೆ ಬಣ್ಣವಿಲ್ಲ–
ಎಲ್ಲ ಬಣ್ಣಗಳೂ ನಿನ್ನವೇ ;
ನಿನಗೆ ಸ್ವರವಿಲ್ಲ–
ಎಲ್ಲ ಸ್ವರಗಳೂ ನಿನ್ನವೇ ;
ನಿನಗೆ ಶರೀರವಿಲ್ಲ–
ಎಲ್ಲ ಶರೀರಗಳೂ ನಿನ್ನವೇ !
ಇಂದ್ರಿಯ ಗೋಚರ–ಇಂದ್ರಿಯಾತೀತ,
ಜ್ಞೇಯ–ಅಜ್ಞೇಯ–
ಎಲ್ಲ ನೀನೇ, ಎಲ್ಲ ನೀನೇ,
ಉಂಟು ನೀನೇ, ಇಲ್ಲ ನೀನೇ,

ಹೌದು ನೀನೇ, ಅಲ್ಲ ನೀನೇ !
ನೀನಲ್ಲದುದು, ನೀನಿಲ್ಲದುದು
ಇದೆಯೆಂಬುದೇ ಅಜ್ಞಾನ,
ಇಲ್ಲವೆಂಬುದೇ ಸುಜ್ಞಾನ
ಸ್ವತಂತ್ರಧೀರ ಸಿದ್ಧೇಶ್ವರಾ !

೭

ಹೆಸರಿಲ್ಲದ ನೀನು ಯಾವ ಹೆಸರಿನಿಂದ ಕರೆದರೂ
'ಓ' ಎನ್ನುವಿಯಯ್ಯಾ ;
ಭಾಷೆಯಿಲ್ಲದ ನೀನು ಯಾವ ಭಾಷೆಯಲ್ಲಿ ಮೊರೆಯಿಟ್ಟರೂ
'ಬಾ' ಎನ್ನುವಿಯಯ್ಯಾ;
ವರ್ಣವಿಲ್ಲದ ನೀನು
ಯಾವ ವರ್ಣದವರು ಯಜಿಸಿದರೂ ಒಲಿಯುವಿ ;
ಕುಲವಿಲ್ಲದ ನೀನು
ಯಾವ ಕುಲದವರು ಭಜಿಸಿದರೂ ನಲಿಯುವಿ;
ತೆರಹಿಲ್ಲದ ನೀನು
ಯಾವ ಕುರುಹನ್ನು ಪೂಜಿಸಿದರೂ ಪ್ರೀತನಾಗುವಿ ;
ರೂಪವಿಲ್ಲದ ನೀನು
ಯಾವ ರೂಪದಲ್ಲಿ ಆರಾಧಿಸಿದರೂ ಆನಂದಿಸುವಿ ;
ದಿಕ್ಕಿಲ್ಲದ ನೀನು
ಯಾವ ದಿಕ್ಕಿಗೆ ಮಣಿದರೂ ತಣಿಯುವಿ ;
ಸ್ವತಂತ್ರಧೀರ ಸಿದ್ಧೇಶ್ವರಾ,
ನಾ ಪೂಜಿಸುವ ಕುರುಹಿನಲ್ಲಿಯೇ ಬೆಳಕಾಗಿ ಬಾರಾ,
ನನ್ನ ಮರಹಿನ ಇರುಹಿನಲ್ಲಿಯೇ ಅರುಹಾಗಿ ತೋರಾ !

೮



ನೀನು ಹರಿ, ನೀನು ಹರ,
ನೀನು ಸಿದ್ಧ, ನೀನು ಬುದ್ಧ,
ನೀನು ಯಹ್ವ, ನೀನು ಮಜ್ದ,
ನೀನು ತಾವೊ, ನೀನು ದೇವ,
ನೀನು ಅಲ್ಲಾ, ನೀನು ಎಲ್ಲಾ,
ನೀನು ಸಾರ್ವನಾಮಿಕ, ನೀನು ಅನಾಮಿಕ,
ನೀನು ಸರ್ವಗತ, ನೀನು ಸರ್ವಭರಿತ,
ನೀನು ಅನುಪಮೇಯ, ನೀನು ನಿರಾಮಯ
ನೀನು ಸ್ವತಂತ್ರಧೀರ ಸಿದ್ಧೇಶ್ವರ !

೯

ಹೂವಿಗೆ ಬಣ್ಣವಲ್ಲದೆ
ಕಂಪಿಗೆ ಬಣ್ಣವಿಹುದೇನಯ್ಯ ?
ಹರಳಿಗೆ ತಿಣ್ಣವಲ್ಲದೆ
ಕಿರಣಕ್ಕೆ ತಿಣ್ಣವುಂಟೇನಯ್ಯ ?
ಕುರುಹಿಗೆ ರೂಪವಲ್ಲದೆ
ಅರುಹಿಗೆ ರೂಪವಿಪುದೇನಯ್ಯ ?
ವಾದ್ಯಕ್ಕೆ ಆಕಾರವಲ್ಲದೆ
ನಾದಕ್ಕೆ ಆಕಾರವಿದೆಯೇನಯ್ಯ ?
ಸ್ವತಂತ್ರಧೀರ ಸಿದ್ಧೇಶ್ವರಾ,
ನನಗೆ ನಾಮರೂಪವಲ್ಲದೆ
ನಿನಗೆ ನಾಮ ರೂಪಗಳೆಲ್ಲಿಯವಯ್ಯ ?

೧೦

ಗ್ರಹ ಗೋಲಗಳಿಂದಾಚೆ,
ನಕ್ಷತ್ರ ನೀಹಾರಿಕೆಗಳಿಂದಾಚೆ,
ಹಾಲು-ಹಾದಿಗಳಿಂದಾಚೆ,
ಕ್ವಾಸಾರು ಪಲ್ಸಾರುಗಳಿಂದಾಚೆ,
ಕಾಳ-ಧವಳ ರಂಧ್ರಗಳಿಂದಾಚೆ,
ಸ್ಥಲ ಕಾಲಗಳಿಂದಾಚೆ,
ಆಚೆ...ಆಚೆ...ಆಚೆ ,

ಹಬ್ಬುತ್ತಿದೆ ನಿನ್ನ ಹರಹು !
ಎಲ್ಲಿದೆ ತೆರಹು
ಸ್ವತಂತ್ರಧೀರ ಸಿದ್ಧೇಶ್ವರನಿಲ್ಲದ ತೆರಹು?

೧೧

ನನ್ನ ತಾಯಿ ಭೂಮಿ,
ನನ್ನ ತಂದೆ ವ್ಯೋಮ ;
ಹುಟ್ಟಿದ ಇವೆರಡಕ್ಕೂ
ಹುಟ್ಟದ ನೀನೇ ತಂದೆ ತಾಯಿಯಯ್ಯ
ಸ್ವತಂತ್ರಧೀರ ಸಿದ್ಧೇಶ್ವರಾ !

೧೨

ಬೆಳಕಿನ ಸಾಸಿರ ಸಾಸಿರ ವರುಷ
ನಿನಗೊಂದು ನಿಮಿಷ ;
ಅಳೆಯಬಲ್ಲವರಾರು ನಿನ್ನ ವರುಷ ?
ಗುಣಿಸಬಲ್ಲವರಾರು ನಿನ್ನ ಆಯುಷ್ಯ ?
ಅನಂತ ವಿಶ್ವದ ಪ್ರತಿ ಮೂಲ ಕಣದಲ್ಲಿಯೂ
ನೀನೆ ಮಧ್ಯ ಬಿಂದು –
ಒಂದೊಂದು ಕಣವೂ ಶಕ್ತಿ ಸಿಂಧು !
ಕಾಣಬಲ್ಲವರಾರು ಆ ಎಲ್ಲ ಬಿಂದುಗಳ ಪರಿಧಿಗಳನ್ನು ?
ಅರಿಯಬಲ್ಲವರಾರು ಆ ಎಲ್ಲ ಶಕ್ತಿ ವಾರಿಧಿಗಳನ್ನು ?
ಪಿಂಡಾಂಡದಿಂದ ಬ್ರಹ್ಮಾಂಡದವರೆವಿಗಿನ
ಎಲ್ಲ ಅಂಡಗಳಲ್ಲಿ
ಉತ್ಪತ್ತಿ – ಸ್ಥಿತಿ – ಲಯಗಳ ದೃಶ್ಯಾದೃಶ್ಯ ಲಾಸ್ಯ !
ಪ್ರೇಕ್ಷಕರಾಗಬಲ್ಲವರಾರು ಆ ಎಲ್ಲ ಲಾಸ್ಯಗಳಿಗೆ ?
ಅನಂತ ಕೋಟಿ ಬ್ರಹ್ಮಾಂಡಗಳೆಲ್ಲ
ನಿರಾಕಾರ ಸಾಗರದಿ ತೇಲುವ ಸಾಕಾರದ ನಡುಗಡ್ಡೆಗಳು !



ಊಹಿಸಬಲ್ಲವರಾರು ನಿನ್ನ ನಿರಾಕಾರದ ವ್ಯಾಪ್ತಿಯನ್ನು ?
ಅರಿದುದಕ್ಕಿಂತ, ಒರೆದುದಕ್ಕಿಂತ, ಬರೆದುದಕ್ಕಿಂತ,
ಊಹಿಸಿ ಭಾವಿಸಿ ಕಲ್ಪಿಸಿದುದಕ್ಕಿಂತ ಅತೀತ ನಿನ್ನ ಅಸ್ತಿತ್ವ
ಸ್ವತಂತ್ರಧೀರ ಸಿದ್ಧೇಶ್ವರಾ !

೧೩

ಮಧುವಾತದಲ್ಲಿ ನೀನೇ, ಝಂಝಾವಾತದಲ್ಲಿ ನೀನೇ ;
ರಸದಲ್ಲಿ ನೀನೇ, ವಿಷದಲ್ಲಿಯೂ ನೀನೇ ;
ಹುಲ್ಲೆಯಲ್ಲಿ ನೀನೇ, ಹುಲಿಯಲ್ಲಿಯೂ ನೀನೇ ;
ಜೀವದಲ್ಲಿ ನೀನೇ, ಸಾವಿನಲ್ಲಿಯೂ ನೀನೇ ;
ಸಲಹುವ ಮಳೆಯಲ್ಲಿ ನೀನೇ, ಕೊಲ್ಲುವ ಸಿಡಿಲಿನಲ್ಲಿಯೂ ನೀನೇ ;
ಕಡಲಲ್ಲಿ ನೀನೇ, ಬಡಬನಲ್ಲಿಯೂ ನೀನೇ ;
ಆಡುವ ಶಿಖಿಯಲ್ಲಿ ನೀನೇ, ಜ್ವಾಲಾಮುಖಿಯಲ್ಲಿಯೂ ನೀನೇ ;
ಉಮೆಯ ಅಮೃತಸ್ಮಿತ ನೀನೇ, ಕಾಳಿಯ ಕರಾಳ ದಂಷ್ಟ್ರವೂ ನೀನೇ ;
ಪ್ರಳಯರುದ್ರ ನೀನೇ, ಶಿವ–ಶಂಭು–ಶಂಕರನೂ ನೀನೇ ;
ಓ ಶಿವ–ಭಯಂಕರ, ಓ ರುದ್ರ–ಶಂಕರ,
ಓ ಸ್ವತಂತ್ರಧೀರ ಸಿದ್ಧೇಶ್ವರ–
ಜಡೆಯೆಡೆಯ ಶಶಿಕಳೆಯ ಸುಧಾರಸವನ್ನಾದರೂ ನೀಡು,
ಗಳ ಬಳಸಿದ ಕಾಳಾಹಿಯ ಘೋರ ವಿಷವನ್ನಾದರೂ ನೀಡು !

೧೪

ಕಣ್ಣು ತೆರೆಯೆ ವಿಶ್ವಲಿಂಗ ದರ್ಶನ,
ಉಸಿರಾಡಿಸೆ ವಾಯುಲಿಂಗ ಸ್ಪರ್ಶನ,
ಹಸಿವಾಗೆ ಅಗ್ನಿಲಿಂಗದ ಅನುಭವ,
ತೃಷೆಯಾಗೆ ಜಲಲಿಂಗದ ಅರಿವು,
ನಿದ್ರೆ ಬಂದೊಡೆ ನೆಲದ ಲಿಂಗದ ನೆನಪು ನೋಡಯ್ಯ !
'ಲಿಂಗ ಮಧ್ಯೇ ಜಗತ್ಸರ್ವಂ' ಎಂಬುದು ನಿಜವಾದರೆ
ಎನ್ನನೇಕೆ ಲಿಂಗವಾಗಿಸಿಲ್ಲವಯ್ಯ ಇನ್ನೂ
ಸ್ವತಂತ್ರಧೀರ ಸಿದ್ಧೇಶ್ವರಾ ?

೧೫

ನಾನು ನೀನಾಗುವುದು

ನನಗೆ ಸಾಧ್ಯವಾಗಲಿಲ್ಲ ;
ನೀನು ನಾನಾಗುವುದು
ನಿನಗೂ ಸಾಧ್ಯವಾಗಲಿಲ್ಲವೇನಯ್ಯ ?
ನನ್ನಲ್ಲಿರುವ ನಿನ್ನನ್ನು
ಕೆಳಗೊತ್ತಿಹನು ನಾನೆಂಬ ಅಸುರ!
ಅವನನ್ನು ಕೆಳಗೊತ್ತಿ ಮೆಟ್ಟಿ
ನೀನು ನಾನಾಗಯ್ಯ –
ಸ್ವತಂತ್ರಧೀರ ಸಿದ್ಧೇಶ್ವರಾ !

೧೬

ಎಲ್ಲಲ್ಲಿ, ಎಲ್ಲೆಲ್ಲೂ ನೆಲಸಿಯೂ
ಅಲ್ಲಲ್ಲಿ ವಿಶೇಷವಾಗಿ ವಿರಾಜಿಸುವಿಯೇನಯ್ಯ ?
ಕೆಡುಕಿನಲ್ಲಿ ಕಡಮೆ ವಿರಾಜಿಸಿ
ಒಳಿತಿನಲ್ಲಿ ವಿಶೇಷವಾಗಿ ಪ್ರಕಾಶಿಸುವಿಯೇನಯ್ಯ ?
ಕೆಡುಕಿನಲ್ಲಿಯೂ ಪ್ರಖರವಾಗಿ ಪ್ರದ್ಯೋತಿಸಿ
ಕೆಡುಕೇ ಉಳಿಯದಂತೆ ಮಾಡೆಯೇಕಯ್ಯ ?
ಒಳಿತಿನಂತೆ ಕೆಡುಕೂ ಬೇಕೆ ನಿನಗೆ ?
ಹಾಗಾದರೆ ನನ್ನನೇಕೆ ಒಲ್ಲೆಯಯ್ಯಾ
ಸ್ವತಂತ್ರಧೀರ ಸಿದ್ಧೇಶ್ವರಾ ?

೧೭

ಹಸಿವೆಯೆತ್ತ, ಅಶನವೆತ್ತ ?
ಎರಡೂ ಸೇರೆ ಸಂತಸವಯ್ಯಾ !
ಕತ್ತಲೆಯೆತ್ತ , ಬೆಳಕೆತ್ತ ?
ಎರಡೂ ಸೇರೆ ಸಂಭ್ರಮವಯ್ಯಾ !
ರೋಗವೆತ್ತ, ಔಷಧವೆತ್ತ ?
ಎರಡೂ ಸೇರೆ ಆರೋಗ್ಯವಯ್ಯಾ !
ಸ್ವತಂತ್ರಧೀರ ಸಿದ್ಧೇಶ್ವರಾ,
ನಾನೆತ್ತ, ನೀನೆತ್ತ ?
ಇಬ್ಬರೂ ಸೇರೆ ಆನಂದವಯ್ಯಾ !

೧೮

ತಂದೆ,
ಜೀವರಾಶಿಗಳ ಹುಟ್ಟಿಸುವ ಮುನ್ನ
ಅವುಗಳಿಗಾಗಿ ಅನ್ನ ಔಷಧಗಳ ಹುಟ್ಟಿಸಿದೆ ಸಸ್ಯ ಸೃಷ್ಟಿಯಲ್ಲಿ ;
ನೀರು ಹುಟ್ಟಿಸಿದೆ ನದಿ ಸರಸಿ ಚಿಲುಮೆಗಳಲ್ಲಿ ;
ಖನಿಜ, ತೈಲ, ಅನಿಲಗಳ ಹುಟ್ಟಿಸಿದೆ, ಗಣಿಗಳಲ್ಲಿ :
ನನ್ನ ಹುಟ್ಟಿಸುವ ಮುನ್ನ
ಹಾಲು ಹುಟ್ಟಿಸಿದೆ ನನ್ನ ತಾಯ ಎದೆಯಲ್ಲಿ !
ಬೆಂಕಿ ಹುಟ್ಟಿಸುವ ಮುನ್ನ ನೀರು ಹುಟ್ಟಿಸಿದೆ !
ಸಾವು ಹುಟ್ಟಿಸುವ ಮುನ್ನ ಜೀವ ಹುಟ್ಟಿಸಿದೆ !
ಎಂಥ ಕರುಳಿನ ತಂದೆ ನೀನು,
ಕರುಣಾ ಸಿಂಧು ನೀನು !
ನಿನ್ನ ವಾತ್ಸಲ್ಯಮಯ ವ್ಯವಸ್ಥೆಯ
ಅರ್ಥವನ್ನೇ ಅರಿಯದೆ
ವ್ಯರ್ಥ ವಿಲಾಪಿಸುತ್ತಿಹೆನಯ್ಯಾ
ಸ್ವತಂತ್ರಧೀರ ಸಿದ್ಧೇಶ್ವರಾ !

೧೯

ಬಿಳಿ ಬಣ್ಣ ಭಯಕಾರಿ
ನರರ ಕೂದಲುಗಳಿಗೆ ;
ಹಳದಿ ಹೆದರಿಪ ಬಣ್ಣ
ಮರಬಳ್ಳಿಯೆಲೆಗಳಿಗೆ ;
ಕೆಟ್ಟ ಕನಸದು ಕಪ್ಪು
ಬಿಳಿಜೋಳ ತೆನೆಗಳಿಗೆ ;
ಕುಂಕುಮವೆ ಕಾಯಿಲೆಯು
ನೆಲಗಡಲೆ ಬೆಳೆಗಳಿಗೆ ;
ಹಸಿರು ಹಾವಸೆ ಹೊಲ್ಲ
ಕೆರೆ ಬಾವಿ ಕೊಳಗಳಿಗೆ ;
ನೀಲಿ ಹಗೆ ನೆತ್ತರಿಗೆ
ನರ ನಾಡಿಗಳಿಗೆ ;
ಒಂದೊಂದು ಬಣ್ಣಕೂ ಒಂದೊಂದು ದೋಷ ;
ಒಂದೊಂದು ಬಣ್ಣವೂ ಒಂದೊಂದಕ್ಕೆ ವಿಷ !
ಬಣ್ಣಗಳ ಚೆಲ್ಲಾಡಿ
ಬಣ್ಣಕ್ಕೆ ಸಿಲುಕದೆ
ಬಣ್ಣನೆಗು ನಿಲುಕದೆ

ನೀನುಳಿದೆಯಲ್ಲ ಸ್ವಂತತ್ರಧೀರ ಸಿದ್ಧೇಶ್ವರಾ !

೨೦

ನಡೆಯದ ಹಾದಿಯಲ್ಲಿ ಎಡವಿದೆನೆಂದರೆ
ಒಪ್ಪುವುದೆ ಅಯ್ಯಾ ?
ಕಾಣದ ಮುಖದ ಕುಂದನೆಣಿಸಿದರೆ
ಒಪ್ಪುವುದೆ ಅಯ್ಯಾ ?
ಉಣ್ಣದ ಅಡಿಗೆಯ ರುಚಿಯ ಟೀಕಿಸಿದರೆ
ಒಪ್ಪುವುದೆ ಅಯ್ಯ ?
ನೋಡದುದನ್ನು ನೋಡಿದಂತೆ ವರ್ಣಿಸಿದರೆ
ಒಪ್ಪುವುದೆ ಅಯ್ಯ ?
ಸ್ವತಂತ್ರಧೀರ ಸಿದ್ಧೇಶ್ವರಾ,
ಕಾಣದ ನಿನ್ನ ಕಂಡಂತೆ ಬಣ್ಣಿಸಿದರೆ
ಒಪ್ಪುವುದೆ ಅಯ್ಯಾ ?

೨೧

ನೆನೆವರಿಗೆ ನೀನು ಹತ್ತಿರಕ್ಕಿಂತ ಹತ್ತಿರ,
ಮರೆತವರಿಗೆ ನೀನು ದೂರಕ್ಕಿಂತ ದೂರವಯ್ಯ !
ಅರಿತವರಿಗೆ ನೀನು ಅಣುವಿಂಗೆ ಅಣು, ಮಹತ್ತಿಂಗೆ ಮಹತ್ತು ;
ಅರಿಯದವರಿಗೆ ನೀನೇ ಮರೀಚಿಕೆಯ
ಜಲದ ಅಲೆಯ ತಲೆಯ ನೊರೆಯಯ್ಯಾ !
ಸ್ವತಂತ್ರಧೀರ ಸಿದ್ಧೇಶ್ವರಾ,
ತನುವಿನ ಕಣ ಕಣದಲ್ಲಿರುವ ನಿನ್ನನೇ
ಮನಕ್ಕೆ ಬರಗೊಡದವರ ಕಂಡು
ಬೆರಗಾದೆನಯ್ಯಾ !

೨೨

ತಾಯಿಯಾಗಿ ಕಂಡೆ,



ತಂದೆಯಾಗಿ ಕಂಡೆ,
ಗುರುವಾಗಿ ಕಂಡೆ,
ಅರಿವಾಗಿ ಕಂಡೆ,
ತರುವಾಗಿ, ಗಿರಿಯಾಗಿ, ದರಿಯಾಗಿ ಕಂಡೆ,
ಮಗುವಾಗಿ, ಮಿಗವಾಗಿ, ಖಗವಾಗಿ ಕಂಡೆ,
ಜಲವಾಗಿ, ಸ್ಥಲವಾಗಿ, ವಿಯತ್ತಲವಾಗಿ ಕಂಡೆ !
ಏನೇನಾಗಿ ಕಂಡೆ, ಏನೇನಾಗಿ ಕಾಣಲಿಲ್ಲವಯ್ಯ ನೀನು ?
ಅನಂತ ರೂಪಗಳಲ್ಲಿ ನೀನು ಕಂಡೂ ಕಾಣೆವೆಂಬುದು
ಕಣ್ಣಿದ್ದೂ ಕಾಣದವರ ವಾಣಿಯಯ್ಯ
ಸ್ವತಂತ್ರಧೀರ ಸಿದ್ಧೇಶ್ವರಾ !

೨೩

ಎಣ್ಣೆಯಿಲ್ಲದೆ ದೀಪ ಉರಿಯಿತು,
ನೀರಿಲ್ಲದೆ ನದಿಯು ಹರಿಯಿತು,
ಬಳ್ಳಿಯಿಲ್ಲದೆ ಮೊಗ್ಗು ಬಿರಿಯಿತು,
ಮೋಡವಿಲ್ಲದೆ ಮಳೆಯು ಸುರಿಯಿತು,
ಹಸುವಿಲ್ಲದೆ ಹಾಲು ಕರೆಯಿತು,
ಏನೆಂಥ ಬೆರಗು ನೆರೆಯಿತು
ನೀನೆನ್ನ ಕಣ್ಣು ತೆರೆದಾಗ !
ನೀನು ಕಣ್ಣು ತೆರೆಯದಿದ್ದಾಗ
ಹಗಲೂ ಕತ್ತಲೆ,
ಬೆಳಕೂ ಭ್ರಾಂತಿ,
ತಿಳಿವೂ ಮರವೆ, ಮಬ್ಬಯ್ಯಾ
ಸ್ವತಂತ್ರಧೀರ ಸಿದ್ಧೇಶ್ವರಾ !

೨೪

ಸ್ಥಲದ ತೊಟ್ಟಿಲಲ್ಲಿ ಮಲಗಿರುವ 'ಇಷ್ಟ' ದನ್ನು

ಕಾಲದ ನೂಲಿನಿಂದ ತೂಗುವ 'ಅಪ್ಪು' ದೆಲ್ಲಿ ?
ಜಡದ ಜಡಜದಲ್ಲಿ ಅಡಗಿರುವ
ಅಜಡದ ಅಮಂದ ಸುಗಂಧವೆಲ್ಲಿ ?
ಅಶಿವದ ನರದಿ ಹರಿವ ಶಿವದ ನೆತ್ತರೆಲ್ಲಿ ?
ಅನಿಷ್ಟದ ಉದರದಲ್ಲಿ ಉದಿಸಲಿಹ ಇಷ್ಟದ ಶಿಶುವೆಲ್ಲಿ ?
ವ್ಯಕ್ತದ ವಾಣಿಯಲ್ಲಿ ಅವಿತ ಅವ್ಯಕ್ತದ ಅರ್ಥವೆಲ್ಲಿ ?
ಶ್ರುತದ ಸ್ವರದಲ್ಲಿರುವ ಅಶ್ರುತದ ನಿಸ್ವನವೆಲ್ಲಿ ?
ಸ್ವತಂತ್ರಧೀರ ಸಿದ್ಧೇಶ್ವರಾ,
ನನ್ನ ನಶ್ವರತೆಯಲ್ಲಿಹ ನಿನ್ನ ಶಾಶ್ವತತೆಯೆಲ್ಲಿ ?

೨೫

ಬೀಜವನ್ನೊಡೆದು ಮೊಳಕೆಯನ್ನರಸಿದರೆ ಉಂಟೆ ಅಯ್ಯ ?
ಮೊಳಕೆಯನ್ನು ಮುರಿದು ಸಸಿಯನರಸಿದರೆ ಉಂಟೆ ಅಯ್ಯ ?
ಸಸಿಯ ಕತ್ತರಿಸಿ ಮೊಗ್ಗೆಗೆಳಸಿದರೆ ಉಂಟೆ ಅಯ್ಯ ?
ಮೊಗ್ಗ ಕಿತ್ತು ಹೂವ ಹುಡುಕಿದರೆ ಉಂಟೆ ಅಯ್ಯ ?
ಪುಷ್ಪವ ಕೊಯ್ದು ಫಲವ ಬಯಸಿದರೆ ಉಂಟೆ ಅಯ್ಯ ?
ಸ್ವತಂತ್ರಧೀರ ಸಿದ್ಧೇಶ್ವರಾ,
ನಿನ್ನನುಳಿದು ಜಗಕೆ, ಜೀವನಕೆ
ಅರ್ಥವನರಸಿದರೆ ಉಂಟೆ ಅಯ್ಯ ?

೨೬

ಇಪ್ಪುದರ ಕಪ್ಪೆ ಚಿಪ್ಪಿನಲ್ಲಿ
ಅಪ್ಪುದರ ಸುಪ್ಪಾಣಿಯ ಮುತ್ತು ಮೂಡುತ್ತಲಿದೆಯಂತೆ
ನೋಡುವ ಬನ್ನಿರೆ !
ನಶ್ವರದ ಮೂಸೆಯಲ್ಲಿ
ಶಾಶ್ವತದ ಅದಿರು ಕರಗುತ್ತಲಿದೆಯಂತೆ
ನೋಡುವ ಬನ್ನಿರೆ !
ಮೃಣ್ಮಯದ ಪ್ರಣತಿಯಲ್ಲಿ
ಚಿನ್ಮಯದ ಜ್ಯೋತಿ ಹೊತ್ತುತ್ತಲಿದೆಯಂತೆ
ನೋಡುವ ಬನ್ನಿರೆ !
ತತ್ಕಾಲದ ಭಿತ್ತಿಯ ಮೇಲೆ



ಅನಂತಕಾಲದ ಚಿತ್ರ ಚಿತ್ರಿತವಾಗುತ್ತಿದೆಯಂತೆ
ನೋಡುವ ಬನ್ನಿರೆ !
ಸಾಕಾರದ ಮುಕುಲದಲ್ಲಿ
ನಿರಾಕಾರದ ಸೌರಭ ಶೇಖರಿತವಾಗುತ್ತಿದೆಯಂತೆ
ನೋಡುವ ಬನ್ನಿರೆ !
ಸ್ವತಂತ್ರ ಧೀರ ಸಿದ್ಧೇಶ್ವರನ ಸದ್ಭಕ್ತರ ಹೃದಯದಲ್ಲಿ
ಅಖಿಲಾಂಡಗಳ ಅಂತಃಸತ್ವ ಅರಳುತ್ತಿದೆಯಂತೆ
ನೋಡುವ ಬನ್ನಿರೆ !

೨೭

ಸ್ಥಲದ ಧಾರಾ ಪಾತ್ರೆಯಿಂದ
ಕಾಲ ಬಿಂದುಗಳು ಕಳಚುತ್ತಿವೆ,
ಮತ್ತೆ ಧಾರಾ ಪಾತ್ರೆಯೊಳಕ್ಕೆ ನುಣುಚುತ್ತಿವೆ !
ಒಂದೊಂದು ಬಿಂದುವಿಗೆ ಒಂದೊಂದು ಪರಿವರ್ತನೆ
ಒಂದೊಂದು ಯುಗಪ್ರವರ್ತನೆ !
ಹಿಂದು ಇಂದಿನ ಉಪ್ಪು ನೇರಿಳೆ ತಿನ್ನುತ್ತ,
ಇಂದು ಮುಂದಿನ ಮುಲ್‌ಬೆರಿ ತಿನ್ನುತ್ತ,
ಎಂದಿಗೂ ಮುಗಿಯದ ಕಾಲದ ನೂಲನ್ನು ನೂಲುತ್ತಿವೆ ;
ಪ್ರಾಣ ಮಣಿಗಳನ್ನೊಮ್ಮೆ , ತಲೆಬುರುಡೆಗಳನ್ನೊಮ್ಮೆ
ಪವಣಿಸುತ್ತಿವೆ ;
ಅವುಗಳನ್ನು ಸ್ಥಲದಲ್ಲಿಯೇ ಹೂಳಿ
ಸ್ಥಲದಿಂದಲೇ ಮತ್ತೆ ಪಡೆಯುತ್ತಿವೆ !
ಚಣಗಳ ರೇಶ್ಮೆಯ ಕೀಡೆಗಳು ಗೂಡು ಕತ್ತರಿಸಿ
ಮತ್ತೆ ಮತ್ತೆ ಮೈದೋರುತ್ತಿವೆ,
ಮತ್ತೆ ಮತ್ತೆ ಗೂಡು ಸೇರುತ್ತಿವೆ !
ಸ್ವತಂತ್ರ ಧೀರ ಸಿದ್ಧೇಶ್ವರಾ,
ಸ್ಥಲ ಕಾಲ ಯುಗ್ಮದಲಿ, ಲಗ್ನದಲಿ, ಗರ್ಭದಲಿ
ನಿನ್ನ ಸೃಷ್ಟಿ ಸ್ಥಿತಿ ಸಂಹಾರಲೀಲೆ ಸಾಗುತ್ತಿದೆ
ಅರಿತವರಿಗೂ ಅರ್ಥವಾಗದಂತೆ !

೨೮

ಅಂತರಿಕ್ಷದ ಇಂಕ್ಯುಬೇಟರಿನಲ್ಲಿ
ಅನಂತಕೋಟಿ ಅಂಡಗಳು ಕಾಯುತ್ತಿವೆ !

ಅಂಡವೊಂದರಲ್ಲಿ ಅಗಣಿತ ಜೀವಿಗಳು ಹುಟ್ಟಿ ಸಾಯುತ್ತಿವೆ ;
ಅವುಗಳ ಜೀವನ ಸಂಗ್ರಾಮದಿಂದ ನಿನ್ನ ತಲೆ ನೋಯುತ್ತಿದೆ !
ಇದೇ ಕಾರಣದಿಂದಲೇ
ಎಣಿಕೆಗೆ ಎಟುಕದ ಇನ್ನುಳಿದ ಅಂಡಗಳಲ್ಲಿ
ನಿಲ್ಲಿಸಿಹೆಯೇನಯ್ಯ ಜೀವಸೃಷ್ಟಿಯನ್ನು ?
ನಿಷ್ಪ್ರಯೋಜಕವೆಂದು ನಿರ್ಣಯಿಸಿ ಬಿಟ್ಟೆಯೇನಯ್ಯ
ಪ್ರಾಣಿ–ಸೃಷ್ಟಿ–ಪ್ರಯೋಗವನ್ನು ?
ನೀನಿನ್ನೂ ಹತಾಶನಾಗಿಲ್ಲವೆಂದೆ ತಂದೆ.
ಶತಮಾನಕ್ಕೊಬ್ಬ ಗಾಂಧಿ, ರವೀಂದ್ರ, ಅರವಿಂದ ಉದಿಸಿದರೂ
ಸಾರ್ಥಕ ನಿನ್ನ ಜೀವ–ಸೃಷ್ಟಿ–ಪ್ರಯೋಗ !
ಹೀಗಿರುವಾಗ,
ಶತಮಹಾಮಾನವರ ಹೆತ್ತ ಶತಮಾನಗಳು
ಹಲವಿರಲು ಖತಿಯೇತಕಯ್ಯ
ಸ್ವತಂತ್ರಧೀರ ಸಿದ್ಧೇಶ್ವರಾ ?

೨೯

ಸೌರವ್ಯೂಹದಲ್ಲಿ ಗ್ರಹ ಗೋಲಗಳು ಹಲವು
ಆದರೆ ಜೀವರಾಶಿಗಳಿಗೆ ಜನ್ಮವೀಯುವ ಸೌಭಾಗ್ಯ
ನಿನಗಲ್ಲದೆ ಇನ್ನಾರಿಗಿದೆ ತಾಯೆ, ವಸುಂಧರೆ ?
ಸಮುದ್ರವಸನೇ ದೇವಿ ಪರ್ವತ ಸ್ತನಮಂಡಲೆ
ಮೇಘ ಕುಂಡಲೆ,
ಅಂಡಜ, ಪಿಂಡಜ, ಸ್ವೇದಜ, ಉದ್ಭಿಜಾದಿ
ಚರಾಚರ ಜೀವ ಸೃಷ್ಟಿ
ನಿನ್ನಲ್ಲಾದರೂ ನಡೆದಿರಲಮ್ಮ ಅವಿಚ್ಛಿನ್ನವಾಗಿ !
ನಡೆಯದಿರಲಿ ಪ್ರಳಯಸಿದ್ಧತೆ ಪ್ರಚ್ಛನ್ನವಾಗಿ !
ನಿನ್ನ ಮೈಯ ಮಣ್ಣಿನಿಂದ ಒಬ್ಬ ಗಣಪತಿಯೇಕೆ
ಚಂದ್ರಪತಿ, ಬುಧಪತಿ, ಗುರುಪತಿ,
ಸಕಲ ಗ್ರಹಪತಿಗಳೂ ಸಮುದ್ಭವಿಸಲಮ್ಮ !
ಸ್ವತಂತ್ರಧೀರ ಸಿದ್ಧೇಶ್ವರನ
ಸದ್ಯಜ್ಞಾತ ಸೃಷ್ಟಿಯಲ್ಲಿ



ನೀನೆ ಆದಿಜನನಿ,
ನೀನೆ ಜೀವ ಗಂಗೋತ್ರಿ !

೩೦

ಪ್ರಕೃತಿಮಾತೆ, ಪರಾಶಕ್ತಿ ಸ್ವರೂಪೆ,
ನೀನೊಲಿದರೆ,
ಬ್ರಹ್ಮಗಿರಿಯಲ್ಲಿಯೂ ಕಾವೇರಿ ಕನ್ನಿಕೆಯರು ಉದಿಸುವರು ;
ನೀನೊಲಿಯದಿರೆ,
ನೂರಾರು ಅಡಿ ಬೋರು ಮಾಡಿದರೂ ನೀರು ದೊರೆಯದಿರ
ಬಹುದು !
ನೀನಿಚ್ಛಿಸಿದರೆ,
ಹಿಮಗಿರಿಯ ಮಡಿಲಲ್ಲಿಯೇ
ಹಿಮಲಿಂಗ ಮೈದೋರಬಹುದು,
ತಪ್ತಕುಂಡ ತಲೆದೋರಬಹುದು ;
ನೀನಿಚ್ಛಿಸದಿರೆ,
ಬೆಳೆವ ಬಯಲಿನಲ್ಲಿಯೂ ಬರ ಪೂತ್ಕರಿಸಬಹುದು ;
ನೀನು ಮನದಂದರೆ,
ಮರಳ್ಗಾಡಿನಲ್ಲಿಯೂ
ಸುಧಾಮಧುರ ಸಲಿಲ ಸರಸಿ ಸಮುದ್ಭವಿಸಬಹುದು
;
ನೀನು ನೊಂದರೆ,
ಮೆಟ್ಟೂರು ಕನ್ನಂಬಾಡಿ ಕಟ್ಟೆಗಳ
ಹೊಟ್ಟೆಗಳೂ ಬರಿದಾಗಬಹುದು !
ನೀನು ಮನಸ್ಸು ಮಾಡಿದರೆ,
ಮಣ್ಣು ಹೊನ್ನಾಗಬಹುದು,
ಕಲ್ಲು ರನ್ನವಾಗಬಹುದು,
ಹನಿ ಮುತ್ತಾಗಬಹುದು,
ನೆಲ ಜಲವಾಗಬಹುದು,
ಜಲ ನೆಲವಾಗಬಹುದು !
ಹೆಚ್ಚೇನು ತಾಯೆ,
ನಿನ್ನಿಂದ ತಾನೆ ಕಾಣದ ಸ್ವತಂತ್ರಧೀರ ಸಿದ್ಧೇಶ್ವರ
ಕಾಣುವಂತಾದುದು
ಕೋಟಿ ಕೋಟಿ ಗ್ರಹ ಗೋಲಗಳಲ್ಲಿ !

೩೧

ಈ ಮಣ್ಣಿನ ಕಣಕಣವೂ
ಒಮ್ಮಿಲ್ಲೊಮ್ಮೆ ಮೈಯಾಗಿ
ಮತ್ತೆ ಮಣ್ಣಾಗಿರದೇನಯ್ಯ ?
ಈ ಗಾಳಿಯ ಅಲೆ ಅಲೆಗಳೂ
ಒಮ್ಮಿಲ್ಲೊಮ್ಮೆ ಉಸಿರಾಗಿ
ಮತ್ತೆ ಅನಿಲವಾಗಿರವೇನಯ್ಯ ?
ಈ ಜಲದ ಬಿಂದು ಬಿಂದುಗಳೂ
ಒಮ್ಮಿಲ್ಲೊಮ್ಮೆ ಲಾಲಾರಸವಾಗಿ
ಮತ್ತೆ ಜಲವಾಗಿರವೇನಯ್ಯಾ ?
ಈ ಅನಲದ ಕಿಡಿ ಕಿಡಿಗಳೂ
ಒಮ್ಮಿಲ್ಲೊಮ್ಮೆ ಜಠರಾಗ್ನಿಯಾಗಿ
ಮತ್ತೆ ಅನಲವಾಗಿರವೇನಯ್ಯಾ ?
ಈ ಆಕಾಶವೂ
ಘಟದೊಳಗಣ ಆಕಾಶವಾಗುತ್ತ
ಘಟದ ಹೊರಗಣ ಆಕಾಶವಾಗುತ್ತಲೇ ಇಲ್ಲವೇನಯ್ಯ ?
ಸ್ವತಂತ್ರಧೀರ ಸಿದ್ಧೇಶ್ವರಾ,
ಪರಮಾತ್ಮ ಜೀವಾತ್ಮವಾಗಿ
ಮತ್ತೆ ವಿಶ್ವಾತ್ಮದಲ್ಲಿ ಒಡವೆರೆಯದೇಕಯ್ಯ ?

೩೨

ಎನಿತು ಸುಂದರ ವಸುಂಧರೆಯ
ಸೃಷ್ಟಿಸಿಹೆಯಯ್ಯಾ ನಮಗಾಗಿ !
ಹಕ್ಕಿ ಚಿಕ್ಕೆಗಳು, ಗಿರಿ ದರಿ ತೊರೆ ಕೆರೆಗಳು,
ಹಸು ಬಸವಗಳು, ಹೊಲ ಗದ್ದೆ ತೋಟ ಪಟ್ಟಿಗಳು



ಆವುದನು ಬಣ್ಣಿಸುವುದು, ಯಾವುದನು ಬಿಡುವುದು ?
ಕರಿಕೆಯಿಂದ ತಾರಕಿಯವರೆಗೆ
ಕುರೂಪವ ಬದಿಗೊತ್ತಿ ಸುರೂಪದ ಸೂರೆ,
ಕಣಕಗಣಗಳಿಂದ ಅಮೃತದ ಧಾರೆ !
ಈ ಸರ್ವಸುಂದರ ವಸುಂಧರೆಯಲ್ಲಿ
ಅಸುಂದರವಾಗಿರುವುದು ಒಂದೇ ಒಂದು
ಅದು ನನ್ನ ಮನ ನೋಡಾ !
ಮನದ ಚೆಲುವ ನೀಡಾ,
ಸ್ವತಂತ್ರಧೀರ ಸಿದ್ಧೇಶ್ವರಾ !

೩೩

ನಿನ್ನ ವಿಶ್ವ ಚಿತ್ರವನ್ನು ನೋಡುತ್ತ ನಿಂತೆ ;
ಭೂವ್ಯೋಮ ವ್ಯೋಮಾತೀತಗಳನ್ನು ವ್ಯಾಪಿಸಿದ
ಅದರ ಭೂಮಾಕೃತಿಗೆ ಬೆರಗಾದೆ ;
ಸಚರಾಚರ ಸೃಷ್ಟಿಯ
ವಿಸ್ಮಯಜನಕ ವೈವಿಧ್ಯಕ್ಕೆ ವಿಭ್ರಮೆಗೊಂಡೆ ;
ನಿತ್ಯ ನವೀನ ರೇಖಾ ವೈಖರಿಗೆ
ವರ್ಣವಿನ್ಯಾಸಕ್ಕೆ ಮಾರುಹೋದೆ !
ಚಿತ್ರದಿಂದ ಚಿತ್ರಕಾರನತ್ತ ಚಿತ್ತ ಹೊರಳಿತು ;
ಚಿತ್ರಕಾಣದಾಯಿತು ; ಚಿತ್ರಕಾರ ಕಾಣುವವನಲ್ಲ !
ಚಿತ್ರವೂ ಉಳಿಯಲಿಲ್ಲ ; ಚಿತ್ರನೋಡುವ ನಾನೂ ಉಳಿಯಲಿಲ್ಲ ;
ಏನುಳಿದುದೆಂಬುದೂ ತಿಳಿಯಲಿಲ್ಲ
ಸ್ವತಂತ್ರಧೀರ ಸಿದ್ಧೇಶ್ವರಾ !

೩೪

ನಭದ ನೀಲಿಯಲ್ಲಿ ಬೆಳಕಿನ ಚಿತ್ರಗಳ ಬರೆಯುತ್ತಿವೆ
ಮಿಂಚಿನ ಕುಂಚಗಳಿಂದ ಕಪ್ಪು ಮೋಡಗಳು ;
ಕಾವಳದ ಕುರುಳುಗಳಿಗೆ ಮಿಣುಕು ಬೆಳಕಿನ
ಮಲ್ಲಿಗೆಯ ಮುಡಿಸುತ್ತಿವೆ ಮಿಂಚು ಹುಳುಗಳು ;
ತರಲ ತರಂಗಗಳ ಮೇಲೆ ಮಿನುಗುವ ಹೆಜ್ಜೆಗಳ ಮೂಡಿಸುತ್ತ

ನರ್ತಿಸುತ್ತಲಿವೆ ನಕ್ಷತ್ರ ನೀಹಾರಿಕೆಗಳು ;
ಊರ ಅಂಗಣದಲ್ಲಿ ರಶ್ಮಿಗಳ ರಂಗವಲ್ಲಿಯ ರಚಿಸುತ್ತಿವೆ
ಮನೆಮನೆಗಳಿಂದ ಇಣುಕುತಿಹ ಹಣತೆಗಳು ;
ಬೇಳುವೆಗೆ ಈಡಾದ ಬಾಳುವೆಯ ಕಾಳಿಮೆಯ ಹಣೆಗೆ
ರನ್ನತಿಲಕವನಿಡುತ್ತಿವೆ ಮಕ್ಕಳ ಹೊಳೆವ ಕಣ್ಣುಗಳು !
ನನ್ನೆದೆಯ ಅಂಧ-ಸಾಂದ್ರ-ರುಂದ್ರ ತಮಂಧದಲ್ಲಿಯೂ
ನಿನ್ನ ಕರುಣೆಯ ಅರುಣ ಕಿರಣಗಳ ಹರಿಸಯ್ಯ,
ಸ್ವತಂತ್ರಧೀರ ಸಿದ್ಧೇಶ್ವರಾ !

೩೫

ಸೃಷ್ಟಿ ಸೌಂದರ್ಯಕ್ಕೆ ಕಣ್ಣು ಕುರುಡಾಗಿಹವು ;
ನೂರು ಮರಗಳ ನೂರು ಸ್ವರಗಳಿಗೆ ಕಿವಿ ಕಿವುಡಾಗಿಹವು ;
ಬಿಲಿಯದೆ ಬರುವ ಪರಿಮಳಗಳಿಗೆ ಮೂಗು ಎರವಾಗಿಹುದು ;
ಮಲಯಜದ ಮೃದು ಸ್ಪರ್ಶಕ್ಕೆ ತ್ವಚ ಉರುಟಾಗಿಹುದು ;
ಸಾರೋಕ್ತಿ ಸವಿನುಡಿಗಳಿಗೆ ನಾಲಗೆ ನಾಸ್ತಿಯಾಗಿಹುದು ;
ಸದ್ಭಾವನೆಗಳಿಗೆ ಹೃದಯ, ಸುವಿಚಾರಗಳಿಗೆ ಚಿತ್ತ
ಬತ್ತಿ ಹೋಗಿಹವು !
ಎಂಥ ಬರಡುತನ, ಕೊರಡುತನ,
ಉರುಟುತನ, ಒರಟುತನ
ಬಂದಿತಯ್ಯ ಬಾಳಿಗೆ !
ಏನನೋದಿದೊಡೇನು,
ಏನ ಪಡೆದೊಡೇನು
ಇದೇ ಶುಷ್ಕತೆ
ರುಕ್ಷತೆ ರಿಕ್ತತೆಗಳೇನಯ್ಯಾ
ನಮ್ಮ ಪಾಲಿಗೆ ?
ತಿನ್ನುವ ಅನ್ನ, ಕುಡಿಯುವ ನೀರು,
ಉಸಿರಾಡಿಸುವ ಗಾಳಿಗಳೇ ಮಲಿನವಾಗಿರುವಾಗ
ಏಳಿಗೆಗೆ ಅರ್ಥವೇನಯ್ಯ



ಸ್ವತಂತ್ರಧೀರ ಸಿದ್ಧೇಶ್ವರಾ ?

೩೬

ಹೂತ ಕಾಫಿಯ ತೋಟದ ಚೆಲುವು,
ಕಾತ ಕೌಂಗಿನ ತೋಟದ ಚೆಲುವು,
ಫಲಿತ ಕಿತ್ತಳೆ ತೋಟದ ಚೆಲುವು,
ತಳಿತ ಮಾವಿನ ತೋಪಿನ ಚೆಲುವು,
ಬೆಟ್ಟ, ಬನ, ಬಾನು, ಬಯಲುಗಳ ಚೆಲುವು
ಎನಿತು ಚೆಲುವುಗಳು ನೀನು ಹುಟ್ಟಿಸಿದ ಸೃಷ್ಟಿಯಲ್ಲಿ ?
ತನುವಿನ ಕುರೂಪ, ಮನದ ಕುರೂಪ,
ನುಡಿಯ ಕುರೂಪ, ನಡೆಯ ಕುರೂಪ,
ಕೊಳೆಗೇರಿಗಳ ಕುರೂಪ, ಹೊಲೆಗೇರಿಗಳ ಕುರೂಪ,
ಆಡಳಿತದ ಕುರೂಪ, ರಾಜಕೀಯದ ಕುರೂಪ,
ಹಿರೋಷಿಮಾ ನಾಗಾಸಾಕಿಗಳ ಕುರೂಪ
ಎನಿತು ಕುರೂಪಗಳು ನರರು ನಿರ್ಮಿಸಿದ ನಾಗರಿಕತೆಯಲ್ಲಿ ?
ನಮ್ಮನೊಮ್ಮೆ ನಿನ್ನ ಸೃಷ್ಟಿಯ ಚೆಲುವಿಗೆ,
ನಿನ್ನ ಅಸೀಮವಾದ ಒಲವಿಗೆ
ತಕ್ಕವರನ್ನಾಗಿ ಮಾಡಾ
ಸ್ವತಂತ್ರಧೀರ ಸಿದ್ಧೇಶ್ವರಾ !

೩೭

ಯಾವುದರಿಂದ ಬೇಸತ್ತರೂ ನಿನ್ನಿಂದ ಬೇಸರಿಯೆ
ಭೂಮಿತಾಯೆ, ಸೃಷ್ಟಿ ಮಾಯೆ !
ನಿಮಿಷಕ್ಕೊಂದು ನವೀನತೆ ನಿನ್ನಲ್ಲಿ,
ದಿವಸಕ್ಕೊಂದು ನವ ಜನ್ಮ ನಿನಗೆ !
ಕಾಡಹಕ್ಕಿಯಿಂದ ಬಾನ ಚಿಕ್ಕೆಯವರೆಗೆ,
ದೊಡ್ಡಿಯ ಧೇನುವಿನಿಂದ ಕಡಲ ಮೀನಿನವರೆಗೆ,

ಹಳ್ಳಿಯ ಹಳ್ಳದಿಂದ ನೈಲ್, ಗಂಗಾ, ಓಲ್ಗಾಗಳವರೆಗೆ
ದಿಟ್ಟ ಹರಿದತ್ತ ನವಿರೆಬ್ಬಿಸುವ ನೋಟ !
ಒಮ್ಮೆ ಗಾನದಲ್ಲಿ, ಒಮ್ಮೆ ಧ್ಯಾನದಲ್ಲಿ, ಒಮ್ಮೆ ಮೌನದಲ್ಲಿ,
ಒಮ್ಮೆ ಮಾಗಿಯಲ್ಲಿ, ಒಮ್ಮೆ ಸುಗ್ಗಿಯಲ್ಲಿ,
ಮನವ ತಣಿಸುವೆ,
ಮುದವ ಉಣಿಸುವೆ,
ಬಾಳ ಕುಣಿಸುವೆ !
ನಿನ್ನ ಒಡಲಿನಲ್ಲಿ ಉದಿಸಿ,
ನಿನ್ನ ಮಡಿಲಿನಲ್ಲಿ ಬೆಳೆದು,
ನೀನು ಉಡಿಯಕ್ಕಿ ಉಂಡು,
ನೀನು ತೋರಿದುದ ಕಂಡು,
ಮತ್ತೆ ನಿನ್ನ ತೋಳ ತೊಟ್ಟಿಲಲ್ಲಿಯೇ
ಚಿರ ನಿದ್ರೆ ನಮಗೆ
ಸ್ವತಂತ್ರಧೀರ ಸಿದ್ಧೇಶ್ವರನ ಶಕ್ತಿ ಸ್ವರೂಪಿಣಿಯೆ !

೩೮

ಜಗಜ್ಜನನಿಯ ಉಜ್ವಲ ತನಯೆ, ತಾಯೆ, ಭರತ ಭೂಮಿಯೆ !
ನಿನ್ನ ಬೆಳಕಿನ ಮಗಳ ಮಗನಾಗಿ ಹುಟ್ಟಿದುದೆನ್ನ ಭಾಗ್ಯ !
ಈಗ ಬದುಕಿರುವುದಂತೂ ಪರಮ ಭಾಗ್ಯ !
ಮತ್ತೆ ಬಿಡುಗಡೆ ನಿನ್ನ ತನುವಾಗಿದೆ,
ವಿಜ್ಞಾನ ಸಹಿತ ಜ್ಞಾನ ವದನವಾಗಿದೆ,
ಕರುಣೆ ಕಣ್ಣಾಗಿದೆ, ನನ್ನಿ ಕಿವಿಯಾಗಿದೆ,



ನೀತಿ ನಾಸಿಕವಾಗಿದೆ, ಪ್ರೀತಿ ರಸನೆಯಾಗಿದೆ,
ಅಭಯ ಹಸ್ತವಾಗಿದೆ, ಸರ್ವಹಿತ ಮಸ್ತಕವಾಗಿದೆ,
ಚಾರಿತ್ರ್ಯ ಚರಣವಾಗಿದೆ,
ಶಕ್ತಿ ಸಿಂಹಪೀಠವಾಗಿದೆ !
ನೀನೀಗ ಸಂಕ್ಷಿಪ್ತ ಬ್ರಹ್ಮಾಂಡ !
ಏಳಬಹುದು ಅಂತಃಕಲಹ ಜ್ವಾಲೆಗಳು
ಆಗಾಗ ನಿನ್ನ ಮನೆಯಲ್ಲಿ !
ಬೀಸಬಹುದು ವೈರದ ಬಿರುಗಾಳಿಗಳು
ಆಗಾಗ ಎಡಬಲಗಳಿಂದ, ತಲೆಯ ಮೇಲಿಂದ !
ಆದರಿನ್ನು ನೀನು ಹಿಮಾಲಯದಂತೆ ನಿಶ್ಚಲ,
ಹಿಂದೂ ಸಾಗರದಂತೆ ಅವಿನಾಶಿ !
ಸ್ವತಂತ್ರಧೀರ ಸಿದ್ಧೇಶ್ವರನ ದಯೆಯಿಂದ
ನಿರಂಕುಶ ಮತಿಗಳಾಗಲಿ,
ವಿಶ್ವಜಿತುಗಳಾಗಲಿ,
ಸರ್ವಹಿತ ವ್ರತಿಗಳಾಗಲಿ
ನಿನ್ನ ಮಕ್ಕಳು !
ದಿಗಂತವಿಶ್ರಾಂತವಾಗಲಿ
ನಿನ್ನ ಕೀರ್ತಿ, ಯಶಗಳು !

೩೯

ಕಾಶ್ಮೀರದಿಂದ ಕನ್ಯಾಕುಮಾರಿಯವರೆಗಿನ
ಈ ಸುಂದರ ಸುಮನೋಹರ ವನವನ್ನು
ಜಾತಿ ಉಪಜಾತಿ ಉಪ ಉಪ ಜಾತಿಗಳ
ಕೋತಿಗಳಿಗಾಗಿ ಹುಟ್ಟಿಸಿಹೆಯೇನಯ್ಯಾ ?
ಕೊನರುತ್ತಲೆ ಕಡಿದೊಗೆಯುತ್ತಿವೆ
ಪ್ರತಿಭೆಯ ಕುಡಿಗಳನ್ನು ;
ಅರಳುವ ಮೊದಲೇ ಕಿತ್ತೆಸೆಯುತ್ತಿವೆ

ಸವಿ ಭಾವಗಳ ಹೂಗಳನ್ನು ;
ಹಣ್ಣಾಗುವ ಮೊದಲೇ ಗೀರಿ ತೂರುತ್ತಿವೆ
ಕ್ರತು ಶಕ್ತಿಯ ಕಾಯಿಗಳನ್ನು !
ಬನವಿದು ಬೆಳೆಯುವ ಬಗೆ ಯಾವುದಯ್ಯಾ ?
ಉಳಿಯುವ ಪರಿ ಯಾವುದಯ್ಯಾ ?
ಇವುಗಳನ್ನೆಲ್ಲ ಕರೆದೊಯ್ದು
ಕಡಲಿಗೆ ತಳ್ಳಬಲ್ಲ
ಕಿಂದರಿ ಜೋಗಿಯೊಬ್ಬನ ಕಳಿಸಯ್ಯ
ಸ್ವತಂತ್ರಧೀರ ಸಿದ್ಧೇಶ್ವರಾ !

೪೦

ಭಾರತವು ಸಂಕ್ಷಿಪ್ತ ಬ್ರಹ್ಮಾಂಡವಾದರೆ
ಕರ್ನಾಟಕವು ಸಂಕ್ಷಿಪ್ತ ಭಾರತ ನೋಡಾ !
ಇಲ್ಲಿ ಇಲ್ಲದುದು ಇನ್ನೆಲ್ಲಿದೆ ತೋರಾ !
ಇಲ್ಲಿಯ ಕಲ್ಲು ರನ್ನ, ಮಣ್ಣು ಹೊನ್ನು, ನೀರು ಸುಧೆ !
ಮಲೆಬಯಲುಗಳ ಬೇಟ, ಕರಾವಳಿಯ ನೋಟ,
ಕೊಡಗಿನ ತೋಟಗಳ ಮೇಲಾಟ,
ಗಿರಿಧಾಮಗಳ ಮಾಟ, ವನ್ಯಪ್ರಾಣಿಗಳ ಚಿನ್ನಾಟ
ಒಂದೊಂದೂ ಸೊಗಸಿನ ಸುಗ್ಗಿ , ಸೊಬಗಿನ ಸೂರೆ !
ಕನ್ನಡನಾಡಿನಲ್ಲಿ ಜನ್ಮವ ಬೇಡಿಕೊಂಡರೆ
ಎಲ್ಲವನ್ನೂ ಬೇಡಿಕೊಂಡಂತೆ ;
ಕನ್ನಡ ಸಂಸ್ಕೃತಿಯ ಮೈಗೂಡಿಸಿಕೊಂಡರೆ
ಎಲ್ಲವನ್ನೂ ಪಡೆದುಕೊಂಡಂತೆ !
ಮತ್ತೆ ಹುಟ್ಟಿಸುವುದಾದರೆ
ನನ್ನನಿಲ್ಲಿಯೇ ಹುಟ್ಟಿಸು ತಂದೆ !
ನರನಾಗಿ ಅಲ್ಲ ಸುರಭಿಯಾಗಿ ಹುಟ್ಟಿಸು ;
ಇಟ್ಟರೆ ಸಗಣಿಯಾಗಿ, ತಟ್ಟಿದರೆ ಬೆರಣಿಯಾಗಿ,
ತಟ್ಟದೆ ಹಾಕಿದರೆ ಗೊಬ್ಬರವಾಗಿ
ಈ ನಾಡಿನ ಕೃಷಿಋಷಿಯ ಸೇವಿಸುವಾಸೆ ನನಗೆ ;
ಸುಟ್ಟರೆ ಶ್ರೀ ವಿಭೂತಿಯಾಗಿ
ಈ ನಾಡಿನ ಹರಭಕ್ತರ ಹಣೆಗಳಲ್ಲಿ
ಶೋಭಿಸುವಾಸೆ ನನಗೆ !



ಸುರಭಿಯಾಗಿಸದಿರೆ, ಗಂಧದ ಮರವಾಗಿ ಹುಟ್ಟಿಸು ;
ಅದನ್ನು ಬೆಳೆಸಿ ತುಂಡರಿಸು ;
ಮನೆಗೊಂದು ತುಂಡು ಮುಟ್ಟಿಸು ;
ತೆಯ್ದರೆ ಶ್ರೀಗಂಧವಾಗಿ
ಈ ನಾಡಿನ ಹರಿಭಕ್ತರ ಹಣೆಗಳಲ್ಲಿ
ವಿರಾಜಿಸುವಾಸೆ ನನಗೆ !
ಇದಾಗದಿರೆ, ಬಿದಿರ ಮೆಳೆಯಾಗಿ ಹುಟ್ಟಿಸಿ
ಬಡವರ ಗುಡಿಸಲುಗಳಿಗೆ ಒದಗಿಸು ;
ಮಕ್ಕಳ ಆಟಿಗೆಗಳಾಗಿ ಮಾರ್ಪಡಿಸು ;
ಮುರಲೀ ಪ್ರಿಯರಿಗೆ ಕೊಳಲ ಮಾಡಿಕೊಡು
ಸ್ವತಂತ್ರಧೀರ ಸಿದ್ಧೇಶ್ವರಾ !

೪೧

ಸ್ವತಂತ್ರಧೀರ ಸಿದ್ಧೇಶ್ವರಾ,
ನೀನೆನ್ನ ಮತ್ತೆ ಹುಟ್ಟಿಸುವುದೇ ಆದರೆ
ಕನ್ನಡಿಗನನ್ನಾಗಿ ಹುಟ್ಟಿಸು,
ಬಸವ ಭಕ್ತನನ್ನಾಗಿ ಹುಟ್ಟಿಸು !
ಇದಾಗದಿದ್ದರೆ, ದೇವತೆಗಳಿಗೆ ಒದಗುವ ಅಮೃತವಾಗಿಸುವುದಕ್ಕಿಂತ
ಬಡವರಿಗೆ ಸಿಕ್ಕುವ ಮಜ್ಜಿಗೆಯನ್ನಾಗಿ ಹುಟ್ಟಿಸು ;
ಇಂದ್ರನ ವೈಭವವನ್ನು ಸಾರುವ ಐರಾವತನನ್ನಾಗಿಸದೆ
ಭಕ್ತರ ಮನೆಯ ಎತ್ತಾಗಿ ಹುಟ್ಟಿಸು ;
ಉಳ್ಳವರಿಗೇ ಒಲೀದೀವ ಸುರತರುವನ್ನಾಗಿಸದೆ

ಇಲ್ಲದವರಿಗೂ ನಲೀದೀವ ಬೋರೆಯ ಮರವಾಗಿ ಹುಟ್ಟಿಸು ;
ಯಮಧರ್ಮನ ಕೋಣವನ್ನಾಗಿಸದೆ
ದತ್ತಾತ್ರೇಯನ ನಾಯಿಯನ್ನಾಗಿ ಹುಟ್ಟಿಸು ;
ಮುತ್ತು ರತ್ನಗಳನ್ನಿಡುವ ಪೆಟ್ಟಿಗೆಯನ್ನಾಗಿಸದೆ
ಹಡಪದ ಅಪ್ಪಣ್ಣನ ಹಸಿಬೆಯಾಗಿ ಹುಟ್ಟಿಸು,
ಕೊನೆ ಮುಟ್ಟಿಸು !

೪೨

'ಭಾರತ ಕರ್ನಾಟಕ'
ಇದು ನನ್ನ ಸಪ್ತಾಕ್ಷರೀ ಮಂತ್ರವಯ್ಯ ;
'ಕನ್ನಡ ಬಸವ'
ಇದು ನನ್ನ ಷಡಕ್ಷರೀ ಮಂತ್ರವಯ್ಯ ;
'ಸತ್ಯ ಸೌಂದರ್ಯ'
ಇದು ನನ್ನ ಪಂಚಾಕ್ಷರೀ ಮಂತ್ರವಯ್ಯ
'ಪ್ರೀತಿ ನೀತಿ'
ಇದು ನನ್ನ ಚತುರಕ್ಷರೀ ಮಂತ್ರವಯ್ಯ ;
'ಜನತೆ'
ಇದು ನನ್ನ ತ್ರ್ಯಕ್ಷರೀ ಮಂತ್ರವಯ್ಯ ;
'ಕಾವ್ಯ'
ಇದು ನನ್ನ ದ್ವ್ಯಕ್ಷರೀ ಮಂತ್ರವಯ್ಯ ;
'ನೀ'
ಇದು ನನ್ನ ಏಕಾಕ್ಷರೀ ಮಂತ್ರವಯ್ಯ
ಸ್ವತಂತ್ರಧೀರ ಸಿದ್ಧೇಶ್ವರಾ !

೪೩

ಭುವಿಯ ಸಪ್ತ ಸೋಜಿಗಗಳನ್ನು ನೋಡಿ
ಬೆರಗಾಗುವವರ ಬರವಿಲ್ಲ
ಭವದ ಸಪ್ತ ಸೋಜಿಗಗಳತ್ತ
ಚಿತ್ತ ಹೊರಳಲಯ್ಯ !
ಮಣ್ಣಿನಿಂದ ಬಣ್ಣ ಪರಿಮಳಗಳು ಹೊರಹೊಮ್ಮುವ ಸೋಜಿಗ,
ಮೊಟ್ಟೆಯಿಂದ ರೆಕ್ಕೆ ಕೊಕ್ಕುಗಳು ಮೈದೋರುವ ಸೋಜಿಗ,
ಜನನಿಯುದರದಲ್ಲಿ, ಶಿಲೆಯ ಪದರಿನಲ್ಲಿ ಆಹಾರ ಉಸಿರು
ದೊರೆವ ಸೋಜಿಗ,



ಹಮ್ಮಿನುರದಿಂದ ಕಲೆಗಳು ಕೊನರುವ ಸೋಜಿಗ,
ಬಾಳಿನಿಂದ ಬೆಲೆಗಳು ತಲೆದೋರುವ ಸೋಜಿಗ,
ಶಬ್ದದಿಂದ ಅರ್ಥಸರಿತೆ ಸೆಲೆಯೊಡೆವ ಸೋಜಿಗ,
ನನ್ನಲ್ಲಿ ನಿನ್ನ ಇರುಹಿನ ಕುರುಹನರಿವ ಅರುಹು
ಮೂಡುವ ಸೋಜಿಗ
ಎಂಥ ಸೋಜಿಗಗಳಿವು !
ಸೋಜಿಗಗಳಲ್ಲಿ ಸೋಜಿಗಗಳು !
ಇಂಥ ಸೋಜಿಗಗಳನ್ನು ನೋಡಿಯೂ
ಸೋಜಿಗಗೊಳ್ಳದಿರುವುದೇ ಸೋಜಿಗವಯ್ಯ
ಸ್ವತಂತ್ರಧೀರ ಸಿದ್ಧೇಶ್ವರಾ !

೪೪

'ಇದೆ, ಇದೆ,' ಎಂಬುದರ ಬದಿಯಲ್ಲಿಯೇ
'ಇಲ್ಲ, ಇಲ್ಲ,' ಎಂಬ ಸೊಲ್ಲು !
'ಹೌದು, ಹೌದು,' ಎಂಬುದರ ಹತ್ತಿರದಲ್ಲಿಯೇ
'ಅಲ್ಲ, ಅಲ್ಲ' ಎಂಬ ಸೊಲ್ಲು !
'ಸತ್ಯ, ಸತ್ಯ,' ಎಂಬುದರ ಸಮೀಪದಲ್ಲಿಯೇ
'ಸುಳ್ಳು, ಸುಳ್ಳು,' ಎಂಬ ಸೊಲ್ಲು !
'ಗಟ್ಟಿ, ಗಟ್ಟಿ' ಎಂಬುದರ ಪಕ್ಕದಲ್ಲಿಯೇ
'ಟೊಳ್ಳು, ಟೊಳ್ಳು,' ಎಂಬ ಸೊಲ್ಲು !

ಇವುಗಳಲ್ಲಿ ಯಾವ ನುಡಿಗೆ ಕಿವಿಗೊಡಲಿ ?
ನಾನಾವ ಸರ್ವಜ್ಞನೆಂದು ತೀರ್ಪು ಕೊಡಲಿ ?
ಅದನಿದನು ನಂಬಿ ಏಕೆ ಕೆಡಲಿ ?
ನನ್ನ ಮನ ನಿನ್ನನೇ ನಂಬಿ ಬಿಡಲಿ
ಸ್ವತಂತ್ರಧೀರ ಸಿದ್ಧೇಶ್ವರಾ !

೪೫

ನಂಬಲಾರೆ, ನಂಬದಿರಲಾರೆ
ಮುಂದುಗಾಣದಾಗಿಹೆನಯ್ಯ !
ಒಂದ ನಂಬುವುದರೊಳಗಾಗಿ
ಇನ್ನೊಂದು ಬಂದು ಹಿಂದೂಡುವುದು ಅದನ್ನು !
ಆ ಇನ್ನೊಂದನ್ನು ಮತ್ತೊಂದು,
ಮತ್ತೊಂದನ್ನು ಮಗುದೊಂದು
ಒಂದನ್ನೊಂದು ಪದಚ್ಯುತಗೊಳಿಸುತ್ತಲೇ ಇವೆಯಯ್ಯ ಪದೇ ಪದೇ !
ಅದನು ನಂಬಿ, ಇದನು ನಂಬಿ,
ಯಾವ ಯಾವುದನೋ ನಂಬಿ ನಿರಾಶನಾಗಿ
ನಿನ್ನನೇ ನಂಬಿದೆನಯ್ಯಾ ಕೊನೆಗೆ
ಸ್ವತಂತ್ರಧೀರ ಸಿದ್ಧೇಶ್ವರಾ !

೪೬

ನಿನ್ನ ನಂಬದಿರೆ ಸಂಸಾರವೊಂದು ಅಂಬುಧಿಯು,
ನಿನ್ನ ನಂಬಿದರೆ ಅದೇ ಮೇಕೆದಾಟು ನೋಡಯ್ಯ !
ನಿನ್ನ ನಂಬದಿರೆ ವಿಶ್ವವೊಂದು ಪ್ರಶ್ನಾರ್ಥಕ ಚಿಹ್ನೆ,
ನಿನ್ನ ನಂಬಿದರೆ ಅದೇ ತೆರೆದ ಪುಸ್ತಕವಯ್ಯಾ !
ನಿನ್ನ ನಂಬದಿರೆ ಬೆಳಕೂ ಕತ್ತಲೆಯು,
ನಿನ್ನ ನಂಬಿದರೆ ಕತ್ತಲೆಯೂ ಬೆಳಕಯ್ಯಾ !
ನಿನ್ನ ನಂಬದಿರೆ ಬದುಕೆಲ್ಲ ಅರ್ಥಹೀನ ಉಸಿರಾಟ,
ನಿನ್ನ ನಂಬದಿರೆ ಅದೇ ಅರ್ಥದ ನವಿಲಾಟವಯ್ಯ !



ಸ್ವತಂತ್ರಧೀರ ಸಿದ್ಧೇಶ್ವರಾ,
ನಿನ್ನ ನಂಬಿಕೆಯೆ ಹರಿಗೋಲು ನನಗೆ
ನೀನೆ ಅದರ ಅಂಬಿಗನಯ್ಯ !

೪೭

ನಾನು ನಿನ್ನಲ್ಲಿ ನಿಶ್ಚಲ ವಿಶ್ವಾಸವಿರಿಸಿದುದ ಕಂಡು
ನಗುವರಯ್ಯ ನಂಬದವರು !
ನಗುವುದನು ನಿಲ್ಲಿಸಿ ತೋರಿಸಲಿ ಅವರು
ನಿನಗಿಂತ ವಿಶ್ವಾಸಾರ್ಹವಾದುದನು !
ನಿನ್ನನುಳಿದು ನಂಬುವೆನದನು !
ವಿಶ್ವಾಸ ವಧೆ ಸುಲಭ,
ವಿಶ್ವಾಸ ಸುಧೆ ಸುಲಭವೇನಯ್ಯ ?
ವಿಶ್ವಾಸದ ನಾಸಿಕದ ಶ್ವಾಸ ನೀನು,
ವಿಶ್ವಾಸದ ವಿಶ್ವಾಸ ನೀನು !
ನಿನ್ನ ನಂಬಿಹೆನೆನ್ನಲು
ನನಗಾವ ನಾಚಿಕೆಯೂ ಇಲ್ಲ ನೋಡಾ
ಸ್ವತಂತ್ರಧೀರ ಸಿದ್ಧೇಶ್ವರಾ !

೪೮

ನೀನು ಕರುಣಿಸಿದರೆ
ನಿಮಿಷಾರ್ಧದಲ್ಲಿ ನಿತ್ಯಸತ್ಯದ ದರ್ಶನ ;
ನೀನು ಕರುಣಿಸದಿರೆ
ಜೀವನವೆಲ್ಲ ಮರಳ್ಗಾಡ ಪಯಣ !
ನೀನು ಕರುಣಿಸಿದರೆ
ವಿಶ್ವದ ಕಣಕಣಕ್ಕೂ ಅರ್ಥ ;
ನೀನು ಕರುಣಿಸದಿರೆ
ಇಳೆಯೆಲ್ಲ ಎನಿಸುವುದು ವ್ಯರ್ಥ !

ಕರುಣಿಸು ಕರುಣಿಗಳರಸ, ಕರುಣಿಸು ;
ನನ್ನನರಿದು, ನನ್ನರಿವಿನಿಂದ ನಿನ್ನನರಿದು,
ನಿನ್ನಿಂದ ಎಲ್ಲವನ್ನರಿದು,
ಅರಿವಾಗಿ ಅರಿವ ಬೆರೆದು
ಬಯಲಾಗುವುದನ್ನು ಕರುಣಿಸು
ಸ್ವತಂತ್ರಧೀರ ಸಿದ್ಧೇಶ್ವರಾ !

೪೯

ನಿನ್ನನರಿಯುವುದಿರಲಿ,
ನನ್ನನೇ ಅರಿಯದೆ
ಕಾಲಕಳೆದೆನಯ್ಯ !
ನನ್ನನರಿತಿದ್ದರೆ
ನಿನ್ನನರಿಯದಿರುತ್ತಿದ್ದೆನೆ ?
ತನ್ನನರಿಯರಿದಾತ
ಇನ್ನೇನನೂ ಅರಿಯನೆಂದಾತ
ಸ್ವತಂತ್ರಧೀರ ಸಿದ್ಧೇಶ್ವರ !

೫೦

ತಾನಿದ್ದರೆ ತಾನೆ ಏನೆಲ್ಲವೂ ?
ತಾನೇ ಇಲ್ಲದಿರೆ ಏನಿದ್ದರೇನಯ್ಯಾ ?
ತಾನಿದ್ದರೇ ತಾರೆ ಶಶಿ ರವಿ ಗಗನ ಜಗಗಳು ;
ತಾನಿದ್ದರೆ ಮಾತ್ರ ಸತ್ಯ ಶಿವ ಸುಂದರಗಳು ;
ತಾನಿದ್ದರಲ್ಲವೆ ವಿದ್ಯೆ, ಕಲೆ, ವಿಜ್ಞಾನ, ವ್ಯವಹಾರಗಳು ?
ತನ್ನಿಂದಲೇ ಕಾಣಬೇಕೇನಾದರೂ,
ತಾನಾಗಿಯೇ ಆಗಬೇಕೇನಾದರೂ !
ತನ್ನನುಳಿದು ನನ್ನಿ ಪಡೆವೆವೆಂಬುದು



ನಿನ್ನನುಳಿದು ತನ್ನ ಪಡೆವೆವೆಂಬುದು
ಹೊಳ್ಳು ತೂರಿದಂತಯ್ಯ
ಸ್ವತಂತ್ರಧೀರ ಸಿದ್ಧೇಶ್ವರಾ !

೫೧

ಆಗಬೇಕು, ಆಗಬೇಕು
ಏನೇನೋ ಆಗದೆ
ತಾನು ತಾನಾಗಬೇಕು !
ನಾಲ್ಕು ಜನರಿಗೆ ಆಗಬೇಕು ;
ಅದಿರು ಅಪರಂಜಿಯಾಗಬೇಕು ;
ಪ್ರಕೃತಿ ಸಂಸ್ಕೃತಿಯಾಗಬೇಕು ;
ಅನ್ನಮಯ ಆನಂದಮಯವಾಗಬೇಕು ;
ಸ್ವತಂತ್ರಧೀರ ಸಿದ್ಧೇಶ್ವರಾ,
ನಾನು ನೀನೋ, ನೀನು ನಾನೋ,
ಏನೋ ಆಗಬೇಕು !

೫೨

ಯಾರು ನನ್ನಿಂದ ದೂರಾದರೂ
ನಾನು ನನ್ನಿಂದ ದೂರವಾಗದಂತಿರಿಸಯ್ಯ ;
ಯಾರು ನನ್ನಲ್ಲಿಗೆ ಬಾರದಿದ್ದರೂ
ನಾನು ನನ್ನಲ್ಲಿಗೆ ಬರುವಂತೆ ಕರುಣಿಸಯ್ಯ ;
ಯಾರು ನನ್ನನ್ನು ನಂಬದಿದ್ದರೂ
ನಾನು ನನ್ನನ್ನು ನಂಬುವಂತೆ ಮಾಡಯ್ಯ ;
ಯಾರು ನನ್ನನ್ನು ಅರಿಯದಿದ್ದರೂ
ನಾನು ನನ್ನನ್ನು ಅರಿಯುವಂತೆ ಅನುಗ್ರಹಿಸಯ್ಯ ;

ಸ್ವತಂತ್ರಧೀರ ಸಿದ್ಧೇಶ್ವರಾ,
ನಾನು ನಾನಾಗಿ ನೀನಾಗುವಂತೆ ಆಶೀರ್ವದಿಸಯ್ಯ !

೫೩

ನಿನ್ನ ಕರೆ ನನಗೆ ಕೇಳಿಸಲಿ, ಕೇಳಿಸದಿರಲಿ
ನನ್ನ ಮೊರೆ ಮಾತ್ರ ನಿನಗೆ ಕೇಳಿಸುತ್ತಿರಲಯ್ಯ !
ನನ್ನೆರಡು ಕಿವಿ ಮರಗಿವಿಗಳಾಗಬಹುದು,
ಕಣಕಣವೂ ಕಿವಿಯಾಗಿರುವ
ನೀನೆಂತು ಕಿವುಡನಾಗಬಲ್ಲೆಯಯ್ಯಾ ?
ಸ್ವತಂತ್ರಧೀರ ಸಿದ್ಧೇಶ್ವರಾ,
ನಿನ್ನ ಕರೆ ನನಗೆ ಕೇಳಿಸಲಿ, ಕೇಳಿಸದಿರಲಿ,
ನನ್ನ ಮೊರೆ ಮಾತ್ರ ನಿನಗೆ
ಕೇಳಿಸುತ್ತಿರಲಯ್ಯಾ !

೫೪

ನೀನೆನ್ನ ಕರೆಯಲಿಲ್ಲವೆನ್ನಲೆ ? ಎನ್ನೆ !
ನೀನು ಕರೆದೆ, ಮತ್ತೆ ಮತ್ತೆ ಕರೆದೆ :
ಅನಾಥ ಶಿಶುವಿನ ಆಕ್ರೋಶವಾಗಿ ಕರೆದೆ,
ಮಹಾರೋಗಿಯ ನರಳಿಕೆಯಾಗಿ ಕರೆದೆ,
ಪರಿತ್ಯಕ್ತೆಯ ಕಂಬನಿಯಾಗಿ ಕರೆದೆ,
ಬಡವನ ನಿಟ್ಟುಸಿರಾಗಿ ಕರೆದೆ,
ಪತಿತನ, ಪದಹೃತನ ಕ್ರಂದನವಾಗಿ ಕರೆದೆ,
ಭಗ್ನಮಾನವನ ಉದ್ವಿಗ್ನ ಸ್ವರವಾಗಿ ಕರೆದೆ !
ಯಾವ ಸ್ವರದಿಂದ ಕರೆದರೂ ಕಿವಿಗೊಡದ



ಮೊಂಡ ನಾನಯ್ಯ, ಪಾಖಂಡಿ ನಾನಯ್ಯ !
ಸಿರಿಯ ತೇಗಿನಲ್ಲಿ, ಸುಖದ ಕೇಕೆಯಲ್ಲಿ,
ವಿಲಾಸದ ಸಿಳ್ಳಿನಲ್ಲಿ, ಅಧಿಕಾರದ ಅಬ್ಬರದಲ್ಲಿ,
ಬಲದ ಉಲುಹಿನಲ್ಲಿ ಕರೆಯಲು ನಿನಗೆ ಇಷ್ಟವಿಲ್ಲ
ನಿನಗೆ ಪ್ರಿಯವಾದ ದುಃಖಿತರ ಸ್ವರದಲ್ಲಿ ಕರೆದರೆ
ನನಗೆ ಕೇಳಿಸುವುದಿಲ್ಲ !
ಎಂತಯ್ಯಾ, ಎಂದಯ್ಯಾ
ನನಗೆ ನಿನ್ನ ಸ್ವರ ಕೇಳಿಸುವುದು ?
ಹೇಗಯ್ಯಾ, ಯಾವಾಗಯ್ಯ
ನಾನು ನಿನಗೆ ಹತ್ತಿರವಾಗುವುದು,
ಸ್ವತಂತ್ರಧೀರ ಸಿದ್ಧೇಶ್ವರಾ !

೫೫

ನಾನಿರುವ ತನಕ ನನ್ನ ಎಡಬಲ
ಹಿಂದು ಮುಂದು ಮೇಲು ಕೆಳಗುಗಳಯ್ಯಾ ;
ನಾನಳಿದು ನೀನುಳಿದಾಗ ಎಲ್ಲಿಯ ಎಡಬಲ,
ಎಲ್ಲಿಯ ಹಿಂದು ಮುಂದು ಮೇಲು ಕೆಳಗುಗಳಯ್ಯಾ ?
ನಾನಿರುವ ತನಕ ನಿನಗೊಂದು ನಾಮ, ನಿನಗೊಂದು ರೂಪ,
ನಿನಗೊಂದು ಗುಡಿ, ಗುರುದ್ವಾರ, ಮಸೀದೆ, ಚರ್ಚು ;
ನಾನಳಿದು ನೀನುಳಿದಾಗ ನಿನಗಾವ ನಾಮ, ನಿನಗಾವ ರೂಪ.
ನಿನಗಾವ ಗುಡಿ, ಗುರುದ್ವಾರ, ಮಸೀದೆ, ಚರ್ಚುಗಳಯ್ಯ ?
ನಾನಿರುವ ತನಕ ನೂರಾರು ಗ್ರಂಥ, ನೂರಾರು ಪಂಥ,

ನೂರಾರು ಮಂತ್ರ ತಂತ್ರಗಳಯ್ಯ ;
ನಾನಳಿದು ನೀನುಳಿದಾಗ ನಿನಗಾವ ಗ್ರಂಥ, ನಿನಗಾವ ಪಂಥ,
ನಿನಗಾವ ಮಂತ್ರ ತಂತ್ರಗಳಯ್ಯ ?
ಸ್ವತಂತ್ರಧೀರ ಸಿದ್ಧೇಶ್ವರಾ,
ನಾನಳಿದು ನೀನುಳಿದು,
ನನ್ನ, ಅನ್ಯ, ಭಿನ್ನವೆಂಬುದು
ಇಲ್ಲವಾಗಲಯ್ಯಾ !

೫೬

ಮುಗಿದ ಮೊಗ್ಗೆ ಬೆಳಗಿನ ಸುಳಿಗಾಳಿಗಾಗಿ ಕಾದಿರುವಂತೆ
ಕಾದಿಹೆನಯ್ಯ ನಿನ್ನ ಕರುಣಾ ಶ್ರಾವಣ ಸಮೀರಣಕ್ಕಾಗಿ ;
ಬಿಗಿದ ತಂತಿ ಬಾಜಿಸಬಲ್ಲ ಬೆರಳಿಗಾಗಿ ಕಾದಿರುವಂತೆ
ಕಾದಿರುವೆನಯ್ಯ ನಿನ್ನ ಕೃಪಾಂಗುಲಿಯ ಮಿಡಿತಕ್ಕಾಗಿ ;
ಸಿಂಗರಿಸಿದ ರಂಗ ಕುಣಿವ ಕಾಲುಗಳಿಗಾಗಿ ಕಾದಿರುವಂತೆ
ಕಾದಿಹೆನಯ್ಯಾ ನಿನ್ನ ಒಲವಿನ ಲಲಿತಲಾಸ್ಯಕ್ಕಾಗಿ ;
ವರ ಶಿಷ್ಯನ ಕಿವಿ ಗುರುವಚನಕ್ಕಾಗಿ ಕಾದಿರುವಂತೆ
ಕಾದಿರುವೆನಯ್ಯಾ ನಿನ್ನ ಅಭಯವಾಣಿಯ ಅನುರಣನಕ್ಕಾಗಿ ;
ತೊಟ್ಟಿಲದ ಕೂಸು ತಾಯ ಜೋಗುಳಕ್ಕಾಗಿ ಕಾದಿರುವಂತೆ
ಕಾದಿಹೆನಯ್ಯಾ ನಿನ್ನ ಅಶ್ರುತ ನಕ್ಷತ್ರಗಾನವ ಆಲಿಸಲಿಕ್ಕಾಗಿ !
ಸ್ವತಂತ್ರಧೀರ ಸಿದ್ಧೇಶ್ವರಾ,
ಈ ನಿತ್ಯ ನಿರೀಕ್ಷೆಯ, ಚಿರಪ್ರತೀಕ್ಷೆಯ
ಪರೀಕ್ಷೆ ಮುಗಿಯುವುದು ಯಾವಾಗ ?
ನಿನ್ನ ಉಪೇಕ್ಷೆ ಅಪೇಕ್ಷೆಯಾಗುವುದು
ಯಾವಾಗ, ಇನ್ನೂ ಯಾವಾಗ ?

೫೭

ನನ್ನ ನನಸಿನ ನೌಕೆಗೆ
ನೀನೆ ನಾವಿಕನಾಗಯ್ಯಾ ;
ನನ್ನ ಕನಸಿನ ಪುಷ್ಪಕಕ್ಕೆ



ನೀನೆ ಚಾಲಕನಾಗಯ್ಯಾ ;
ನನ್ನ ಮನಸಿನ ಬಿಳಿಯಾನೆಗೆ
ನೀನೆ ಮಾವುತನಾಗಯ್ಯಾ ;
ನನ್ನ ಕಾಮನೆಯ ಕುದುರೆಗೆ
ನೀನೆ ರಾವುತನಾಗಯ್ಯಾ ;
ನನ್ನ ಕಲ್ಪನೆಯ ಕ್ಷಿಪಣಿಗೆ
ನೀನೆ ನಿಯಂತ್ರಕನಾಗಯ್ಯಾ ;
ನನ್ನ ತನು ಮನ ಪ್ರಾಣ ಜೀವನ
ಚಿಂತನ ಅಂತರ್ಮಂಥನಗಳಿಗೆ
ನೀನೆ ಆಧಾರ, ನೀನೆ ಆಶ್ರಯವಾಗಿರಯ್ಯಾ
ಸ್ವತಂತ್ರಧೀರ ಸಿದ್ಧೇಶ್ವರಾ !

೫೮

ಯಾರಿಗೆ ಬೇಕಾಗಿ ಏನು ಫಲ ತಂದೆ–
ನಿನಗೆ ಬೇಕಾಗದನಕ ?
ಯಾರು ಮೆಚ್ಚಿ ಏನು ಪ್ರಯೋಜನ ತಂದೆ
ನಿನಗೆ ಮೆಚ್ಚುಗೆಯಾಗದನಕ ?
ಯಾವ ಆಸ್ಥಾನದಲ್ಲಿ ಸ್ಥಾನ ಪಡೆದು ಯಾವ ಲಾಭ ತಂದೆ–
ನಿನ್ನ ವಾತ್ಸಲ್ಯದಾಸ್ಥಾನದಲ್ಲಿ ಸ್ಥಲ ಪಡೆಯದನಕ ?
ಸ್ವತಂತ್ರಧೀರ ಸಿದ್ಧೇಶ್ವರಾ,
ಯಾವ ಮತವಿಡಿದು ಏನು ಫಲ ತಂದೆ,
ನಿನ್ನ ಪಥ ತೋರದನಕ ?

೫೯

ನಿನ್ನದು ಅಗಮ್ಯ ಶಕ್ತಿ,
ನನ್ನದು ಅನನ್ಯ ಭಕ್ತಿ !
ನಾನೇನೂ ನಿನ್ನ ಶಕ್ತಿಗಾಗಿ ಹಂಬಲಿಸಿಲ್ಲ ;
ನೀನು ಮಾತ್ರ ನನ್ನ ಭಕ್ತಿಗಾಗಿ ಕಾದಿಹೆಯಂತೆ !
ಹೌದೆ ? ನಿಜವೆ ?

ಇದೊ, ನನ್ನ ಭಕ್ತಿಯ ಭಾಗೀರಥಿ
ನಿನಗಿವಳು ಸತಿ, ನೀನಿವಳ ಪತಿ !
ಎಡೆಗೊಡು ನಿನ್ನ ದಯೆಯ ಜಟಾಜೂಟದಲ್ಲಿ !
ನಿನ್ನ ನೀರಸ ಶಕ್ತಿ
ನನ್ನ ರಸಮಯ ಭಕ್ತಿಯಿಂದ
ಮೃದು ಮಧುರವಾಗಲಯ್ಯ
ಸ್ವತಂತ್ರಧೀರ ಸಿದ್ಧೇಶ್ವರಾ !

೬೦

ನಿನ್ನ ಶಕ್ತಿ ಹಿರಿದೊ, ನನ್ನ ಭಕ್ತಿ ಹಿರಿದೊ
ಓ ಸರ್ವಶಕ್ತ ?
ನಿನ್ನ ಜ್ಞಾನ ಹಿರಿದೊ, ನನ್ನ ಧ್ಯಾನ ಹಿರಿದೊ
ಓ ಸರ್ವಜ್ಞ ?
ನಿನ್ನ ವಿಶ್ವತನು ಹಿರಿದೊ, ನನ್ನ ಸಣ್ಣ ಮನ ಹಿರಿದೊ
ಓ ಸರ್ವಭರಿತ ?
ನೀನಿತ್ತ ಪ್ರಾಣ ಹಿರಿದೊ, ನನ್ನ ನಿರ್ಮಾಣ ಹಿರಿದೊ
ಓ ಸ್ವತಂತ್ರಧೀರ ಸಿದ್ಧೇಶ್ವರಾ ?

೬೧

ನಾನು ಎಚ್ಚರಿದ್ದಾಗ ನೀನು ಮಲಗಿದೆ,
ನಾನು ಮಲಗಿದಾಗ ನೀನು ಎಚ್ಚತ್ತೆ ನೋಡಾ !
ನಾನು ನನಗೆ ಹತ್ತಿರವಾದಾಗ ನಿನಗೆ ದೂರವಾದೆ,
ನಿನಗೆ ಹತ್ತಿರವಾದಾಗ ನನಗೆ ಎರವಾದೆ ನೋಡಾ !
ನನಗೆ ಮಾತನಾಡಲು ಮನಸ್ಸಾದಾಗ ನಿನಗೆ ಮೌನವ್ರತ,
ನಿನಗೆ ಮಾತನಾಡಬೇಕೆನಿಸಿದಾಗ ನನಗೆ ಮೌನವ್ರತ ನೋಡಾ !
ನಾನಿದ್ದಾಗ ನೀನಿರಲಿಲ್ಲ, ನೀನಿದ್ದಾಗ ನಾನಿರಲಿಲ್ಲ,
ಇಬ್ಬರೂ ಕೂಡುವುದೇ ಕೂಡಿ ಬರಲಿಲ್ಲ !
ಇದೆಂಥ ಇಜ್ಜೋಡಿನ ಸಂಸಾರ ಇನಿಯ ?
ಇದೆಂಥ ವಿಪರೀತ ಸತಿಪತಿತ್ವ ಎರೆಯ ?



ಕೂಡಿದರೆ ಸತಿಯನ್ನೇ ಇಲ್ಲವಾಗಿಸುವ
ಪತಿ ನೋಡವ್ವ
ನಮ್ಮ ಸ್ವತಂತ್ರಧೀರ ಸಿದ್ಧೇಶ್ವರ !

೬೨

ನನಗೆ ಬೇಕಾದುದ ನಾನೇ ಬಾಯಿ ಬಿಟ್ಟು ಕೇಳಬೇಕೆ ?
ನಾನೇ ಕೇಳಬೇಕೆಂಬ ಹಟವೇಕೆ ಹೃದಯೇಶ್ವರ ?
ಸರ್ವಜ್ಞನೆಂದು ಜಂಬ ಕೊಚ್ಚಿಕೊಳ್ಳುವ ನಿನಗೆ ತಿಳಿಯದೆ ?
ಹೃದಯ ಹೃದಯಕ್ಕಾಗಿ ಹಾತೊರೆವುದೆಂಬುದು ಹೊಳೆಯದೆ ?
ನನಗೆ ಬೇಕಾದುದೇ ನಿನಗೂ ಬೇಕೆಂಬುದ ಬಲ್ಲೆ !
ಇಷ್ಟೂ ತಿಳಿಯದಿದ್ದರೆ ನೀನೆಂಥ ನಲ್ಲ, ನಾನೆಂಥ ನಲ್ಲೆ ?
ಇಬ್ಬರೂ ಒಬ್ಬರೊಬ್ಬರಿಗೆ ಹೇಳದೆ ತಬ್ಬಿಬ್ಬಾಗಿದ್ದೇವೆ !
ನನಗೆ ನಾಚಿಕೆ, ನಿನಗೆ ಬಿಗುಮಾನ ಬಿಂಕ !
ಬಯಕೆಗೆ ಬಾಯ ಎಂಜಲವೇಕೆ ಅಂಟ ಬೇಕಾಗಿ ?
ನಯನದ ನುಡಿ, ಮೌನದ ಮಾತು
ಭಾವದ ಭಾಷೆ ಸಾಕು ನೀರ,
ಸ್ವತಂತ್ರಧೀರ ಸಿದ್ಧೇಶ್ವರ !

೬೩

ನಿನ್ನ ಅನುಗ್ರಹಕ್ಕೆ ನಾನು ಪಾತ್ರನಾಗಬೇಕೆಂದು
ಬೋಧಿಸುತ್ತಿಹರಯ್ಯ ಬಲ್ಲವರು !
ನಾನು ಪಾತ್ರನಾದರೆ ಪಾತ್ರತೆಗೆ ತಕ್ಕ ಫಲ ನನ್ನ ಹಕ್ಕು !
ನಿನ್ನ ಅನುಗ್ರಹವೆಲ್ಲಿ ಬಂತು ಅದರಲ್ಲಿ ?
ನಿನ್ನ ಅನುಗ್ರಹವಿರುವುದು ಅಪಾತ್ರರಿಗಾಗಿ,
ನನ್ನಂಥವರಿಗಾಗಿಯೆನ್ನುವರು ಆದ್ಯರು !
ನಿನ್ನ ಅನುಗ್ರಹಕ್ಕೂ ಅರ್ಹತೆಗಳ ವಿಧಿಸುವುದೆ
ಸ್ವತಂತ್ರಧೀರ ಸಿದ್ಧೇಶ್ವರ ?

೬೪

ನನ್ನ ತಪ್ಪುಗಳ ತೊರೆ
ನಿನ್ನ ಕ್ಷಮೆಯ ಸಾಗರವನ್ನು ಸೇರಿ
ಬಯಲಾಗಲಯ್ಯ !
ನನ್ನ ದೋಷಗಳ ಕಸ ಕಡ್ಡಿ
ನಿನ್ನ ಅನುಗ್ರಹದ ಅಗ್ಗಿಷ್ಟಿಗೆಯಲ್ಲಿ
ಸುಟ್ಟು ಭಸ್ಮವಾಗಲಯ್ಯ !
ನನ್ನ ಮರವೆಯ ಮಬ್ಬು
ನಿನ್ನ ಕರುಣೆಯ ಕಿರಣ ತಾಕಿ
ಬೆಳಕಾಗಲಯ್ಯ !
ಸ್ವತಂತ್ರಧೀರ ಸಿದ್ಧೇಶ್ವರಾ.
ನನ್ನ ಸೊಮ್ಮಿನ ಹಮ್ಮು,
ಬುದ್ಧಿಯ ಬಿಮ್ಮು
ನಿನ್ನವರ ಸ್ಮರಣೆ ಸ್ಪರ್ಶಿಸಿ
ಸದುವಿನಯವಾಗಲಯ್ಯ !

೬೫

ಹೃದಯದ ಹೆದ್ದಾರಿಯಲ್ಲಿ
ಹೆಜ್ಜೆ ಹೆಜ್ಜೆಗೆ ಹಣ್ಣಿನ ಮರ,
ಕೂಗಳತೆಗೊಂದು ಅರವಟ್ಟಿಗೆ,
ಗಾವುದಕ್ಕೊಂದು ಅನ್ನಸತ್ರವಯ್ಯಾ !
ಬುದ್ಧಿಯ ದುರ್ಗಮ ಮಾರ್ಗದಲ್ಲಿಯೋ
ಅನುಮಾನದ ಮುಳ್ಳು ಮರಗಳು,
ತರ್ಕದ ಶುಷ್ಕ ತರುಗಳು,
ಪ್ರಮಾಣದ ತಗ್ಗು ತೆವರುಗಳಯ್ಯಾ !
ಆದರೆ, ಅಲ್ಲಿಯೂ ನಡೆವ
ಇಲ್ಲಿಯೂ ನಡೆವ ಚಪಲ ನನಗೆ !
ಈ ಎರಡೂ ಎಲ್ಲಿಯೋ ಸೇರಿ ಒಂದಾಗುವುವೆಂಬ,
ಒಂದೇ ದಾರಿಯಾಗಿ ಮುಂದುವರಿವುವೆಂಬ



ನಂಬಿಕೆಯಿಂದ ನಡೆದಿದ್ದೇನೆ
ತಡವರಿಸುತ್ತ, ಎಡವುತ್ತ,
ಕುಂಟುತ್ತ, ಕುಸಿಯುತ್ತ !
ಕುಸಿದು ಕುಕ್ಕರಿಸದಂತೆ
ಕರವಿಡಿದು ಕರೆದೊಯ್ಯಯ್ಯ
ಸ್ವತಂತ್ರಧೀರ ಸಿದ್ಧೇಶ್ವರಾ !

೬೬

ಬುದ್ಧಿಯ ಬದರಿಯ ದಾರಿಯಲ್ಲಿ
ಒಮ್ಮೊಮ್ಮೆ ಹಿಮಪಾತ, ಒಮ್ಮೊಮ್ಮೆ ಶಿಖರಪಾತ,
ಹಲವು ಹನ್ನೆರಡು ಅಪಘಾತ !
ಹೃದಯ-ಕೇದಾರದ ಹಾದಿಯಲ್ಲಿ
ಒಮ್ಮೆ ನೆರೆಹಾವಳಿ, ಒಮ್ಮೆ ಬಿರುಗಾಳಿ,
ಅನಿವಾರ್ಯ ವಿಘ್ನಾವಳಿ !
ಮನದ ಮಾನಸ ಸರೋವರದ ಮಾರ್ಗದಲ್ಲಿ
ಪರಕೀಯ ಪ್ರಭಾವಗಳ ಕಾಟ,
ಪ್ರತಿಕೂಲಗಳ ಕೂಟ !
ಸ್ವತಂತ್ರಧೀರ ಸಿದ್ಧೇಶ್ವರಾ, ನಾನು ನಾನಾಗುವ ಪಥದಲ್ಲಿ
ಹಲವು ಉಪಾಧಿಗಳ, ಮನೋವ್ಯಾಧಿಗಳ ಬಾಧೆ !

೬೭

ಸತ್ಯಾನ್ವೇಷಣೆಯ ಹಾದಿಯಲ್ಲಿ ತುಳಿದ
ಮುಳ್ಳೂ ಮಲ್ಲಿಗೆಯೇ !
ಮಿಥ್ಯಾದರಣೆಯ ದಾರಿಯಲ್ಲಿ ತುಳಿದ
ಮಲ್ಲಿಗೆಯೂ ಮುಳ್ಳೇ !
ಸತ್ಯರಕ್ಷಣೆಯ ಹೋರಾಟದಲ್ಲಿ ಪಡೆದ
ಸೋಲೂ ಗೆಲವೇ !
ಮಿಥ್ಯಾನುಮೋದನೆಯ ಕೀಳಾಟದಲ್ಲಿ ಪಡೆದ
ಗೆಲವೂ ಸೋಲೇ !
ನೀನು ಸತ್ಯಸ್ವರೂಪ ಮಾತ್ರವಲ್ಲ,
ಸತ್ಯವೇ ನೀನು, ನೀನೇ ಸತ್ಯ !
ಈ ಸತ್ಯದಲ್ಲಿ ಸೇರಿ ಬಯಲಾಗಲಿ
ನಾನೆಂಬುವ ಮಿಥ್ಯ,

ಸ್ವತಂತ್ರಧೀರ ಸಿದ್ಧೇಶ್ವರ !

೭೮

ಆ ಹಾದಿ ಈ ಹಾದಿಯೆಂದು
ಬಿತ್ತಲು ಭೂಮಿಯೇ ಉಳಿಯದಂತಾದರೆ ಹೇಗಯ್ಯ ?
ಆ ಬೀದಿ ಈ ಬೀದಿಯೆಂದು
ಮನೆ ಕಟ್ಟಲು ಸ್ಥಳವೇ ಉಳಿಯದಂತಾದರೆ ಹೇಗಯ್ಯ ?
ಆ ವಾದ ಈ ವಾದವೆಂದು
ಮನೆಮಾತಿಗೇ ವೇಳೆ ಉಳಿಯದಂತಾದರೆ ಹೇಗಯ್ಯ ?
ಆ ಬೋಧೆ ಈ ಬೋಧೆಯೆಂದು
ತಿಳಿದಷ್ಟೂ ತಿಳಿಗೆಡುತ್ತ ಹೋದರೆ ಹೇಗಯ್ಯ ?
ದಿನಕ್ಕೊಂದು ಮಡಿಯಲ್ಲಿ ನೆಡಬೇಡವಯ್ಯ
ನಿನ್ನ ಈ ಬಡ ಸಸಿಯನ್ನು !
ದಿನಕ್ಕೊಬ್ಬರ ಕೈಗೆ ಕೊಡಬೇಡವಯ್ಯ
ನಿನ್ನ ಈ ಬಡ ಸಿಸುವನ್ನು !
ನಿನ್ನ ಹಾದಿಯಲ್ಲಿ ನಡೆಸು,
ನಿನ್ನ ಬೋಧೆಯನ್ನು ಕುಡಿಸು
ನನ್ನಿಯೊಂದನೆ ನುಡಿಸು – ಸ್ವತಂತ್ರಧೀರ ಸಿದ್ಧೇಶ್ವರಾ !

೭೯

ಆ ದಾರಿ ಈ ದಾರಿಯಲ್ಲಿ ನೀ ಸಿಕ್ಕದೆ ಹೋಗಬಹುದು
ಆದರೆ, ಎಲ್ಲ ದಾರಿಗಳೂ ಕೂಡುವಲ್ಲಿ
ಸಿಕ್ಕದಿರುವೆಯೇನಯ್ಯಾ ?
ಆ ತೀರ್ಥ ಈ ತೀರ್ಥದಲ್ಲಿ ನೀ ದೊರೆಯದಿರಬಹುದು
ಆದರೆ, ವಿಶ್ವಜೀವನ ತೀರ್ಥದಲ್ಲಿ
ದೊರೆಯದಿರುವೆಯೇನಯ್ಯ ?
ಸ್ವತಂತ್ರಧೀರ ಸಿದ್ಧೇಶ್ವರಾ,
ಆ ಗುಡಿ ಈ ಗುಡಿಯಲ್ಲಿ ನಿನ್ನ ಪಡೆಯದಿರಬಹುದು–
ಆದರೆ, ಈ ಒಡಲ ಗುಡಿಯಲ್ಲಿಯೂ
ಪಡೆಯಲಾಗದೇನಯ್ಯಾ ?

೮೦



ಗಾಳಿ ಬೀಸಿದತ್ತ ಹುಟ್ಟು ಹಾಕಿದರೆ
ಹರಿಗೋಲು ಉಳಿಯಬಹುದಾಗಲಿ ಗುರಿ ನಿಲುಕದಯ್ಯ ;
ದಾರಿ ಚೆನ್ನಾಗಿದೆಯೆಂದು ತಪ್ಪು ದಾರಿ ತುಳಿದರೆ
ದಾರಿ ಸಾಗಬಹುದಾಗಲಿ ಊರ ಸೇರಲಾಗದಯ್ಯ !
ಸ್ವತಂತ್ರಧೀರ ಸಿದ್ಧೇಶ್ವರಾ,
ಸುಲಭವಾದುದೆಲ್ಲ ಶುಭಕರವಲ್ಲ,
ಕಠಿನವಾದುದೆಲ್ಲ ಕಷ್ಟಪರವಲ್ಲವಯ್ಯಾ !

೮೧

ಒಂದೆ ದಾರಿಯಲ್ಲಿ ಮುಂದೆ ನಡೆಯಲೆ ?
ಬಹುದೂರ ಹೋಗುವ ಬಯಕೆಯಿಲ್ಲ !
ನನ್ನ ದಾರಿಯೊಂದನ್ನು ಕೊರೆದುಕೊಳ್ಳಲೆ ?
ತುದಿ ಮೊದಲ ತಿಳಿವ ತವಕವಿಲ್ಲ !
ಎಲ್ಲ ದಾರಿಗಳನೂ ತುಳಿವ ತವಕ,
ಎಲ್ಲ ಬಟ್ಟೆಗಳಲ್ಲಿಯೂ ನಡೆವ ಬಯಕೆ !
ಎಲ್ಲಿಗೆ ಮುಟ್ಟುವೆನೋ ಕೊನೆಗೆ !
ಎಲ್ಲಿಗಾದರೂ ಮುಟ್ಟಿಸು,
ಮುಟ್ಟಿದಲ್ಲಿ ನೀನಿರು
ಸ್ವತಂತ್ರಧೀರ ಸಿದ್ಧೇಶ್ವರ !

೮೨

ಕಾಲದ ಕಡಲಿನ ಮೇಲೆ
ಸಾವಿನ ಹನಿಗಳು ಸುರಿಯುತ್ತಲಿಹವಯ್ಯ
ಬಾಳ ಬಾನಿನಿಂದ !
ಮಹಾಜೀವನದ ನದನದಿಗಳಾಗಿ
ಬೆರೆತೂ ಬೇರುಳಿಯಲು,
ಮಹಾಕೃತಿಗಳ ಮಾನಸ ಸರೋವರಗಳಾಗಿ
ಬೆರೆಯದೆಯೆ ಬೇರುಳಿಯಲು
ಸರ್ವರಿಗೆ ಸಾಧ್ಯವೇನಯ್ಯ ?
ಕಾಲದ ಕಡಲಿನ ಸಿಂಪೊಂದರಲ್ಲಿ
ಸ್ವಾತಿಯ ಹನಿಯಾಗಿ ಸೇರುವ
ಸೌಭಾಗ್ಯವೊಂದನೇ ಕರುಣಿಸಯ್ಯ
ಸ್ವತಂತ್ರಧೀರ ಸಿದ್ಧೇಶ್ವರಾ !

೭೩

ಒಂದು ಕೋಹಿನೂರಿಗಾಗಿ
ಹಲವು ಗಣಿಗಳನಗಿದರೂ
ವ್ಯರ್ಥವಲ್ಲವಯ್ಯ ;
ಒಂದು ಹೊಸ ವಿಚಾರಕ್ಕಾಗಿ
ಹಲವು ಹೊತ್ತಗೆಗಳ ಮಗುಚಿದರೂ
ಹಾಳೇನಲ್ಲವಯ್ಯ ;
ಒಬ್ಬ ಸೀತಾದೇವಿಗಾಗಿ
ಮಹಾಯುದ್ಧ ಮಾಡಿದರೂ
ಕೇಡೇನಲ್ಲವಯ್ಯ ;
ಸ್ವತಂತ್ರಧೀರ ಸಿದ್ಧೇಶ್ವರಾ,
ನಿನ್ನೊಂದು ಕೃಪಾ ಕಟಾಕ್ಷಕ್ಕಾಗಿ
ನೂರು ವರ್ಷ ನವೆದರೂ
ನಷ್ಟವೇನಲ್ಲವಯ್ಯ !

೭೪

ಸವೆದು ಹೋದ ನಾಣ್ಯ ಮತ್ತೆ
ಟಂಕಶಾಲೆಗೆ ಮರಳುವಂತೆ,
ಆಯಲಾಗದ ಅಚ್ಚಿನ ಮೊಳೆ ಮತ್ತೆ
ಕರಗುಭಟ್ಟಿಗೆ ಹಿಂದಿರುಗುವಂತೆ,
ಓದಿ ಒಗೆದ ರದ್ದಿ ಮತ್ತೆ
ಕಾಗದದ ಕಾರಖಾನೆಯ ಸೇರುವಂತೆ,
ತೇಲಿ ಬಂದ ನೆನಪು ಮತ್ತೆ
ಸುಪ್ತ ಚೇತನವ ಸೇರುವಂತೆ
ಸಾರಲೆಳಸಿಹೆನಯ್ಯ ನಿನ್ನೆಡೆಯ ನಾನು,
ಸೇರಲೆಳಸಿಹೆನಯ್ಯ ನಿನ್ನಡಿಯ ನಾನು !
ಸಾರಗೊಡು, ಸೇರಗೂಡು,
ದೂರವಿಡದಿರಯ್ಯ-ಸ್ವತಂತ್ರಧೀರ ಸಿದ್ಧೇಶ್ವರಾ !

೭೫



ನೆಲದಲ್ಲಿ ಹೋಗದ ನೇಗಿಲಿಗೆ ಬೆಲೆ ಎಲ್ಲಿ ?
ಅನುಭಾವವನ್ನು ಆಶ್ರಯಿಸದ ಅರಿವಿಗೆ ನೆಲೆ ಎಲ್ಲಿ ?
ಕಲ್ಲಿನಲ್ಲಿ ಕಂಡರಿಸಿದ ಒರತೆಗೆ ಸೆಲೆ ಎಲ್ಲಿ ?
ಹೊಲೆಯಲ್ಲಿ ಹುಟ್ಟಿದ ಜೀವಿಗೆ ಹೊಲೆ ಎಲ್ಲಿ ?
ಆಕಾಶದ ಕೊಪ್ಪರಿಗೆಗೆ ಒಲೆ ಎಲ್ಲಿ ?
ಬಯಲ ಮತ್ಸ್ಯವ ಹಿಡಿಯೆ ಬಲೆ ಎಲ್ಲಿ ?
ಸ್ವತಂತ್ರಧೀರ ಸಿದ್ಧೇಶ್ವರಾ, ನಿನ್ನ ನಿರಾಕರಿಸಿ, ನಾನಿರಬಲ್ಲೆನೆಂದರೆ
ಕಡಲ ಬಿಟ್ಟು ಅಲೆ ಎಲ್ಲಿ ?

೭೬

ತಂತಿಗಳಲ್ಲಿ ಸುನಾದವಿದೆ
ಸೋರೆ ದಂಡಿಗೆಗಳಿಗೆ ಬಿಗಿದಾಗ ಮಾತ್ರ ;
ಚರ್ಮದಲ್ಲಿ ಸುನಾದವಿದೆ
ವಾದ್ಯಗಳ ಮೈಗಳಿಗೆ ಬಿಗಿದಾಗ ಮಾತ್ರ ;
ಬಿಲ್ಲಿನಲ್ಲಿ ಬಾಣ ಬಿಡುವ ಶಕ್ತಿಯಿದೆ
ನಾರಿಯಿಂದ ಬಿಗಿದಾಗ ಮಾತ್ರ ;
ನನ್ನಲ್ಲಿಯೂ ನಿನ್ನನರಿವ ಶಕ್ತಿಯಿದೆ
ನಿನ್ನಡಿಗಳಿಗೆ ನನ್ನ ಬಿಗಿದಾಗ ಮಾತ್ರ, ಸ್ವತಂತ್ರಧೀರ ಸಿದ್ಧೇಶ್ವರ !

೭೭

ನಾ ಮಾಡುವ ಕೆಲಸದಲ್ಲಿ ನನ್ನ ಕುಳ್ಳಿರಿಸಿದೆ
ಅದು ಕರ್ಮವಾಯ್ತು ;
ನಿನ್ನ ಕುಳ್ಳಿರಿಸಿದೆ,
ಅದೇ ಕಾಯಕವಾಯ್ತು !
ನೆನೆವ ಮನದಲ್ಲಿ ನನ್ನ ಕುಳ್ಳಿರಿಸಿದೆ
ಅದು ಬಂಧನವಾಯ್ತು ;
ನಿನ್ನ ಕುಳ್ಳಿರಿಸಿದೆ,
ಅದೇ ನಿಜದ ನಂದನವಾಯ್ತು !
ಅರಿವ ಬುದ್ಧಿಯಲ್ಲಿ ನನ್ನ ಕುಳ್ಳಿರಿಸಿದೆ
ಅದು ಬಾಧಕವಾಯ್ತು ;
ನಿನ್ನ ಕುಳ್ಳಿರಿಸಿದೆ,
ಅದೇ ಸಾಧಕವಾಯ್ತು !
ಬೀಗುವ ಅಹಂಕಾರದಲ್ಲಿ ನನ್ನ ಕುಳ್ಳಿರಿಸಿದೆ

ಅದು ಅಧೋಗಾಮಿಯಾಯ್ತು ;
ನಿನ್ನ ಕುಳ್ಳಿರಿಸಿದೆ,
ಅದೇ ಊರ್ಧ್ವಗಾಮಿಯಾಯ್ತು !
ಚಿಂತಿಪ ಚಿತ್ತದಲ್ಲಿ ನಿನ್ನ ಕುಳ್ಳಿರಿಸಿದೆ
ಅದು ಸೆರೆಮನೆಯಾಯ್ತು ;
ನಿನ್ನ ಕುಳ್ಳಿರಿಸಿದೆ,
ಅದೇ ನಿನ್ನ ಅರಮನೆಯಾಯ್ತು ನೋಡಾ,
ಸ್ವತಂತ್ರಧೀರ ಸಿದ್ಧೇಶ್ವರಾ !

೭೮

ಸ್ವತಂತ್ರಧೀರ ಸಿದ್ಧೇಶ್ವರಾ,
ನಿನ್ನ ಸರ್ವಜೀವದಯಾಪಾರಿತ್ವದ ಸಾಮಾನ್ಯ ನಿಯಮಕ್ಕೆ
ನಾನೇ ಅಪವಾದವಾಗದಿರಲಯ್ಯ !
ನಿನ್ನ ದಿವ್ಯ ಸಂಗೀತದ ವಿಶ್ವವಿಸರಣೆಯಲ್ಲಿ
ನಾನೇ ಜೊಳ್ಳು ಗುಳಿಗೆಯ ಜಾಹೀರಾತು ಆಗದಿರಯ್ಯಾ !
ನಿನ್ನ ಚಿದಾನಂದಚಂದ್ರಿಕಾಪ್ರಸರಣದಲ್ಲಿ
ನಾನೇ ಕಗ್ಗವಿಯ ಕತ್ತಲೆಯಾಗಿ ಉಳಿಯದಿರಲಯ್ಯಾ !
ನಿನ್ನ ವಿಶ್ವ ನಿರ್ವಾಚನದ ಚುನಾವಣಾ ಚಿಹ್ನೆಗಳಲ್ಲಿ
ನಾನೇ ಬೇಡಾದ ಜೋಡೆತ್ತುಗಳ ಚಿಹ್ನೆಯಾಗದಿರಲಯ್ಯಾ !
ನಿನ್ನ ಜೀವಕೃಷಿಯ ನೀರಾವರೀ ಯೋಜನೆಯಲ್ಲಿ
ತೇವ ಏರದ ತೆವರು ನಾನಾಗದಿರಲಯ್ಯಾ !
ಜೀವನ ವಿಕಾಸದ ಸುಳಿದೆಗೆವ ಸರಪಳಿಯಲ್ಲಿ
ಮುರಿದ ಗೊಣಸು ನಾನಾಗದಿರಲಯ್ಯ !

೭೯

ಷಡ್ರಸಗಳ ರುಚಿಭೇದವನ್ನರಿಯದಿದ್ದರೆ
ನಾಲಗೆಯಲ್ಲಿ ಹುಟ್ಟುಸಟ್ಟುಗಗಳಲ್ಲಿ ಭೇದವಾವುದಯ್ಯಾ ?
ವೀನಸ್ ಪ್ರತಿಮೆ ಮಹಿಷಾಸುರ ವಿಗ್ರಹಗಳ ಭೇದ ತಿಳಿಯದಿದ್ದರೆ
ನೇತ್ರಗಳಲ್ಲಿ ತೂತುಗಳಲ್ಲಿ ವ್ಯತ್ಯಾಸವಾವುದಯ್ಯಾ ?
ಕೋಣನ ಕಿರುಚು, ವೀಣೆಯ ಇಂಚರಗಳ ಭೇದ ಗೋಚರಿಸದಿರೆ
ಕಿವಿ ಮರಗಿವಿಗಳಲ್ಲಿ ಅಂತರವೆಂತಹದಯ್ಯಾ ?



ಇರುವಂತಿಗೆ ಮದುಗುಣಿಕೆಗಳ ವಾಸನೆಯ ವ್ಯತ್ಯಾಸ ವೇದ್ಯವಾಗದಿರೆ
ಮೂಗು ಉದುಗೊಳವಿಗಳಲ್ಲಿ ಭೇದವೇತರದಯ್ಯಾ ?
ಸುಳಿಗಾಳಿ ಬಿರುಗಾಳಿಗಳಲ್ಲಿ ವ್ಯತ್ಯಾಸವೆನಿಸದಿದ್ದರೆ
ತ್ವಚ ತೊಗಟೆಗಳಲ್ಲಿ ಭೇದವಾವುದಯ್ಯ ?
ಸ್ವತಂತ್ರಧೀರ ಸಿದ್ಧೇಶ್ವರಾ,
ಇಂದ್ರಿಯಗಳನರಿತು, ಇಂದ್ರಿಯಗಳಲ್ಲಿಯೇ ಬೆರೆತ
ಇಂದ್ರಿಯಗಳಿಗೆ ಇಂದ್ರಿಯನಾದ
ನಿನ್ನನೇ ಮರೆತರೆ
ನರಕುರಿಗಳಲ್ಲಿ
ಅಂತರವಾವುದಯ್ಯಾ ?

೮೦

ಬಗೆಯ ನಗರಿಯ ಕೊಳೆಗೇರಿಗಳನ್ನು ಕಿತ್ತು
ಹೊಸ ವಸತಿಗಳ ಕಟ್ಟಲೆಳಸಿದರೆ
ಮುಷ್ಕರ ಹೂಡುವರಯ್ಯಾ ಮೊದಲಿದ್ದವರು !
ಬುದ್ಧಿಯ ಬೆಂಗಾಡಿನ ಶುಷ್ಕತರುಗಳನ್ನು
ತರಿಯ ಹೋದರೆ ಶಿಕ್ಷೆಯ ಅಂಜಿಕೆ
ತೋರಿಸುವರಯ್ಯಾ ಕಾಡಿನ ಕಾವಲುಗಾರರು !
ಶಾಸ್ತ್ರದ ಮನೆಯ ಜೇಡ ಜಾಲ, ಇಲ್ಲಾಣಗಳನ್ನು
ತೆಗೆವೆವೆನೆ ಬಂಧನದ ಬೆದರಿಕೆ ಹಾಕುವರಯ್ಯಾ
ಸಂಪ್ರದಾಯದ ಸಿಪಾಯಿಗಳು !
ಸಮಾಜ ಸರಕಾರಗಳ ಕೆರೆಯ ಒಂಡು
ನೀರಿನ ಜೊಂಡು ತೆಗೆಯ ಹೋದರೆ
ದಂಡ ಹಾಕುವರಯ್ಯಾ ರೂಢಿಯ ರಕ್ಷಣಾಧಿಕಾರಿಗಳು !
ಬಂಧಿಸಲಿ, ದಂಡಿಸಲಿ, ಶಿಕ್ಷಿಸಲಿ, ಶಿಲುಬೆಗೇರಿಸಲಿ
ಇದ್ದುದರೊಡನೆ ಒಪ್ಪಂದ ಮಾಡಿಕೊಂಡು
ಹದ್ದಿನ ಬಾಳು ಬಾಳಲಾರೆನಯ್ಯಾ !
ಇರಬಾರದುದರೊಡನೆ ಸೆಣಸುತ್ತ,
ಇರಬೇಕಾದುದಕಾಗಿ ಹೆಣಗುತ್ತ
ಶುದ್ಧ ಸ್ನಿಗ್ಧ ಬುದ್ಧಿಯ ಬಾಳು
ಬಾಳುವೆನಯ್ಯಾ
ಸ್ವತಂತ್ರಧೀರ ಸಿದ್ಧೇಶ್ವರಾ !

೮೧

ಸ್ಥಿತ ಪ್ರಜ್ಞನಾಗಲು ಶಪಥವನ್ನೇನೂ ಮಾಡಿಲ್ಲ ;
ಅದು ನನಗೆ ನುಂಗಲಾಗದ ತುತ್ತು ತಂದೆ !
ನನಗಿರುವುದು ಸರಳ, ಸಾಧಾರಣ ಬಯಕೆ,
ಪ್ರಜ್ಞಾ ಪ್ರಭಾತದಲ್ಲಿ
ಹಕ್ಕಿಯಾಗಿ ಹಾಡುವ ಬಯಕೆ,
ಪ್ರಜ್ಞಾ ಪ್ರಪಾತದಲ್ಲಿ
ನೊರೆಯಾಗಿ ಹರಿಯುವ ಬಯಕೆ,
ಪ್ರಜ್ಞಾ ಪ್ರವಾಹದಲ್ಲಿ
ಮೀನಾಗಿ ಈಸುವ ಬಯಕೆ,
ಬಯಕೆ ಸೋತು ನಾಚಿದಾಗ, ಅದರ ಕೆನ್ನೆಯ ಕೆಂಪಾಗುವ ಬಯಕೆ !
ಬಯಕೆಯ ಬೆನ್ನೇರಿ ಬಯಕೆ, ಬಯಕೆಯ ಬೂದಿಯಿಂದ ಹೊಸ ಬಯಕೆ!
ಬಯಕೆಯ ಫೋನಿಕ್ಸ್
ಹುಟ್ಟಿ ಹುಟ್ಟಿ, ಸುಟ್ಟು ಸುಟ್ಟು ಸಾವುದ ನೋಡಿ
ಅಟ್ಟಹಾಸದಿಂದ ನಗುತ್ತಿರುವಿಯೇನಯ್ಯಾ
ಸ್ವತಂತ್ರಧೀರ ಸಿದ್ಧೇಶ್ವರಾ !

೮೨

ಸಹನಶೀಲತೆಗೊಮ್ಮೆ, ಸೃಜನಶೀಲತೆಗೊಮ್ಮೆ,
ಸುಗುಣಲೋಲತೆಗೊಮ್ಮೆ ಶರಣೆಂದೆ, ತಂದೆ !
ಭಾವಯಾಗಕ್ಕೊಮ್ಮೆ, ಬುದ್ಧಿಯೋಗಕ್ಕೊಮ್ಮೆ,
ಲಿಂಗಭೋಗೋಪಭೋಗಕ್ಕೊಮ್ಮೆ ಮಣಿದೆ, ತಂದೆ !
ಆತ್ಮಮಂಥನಕೊಮ್ಮೆ, ತತ್ತ್ವ ಚಿಂತನಕೊಮ್ಮೆ,
ಸರ್ವಸಾಂತ್ವನಕೊಮ್ಮೆ ಒಲಿದೆ, ವಿಭುವೆ !
ಸತ್ಯಶೋಧನೆಗೊಮ್ಮೆ, ನೀತಿಬೋಧನೆಗೊಮ್ಮೆ,
ಸುಗತಿ ಸಾಧನೆಗೊಮ್ಮೆ ಮನವಿತ್ತೆ, ಪ್ರಭುವೆ !
ಏನು ಏನೋ ತಿಳಿದು,
ಎಲ್ಲೆಲ್ಲಿಯೋ ಸುಳಿದು,
ಏನೇನನೋ ಒಲಿದು,
ಕೊನೆಗೆ ತಂದೆ
ನಿನ್ನ ಬಳಿಗೆ ಬಂದೆ !



ನೀನೆ ಗುರಿ,
ನೀನೆ ದಾರಿಯೆಂದೆ
ಸ್ವತಂತ್ರಧೀರ ಸಿದ್ಧೇಶ್ವರಾ !

೮೩

ಲೋಕ ನನ್ನನ್ನು ಮರೆಯಲಿ,
ಇನ್ನೇನನ್ನಾದರೂ ಮರೆಯಲಿ
ನಿನ್ನನ್ನು ಮರೆಯದಿರಲಿ, ನಿನ್ನನ್ನು ಮರೆಯದಿರಲಿ !
ಜನ ನನ್ನನ್ನು ಜರೆಯಲಿ,
ಇನ್ನೇನನ್ನಾದರೂ ಜರೆಯಲಿ
ನಿನ್ನನ್ನು ಜರೆಯದಿರಲಿ, ನಿನ್ನನ್ನು ಜರೆಯದಿರಲಿ !
ಜನಾಂಗ ನನ್ನನ್ನು ತೊರೆಯಲಿ,
ಇನ್ನೇನನ್ನಾದರೂ ತೊರೆಯಲಿ
ನಿನ್ನನ್ನು ತೊರೆಯದಿರಲಿ, ನಿನ್ನನ್ನು ತೊರೆಯದಿರಲಿ !
ಸ್ವತಂತ್ರಧೀರ ಸಿದ್ಧೇಶ್ವರಾ,
ಲೋಕ ವಿರೋಧಿಯ
ಲೋಕದವರು ಒಲಿಯಲಿ, ಬಿಡಲಿ
ಲೋಕೇಶ್ವರನಾದ ನಿನ್ನ ಒಲಿಯಲಯ್ಯಾ !

೮೪

ಮೈಯ ರಾಟಿಯ ತಿರುಹಿ
ಮೂಗಿನ ಕದಿರಿನಿಂದ
ಉಸಿರ ನೂಲು ನೂಲುತ್ತಿಹುದಯ್ಯ ಕಾಣದ ಕೈ !
ಆಯುಷ್ಯದ ಕುಕ್ಕಡಿ ತುಂಬುತ್ತ ನಡೆದಿದೆ ;
ತುಂಬುವ ಮೊದಲೇ ಎಳೆ ಹರಿವುದೋ
ಹಂಜಿ ಮುಗಿವುದೋ
ನೀನೇ ಬಲ್ಲೆಯಯ್ಯಾ, ಸ್ವತಂತ್ರಧೀರ ಸಿದ್ಧೇಶ್ವರಾ !

೮೫

ನಿನ್ನನರಿವುದೇ ಸ್ವರ್ಗ, ನಿನ್ನ ಮರೆವುದೇ ನರಕ ;
ನಿನ್ನ ನೆನಹೇ ಜೀವನ, ನಿನ್ನ ಮರಹೇ ಮರಣ ;
ನೀನೆಂಬುದೇ ಪುಣ್ಯ, ನಾನೆಂಬುದೇ ಪಾಪ ;

ಎಲ್ಲ ನಿನ್ನಿಂದ ಎಂಬುದೇ ಸತ್ಯ, ನನ್ನಿಂದ ಎಂಬುದೇ ಮಿಥ್ಯ ;
ನನಗಾಗಿ ಮಾಡಿದರೆ ಬಂಧನ, ನಿನಗಾಗಿ, ನಿನ್ನವರಿಗಾಗಿ ಮಾಡಿದರೆ
ನಿರ್ಬಂಧನ ;
ನೀನಲ್ಲದಿಲ್ಲವೆಂಬುದೇ ಜ್ಞಾನ, ಇದೆಯೆಂಬುದೇ ಅಜ್ಞಾನ ;
ನಿನ್ನನ್ನು ನಿನಗಾಗಿ ಪ್ರೀತಿಸುವುದು ಭಕ್ತಿ,
ನಿನ್ನನ್ನು ನನಗಾಗಿ ಪ್ರೀತಿಸುವುದು ರಕ್ತಿಯಯ್ಯ
ಸ್ವತಂತ್ರಧೀರ ಸಿದ್ಧೇಶ್ವರಾ !

೮೬

ಶಬ್ದ ಪಡೆದುದು ಸ್ವಲ್ಪ,
ಪಡೆಯದಿದ್ದುದು ಬಹಳವಯ್ಯಾ ;
ಅರ್ಥ ತೋರುವುದು ಸ್ವಲ್ಪ,
ತೋರದಿರುವುದು ಬಹಳವಯ್ಯಾ ;
ಜೀವಿ ಅರಿಯುವುದು ಸ್ವಲ್ಪ,
ಅರಿಯದಿರುವುದು ಬಹಳವಯ್ಯಾ ;
ನೀನು ಮಾತ್ರ ಬೇಡುವುದು ಸ್ವಲ್ಪ,
ನೀಡುವುದು ಬಹಳವಯ್ಯಾ
ಸ್ವತಂತ್ರಧೀರ ಸಿದ್ಧೇಶ್ವರಾ !

೮೭

ನರರಿಗೆ ಶರಣು ಹೋದರೆ
ಅದು ದಾಸ್ಯ ;
ನಿನಗೆ ಶರಣು ಹೋದರೆ
ಸ್ವಾತಂತ್ರ್ಯವಯ್ಯಾ ;
ನನ್ನಲ್ಲಿ ನಾನು ನೆಲೆಯೂರಿದರೆ
ಅದು ಬಂಧನ,
ನಿನ್ನಲ್ಲಿ ನೆಲೆಸಿ ಬದುಕಿದರೆ
ಬಿಡುಗಡೆಯಯ್ಯಾ ;
ನನಗಾಗಿ ನಾನು ಆರ್ಜಿಸಿದರೆ
ಅದು ಅಭಿಶಾಪ,
ನಿನಗಾಗಿ, ನಿನ್ನವರಿಗಾಗಿ ಗಳಿಸಿದರೆ
ಅದು ವರದಾನವಯ್ಯಾ ;



ನನ್ನಿಷ್ಟಕ್ಕೆ ನಾನೆಂದರೆ
ಅದು ಅಜ್ಞಾನ,
ನಿನ್ನಿಷ್ಟದಂತೆ ನಾನೆಂದರೆ
ಅದು ಸುಜ್ಞಾನವಯ್ಯಾ ;
ನನಗೆ ತೋರಿದಂತೆ ಬರೆದರೆ
ಅದು ರಚನೆ,
ನೀನು ತೋರಿಸಿದಂತೆ ಬರೆದರೆ
ಅದು ವಚನವಯ್ಯಾ ;
ಸ್ವತಂತ್ರಧೀರ ಸಿದ್ಧೇಶ್ವರಾ,
ನಿನ್ನಿಂದ ನಿನ್ನಲ್ಲಿ ನಿನಗಾಗಿ ಬದುಕಿ
ನನ್ನಿಯಾಗುವ ಗುಟ್ಟ ತಿಳಿಸಯ್ಯಾ !

೮೮

ತಲೆಯಲ್ಲಿರುವಾಗ ಸುಗಂಧದೆಣ್ಣೆ ಕೂದಲಿಗೆ,
ಕತ್ತರಿಸಿ ಚೆಲ್ಲಿದಾಗ ಕತ್ತೆ ಕೂಡ ಮೂಸವಯ್ಯಾ !
ಮರದಲ್ಲಿರುವಾಗ ಬೆಲೆ ರೆಂಬೆಗೆ,
ಮರವ ತೊರೆದಾಗ ಒಲೆಯೇ ಅದಕ್ಕೆ ನೆಲೆಯಯ್ಯಾ !
ಅಂಬುಧಿಯಲ್ಲಿರುವಾಗ ಅಲೆಗೊಂದು ಚೆಲುವು,
ಅಂಬುಧಿಯ ಹೊರಗೆ ಅಲೆ ಅಲೆಯಬಲ್ಲುದೇನಯ್ಯಾ ?
ಸಮಷ್ಟಿಯಲ್ಲಿರುವಾಗ ವ್ಯಷ್ಟಿಗೆ ಕಳೆ, ಬೆಲೆ,
ಸಮಷ್ಟಿಯನ್ನುಳಿದ ವ್ಯಷ್ಟಿಗೆಲ್ಲಿಯ ತುಷ್ಟಿಯಯ್ಯಾ ?
ಹಿಂಡನಲ್ಲಿರುವಾಗ, ಕುಂಜರಕ್ಕೆ ಭೀಮ ಬಲ,
ಹಿಂಡನಗಲಿದ ಹಸ್ತಿಗೆ ಬಲೆ, ಇಲ್ಲವೆ ಬಿಲವಯ್ಯಾ !
ಸ್ವತಂತ್ರಧೀರ ಸಿದ್ಧೇಶ್ವರಾ, ನಿನ್ನೊಳಿರೆ ನನಗೆ ಮಾನ್ಯತೆ-
ನಿನ್ನನುಳಿದೆನಗಾವ ಗಣ್ಯತೆಯಯ್ಯಾ !

೮೯

ಹೆಣೆದ ಹೂಗಳು ಹಲವಾದರೂ ಹಾರ ಒಂದೇ,
ಪವಣಿಸಿದ ಮಣಿಗಳು ಹಲವಾದರೂ ದಾರ ಒಂದೇ,
ಹಾಲು ಕರೆದ ಹಸುಗಳ ಬಣ್ಣ ಹಲವಾದರೂ ಕ್ಷೀರ ಒಂದೇ,
ಹೊತ್ತುದು ಹೊನ್ನಾಗಲಿ, ಮಣ್ಣಾಗಲಿ ಭಾರ ಒಂದೇ,

ಕಡಲಿನ ಹೆಸರೇನೇ ಇರಲಿ, ಕ್ಷಾರ ಒಂದೇ,
ಸ್ವತಂತ್ರಧೀರ ಸಿದ್ಧೇಶ್ವರಾ,
ನಿನ್ನನ್ನು ಪೂಜಿಸುವ, ಪ್ರಾರ್ಥಿಸುವ ಯಜಿಸುವ, ಭಜಿಸುವ
ರೀತಿ ನೂರಾದರೂ ಉದ್ಧಾರ ಒಂದೇ !

೯೦

ಬಲೆಯಲ್ಲಿ ಸಿಲುಕಿದ ಮೀನುಗಳಿಗಿಂತ
ಸಿಲುಕದ ಮೀನುಗಳು ಹೆಚ್ಚಿವೆಯಯ್ಯ ಕಡಲಿನಲ್ಲಿ ;
ಶಬ್ದಗಳಿಗೆ ನಿಲುಕಿದ ಜ್ಞಾನ ವಿಜ್ಞಾನಕ್ಕಿಂತ
ನಿಲುಕದುದು ಹೆಚ್ಚಿದೆಯಯ್ಯ ಪೊಡವಿಯಲ್ಲಿ ;
ದೇಹವಿಟ್ಟವರಿಗಿಂತ, ದೇಹ ತೊಟ್ಟವರಿಗಿಂತ,
ದೇಹ ತೊಡಲಿರುವವರು ಹೆಚ್ಚಿಗಿಹರಯ್ಯ ಭವಿಷ್ಯದ ಒಡಲಿನಲ್ಲಿ;
ಬರೆದ ಚಿತ್ರಗಳಿಗಿಂತ ಬರೆಯದ ಚಿತ್ರಗಳು,
ಕೊರೆದ ಮೂರ್ತಿಗಳಿಗಿಂತ ಕೊರೆಯದ ಮೂರ್ತಿಗಳು,
ಬರೆದ ಕೃತಿಗಳಿಗಿಂತ ಬರೆಯದ ಕೃತಿಗಳು
ಹೆಚ್ಚಿಗಿವೆಯಯ್ಯ ಸಾಧ್ಯತೆಯ ಗರ್ಭದಲ್ಲಿ ;
ಸ್ವತಂತ್ರಧೀರ ಸಿದ್ಧೇಶ್ವರಾ, ನಿನ್ನ ಬಗ್ಗೆ ಅರಿವ ವಿಷಯಗಳಿಗಿಂತ
ಅರಿಯದ ವಿಷಯಗಳು ಹೆಚ್ಚಿವೆಯಯ್ಯ ಜಿಜ್ಞಾಸೆಯ ಉದರದಲ್ಲಿ !

೯೧

ನನ್ನ ಬಾಳಿನ ಬಾನಿನಲ್ಲಿ
ಬುದ್ಧಿಯೇ ಭಾನು, ಶ್ರದ್ಧೆಯೇ ಶಶಿಯಾಗಲಯ್ಯಾ ;
ಶ್ರದ್ಧೆ ಸೂರ್ಯನಾಗಿ ಬುದ್ಧಿ ಚಂದ್ರನಾಗದಿರಲಯ್ಯಾ,
ಸ್ವತಂತ್ರಧೀರ ಸಿದ್ಧೇಶ್ವರಾ !

೯೨

ಏನೋ ಅನುಭವವಾಗುತ್ತದೆ ಒಮ್ಮೊಮ್ಮೆ,
ಅರ್ಥವಾಗುವುದಿಲ್ಲ ;
ಏನೇನೋ ಅರ್ಥವಾಗುತ್ತದೆ ಒಮ್ಮೊಮ್ಮೆ,
ಅನುಭವವಾಗುವುದಿಲ್ಲ !
ಅರ್ಥ ಅನುಭವಗಳ
ಸಮರಸೈಕ್ಯ ಮುಹೂರ್ತ
ಬರದೇನಯ್ಯ ಒಮ್ಮೆಯಾದರೂ ?



ಏನೋ ಹೊಳೆದಂತಾಗುತ್ತದೆ ಒಮ್ಮೊಮ್ಮೆ,
ತಿಳಿದಂತಾಗುವುದಿಲ್ಲ ;
ಎಂತೋ ತಿಳಿದಂತಾಗುತ್ತದೆ ಒಮ್ಮೊಮ್ಮೆ,
ಹೊಳೆದಂತಾಗುವುದಿಲ್ಲ !
ಹೊಳೆವು – ತಿಳಿವುಗಳ
ಪ್ರೇಮಪರಿಣಯದ ನಲ್‌ಗಳಿಗೆ
ಬಾರದೇನಯ್ಯ ಒಮ್ಮೆಯಾದರೂ ?
ಸ್ವತಂತ್ರಧೀರ ಸಿದ್ಧೇಶ್ವರಾ,
ಬಾಳ ಬಾನಿನಲ್ಲಿ
ಏಕ ಕಾಲಕ್ಕೆ ಬೆಳಗರೇನಯ್ಯ
ಬುದ್ಧಿಯ ರವಿ ಬಗೆಯ ಶಶಿ
ಒಮ್ಮೆಯಾದರೂ ?

೯೩

ನೆನಪಿನ ನೆಲದಲ್ಲಿ ಹೂತ ಹೂಳಲುಗಳ
ಅಗಿದು ತೆಗೆಯಲೆ,
ಹೊಸ ನೆನಪುಗಳ ಹೊಲಗದ್ದೆಗಳನ್ನು
ಬಿತ್ತಿ ಬೆಳೆಯಲೆ ?
ಮರಹಿನ ಮರುಭೂಮಿಯಲ್ಲಿ
ಓಯಸಿಸ್ ಹುಡುಕುತ್ತ ಹೊರಡಲೆ,
ಅರಿವಿನ ಎಚ್ಚರದ ತೊರೆಯಲ್ಲಿ
ಈಸು ಬೀಳಲೆ ?
ಅಸಾಧ್ಯದ ಶಿಖರಾರೋಹಣಕ್ಕೆ ಯತ್ನಿಸಲೆ,
ಸಾಧ್ಯದ ತಪ್ಪಲಿನಲ್ಲಿಯೇ ಸುತ್ತಿ ಸುಳಿಯಲೆ ?
ಸ್ವತಂತ್ರಧೀರ ಸಿದ್ಧೇಶ್ವರಾ,
ನಾನು ನಾನಾಗುವಂತೆ ಹವಣಿಸಲೆ,
ನಾನು ನೀನಾಗಲು ಹಂಬಲಿಸಲೆ ?

೯೪

ಇದಿರು ಕಾಣುವವರೆಗೆ
ಕುರುಹಿಗೆ ಕೈಮುಗಿದೆ ;

ಕಾಣದಾದಾಗ
ನನಗೆ ನಾ ನಮಸ್ಕರಿಸಿದೆ
ಸ್ವತಂತ್ರಧೀರ ಸಿದ್ಧೇಶ್ವರಾ !

೯೫

ಬದುಕುವಾಸೆಯನಿತೇ ಘನ ಮರಣಭೀತಿ,
ಸ್ವಸುಖದಾಸೆಯನಿತೇ ಗಾಢ ಒಲಿದವರ ಪ್ರೀತಿ,
ನಿಂತ ಎತ್ತರದಷ್ಟೇ ದೂರ ನೋಟದ ಹರಹು,
ಆಸಕ್ತಿಯಷ್ಟೇ ಅಗಲ ಅರಿವವನ ಅರುಹು,
ಮಾಡಿದನಿತೂ ಹಿರಿದು ಮಾಡುವ ಶಕ್ತಿ,
ಬೇಡಿದನಿತೂ ಕಿರಿದು ಮಾಡಿದ ಭಕ್ತಿ,
ನೋಡಿದನಿತೂ ಹೊಸತು ನಿಜವಾದ ಚೆಲುವು,
ಕೂಡಿದನಿತೂ ಹೆಚ್ಚು ನಿಜವಾದ ಒಲವು,
ಬಚ್ಚಿಟ್ಟನಿತೂ ವ್ಯರ್ಥ ವಿತ್ತ, ಹೊತ್ತಗೆ,
ಬಳಸಿದಷ್ಟೂ ಬೆಳಸು ಬಾಳ ಬುತ್ತಿಗೆ
ಸ್ವತಂತ್ರಧೀರ ಸಿದ್ಧೇಶ್ವರಾ,
ನಿಲುಕಿದಷ್ಟೂ ಆಚೆ ನಿನ್ನ ನಿಲವು,
ಸೋತನಿತೂ ಗೆಲ್ಲಲಿದೆ ನನ್ನ ಒಲವು !

೯೬

ಅಪರಾಧೀ ಅಂತಃಸಾಕ್ಷಿಯಿರೆ
ಕಾಯವೇ ಕಾರಾಗಾರ,
ಇಲ್ಲದಿರೆ, ಶರೀರವೇ ಶ್ರೀಗಿರಿ ನೋಡಾ,
ಸ್ವತಂತ್ರಧೀರ ಸಿದ್ಧೇಶ್ವರಾ !

೯೭

ಸಂಸ್ಕರಿಸಿದಂತೆ ಬುದ್ಧಿ, ಸಾಧನೆಯಂತೆ ಸಿದ್ಧಿ,
ದುಡಿವ ದುಡ್ಡಿನನಿತು ಆಯ, ಪ್ರಾರಂಭದಂತೆ ಮುಕ್ತಾಯ,
ಬಿತ್ತಿದಂತೆ ಬೆಳೆ, ಬಯಸಿದಂತೆ ಬಾಳು,
ಭೂಮಿಯಂತೆ ಜಲ, ಮರದಂತೆ ಫಲ,
ಕಟ್ಟಿದಂತೆ ಬುತ್ತಿ, ಬೆಳೆಸಿದಂತೆ ನೆತ್ತಿ,



ಮನಸಿನಂತೆ ಮಾರ್ಗ, ಕಲ್ಪಿಸಿದಂತೆ ಸ್ವರ್ಗ,
ಹಾಲಿನಂತೆ ಹವ್ಯ, ಕಾಣ್ಕೆಯಂತೆ ಕಾವ್ಯ,
ಮುತ್ತಿನಂತೆ ಮಾಲೆ, ಗುರುವಿನಂತೆ ಶಾಲೆ,
ವಿಷಯದಂತೆ ವಾದ, ಅರ್ಥವಿಸಿದಂತೆ ವೇದ,
ಅಗತ್ಯದಂತೆ ಆಸೆ, ಬಳಸಿದಂತೆ ಭಾಷೆ,
ನಾಗರಿಕರಂತೆ ಸರಕಾರ, ಗುರಿಯಂತೆ ಗುರಿಕಾರ,
ಸ್ವತಂತ್ರಧೀರ ಸಿದ್ಧೇಶ್ವರಾ,
ನಿನ್ನಂತೆ ನಾನು, ನನ್ನಂತೆ ನೀನು !

೯೮

ತೆರೆಯೊಂದರಿಂದ ತೊರೆಯಾಗದು ನಿಜ ;
ಆದರೆ, ತೆರೆಯಿಲ್ಲದ ತೊರೆಯೂ ಉಂಟೇನಯ್ಯಾ ?
ತೊರೆಯಲ್ಲಿ ಮಾತ್ರ ತೆರೆಗೆ ಅಸ್ತಿತ್ವ,
ತೆರೆಯಿಂದ ತೊರೆಗೆ ವಹನತ್ವ,
ಎರಡರೊಳೂ ಎರಡೂ ಇವೆ – ದ್ವಿತ್ವ ಏಕತ್ವ !
ನಾನೆ ತೆರೆ, ನೀನೆ ತೊರೆ,
ಸ್ವತಂತ್ರಧೀರ ಸಿದ್ಧೇಶ್ವರಾ !

೯೯

ಜೀವನ ಮರಣಗಳ ನಡುವಣ ಅಂತರ
ಒಂದು ಉಸಿರು ;
ಸ್ಮೃತಿ ವಿಸ್ಮೃತಿಗಳ ನಡುವಣ ಅಂತರ
ಒಂದು ನೆನಹು ;
ಭೂತ ಭವಿತವ್ಯಗಳ ನಡುವಣ ಅಂತರ
ಒಂದು ನಿಮಿಷ ;
ಸುರೂಪ ಕುರೂಪಗಳ ನಡುವಣ ಅಂತರ
ಒಂದು ನೋಟ ;
ಅಲ್ಪಕೃತಿ ಮಹಾಕೃತಿಗಳ ನಡುವಣ ಅಂತರ
ಒಂದು ಕಾಣ್ಕೆ ;
ಸ್ವತಂತ್ರಧೀರ ಸಿದ್ಧೇಶ್ವರಾ,
ನನ್ನ ನಿನ್ನ ನಡುವಣ ಅಂತರ

ಒಂದು ಅಹಮಿಕೆ !

೧೦೦

ವಿದ್ಯೆ ಬಂತು, ವಿನಯ ಹೋಯ್ತು ;
ಬುದ್ಧಿ ಬಂತು, ಶ್ರದ್ಧೆ ಹೋಯ್ತು ;
ಶ್ರದ್ಧೆ ಬಂತು, ವಿವೇಚನೆ ಹೋಯ್ತು ;
ಸಮೃದ್ಧಿ ಬಂತು, ಸಂಸ್ಕೃತಿ ಹೋಯ್ತು ;
ವಿಜ್ಞಾನ ಬಂತು, ಸಮಾಧಾನ ಹೋಯ್ತು ;
ಶರೀರ ಸ್ವಾಸ್ಥ್ಯ ಬಂತು, ಚಿತ್ತ ಸ್ವಾಸ್ಥ್ಯ ಹೋಯ್ತು ;
ದೀರ್ಘಾಯುಷ್ಯ ಬಂತು, ಜೀವನ ಸ್ವಾರಸ್ಯ ಹೋಯ್ತು ;
ಬೋಧನೆ ಬಂತು, ಸಾಧನೆ ಹೋಯ್ತು ;
ಮಾತು ಬಂತು, ಕೃತಿಯು ಹೋಯ್ತು ;
ಜಾತಿ ಬಂತು, ಪ್ರೀತಿ ಹೋಯ್ತು ;
ಸ್ವಾತಂತ್ರ್ಯ ಬಂತು, ಸೌಜನ್ಯ ಹೋಯ್ತು ;
ಸಿದ್ಧಯ್ಯ ಪುರಾಣಿಕ ಬಂದ,
ಸ್ವತಂತ್ರಧೀರ ಸಿದ್ಧೇಶ್ವರ ಹೋದ !

೧೦೧

ಹೆಣವಾದ ಮೇಲೆ ಹೋಗಲಿ,
ಬದುಕಿರುವಾಗಲೂ
ಒಂದು ಅಡಿಕೆಗೆ ಕೊಳ್ಳುವವರಿಲ್ಲವಯ್ಯ ಎನ್ನನ್ನು !
ಇಂಥ ನನ್ನನೇ ಕೊಟ್ಟು
ನಿನ್ನನೇ ಕೊಳ್ಳುವೆನಯ್ಯಾ
ಸ್ವತಂತ್ರಧೀರ ಸಿದ್ಧೇಶ್ವರಾ !

೧೦೨

ಹಲವು ಮಸಿಗಳ ಹೀರಿ ಹಣ್ಣಾದ
ಒತ್ತು ಕರಡು ನಾನಯ್ಯ !
ನಿನ್ನಡಿಯ ಮುದ್ರೆ ಧರಿಸೆ
ಎಡೆಯೂ ಇಲ್ಲ, ದೃಢವೂ ಇಲ್ಲ ಇಲ್ಲಿ !
ಹಲವು ಬಣ್ಣಗಳ ನುಂಗಿಯೂ ಬಣ್ಣಗೆಟ್ಟ
ಈ ಬಡ ಒತ್ತು ಕರಡು
ಹರಳಯ್ಯನ ತೊಡೆಯ ಚರ್ಮವಾಗಬಲ್ಲುದೇನಯ್ಯಾ
ಸ್ವತಂತ್ರಧೀರ ಸಿದ್ಧೇಶ್ವರಾ ?



೧೦೩

ಇಂದ್ರಿಯದಿಂದ ಇಂದ್ರಿಯಕ್ಕೆ ಹರಿದಾಡುವ
ಮನದ ಪಾದರಸವೇ,
ಮುಟ್ಟಿದರೆ ಉರುಳುವ
ತಟ್ಟಿದರೆ ಹೊರಳುವ
ಚಿವುಟಿದರೆ ಕೆರಳುವ
ನಿಲುಕಿದರೆ ಸಿಲುಕದ ಪಾದರಸವೇ
ಸ್ವತಂತ್ರಧೀರ ಸಿದ್ಧೇಶ್ವರನ
ಸಹಸ್ರನಾಮಗಳ ಸಹಸ್ರ ಪುಟ ಹಾಕಿ
ಸಹಸ್ರ ಪುಟಿ ಭಸ್ಮವ ಮಾಡಿ
ನಿನ್ನ ಸೇವಿಸುವೆ
ನಿನ್ನಿಂದಲೇ ನಿನ್ನ ಜೈಸುವೆ !

೧೦೪

ಕವನಕ್ಕೆ ಕಾರಣ ನಾನು ತಾನೆಂದು
ಕಾಗದ ಮಸಿ ಕಡಿದಾಡಿದರೆ
ನಗದೇನು ಮಾಡುವನು ಕವಿ ?
ಮೂರ್ತಿಯ ರೂವಾರಿ ನಾನು ತಾನೆಂದು
ಕಲ್ಲು ಉಳಿ ಕಾದಾಡಿದರೆ
ನಗದೇನು ಮಾಡುವನು ಶಿಲ್ಪಿ ?
ಚಿತ್ರಕ್ಕೆ ಕರ್ತೃ ನಾನು ತಾನೆಂದು
ಬಣ್ಣ ಕುಂಚ ಬಡಿದಾಡಿದರೆ
ನಗದೇನು ಮಾಡುವನು ಚಿತ್ರಕಾರ ?
ಜಗದಾಗುಹೋಗುಗಳಿಗೆ ಕಾರಣ ನಾನು ತಾನೆಂದು
ಜಡ ಮತಿಗಳು ಹೊಡೆದಾಡಿದರೆ
ನಗದೇನು ಮಾಡುವನು ಸ್ವತಂತ್ರಧೀರ ಸಿದ್ಧೇಶ್ವರ ?

೧೦೫

ಕಿರಿಯ ನದಿ ಶರಾವತಿ ಕಾಳಿಗಳು ; ಆದರೆ,
ಅವು ನೀಡಿರುವ ನೀಡಲಿರುವ ವಿದ್ಯುಚ್ಛಕ್ತಿ ಕಿರಿದೇನಯ್ಯಾ ?
ಕಿರಿಯ ವಿಮಾನ 'ನ್ಯಾಟ್'; ಆದರೆ,
ಅದರ ಯುದ್ಧೋಪಯೋಗಿತ್ವ ಕಿರಿದೇನಯ್ಯಾ ?
ಕಿರಿಯ ಆಳು ಲಾಲಬಹಾದ್ದೂರಜಿ ; ಆದರೆ,
ಅವರ ಶೀಲ ಶಕ್ತಿ ಕಿರಿದೇನಯ್ಯಾ ?
ಕಿರಿಯ ಉಪನಿಷತ್ತು ಈಶೋಪನಿಷತ್ತು ; ಆದರೆ,
ಅದರ ಅರ್ಥ ಪ್ರಪಂಚ ಕಿರಿದೇನಯ್ಯಾ ?
ಸ್ವತಂತ್ರಧೀರ ಸಿದ್ಧೇಶ್ವರಾ,
ಕಿರಿಯರಲ್ಲಿ ಕಿರಿಯ ನಾನು
ಕಿರಿತನವೇ ನಾನು ! ಆದರೆ,
ನಿನ್ನತನಕ್ಕೆ ನೆಲೆಯಾದ
ನನ್ನತನ ಕಿರಿದೇನಯ್ಯಾ ?

೧೦೬

ಜಡವು ಅಜಡತೆಯನ್ನು ಪಡೆವ ಪ್ರಮಾಣದಲ್ಲಿಯೇ
ಚೇತನಕ್ಕೆ ಸಮೀಪವಾಗುವುದಯ್ಯ ;
ಚೇತನವು ಚಿಂತನವನ್ನು ಪಡೆವ ಪ್ರಮಾಣದಲ್ಲಿಯೇ
ಚಿದ್ವಿಲಾಸಕ್ಕೆ ಸಮೀಪವಾಗುವುದಯ್ಯ ;
ಚಿದ್ವಿಲಾಸವು ಅನುಭಾವಕ್ಕೆ ಒಲಿದ ಪ್ರಮಾಣದಲ್ಲಿಯೇ
ಆನಂದಕ್ಕೆ ಹತ್ತಿರವಾಗುವುದಯ್ಯ ;
ನನ್ನತನ ತನ್ನತನ ಅಳವಡಿಸಿಕೊಂಡಷ್ಟೂ
ನಿನ್ನತನಕ್ಕೆ ಹತ್ತಿರವಾಗುವುದಯ್ಯ
ಸ್ವತಂತ್ರಧೀರ ಸಿದ್ಧೇಶ್ವರಾ !

೧೦೭

ಅದಿರಿನಲ್ಲಿ ಚಿನ್ನದೊಡನೆ ಮಣ್ಣಿದೆಯೆಂದು
ಅಲ್ಲಗಳೆಯಬಹುದೆ ಅದನ್ನು ?



ಹಣ್ಣಿನಲ್ಲಿ ರಸದೊಡನೆ ಗೊರಟು ಸಿಪ್ಪೆಗಳಿವೆಯೆಂದು
ಬೀಳುಗಳೆಯಬಹುದೆ ಅದನ್ನು ?
ಸ್ವತಂತ್ರಧೀರ ಸಿದ್ಧೇಶ್ವರಾ, ಹಲವು ದೋಷಗಳಿವೆಯೆಂದು
ಉಪೇಕ್ಷಿಸಬಹುದೆ ನೀನು ನನ್ನನ್ನು ?

೧೦೮

ಕತ್ತಲೆ ಗಾಢವಾದಷ್ಟೂ ಬೆಳಕಿನ ಗಾಡಿ ಹೆಚ್ಚುವುದಯ್ಯಾ ;
ಮೋಡ ಕಪ್ಪಾದಷ್ಟೂ ಅಪ್ಪುವಿನ ಅಂಶ ಹೆಚ್ಚುವುದಯ್ಯ ;
ಚಂದ್ರನ ಧವಳಿಮೆ ಹೆಚ್ಚಿದಷ್ಟೂ ನಭದ ನೀಲಿಮೆ ಹೆಚ್ಚುವುದಯ್ಯ ;
ರೆಪ್ಪೆಯ ಕಪ್ಪು ಹೆಚ್ಚಿದಷ್ಟೂ ಕಂಗಳ ಕಳೆ ಹೆಚ್ಚುವುದಯ್ಯ ;
ಹಸಿವೆ ಹೆಚ್ಚಿದಷ್ಟೂ ಅಶನದ ರುಚಿ ಹೆಚ್ಚುವುದಯ್ಯ ;
ದಾಸ್ಯ ಹೆಚ್ಚಿದಷ್ಟೂ ಬಿಡುಗಡೆಯ ಬೆಲೆ ಹೆಚ್ಚುವುದಯ್ಯ ;
ಅಪಘಾತಗಳು ಹೆಚ್ಚಿದಷ್ಟೂ ಸಂಚಾರ ಸಂಹಿತೆಯ ಮಹತ್ವ
ಹೆಚ್ಚುವುದಯ್ಯ ;
ಅರಾಜಕತೆ ಹೆಚ್ಚಿದಷ್ಟೂ ಅನುಶಾಸನದ ಹಿರಿಮೆ ಹೆಚ್ಚುವುದಯ್ಯ ;
ಮೋಸ ಹೆಚ್ಚಿದಷ್ಟೂ ಪ್ರಾಮಾಣಿಕತೆಯ ಗರಿಮೆ ಹೆಚ್ಚುವುದಯ್ಯ ;
ಸ್ವತಂತ್ರಧೀರ ಸಿದ್ಧೇಶ್ವರಾ, ನನ್ನ ತಪ್ಪು ಹೆಚ್ಚಿದಷ್ಟೂ
ನಿನ್ನ ಕ್ಷಮೆ ಹೆಚ್ಚಲಯ್ಯ !

೧೦೯

ಮಗು ಮೈ ಮಣ್ಣು ಮಾಡಿಕೊಂಡಿದೆಯೆಂದು
ತಾಯಿ ತಿರಸ್ಕರಿಸುವಳೇನಯ್ಯ ?
ತೊಳೆದು ಮುತ್ತಿಡುವಳಯ್ಯ !
ಶಿಷ್ಯ ತಪ್ಪು ಬರೆದನೆಂದು
ಗುರು ತಿರಸ್ಕರಿಸುವನೇನಯ್ಯ ?
ತಿದ್ದಿ ಸರಿಪಡಿಸುವನಯ್ಯ !
ಸಸಿ ಡೊಂಕಾಗಿ ಬೆಳೆಯಿತೆಂದು
ತೋಟಿಗ ತಿರಸ್ಕರಿಸುವನೇನಯ್ಯ ?
ಸೆಡೆ ಕಟ್ಟಿ ಸಸಿನಗೊಳಿಸುವನಯ್ಯ !
ಪ್ರಯೋಗ ವಿಫಲವಾಯಿತೆಂದು ವಿಜ್ಞಾನಿ
ಪ್ರಯೋಗಶಾಲೆಯನ್ನೇ ತಿರಸ್ಕರಿಸುವನೇನಯ್ಯ ?
ಹೊಸ ಪ್ರಯೋಗ ಹೂಡುವನಯ್ಯ !
ಸ್ವತಂತ್ರಧೀರ ಸಿದ್ಧೇಶ್ವರಾ, ನಾನು ಕೆಟ್ಟೆನೆಂದು
ನೀನು ಸಿಟ್ಟಾಗಬಹುದೇನಯ್ಯ ?

ತಿದ್ದಿ ಉದ್ಧರಿಸಯ್ಯ !

೧೧೦

ಗಂಡ ಬಯಸಿದುದನ್ನೇ ಹೆಂಡತಿ ಹೇಳದೆಯೆ ಮಾಡಿದಾಗ
ಆ ಅಡುಗೆಯ ರುಚಿಯೆಷ್ಟು ? !
ಸತಿ ಬಯಸಿದುದನ್ನೇ ಪತಿ ಹೇಳದೆಯೆ ತಂದಾಗ
ಆ ಒಡವೆಯ ಅಮೂಲ್ಯತೆಯೆಷ್ಟು ? !
ಕವಿ ಕೋರಿದ ಶಬ್ದವೇ ಹಾರಿ ಬಂದ ಹಾಳೆಯಲ್ಲಿ ಸಿಕ್ಕಾಗ
ಆ ಪದವೀವ ಮುದವೆನಿತು ? !
ಶಿಲ್ಪಿ ಬಯಸಿದ ಶಿಲೆಯೇ ಪ್ರಯತ್ನವಿಲ್ಲದೆಯೆ ಪದತಲದಿ ಸಿಕ್ಕಾಗ
ಆ ಶಿಲೆಯ ಬೆಲೆಯೆನಿತು ? !
ಬೇಕೆನಿಸಿದ್ದ ವಸ್ತುವೇ ಮುಯ್ಯವಾಗಿ ಬಂದಾಗ
ಆ ಮುಯ್ಯದ ಮೇಲ್ಮೆಯೆನಿತು ? !
ಸ್ವತಂತ್ರಧೀರ ಸಿದ್ಧೇಶ್ವರಾ,
ನಾ ಬೇಡುವ ಮುನ್ನವೆ ನೀ ಕರುಣಿಸಿದಾಗ
ಆ ಕರುಣೆಯ ಪರಮತೆಯೆನಿತು ? !

೧೧೧

ನೀನು ಕೊಡಲಿಚ್ಛಿಸಿದಾಗ ತಡೆಯ ಬಲ್ಲವರಕಾಣೆ ;
ಹಾರುವುವು ಅಡ್ಡಬರುವ ಅಡ್ಡಿಯ ಗುಡ್ಡಗಳು ಕಡ್ಡಿಯಂತೆ ;
ನಿನಗೆ ಕೊಡಲಿಷ್ಟವಿಲ್ಲದಾಗ ಕೊಡಬಲ್ಲವರ ಕಾಣೆ ;
ಮುಗ್ಗರಿಸುವುವು ಪ್ರಯತ್ನ-ಪುಂಗವಗಳು ತಗ್ಗು ಒಗ್ಗಾಲಿಗಳಿಲ್ಲದೆಯೆ !
ಕೊಡು, ಬಿಡು, ಕೈ ಬಿಡಬೇಡವಯ್ಯ
ಸ್ವತಂತ್ರಧೀರ ಸಿದ್ಧೇಶ್ವರಾ !

೧೧೨

ನೀನು ಕಾಯಲೆಳಸಿದರೆ ಕೊಲ್ಲುವವರಾರಯ್ಯ ?
ನೀನು ಕೊಲ್ಲಬಯಸಿದರೆ ಕಾಯುವವರಾರಯ್ಯ ?
ನೀನು ಎತ್ತಿ ಹಿಡಿದರೆ ಇಳಿಸುವವರಾರಯ್ಯ ?
ನೀನು ಕೆಳಗೊತ್ತಿದರೆ ಮೇಲೆತ್ತುವವರಾರಯ್ಯ ?
ನೀನು ಕ್ಷಮಿಸಿದರೆ ಶಿಕ್ಷಿಸುವವರಾರಯ್ಯ ?
ನೀನು ಶಿಕ್ಷಿಸಲೆಳಸಿದರೆ ರಕ್ಷಿಸುವವರಾರಯ್ಯ ?



ಸ್ವತಂತ್ರಧೀರ ಸಿದ್ಧೇಶ್ವರಾ, ರಕ್ಷಿಸು, ಇಲ್ಲವೆ ಶಿಕ್ಷಿಸು
ಕೃಪಾಕಟಾಕ್ಷದಿಂದ ವೀಕ್ಷಿಸಯ್ಯಾ !

೧೧೩

ಪ್ರಪಂಚದ ಆಹಾರವನ್ನೆಲ್ಲ ಉಣಿಸಿದರೂ
ಹಿಂಗದ ಹಸಿವೆಯಿಂದ ಬಳಲುತ್ತಿಹೆನಯ್ಯ !
ಪಂಚನದಿಗಳ ನೀರೆಲ್ಲವನ್ನೂ ಕುಡಿಸಿದರೂ
ಆರದ ನೀರಡಿಕೆಯಿಂದ ಅಳಲುತ್ತಿಹೆನಯ್ಯ !
ಸಪ್ತ ಶರಧಿಗಳ ನೀರ ಧಾರಾಕಾರವಾಗಿ ಸುರಿದರೂ
ನಂದದ ಬೆಂಕಿಯಿಂದ ನರಳುತ್ತಿಹೆನಯ್ಯ !
ಸಾವಿರ ಸೂರ್ಯರು ಒಮ್ಮೆಗೇ ಉದಿಸಿದರೂ
ತೊಲಗದ ತಮದಿಂದ ತೊಳಲುತ್ತಿಹೆನಯ್ಯ !
ನೀನೊಮ್ಮೆ ಒಲಿದರೆ ಸಾಕು
ಓಡುವುವು ಹಿಂಗದ ಹಸಿವೆ, ಆರದ ನೀರಡಿಕೆ,
ನಂದದ ಬೆಂಕಿ, ತೊಲಗದ ತಮಗಳು !
ಒಮ್ಮೆ ಒಲಿಯಯ್ಯಾ, ಒಂದೇ ಸಲ ಒಲಿಯಯ್ಯಾ-
ಸ್ವತಂತ್ರಧೀರ ಸಿದ್ಧೇಶ್ವರಾ !

೧೧೪

ಸಾವಿರ ಸಾವಿರ ಸಿಹಿ ನೀರಿನ ಹೊಳೆ ಹಳ್ಳಗಳು ಸೇರಿದರೂ
ಒಡಲ ಉಪ್ಪನ್ನು ಬಿಡದ ಕಡಲಿನಂತಾದುದಯ್ಯ
ನನ್ನ ಮನ !
ಲಕ್ಷ ಲಕ್ಷ ನಕ್ಷತ್ರಗಳು ಮಿನುಗಿದರೂ
ಕಾಳಿಮೆಯನ್ನು ಕಳೆದುಕೊಳ್ಳದ ಕರಾಳ ರಾತ್ರಿಯಂತಾದುದಯ್ಯ
ನನ್ನ ಬುದ್ಧಿ ;
ಹಗಲಿರುಳು ಹಿಮದ ಹೊದಿಕೆಯಲ್ಲಿದ್ದರೂ
ನೆನೆದು ಮೃದುವಾಗದ ಹಿಮಗಿರಿ ಶಿಖರದಂತಾದುದಯ್ಯ
ನನ್ನ ಅಹಂಕಾರ ;
ಸ್ವತಂತ್ರಧೀರ ಸಿದ್ಧೇಶ್ವರಾ,
ಆಯುಷ್ಯವನ್ನೆಲ್ಲ ಅರ್ಚನೆಯಲ್ಲಿ ಕಳೆದರೂ
ಅಳಿಯಾಸೆ ತೊಲಗದ ಅರ್ಚಕನಂತಾದುದಯ್ಯ
ನನ್ನ ಚಿತ್ತ !

೧೧೫

ಕಡು ಹಸಿದು
ಕಳ್ಳಿಯ ಕುಡಿ ಕಡಿದಂತಾಯಿತ್ತಯ್ಯ
ಎನ್ನ ಯುಕ್ತಿ !
ಮುಖವ ಭಂಗಿಸಲು
ಮೂಗು ಕೊಯ್ದು ಕೊಂಡಂತಾಯಿತ್ತಯ್ಯ
ನನ್ನ ಶಕ್ತಿ !
ನೀರಡಿಸಿ ಬಾಯಾರಿ
ಸುಣ್ಣದ ನೀರನ್ನು ಕುಡಿದಂತಾಯಿತ್ತಯ್ಯ
ನನ್ನ ಭಕ್ತಿ !
ಬಾಗಿಲವ ಮುಚ್ಚಿ
ಕಳ್ಳಗಿಂಡಿಯ ಹುಡುಕಿದಂತಾಯಿತ್ತಯ್ಯ
ನನ್ನ ವಿರಕ್ತಿ !
ಸ್ವತಂತ್ರಧೀರ ಸಿದ್ಧೇಶ್ವರಾ,
ಕದಿಯುವುದ ತಪ್ಪಿಸಲೆಂದು
ಕೈಯ ಕಡಿದುಕೊಂಡಂತಾದುದಯ್ಯ
ನನ್ನ ಮುಕ್ತಿ !

೧೧೬

ಹಲವು ಕಸಿಗಳ ಹೊಂದಿ ಬೆಳೆದ ಮನಸಿನ ಮರವು
ಸುಗಂಧ ದುರ್ಗಂಧ ನಿರ್ಗಂಧ ಕುಸುಮಗಳ
ಒಮ್ಮೆಗೇ ಬಿಟ್ಟರೆ ಸೋಜಿಗವೆಲ್ಲಿಯದಯ್ಯ ?
ಹಲವು ಬಣ್ಣದ ಗಾಜ ಪಡೆದ ಬುದ್ಧಿಯ ದೀಪ
ಬಹು ಬಣ್ಣಗಳ ಬೆಳಕ ಬೀರಿದರೆ
ಬೆರಗೆಲ್ಲಿಯದಯ್ಯ ?
ಹಲವು ರೂಪಗಳ ಹೆರುವ ಅಹಂಕಾರದ ಊಸರವಳ್ಳಿ
ಹೊತ್ತಿಗೊಂದು ಪರಿಯಾಗಿ ಕಾಣಿಸಿಕೊಂಡರೆ
ಅಚ್ಚರಿಯೆಲ್ಲಿಯದಯ್ಯ ?
ಸ್ವತಂತ್ರಧೀರ ಸಿದ್ಧೇಶ್ವರಾ,
ಹಲವು ಪದರಿನ ಚಿತ್ತ
ಪದರು ಪದರಿಗೆ
ಬೇರೆ ಚಿತ್ರವನೆ ತೋರಿದರೆ
ವಿಚಿತ್ರವೆಲ್ಲಿಯದಯ್ಯ ?



೧೧೭

ನಾನು ನೆಯ್ದ ಬಲೆಯಲ್ಲಿ ನಾನೇ ಸಿಲುಕುವುದಾದರೆ
ಆ ಬಲೆಯ ನೆಯ್ಯದಿರುವುದೇ ಮೇಲಯ್ಯ !
ನಾನು ನಿರ್ಮಿಸಿದ ಸಿದ್ಧಾಂತ ಪಂಜರದಲ್ಲಿ ನಾನೇ ಬಂಧಿತನ
ಾಗುವುದಾದರೆ
ಆ ಪಂಜರವ ನಿರ್ಮಿಸದಿರುವುದೇ ಲೇಸಯ್ಯ !
ಸ್ವತಂತ್ರಧೀರ ಸಿದ್ಧೇಶ್ವರಾ,
ನನ್ನ ಹಮ್ಮಿನ ಭಕ್ತಿ ಜ್ಞಾನ ವೈರಾಗ್ಯಗಳು
ನನ್ನನೇ ಕಟ್ಟಿ ಕೆಡಹುವುದಾದರೆ
ಇವುಗಳಿಗೆ ಒಳಗಾಗದಿರುವುದೇ ಒಳಿತಯ್ಯ !

೧೧೮

ಕ್ರೀಡೆಯಿಲ್ಲದ ಜೀವನ ಕೀಡೆ ತಿಂದ ಹಣ್ಣಯ್ಯ ;
ಪ್ರೀತಿಯಿಲ್ಲದ ಜೀವನ ನಾತವಿಲ್ಲದ ಹೂವಯ್ಯ ;
ಗುರಿಯಿಲ್ಲದ ಜೀವನ ಗರಿಯಿಲ್ಲದ ಹಕ್ಕಿಯಯ್ಯ ;
ಶೀಲವಿಲ್ಲದ ಜೀವನ ಶೀರ್ಣಮೂಲ ತರುಮರವಯ್ಯ ;
ಸ್ನೇಹವಿಲ್ಲದ ಜೀವನ ಸ್ನೇಹವಿಲ್ಲದ ಸೊಡರಯ್ಯ ;
ವಿನೋದವಿಲ್ಲದ ಜೀವನ ಸುನಾದವಿಲ್ಲದ ಸನಾದಿಯಯ್ಯ ;
ಸ್ವತಂತ್ರಧೀರ ಸಿದ್ಧೇಶ್ವರಾ,
ನಿನ್ನ ಮರೆತ ಜೀವನ ನೀರು ಬರತ ಸರೋವರವಯ್ಯ !

೧೧೯

ಹಸುಗೂಸುಗಳ ನಸು ನಗೆ
ಶಿಶು ಚೋರರಿಗೆ
ಹಿಡಿಸುವುದೇನಯ್ಯ ?

ಶಿಲಾಲಿಪಿಗಳ ಮಹತ್ವ
ಇತಿಹಾಸ ವಿರೋಧಿಗೆ
ತಿಳಿವುದೇನಯ್ಯ ?
ಓರಫಿಯಸನ ಸಂಗೀತದ ಸವಿ
ಔರಂಗಜೇಬರಂಥವರಿಗೆ
ಸೊಗಸುವುದೇನಯ್ಯ ?
ಪಳೆಯುಳಿಕೆಗಳ ಬೆಲೆ
ಅಗಿವ ಗುದ್ದಲಿಗೆ
ವೇದ್ಯವಾಗುವುದೇನಯ್ಯ ?
ಹಾಕಿದ ಕಡಲೆಯ ರುಚಿ
ಹಗೇವಿಗೆ ಗೊತ್ತಾಗುವುದೇನಯ್ಯ ?
ಸ್ವತಂತ್ರಧೀರ ಸಿದ್ಧೇಶ್ವರಾ,
ನಿನ್ನ ನೆನೆವುದರ ತನಿಯು
ನಿನ್ನನೇ ಒಪ್ಪದವರಿಗೆ ಅರ್ಥವಾಗುವುದೇನಯ್ಯಾ ?

೧೨೦

ಬಲೆ ಚೆಲುವಾದುದೆಂದು ಸಿಲುಕಿಕೊಂಡರೆ
ಕೊಲುವುದಲ್ಲದೆ ಬದುಕಿಸಬಲ್ಲುದೇನಯ್ಯ ?
ಬೆಂಕಿ ಮನೆಯದೆಂದು ಮುಟ್ಟಿದರೆ
ಸುಡುವುದಲ್ಲದೆ ಸುಖವೀಯಬಲ್ಲುದೇನಯ್ಯ ?
ವಜ್ರ ಬೆಲೆಯುಳ್ಳುದೆಂದು ನುಂಗಿದರೆ
ಹೊಟ್ಟೆ ಮುರಿವುದಲ್ಲದೆ
ರಕ್ತವಾಗಬಲ್ಲುದೇನಯ್ಯ ?
ನಂಜು ಪುಕ್ಕಟೆ ಸಿಕ್ಕಿತೆಂದು ಕುಡಿದರೆ
ಅಂಗಕ್ಕೆ ಅಪಾಯವಲ್ಲದೆ
ಆಪ್ಯಾಯನವಾಗಬಲ್ಲದೇನಯ್ಯ ?
ಸ್ವತಂತ್ರಧೀರ ಸಿದ್ಧೇಶ್ವರಾ,
ನೀನು ಕಣ್ಣಿಗೆ ಕಾಣೆಯೆಂದು ನಿನ್ನ ನಿರಾಕರಿಸಿದರೆ
ನಿರಾಕರಿಸಿದವರಿಗೆ ಗ್ಲಾನಿಯಲ್ಲದೆ
ನಿನಗೆ ಹಾನಿಯೆಲ್ಲಿಯದಯ್ಯ ?

೧೨೧



ಕೆರದ ಖರ್ಚು ಉಳಿಸಲು
ಕಾಲುಗಳನ್ನೇ ಕತ್ತರಿಸಿಕೊಂಡವರು
ಉಂಟೇನಯ್ಯ ?
ಮಂಜನದ ವೆಚ್ಚ ಉಳಿಸಲು
ಹಲ್ಲುಗಳನ್ನೇ ಕಿತ್ತೊಗೆದವರು
ಉಂಟೇನಯ್ಯ ?
ವೈದ್ಯರ ಶುಲ್ಕ ಉಳಿಸಲು
ವ್ಯಾಧಿಯನ್ನೇ ಅಪ್ಪಿಕೊಂಡವರು
ಉಂಟೇನಯ್ಯ ?
ತಿಗಣೆಯ ಕಾಟ ತಪ್ಪಿಸಿಕೊಳ್ಳಲು
ಮನೆಗೇ ಬೆಂಕಿ ಹಚ್ಚಿದವರು
ಉಂಟೇನಯ್ಯ ?
ಸ್ವತಂತ್ರಧೀರ ಸಿದ್ಧೇಶ್ವರಾ,
ನೀನಿಲ್ಲವೆಂದು ಸಾಧಿಸಲು
ತಾನಿಲ್ಲವೆಂದು ವಾದಿಸುವವರೂ
ಉಂಟೇನಯ್ಯ ?

೧೨೨

ಬಿರುಗಾಳಿ ಬಿಟ್ಟಾಗ
ಕಿಟಕಿ ಮುಚ್ಚಿಕೊಂಡಾಕ್ಷಣ
ಗಾಳಿಗೇ ಗಡೀಪಾರು ಮಾಡಿದರೆನ್ನಬಹುದೇನಯ್ಯ ?
ಮರಮಳೆ ಸುರಿವಾಗ
ಬೆಳಕಿಂಡಿ ಬಂದಾದುವೆಂದು
ಬೆಳಕಿಗೇ ಬಹಿಷ್ಕಾರ ಹಾಕಿದರೆನ್ನಬಹುದೇನಯ್ಯ ?
ಅಜೀರ್ಣವಾದಾಗ
ಉಪವಾಸ ಮಾಡಿದ ಮಾತ್ರಕ್ಕೆ
ಆಹಾರಕ್ಕೆ ಅಪ್ಪಣೆಕೊಟ್ಟರೆನ್ನಬಹುದೇನಯ್ಯ ?
ಜ್ವರ ಬಂದಾಗ ಸ್ನಾನ ಬಿಟ್ಟೊಡನೆ
ಸ್ನಾನ ಗೃಹಕ್ಕೆ ಬೀಗ ಬಿದ್ದಿತೆನ್ನಬಹುದೇನಯ್ಯ ?
ಸಿಟ್ಟು ಬಂದಾಗ ಪೆಟ್ಟು ಹಾಕಿದ ಮಾತ್ರಕ್ಕೆ
ಮಕ್ಕಳನ್ನೇ ಮನೆ ಬಿಡಿಸಿದರೆನ್ನಬಹುದೇನಯ್ಯ ?
ಸ್ವತಂತ್ರಧೀರ ಸಿದ್ಧೇಶ್ವರಾ,
ಆಸ್ತಿಕತೆಯ ಆದಿತ್ಯನಿಗೆ

ನಾಸ್ತಿಕತೆಯ ಗ್ರಹಣ ಹಿಡಿದಾಕ್ಷಣ
ನೀನೇ ನಾಸ್ತಿಯಾದೆಯೆನ್ನಬಹುದೇನಯ್ಯ ?

೧೨೩

ಮುನಿವವನು ಮುನಿಯಾಗಬಲ್ಲನೆ ?
ಅತಿ ಕಾಮಿ ಯತಿಯಾಗಬಲ್ಲನೆ ?
ಹುಸಿವವ ಋಷಿಯಾಗಬಲ್ಲನೆ ?
ಕರಣಗಳ ಗುಲಾಮ ಶರಣನಾಗಬಲ್ಲನೆ ?
ಕನಕದ ದಾಸ ಕನಕದಾಸನಾಗಬಲ್ಲನೆ ?
ಹಂತಕ ಸಂತನಾಗಬಲ್ಲನೆ ?
ಸ್ವತಂತ್ರಧೀರ ಸಿದ್ಧೇಶ್ವರಾ,
ನಿನ್ನನ್ನೇ ನಂಬದವ
ನೀನಾಗಬಲ್ಲನೆ ?
ಈ ಎಲ್ಲವೂ ಆಗಬಹುದು
ನಿನ್ನತ್ತ ಹೊರಳಿದಾಗ !

೧೨೪

ಆರೋಗ್ಯ ಬೇಕು, ಆರೋಗ್ಯ ಸೂತ್ರಗಳ ಪಾಲನೆ ಬೇಡ ;
ಸಂಸಾರ ಸುಖ ಬೇಕು, ಸಂಸಾರದ ಹೊಣೆ ಬೇಡ ;
ಅಧಿಕಾರ ಬೇಕು, ಕರ್ತವ್ಯ ನಿರ್ವಹಣೆ ಬೇಡ ;
ಜನರ ಮತಗಳು ಬೇಕು, ಜನಹಿತ ಸಾಧನೆ ಬೇಡ ;
ಶಾಸನದ ರಕ್ಷೆ ಬೇಕು, ಶಾಸನದ ರಕ್ಷಣೆ ಬೇಡ ;
ವಿಶ್ವವಿದ್ಯಾಲಯದ ಪದವಿ ಬೇಕು, ಅಧ್ಯಯನ ಬೇಡ ;
ಧರ್ಮ ನೀಡುವ ಫಲ ಬೇಕು, ಧರ್ಮಾಚರಣೆ ಬೇಡ ;
ಸಮಾಜವೀವ ಸುಖಗಳು ಬೇಕು, ಸಮಾಜ ಸೇವೆ ಬೇಡ ;
ಸ್ವತಂತ್ರಧೀರ ಸಿದ್ಧೇಶ್ವರಾ,
ನೀನು ನೀಡುವ ದಾನಗಳು ಬೇಕು,
ನೀನು ಬೇಡ ನಿನ್ನನೊಲ್ಲದವರಿಗೆ !

೧೨೫



ಮಣ್ಣಿನ ವಾಸನೆ ಬೇಕು, ಮಣ್ಣಿನಿಂದಲೇ ಮೂಡುವ
ಮಲ್ಲಿಗೆಯ ವಾಸನೆ ಬೇಡವೆನ್ನುವವರಿಗೆ
ಏನೆನ್ನಬೇಕಯ್ಯ ?
ಹೆಣ್ಣು ನೀಡುವ ರತಿ ಸುಖಬೇಕು, ಹೆಣ್ಣಿನಲ್ಲಿಯೇ ಹುದುಗಿರುವ
ತಾಯಿತನ ಹಣ್ಣಾಗುವುದು ಬೇಡವೆನ್ನುವವರಿಗೆ
ಏನೆನ್ನಬೇಕಯ್ಯ ?
ಹೊನ್ನು ತರುವ ಸುಖ ಸೌಕರ್ಯಗಳು ಬೇಕು, ಆದ ಪಡೆಯಲು
ಪಡುವ
ಶ್ರಮಸಾಹಸಗಳು ಬೇಡವೆನ್ನುವವರಿಗೆ
ಏನೆನ್ನಬೇಕಯ್ಯ ?
ಅನ್ನ ಪ್ರಾಣಗಳು ಬೇಕು, ಅವುಗಳಲ್ಲಿ ವಿಕಸಿಸುವ
ಮನ, ವಿಜ್ಞಾನ, ಆನಂದಗಳು ಬೇಡವೆನ್ನುವವರಿಗೆ
ಏನೆನ್ನಬೇಕಯ್ಯ ?
ಸ್ವತಂತ್ರಧೀರ ಸಿದ್ಧೇಶ್ವರಾ,
ನೀನೀವ ದಾನಗಳು ಬೇಕು,
ನೀನು ಬೇಡವೆನ್ನುವವರಿಗೆ
ಏನೆನ್ನಬೇಕಯ್ಯ ?

೧೨೬

ಮೋಹದ ದಾಹ
ಭೋಗದ ಮೃಗಜಲದಿಂದ ಹಿಂಗೀತೇನಯ್ಯ ?
ಆಶೆಯ ಅಗ್ನಿ
ಪ್ರಾಪ್ತಿಯ ಸೌದೆಯಿಂದ ಆರೀತೇನಯ್ಯ ?
ಹಮ್ಮಿನ ಹಿಮವು
ಹೊಗಳಿಕೆಯ ಕುಳಿರ್ಗಾಳಿಯಿಂದ ಕರಗೀತೇನಯ್ಯ ?
ಸೊಮ್ಮಿನ ಕೊಂಡಿ
ದೈನ್ಯದ ನಿಟ್ಟುಸಿರಿನಿಂದ ಮುರೀದೀತೇನಯ್ಯಾ ?
ಸ್ವತಂತ್ರಧೀರ ಸಿದ್ಧೇಶ್ವರಾ,
ಭವದ ಬೇರು ಭವನ ಆಶ್ರಯಿಸದೆ ಹರೀದೀತೇನಯ್ಯ ?

೧೨೭

ಪ್ರವೀಣನ ಕೈಯಲ್ಲಿ ಪಾಷಾಣವೂ ಮೇಣ,

ಕೈಲಾಗದವನ ಕೈಯಲ್ಲಿ ಮೇಣವೂ ಪಾಷಾಣವಯ್ಯ !
ಮೋಳಿಗೆಯ ಮಾರಯ್ಯನ ಕೈಯಲ್ಲಿ ಕಾಷ್ಠವೂ ಕನಕ,
ಕುಶೀಲನ ಕೈಯಲ್ಲಿ ಕನಕವೂ ಕಾಷ್ಠವಯ್ಯ !
ಗಾಂಧೀಜಿಯ ಕೈಯಲ್ಲಿ ಕೈರಾಟಯೂ ಸುದರ್ಶನಚಕ್ರ,
ಸಂಭಾಜಿಯ ಕೈಯಲ್ಲಿ ಭವಾನೀ ಖಡ್ಗವೂ ಮುರಿದ ಮುದ್ಗರವಯ್ಯ !
ಬುದ್ಧ ಬಸವರ ಕೈಯಲ್ಲಿ ಜನವಾಣಿಯೂ ದೇವವಾಣಿ,
ಹೃದಯಹೀನರ ಕೈಯಲ್ಲಿ ದೇವವಾಣಿಯೂ ದೈತ್ಯವಾಣಿಯಯ್ಯ !
ಸ್ವತಂತ್ರಧೀರ ಸಿದ್ಧೇಶ್ವರಾ,
ನಿನ್ನ ನಂಬಿದವರಿಗೆ
ಹರಿಗೋಲೂ ಹಡಗುಪಡೆ,
ನಿನ್ನ ನಂಬದವರಿಗೆ
ಹಡಗುಪಡೆಯೂ
ಹರಿಗೋಲಯ್ಯ !

೧೨೮

ಅಸ್ತಿತ್ವದ ಅಭ್ರಕಕ್ಕೆ ಹಲವು ಪದರುಗಳು,
ಮನದ ಪೀತಾಂಬರಕ್ಕೆ ಹಲವು ಮಡಿಕೆಗಳು,
ಅನುಭವದ ಮಂದಿರಕ್ಕೆ ಹಲವು ಬಾಗಿಲುಗಳು,
ಮಾತಿನ ಮಂಟಪಕ್ಕೆ ಹಲವು ಕಂಬಗಳು,
ಪ್ರೀತಿಯ ಪುಷ್ಪಕ್ಕೆ ಹಲವು ಪಕಳೆಗಳು,
ಬಿಡಿಯಾಗಿ ನೋಡು,
ಇಡಿಯಾಗಿ ನೋಡು,
ನೇರವಾಗಿ ನೋಡು,
ಓರೆಯಾಗಿ ನೋಡು,
ಆಂಶಿಕ ಅಂದ ನೋಡು,
ಒಟ್ಟಂದ ನೋಡು !
ಎಲ್ಲದರೊಳೂ ಸಿಕ್ಕುವುದು
ಸ್ವತಂತ್ರಧೀರ ಸಿದ್ಧೇಶ್ವರನ ಜಾಡು !



೧೨೯

ನೀತಿಯಲ್ಲಿ ಕಾತ ನಿಯಮದ ಹಣ್ಣಿನಲ್ಲಿ
ಪ್ರೀತಿಯ ರಸ ತುಂಬಿದ್ದರೆ ಲೇಸಯ್ಯ ;
ನಾದದಲ್ಲಿ ಹೊರಟ ನವನೀತಕ್ಕೆ
ಶ್ರುತಿಯ ಸಕ್ಕರೆ ಸೇರಿದರೆ ಸೊಗಸಯ್ಯ ;
ಬುದ್ಧಿಯಲ್ಲಿ ಬೆಳೆವ ಜ್ಞಾನ ವಿಜ್ಞಾನದಲ್ಲಿ
ಭಾವನೆಯ ಮೆರುಗು ಬೆರೆತಿರೆ ಸೊಬಗಯ್ಯ ;
ವಿಚಾರದ ವೀಳ್ಯದೆಲೆಯಲ್ಲಿ
ಅನುಭವದ ಅಡಿಕೆ ಸುಣ್ಣ ರುಚಿಯಯ್ಯ ;
ವಿದ್ಯೆಯ ನಾಭಿಯಲ್ಲಿ
ವಿವೇಕದ ಕಸ್ತೂರಿ ಕರಲೇಸಯ್ಯ ;
ಸ್ವತಂತ್ರಧೀರ ಸಿದ್ಧೇಶ್ವರಾ,
ನನ್ನದೆಂಬುದರಲ್ಲಿ ನಿನ್ನದೆಂಬುದು ನಿಲಲು
ಲೇಸಿನಲಿ ಲೇಸಯ್ಯ !

೧೩೦

ಪ್ರಕಾಶದ ಗಂಡನಿಗೆ ಪ್ರಭೆಯ ಹೆಂಡತಿ ದೊರೆತರೆ
ಪ್ರಮಾದವೇನಯ್ಯ ?
ಬೆಲ್ಲದ ಬೊಂಬೆಗೆ ಸಕ್ಕರೆಯ ಸೀರೆ ಸಿಕ್ಕರೆ
ಹಾನಿಯೇನಯ್ಯ ?
ಅಕ್ಷಯ ಪಾತ್ರೆಯಲ್ಲಿ ಅಮೃತವನ್ನೆರೆದರೆ
ಅಪರಾಧವೇನಯ್ಯ ?
ಸಾಹಿತ್ಯದ ಹಾಲಿನಲ್ಲಿ ಸಂಗೀತದ ಜೇನು ಸೇರಿದರೆ
ನಷ್ಟವೇನಯ್ಯ ?
ಸ್ವತಂತ್ರಧೀರ ಸಿದ್ಧೇಶ್ವರಾ,
ಮೃಣ್ಮಯದ ಹಣತೆಯಲ್ಲಿ
ಚಿನ್ಮಯದ ಜ್ಯೋತಿ ಹೊತ್ತಿದರೆ
ತಪ್ಪೇನಯ್ಯ ?

೧೩೧

ಸಂಶಯಗಳ ಸಂತೆಯಲ್ಲಿ
ವಿಶ್ವಾಸದ ಸರಕು ಕೊಳ್ಳ ಹೋಗಿ
ಸಂಶಯಾಕುಲನಾಗಿಯೇ ಹಿಂದಿರುಗಿದೆನಯ್ಯ !
ಅತ್ತ ಸಂಶಯ, ಇತ್ತ ಸಂಶಯ,
ಸುತ್ತಲೂ ಸಂಶಯ !
ಸಂಶಯ ಸಂಶಯವೆಂದು
ಸಂಶಯದ ಬಗೆಗೇ
ಸಂಶಯ ಬಂದುಬಿಟ್ಟಿದೆಯಯ್ಯ !
ಮನದ ಮರದಿ ಕುಳಿತ
ಸಾವಿರ ಸಂಶಯ ಪಕ್ಷಿಗಳಿಗೆ
'ನಿನ್ನ ನಂಬಿದೆ'ನೆಂಬ
ಒಂದು ಹಾರೆ ಮದ್ದು ಸಾಲದೆ,
ಸ್ವತಂತ್ರಧೀರ ಸಿದ್ಧೇಶ್ವರಾ ?

೧೩೨

ಅಜ್ಞಯುಗ ಹೋಯ್ತು,
ಯಜ್ಞಯುಗ ಹೋಯ್ತು,
ಪ್ರಾಜ್ಞಯುಗ ಹೋಯ್ತು
ಧರ್ಮಯುಗ ದಾನ ಯುಗಗಳೂ ಹೋದುವು !
ಮಾನವತಾಯುಗವೂ ಹೋಗುತ್ತಿರುವಂತಿದೆ
ಕಂಪ್ಯೂಟರ್ ಮಾನವರ ಅವಿರ್ಭಾವದೊಡನೆ !
ಯಾವ ಯುಗ ಬರಲಿದೆಯೋ ಮುಂದೆ ?!
ಸಂದೇಹ ಸಂದೋಹದಲ್ಲಿ ಸಿಕ್ಕಿ
ಅಕ್ಕಸಬಡುತ್ತಿಹೆವಯ್ಯ !
ಕಾಯಯ್ಯ, ಕಾಯಯ್ಯ,
ವಿಶ್ವಾಸದ ಊರುಗೋಲನೀಯಯ್ಯ
ಸ್ವತಂತ್ರಧೀರ ಸಿದ್ಧೇಶ್ವರಾ !

೧೩೩



ಸಂಶಯದ ಹೊಲದಿ ನಿಂತ
ಬುದ್ಧಿಯ ಬೆದರಿನಂತೆ ಬದುಕಿರುವೆನಯ್ಯ !
ಸಂಕೀರ್ಣತೆಯ ಅಡೆಯಲ್ಲಿ ಕೊಳೆವ
ಮಿಡಿಗಾಯಿಯಂತೆ ಜೀವಿಸಿಹೆನಯ್ಯ !
ಅತೃಪ್ತಿಯ ತಿರುಗಣಿಗೆ ಸಿಕ್ಕ
ತರಗೆಲೆಯಂತೆ ಪರಿಭ್ರಮಿಸುತ್ತಲಿಹೆನಯ್ಯ !
ಅಶ್ರದ್ಧೆಯ ಬಲೆಗೆ ಸಿಕ್ಕ
ಈ ಇರವಿನ ಎರಳೆ
ಮರವಿನ ಸರಳಿಗೆ
ಬಲಿಯಾದಂತೆ ಕಾಯಯ್ಯ ರಕ್ಷಣೆಯನೀಯಯ್ಯ
ಸ್ವತಂತ್ರಧೀರ ಸಿದ್ಧೇಶ್ವರಾ !

೧೩೪

ವೃಕ್ಷ ಫಲಭರಿತವಾಗಿದ್ದರೆ
ಪಕ್ಷಿಗಳಿಗಾವ ಕೊರತೆಯಯ್ಯ ?
ಲತೆಯ ತುಂಬ ಹೂವಿದ್ದರೆ
ದುಂಬಿಗಳಿಗಾವ ಬರವಯ್ಯ ?
ಸಕ್ಕರೆ ಸೂರೆಯಾಗಿದ್ದರೆ
ಇರುವೆಗಳಿಗಾವ ಅರಕೆಯಯ್ಯ ?
ಸಿರಿ, ಅಧಿಕಾರ ಇದ್ದರೆ
ಹೊಗಳುವವರಿಗಾವ ಅಭಾವವಯ್ಯ ?
ಸ್ವತಂತ್ರಧೀರ ಸಿದ್ಧೇಶ್ವರಾ,
ಉಳ್ಳವರಿಗೆ ಎಲ್ಲರೂ, ಎಲ್ಲವೂ ಉಂಟು
ಇಲ್ಲದವರಿಗೆ ಮಾತ್ರ ನೀನೊಬ್ಬನೇ ಅಯ್ಯ !
ಇಲ್ಲದವರ ಕೈಬಿಡದಿರಯ್ಯ

೧೩೫

ತೊಟ್ಟಿಲಲ್ಲಿರುವ ಹಸುಗೂಸಿಗೂ
ತನ್ನ ತಾಯಿಯೊಬ್ಬಳಿಹಳೆಂಬ ತಿಳಿವಳಿಕೆಯಿರುವಂತೆ,
ಹಟ್ಟಿಯೊಳಗಣ ಕುರಿಮರಿಗೂ
ಕಾಯ್ವ ಕುರುಬನೊಬ್ಬನಿಹನೆಂಬ ತಿಳಿವಳಿಕೆಯಿರುವಂತೆ
ನೀನು ನನಗಿರುವಿಯೆಂಬ ತಿಳಿವಳಿಕೆ ನನಗೆ !
ಕೈ ಕೆಲಸದಲ್ಲಿದ್ದರೂ
ತಾಯಿಯ ಮನ ತೊಟ್ಟಿಲದ ಕಂದನಲ್ಲಿರುವಂತೆ
ಸೃಷ್ಟಿಕಾರ್ಯ ನಿರತನಾಗಿಯೂ ನೀನು
ನನ್ನ ಯೋಗಕ್ಷೇಮರತನೆಂಬ ನಂಬಿಕೆ ನನಗೆ !
ಈ ತಿಳಿವಳಿಕೆ, ಈ ನಂಬಿಕೆ
ಹುಸಿಯಾಗದಂತೆಸಗಾ,
ಸ್ವತಂತ್ರಧೀರ ಸಿದ್ಧೇಶ್ವರಾ !

೧೩೬

ಅಚ್ಚುಕಟ್ಟನ್ನು ಉಳುವವರು
ಇಳಿಮೇಡಿನ ಉಪಕಾರ ಸ್ಮರಿಸುವರೇನಯ್ಯ ?
ರೇಶಿಮೆಯ ವಸನ ಉಡುವವರು
ಇಪ್ಪನೇರಿಳೆಯ ನೆರವನ್ನು ನೆನೆವರೇನಯ್ಯ ?
ಮುತ್ತಿನ ಸರವ ತೊಡುವವರು
ಸಿಂಪಿನ ಸಹಾಯ ಸ್ಮರಿಸುವರೇನಯ್ಯ ?
ಕೃತ್ರಿಮ ರೇತನ ಪಡೆದ ಹಸು
ದೂರದ ಹೋರಿಯ ಆಭಾರ ಮನ್ನಿಸುವುದೇನಯ್ಯ ?
ಸ್ವತಂತ್ರಧೀರ ಸಿದ್ಧೇಶ್ವರಾ,
ಅಸುವಿತ್ತ, ಉಸಿರಿತ್ತ, ಅಶನವಿತ್ತ,
ಎಲ್ಲ ಇತ್ತ ನಿನ್ನನೇ
ಪಶು ನಾನು ನೆನೆಯದಿರೆ
ಮುನಿಯದಿರಯ್ಯ !
ಕರು ಕೊಂಬಿನಿಂದ ಇರಿದರೂ
ಕರೆದು ಹಾಲೂಡುವ ಹಸುವಿನಂತೆ
ಒಲಿದು ಸಲಹು, ತಿದ್ದಿ ಉದ್ಧರಿಸು !



೧೩೭

ವ್ಯಾಧಿ ಪ್ರಬಲವಿದ್ದಷ್ಟೂ
ವೈದ್ಯನ ಅನುಭವ ಹೆಚ್ಚುವುದಯ್ಯ ;
ಪ್ರಕರಣ ಜಟಿಲವಿದ್ದಷ್ಟೂ
ನ್ಯಾಯವಾದಿಯ ವಾದಪಟುತ್ವ ಹೆಚ್ಚುವುದಯ್ಯ ;
ತಾಂತ್ರಿಕ ವಿಘ್ನ ವಿಪುಲವಿರುವಷ್ಟೂ
ಯಂತ್ರಜ್ಞನ ತಂತ್ರಜ್ಞಾನ ಕುದುರುವುದಯ್ಯ ;
ಸ್ವತಂತ್ರಧೀರ ಸಿದ್ಧೇಶ್ವರಾ,
ನನ್ನ ತಪ್ಪುಗಳು ಹೆಚ್ಚಿದಷ್ಟೂ
ನಿನ್ನ ಉದ್ಧಾರ ಬುದ್ಧಿ ಹೆಚ್ಚಲಯ್ಯ !

೧೩೮

ಸಮಯವಿದ್ದಾಗ ಸಾಧನ ಸಾಮಗ್ರಿಯಿಲ್ಲ,
ಸಾಧನ ಸಂಪತ್ತಿದ್ದಾಗ ಸಮಯವಿಲ್ಲ !
ಎರಡೂ ಇದ್ದಾಗ ಚಿತ್ತಸ್ವಾಸ್ಥ್ಯವಿಲ್ಲ,
ಉತ್ಸಾಹವಿಲ್ಲ, ಉತ್ಸ್ಫೂರ್ತಿಯಿಲ್ಲ !
ನನ್ನ ಬೆಳಗುಗಳೆಲ್ಲ ಬರಡಾಗಬೇಕೇನಯ್ಯ ;
ನನ್ನ ಹಗಲುಗಳೆಲ್ಲ ಧಗೆ, ಸಂಜೆಗಳೆಲ್ಲ
ಬಂಜೆಯಾಗಬೇಕೇನಯ್ಯ ?
ನನ್ನ ಬಾಳ ಬಾಗಿಲಿಗೆ ಬರುವ ನಿಮಿಷಗಳು
ಚೆಲುವಿನ ಕನಸುಗಳನ್ನು,
ನನ್ನಿಯ ನನಸುಗಳನ್ನು,
ಶರಣರ ಮನಸುಗಳನ್ನು
ಹೊತ್ತು ತರಲಯ್ಯ,
ಸಚ್ಚಿದಾನಂದವ
ಹೆತ್ತು ಮರಳಲಯ್ಯ,
ಸ್ವತಂತ್ರಧೀರ ಸಿದ್ಧೇಶ್ವರಾ !

೧೪೯

ಎತ್ತರಕ್ಕೆ ಏರಿದಂತೆ
ವಿಸ್ತಾರಗೊಳ್ಳುವ ದಿಗಂತದಂತೆ,
ಕಾಲ ಕಳೆದಂತೆ
ಕಳೆಗೊಳ್ಳುವ ನೈಜ ಪ್ರೇಮದಂತೆ,
ಜೀವಿಸಿದಷ್ಟೂ ಜ್ವಲಂತವಾಗುವ
ಜೀವನದರ್ಶನದಂತೆ,
ಸವಿದನಿತೂ ಸೊಬಗು ಹೆಚ್ಚುವ
ಅಮರ ಸೌಂದರ್ಯದಂತೆ,
ಅರ್ಥವಿಸಿದನಿತೂ ಅಗಾಧವೆನಿಸುವ
ಮಹಾವಾಕ್ಯಗಳಂತೆ
ನಿನ್ನ ನೆನೆದನಿತೂ ನಿರ್ಮಲವಾಗಲಯ್ಯ ನನ್ನ ಬಾಳು
ಸ್ವತಂತ್ರಧೀರ ಸಿದ್ಧೇಶ್ವರಾ !

೧೫೦

ಉಸುಕಿನ ಹಳುಕುಗಳನ್ನು ಆಕರ್ಷಿಸದಿದ್ದರೆ
ಅಪಮಾನವಾವುದಯ್ಯ ಅಯಸ್ಕಾಂತಕ್ಕೆ ?
ಬೋಕಿಯನ್ನು ಬಂಗಾರ ಮಾಡದಿದ್ದರೆ
ಅಪಕೀರ್ತಿ ಯಾವುದಯ್ಯ ಪರುಷಮಣಿಗೆ ?
ಮೃಗಶಿರದ ಹನಿಯನ್ನು ಮುತ್ತಾಗಿಸದಿದ್ದರೆ
ಮಾನಹಾನಿ ಯಾವುದಯ್ಯ ಸಮುದ್ರದ ಸಿಂಪಿಗೆ ?
ಪಕ್ಕದ ಬೊಬ್ಬುಳಿಯ ಮುಳ್ಳುಗಳ ಕಳೆಯದಿದ್ದರೆ
ಕುಂದಾವುದಯ್ಯ ಚಂದನದ ತರುವಿಗೆ ?
ಸ್ವತಂತ್ರಧೀರ ಸಿದ್ಧೇಶ್ವರಾ,
ನನ್ನ ಕುನ್ನಿತನವನ್ನು ನಿವಾರಿಸದಿದ್ದರೆ
ಊಣೆಯೆಲ್ಲಿಯದಯ್ಯ ನಿನ್ನ ಕೃಪೆಗೆ ?

೧೫೧

ಕಳಚಲಯ್ಯ ಹಾವಿನ ಪರೆಯಂತೆ
ಒಂದೊಂದಾಗಿ ಬಿಗಿದ ಬಂಧನಗಳು ;



ಆಗಲಯ್ಯ ಅವೇ ಅನಿಬದ್ಧತೆಯ
ಅಗ್ಗಿಷ್ಟಿಕೆಗೆ ಇಂಧನಗಳು !
ಕಾಣುವ ಬಂಧನಗಳು,
ಕಾಣದ ಬಂಧನಗಳು,
ಮನೋಹರ ಬಂಧನಗಳು,
ಮಡಿವಂತಿಕೆಯ ಬಂಧನಗಳು,
ಸೂಕ್ಷ್ಮಾತಿ ಸೂಕ್ಷ್ಮ ತೀಕ್ಷ್ಣ ಬಂಧನಗಳು
ಎಲ್ಲವೂ ಕಳಚಿ ಮುಕ್ತವಾಗಲಿ ಮೈ ಮನಗಳು !
ಸ್ವತಂತ್ರಧೀರ ಸಿದ್ಧೇಶ್ವರ
ಸ್ವತಂತ್ರರಿಗೆ ಮಾತ್ರ ಲಭ್ಯ,
ಪರತಂತ್ರರಿಗೆ ಅಲಭ್ಯ !

೧೫೨

ನನ್ನ ತಂತಿಗಳ ಹರಿದವನೂ ನೀನೇ,
ನನಗೆ ಹರಿದ ತಂತಿಯ
ತಂಬೂರಿಯೆನ್ನುವವನೂ ನೀನೇ !
ಹೊಸ ತಂತಿಗಳ ಹಾಕಬಲ್ಲೆ ನೀನು,
ಹೊಸ ಹಾಡುಗಳ ಹಾಡಬಲ್ಲೆ ನಾನು,
ಏಕೆ ಹಾಕಲೊಲ್ಲೆಯಯ್ಯಾ ?
ಸಸ್ವನಗಾನ ಕೇಳಿಯಾಯ್ತು,
ನಿಃಸ್ವನಗಾನ ಕೇಳಲಾಸೆಯೆನ್ನುವಿಯಾ ?
ಹಾಡುತ್ತಲೇ ಇರುವೆ ಕೇಳದ ಹಾಡನ್ನು
ಕೇಳಿಸದೇನಯ್ಯ,
ಕೇಳಿಸದೇಕಯ್ಯ
ಸ್ವತಂತ್ರಧೀರ ಸಿದ್ಧೇಶ್ವರಾ !

೧೫೩

ನನ್ನ ಬಾಳಿನ ಮಗ್ಗದ ಹಾಸು ಹೊಕ್ಕುಗಳಲ್ಲಿ

ನಾನೇ ನೂತ ಎಳೆಗಳಿರಲಾರವು ;
ಆದರೆ, ಅವುಗಳಿಗೆ ನನಗೆ ಬೇಕಾದ ಬಣ್ಣ ಹಾಕಿ,
ನನಗಿಷ್ಟವೆನಿಸುವ ಬಟ್ಟೆಗಳನ್ನು
ನೆಯ್ದುಕೊಳ್ಳಬಲ್ಲೆನಯ್ಯಾ !
ಎಳೆ ಹರಿಯಬಹುದು,
ಮಗ್ಗ ಮುರಿಯಬಹುದು,
ನೆಯ್ದುದನು ಕೀಟ ಕೊರೆಯಬಹುದು !
ಏನಾದರೂ ಬಟ್ಟೆಯಿದ ನೆಯ್ಯದೆ ಬಿಡೆನಯ್ಯಾ !
ನೆಯ್ದ ವಸ್ತ್ರ ಜೇಡರದಾಸನ,
ಕಬೀರದಾಸನ
ದಿವ್ಯಾಂಬರವಾಗದಾಗಲಿ,
ನಿನ್ನವರ ಕಾಲೊರೆಸುವ
ಅರಿವೆಯಾದರೂ ಆಗಲಯ್ಯ
ಸ್ವತಂತ್ರಧೀರ ಸಿದ್ಧೇಶ್ವರಾ !
೧೪೪

ಹೂವಿನಲ್ಲಿ ಮಧುವಾಗುವ, ಹಣ್ಣಿನಲ್ಲಿ ರಸವಾಗುವ,
ಕಬ್ಬಿನಲ್ಲಿ ಸಿಹಿಯಾಗುವ ಸುಕೃತ ನನ್ನದಾಗಲಿಲ್ಲ ;
ಹಸಿದವರಿಗೆ ಅನ್ನವಾಗುವ, ಕುರುಡರಿಗೆ ಕಣ್ಣಾಗುವ,
ಹೊಲಗದ್ದೆಗಳ ಮಣ್ಣಾಗುವ ಪುಣ್ಯ ನನ್ನದಾಗಲಿಲ್ಲ ;
ಶಿಲ್ಪಿಯ ಉಳಿಯಾಗುವ, ಚಿತ್ರಕಾರನ ಕುಂಚವಾಗುವ,
ಕವಿಯ ಲೇಖನಿಯಾಗುವ ಸೈಪು ನನ್ನದಾಗಲಿಲ್ಲ ;
ರೋಗಿಗೆ ಮದ್ದಾಗುವ, ಮಗುವಿನ ಮುದ್ದಾಗುವ,
ಬುದ್ಧನ ಭಿಕ್ಷಾಪಾತ್ರೆಯಾಗುವ ಭಾಗ್ಯ ನನ್ನದಾಗಲಿಲ್ಲ !
ನಿನ್ನ ದಾರಿಯ ಹುಲ್ಲಾಗುವ,
ನಿನ್ನ ಕಟ್ಟೆಯ ಕಲ್ಲಾಗುವ,
ನಿನ್ನ ಶರಣರ ಚರಣಗಳಿಗೆ
ಚಿಮ್ಮಾವುಗೆಯಾಗುವ ಸೌಭಾಗ್ಯವನ್ನಾದರೂ
ಕರುಣಿಸಯ್ಯ, ಸ್ವತಂತ್ರಧೀರ ಸಿದ್ಧೇಶ್ವರಾ !

೧೪೫



ನಾಲ್ಕುನೂರು ಕೋಟಿ ನಟನಟಿಯರ
ನರಕುಲ ನಾಟಕದಲ್ಲಿ
ನನಗಿದೇ ಪಾತ್ರ ಬೇಕೆಂಬ
ಹಟ ಹಿಡಿಯೆನಯ್ಯ, ನಾನು !
ನನ್ನ ಪಾತ್ರವಾವುದೆಂಬುದ ನಿರ್ಧರಿಸುವವ ನೀನು !
ರಂಗದ ಮೇಲಿನ ಪಾತ್ರ,
ರಂಗದ ಹಿಂದಿನ ಪಾತ್ರ,
ಪರದೆ ಎಳೆಯುವ ಪಾತ್ರ,
ಪೀಠೋಪಕರಣವಿರಿಸುವ ಪಾತ್ರ,
ಕರಪತ್ರ ಹಂಚುವ ಪಾತ್ರ,
ಕಸಗುಡಿಸುವ ಪಾತ್ರ,
ಯಾವ ಪಾತ್ರವಾದರೂ ಸರಿಯೆ,
ನಿನ್ನ ಕೃಪೆಗೆ ಪಾತ್ರನಾದರೆ ಸಾಕಯ್ಯ
ಸ್ವತಂತ್ರಧೀರ ಸಿದ್ಧೇಶ್ವರಾ !
೧೪೬

ನನ್ನ ಅಸ್ತಿತ್ವದ ಶಿಖರಕ್ಕೆ ಸಾಸಿರ ಸಾಸಿರ ಮೆಟ್ಟಲುಗಳು
ಮೊದಲ ಮೆಟ್ಟಲಿನಲ್ಲಿಯೇ ಕುಳಿತು
ಮೇಣೆಯ ದಾರಿ ಕಾಯುತ್ತಲಿಹೆನಯ್ಯ,
ಮೇಲೆತ್ತುವ ಹಸ್ತದ ನೀರೀಕ್ಷೆಯಲ್ಲಿಹೆನಯ್ಯ,
ಮೇಲೊಯ್ಯುವ ಯಂತ್ರದ ಪ್ರತೀಕ್ಷೆಯಲ್ಲಿಹೆನಯ್ಯ !
ನನ್ನ ಮನದ ಮನೆಗೆ ನೂರಾರು ಕೋಣೆಗಳು
ಮೊದಲ ಕೋಣೆಯಲ್ಲಿಯೇ ಕುಳಿತು
ಬೀಗದ ಕೈ ಹುಡುಕುತ್ತಲಿಹೆನಯ್ಯ,
ಮೇಣಬತ್ತಿ ಅರಸುತ್ತಲಿಹೆನಯ್ಯ,
ದೀಪದ ಕಡ್ಡಿ ಕೆದಕುತ್ತಲಿಹೆನಯ್ಯ !
ಸ್ವತಂತ್ರಧೀರ ಸಿದ್ಧೇಶ್ವರಾ,
ನನ್ನ ಎದೆಯ ಹಲವು ಪದರುಗಳಲ್ಲಿ
ಮೊದಲ ಪದರಿನಲ್ಲಿಯೇ
ಉರುಳಿ ಹೊರಳುತ್ತಲಿಹೆನಯ್ಯ,
ಸುತ್ತಿ ಸುಳಿಯುತ್ತಲಿಹೆನಯ್ಯ,
ಅಲೆದು ಬಳಲುತ್ತಲಿಹೆನಯ್ಯ !

೧೪೭

ನಾನು ಕಳೆದ ಐವತ್ತು ವತ್ಸರಗಳಲ್ಲಿ
ಹಸಿವೆ, ತೃಷೆ, ವಿಷಯ, ಆಸೆ,
ಆಮಿಷಗಳಿಗಾಗಿ ವರುಷ ವರುಷ,
ವಿರಾಮ, ವಿನೋದ, ಆಮೋದ,
ವಿಲಾಸ, ವಿಹಾರಗಳಿಗಾಗಿ ವರುಷ ವರುಷ,
ಮೋಜು, ಮೆರವಣಿಗೆ, ಹರಟೆ,
ಆತ್ಮಸ್ತುತಿ, ಪರನಿಂದೆಗಳಿಗಾಗಿ ಮಾಸ ಮಾಸ,
ಸುವಿಚಾರ, ಸದಾಚಾರ, ಸತ್ಕೃತಿಗಳಿಗಾಗಿ ದಿವಸ ದಿವಸ,
ನಿನಗಾಗಿ ಕಳೆದ ಕಾಲ ಮಾತ್ರ ನಿಮಿಷ ನಿಮಿಷವಯ್ಯ
ಸ್ವತಂತ್ರಧೀರ ಸಿದ್ಧೇಶ್ವರಾ !

೧೪೮

ನಿತ್ಯ ಹಲವು ಹನ್ನೆರಡು ಜನರ
ಹಲವು ಸಲ ಕಾಣುವೆ – ಓ ಜೀವಿ,
ನಿನ್ನ ನೀನೇ ಕಾಣುವೆಯಾ ಒಮ್ಮೆಯಾದರೂ ?
ದಿನದಿನವೂ ಇಣಿಕಿ ಹಣಿಕಿ ನೋಡುವೆ ಅನ್ಯರ ಬಾಳಿನೊಳಕ್ಕೆ,
ನಿನ್ನ ಬದುಕ ಬೆದಕಿ ನೋಡಿದೆಯಾ ಒಮ್ಮೆಯಾದರೂ ?
ಅನ್ಯರ ಹೃದಯೇಂಗಿತವನ್ನರಿಯಲು
ಹಾತೊರೆವೆ, ಹವಣಿಸುವೆ, ಹಲ್ಲಣಿಸುವೆ
ನಿನ್ನೆದೆಯನರಿತುಕೊಳ್ಳಲು ಹಾರೈಸಿದೆಯಾ ಒಮ್ಮೆಯಾದರೂ ?
'ಇವನಾರು, ಇವನಾರು, ಇವನಾರು?' ಎಂದು ನೀನು ಕೇಳದ ದಿನವಿಲ್ಲ
'ನಾನಾರು ?' ಎಂದು ಆರಯ್ದೆಯಾ ಒಮ್ಮೆಯಾದರೂ ?
ಅವರಿವರ ಅವಗುಣಗಳನ್ನು ಎತ್ತಿ ತೋರಿಸುವೆ ನಿತ್ಯ,
ನಿನ್ನ ದುರ್ಗುಣಗಳತ್ತ ದೃಷ್ಟಿ ಹಾಯಿಸಿದೆಯಾ ಒಮ್ಮೆಯಾದರೂ ?
ನೀನು ಸ್ವತಂತ್ರಧೀರ ಸಿದ್ಧೇಶ್ವರನ
ದಾನವುಣ್ಣದ ದಿನವಿಲ್ಲ
ಅವನ ನೀ ನಿಜವಾಗಿ ನಂಬಿದೆಯಾ ಒಮ್ಮೆಯಾದರೂ ?

೧೪೯



ಬೆಳೆ ಒಕ್ಕಾಲು, ಬೇಲಿ ಮುಕ್ಕಾಲು–
ಎಂಬಂತಾಯಿತ್ತಯ್ಯ ಎನ್ನ ಬಾಳು !
ಭದ್ರತೆಗಾಗಿ ಶ್ರಮಿಸಿದೆ–
ಬೆಳವಣಿಗೆಯೇ ಬಲಿಯಾಯ್ತು ಅತಿ ಭದ್ರತೆಗೆ !
ಭದ್ರತೆಗಾಗಿ ಬಳಸಿದುದು ಬಂಧನವಾಗಬೇಕೆ ?
ಬೆಳವಣಿಗೆಗಿಂತ ಭದ್ರತೆಯೇ ಮುಖ್ಯವೆನಿಸಬೇಕೆ ?
ಅದ್ರಿಯ ಭದ್ರತೆಯ ಶಂಕಿಸುವವರಾರು ?
ಆದರೆ, ಅದರ ಶಿಲೆಯ ಮೇಲಿಟ್ಟ ಬೀಜ ಮೊಳೆಯಬಲ್ಲುದೇನಯ್ಯ ?
ಕಲ್ಲು ಕರಗಿ ಮಣ್ಣಾದರೆ ಮಾತ್ರ
ಬೀಜ ಮೊಳೆತು ಸಸಿ ಬೆಳೆವುದಯ್ಯ,
ಕಲ್ಲಾದ ನನ್ನ ಮನ ಕರಗಿ
ನಿನ್ನ ಭಕ್ತರ ಕಾಲಡಿಯ ಮಣ್ಣಾಗಲಯ್ಯ !
ಆ ಮಡಿಯಾದ ಮಣ್ಣಿನಲ್ಲಿಯೇ ನನ್ನ ಬಾಳ ಬೆಳೆ ಬೆಳೆಯಲಯ್ಯ–
ನಿನ್ನ ಒಲವಿನ ಬೇಲಿಯೊಳಗೆ, ಸ್ವತಂತ್ರಧೀರ ಸಿದ್ಧೇಶ್ವರಾ.

೧೫೦

ಕೈಮುಚ್ಚಿ ಒಳಗೇನಿದೆಯೆಂದು ಕೇಳುವವರಂತೆ
ಅಣು ರೇಣು ತೃಣಕಾಷ್ಠಗಳಲ್ಲಿ ರಹಸ್ಯಗಳನ್ನಿರಿಸಿ
'ಒಳಗೇನು ? ಒಳಗೇನು ?' ಎಂದು ಕೇಳುತ್ತಿರುವೆ !
ನನಗೆ ತಿಳಿಯದೆಂದು ನೀನು ಹೇಳದಿರಯ್ಯ,
ಹೇಳಿದರೆ ಆಟ ಮುಗಿದಂತಯ್ಯ – ಸ್ವತಂತ್ರಧೀರ ಸಿದ್ಧೇಶ್ವರಾ !

೧೫೧

ರಸನಿಮಿಷ ವಿಷನಿಮಿಷಗಳ ನಡುವೆ
ಆಟೋಟಗಳ ಸ್ಪರ್ಧೆ ನಡೆದಿದೆ,
ನನ್ನ ಜೀವನದ ಕ್ರೀಡಾಂಗಣದಲ್ಲಿ !
ಒಮ್ಮೆ ರಸನಿಮಿಷಗಳ ಮೇಲುಗೈ,
ಒಮ್ಮೆ ವಿಷನಿಮಿಷಗಳ ಪ್ರಾಬಲ್ಯ !
ಯಾರು ಗೆದ್ದರೇನು ಕ್ರೀಡಾಂಗಣಕ್ಕೆ ?
ಅದಕ್ಕಾವ ದುಃಖ, ಧಕ್ಕೆ ?
ಎರಡರ ಪದಘಟ್ಟಣೆಗಳಿಗೂ
ಗಟ್ಟಿಯಾಗಿರುವುದದರ ಧರ್ಮ,
ನೀನೆ ಬಲ್ಲೆ ಈ ಆಟೋಟಗಳ ಮರ್ಮ !

ಯಾರನ್ನಾದರೂ ಗೆಲ್ಲಿಸು,
ಯಾರನ್ನಾದರೂ ಸೋಲಿಸು
ಈ ಕ್ರೀಡಾಂಗಣವನ್ನಷ್ಟು ಗಟ್ಟಿಯಾಗಿರಿಸು,
ಸ್ವತಂತ್ರಧೀರ ಸಿದ್ಧೇಶ್ವರಾ !

೧೫೨

ಅವರಿವರು ಪ್ರೀತರಾಗಲೆಂದು
ಅದನಿದನು ನುಡಿದಾಯಿತು,
ಎಂತೆಂತೋ ನಡೆದಾಯಿತು !
ಮಡಿವ ಮುನ್ನ ಒಮ್ಮೆ,
ಒಮ್ಮೆಯೇ ಒಮ್ಮೆ
ನೀನು ಪ್ರೀತನಾಗುವ ಹಾಗೆ ನುಡಿಸಯ್ಯ,
ನೀನು ಮೆಚ್ಚುವ ಹಾಗೆ ನಡೆಸಯ್ಯ
ಸ್ವತಂತ್ರಧೀರ ಸಿದ್ಧೇಶ್ವರಾ !

೧೫೩

ಎನಗಾರೂ ಇಲ್ಲವೆಂದಾಗ
ಯಾರಿಂದಲೋ ನೆರವು ನೀಡಿಸಿದೆ ;
ಎನಗೇನೂ ಇಲ್ಲವೆಂದಾಗ
ಎಲ್ಲಿಂದಲೋ ಸಹಾಯ ಒದಗಿಸಿದೆ ;
ಎನಗೇನೂ ತೋಚದೆಂದಾಗ
ಎನಗರಿಯದಂತೆಯೇ ದಾರಿ ತೋರಿಸಿದೆ ;
'ಇನ್ನೆಂತೋ' ಎಂದಾಗ
ಎಂತೆಂತೋ ಪಾರುಗಾಣಿಸಿದೆ !
ಅಂತೆಯೇ, 'ಸರ್ವವೂ ಎನ್ನಿಂದ' ಎಂದಾಗ
ಗರ್ವಹರಣ ಮಾಡಿ
'ಓರ್ವನೇ ಸ್ವತಂತ್ರಧೀರ ಸಿದ್ಧೇಶ್ವರ'
ಎಂಬ ಪಾಠ ಕಲಿಸಯ್ಯ !

೧೫೪

ಮಾನವೇತಿಹಾಸದಲ್ಲಿ



ನಡೆಯದಷ್ಟು ಯುದ್ಧಗಳು
ನನ್ನೊಳಗೆ ನಡೆದಿವೆಯಯ್ಯಾ !
ಸಹರಾದಲ್ಲಿ
ಬೀಸದಷ್ಟು ಬಿರುಗಾಳಿಗಳು
ನನ್ನೊಳಗೆ ಬೀಸಿವೆಯಯ್ಯಾ !
ಸಪ್ತಸಾಗರಗಳಲ್ಲಿ
ಘಟಿಸದಷ್ಟು ಅಪಘಾತಗಳು
ನನ್ನೊಳಗೆ ಘಟಿಸಿವೆಯಯ್ಯಾ !
ಅಂತರಿಕ್ಷದಲ್ಲಿ
ಆಗದಷ್ಟು ಉಲ್ಕಾಪಾತಗಳು
ನನ್ನೊಳಗೆ ಆಗಿವೆಯಯ್ಯಾ !
ಹೀಗಿದ್ದೂ, ಹೇಗೆ ನನ್ನನ್ನುಳಿಸಿ
ಬಾಳಿಸಿಕೊಂಡು ಬಂದಿಹೆಯೊ !
ನೀ ಬಾಳಿಸುವ ಬಗೆಗೆ ಬೆರಗಾದೆನಯ್ಯ,
ಸ್ವತಂತ್ರಧೀರ ಸಿದ್ಧೇಶ್ವರಾ !

೧೫೫

ಹೊರಗು ಪದೇ ಪದೇ ಬದಲಾಗುತ್ತಿದ್ದರೂ
ಬದಲಾಗದ ಒಳಗು ನನ್ನದಾಗಿರಲಯ್ಯ ;
ಬಾಳ ಕಡಲಿನ ಮೇಲೆ
ಬೊಬ್ಬಿರಿವ ತೆರೆಗಳ ಅಬ್ಬರವಿದ್ದರೂ
ಕೆಳಗೆ, ಒಳಗೆ ನಿಸ್ತರಂಗ ನೀರವತೆ ನೆಲೆಸಿರಲಯ್ಯ ;
ಬದುಕಿನ ಹೋರಾಟವು
ಸ್ಪರ್ಧೆ ಈರ್ಷೆಗಳ ಬೆಂಕಿ-ಬೆಟ್ಟವಾದರೂ
ಬಾಳಿನ ಬೆಲೆಗಳು ಬೂದಿಯಾಗದಿರಲಯ್ಯ !
ಬೂದಿಯಾದರೂ ಘಟ್ಟಿ ಮಾಡಿ ಸುಟ್ಟು
ವಿಭೂತಿಯನ್ನಾಗಿಸುವ ಕಲೆ ನನ್ನದಾಗಲಯ್ಯ !
ಬೂದಿ ಬೂದಿಯಾಗಿಯೇ ಉಳಿದು
ಕತ್ತೆಗಳಿಗೆ ಕ್ರೀಡಾಂಗಣವಾಗದಿರಲಯ್ಯ
ಸ್ವತಂತ್ರಧೀರ ಸಿದ್ಧೇಶ್ವರಾ !

೧೫೬

ಅಂದವು ಇನ್ನೂ ಅಂದವಾಗಲು ಆಶಿಸಿದರೆ ಸರಿ,

ಕುರೂಪವು ಇನ್ನೂ ಕುರೂಪವಾಗಲು ಬಯಸಿದರೆ
ಹೇಗಯ್ಯ ?
ಮಧುರವು ಇನ್ನೂ ಮಧುರವಾಗಲು ಮನದಂದರೆ ಸರಿ,
ಕಟುವು ಕಟುತರವಾಗಲು ಹಾರೈಸಿದರೆ
ಹೇಗಯ್ಯ ?
ಶಿವವು ಶಿವತರವಾಗಲು ತವಕಿಸಿದರೆ ಸರಿ,
ಅಶಿವವು ಅಶಿವತರವಾಗಲು
ಹಾತೊರೆದರೆ ಹೇಗಯ್ಯ ?
ಸ್ವತಂತ್ರಧೀರ ಸಿದ್ಧೇಶ್ವರಾ,
ನರನು ನರೋತ್ತಮನಾಗಲು ಹೆಣಗಿದರೆ ಸರಿ,
ನರನು ವಾನರನಾಗಲು
ಹವಣಿಸಿದರೆ ಹೇಗಯ್ಯ ?

೧೫೭

ವಿಜ್ಞಾನಿಯ ಬುದ್ಧಿ,
ತತ್ತ್ವಜ್ಞಾನಿಯ ಮನ,
ಕವಿಯ ಹೃದಯವ ಕರುಣಿಸಯ್ಯ !
ದುಡಿತದ ಬಟ್ಟಲು,
ತಿಳಿವಿನ ಹಾಲು,
ಒಲವಿನ ಸಕ್ಕರೆಯ ದಯಪಾಲಿಸಯ್ಯ !
ನಯದ ನೌಕೆ,
ನಂಬಿಕೆಯ ಹುಟ್ಟು,
ದಿಟದ ದಿಕ್ಸೂಚಿಯ ಅನುಗ್ರಹಿಸಯ್ಯ !
ಛಲದ ಕುದುರೆ,
ಹದುಳದ ಹಲ್ಲಣ,
ವಿವೇಕದ ಕಡಿವಾಣವ ಕೊಡಯ್ಯ !
ಸ್ವತಂತ್ರಧೀರ ಸಿದ್ಧೇಶ್ವರಾ,
ನನ್ನ ನುಡಿಗೆ ನಿನ್ನ ಅರ್ಥ,
ನಿನ್ನ ಧ್ವನಿಯ ನೀಡಯ್ಯ !

೧೫೮

ಹೂವು ತಮ್ಮೆದೆಯ ತೆರೆದರೆ
ಅಂದ, ಸುಗಂಧ, ಮಕರಂದಗಳ ಸುಗ್ಗಿ ;
ಸಿಂಪುಗಳು ತಮ್ಮೆದೆಯ ತೆರೆದರೆ
ಮುತ್ತುಗಳು ಬರುವುವು ನುಗ್ಗಿ ;
ಹನುಮ ತನ್ನೆದೆಯ ತೆರೆದರೆ
ಸೀತಾರಾಮರ ಚಿತ್ರ ;
ಇರುಳು ತನ್ನೆದೆಯ ತೆರೆದರೆ
ಕೋಟಿ ಕೋಟಿ ನಕ್ಷತ್ರ !
ಎಲ್ಲರೆದೆಗಳಲ್ಲಿ ಒಂದಿಲ್ಲೊಂದು
ನಿಧಿ, ನಿಧಾನ
ನಿನ್ನ ವರಪ್ರದಾನ !
ನನ್ನೆದೆಯಲ್ಲಿ
ನೀನಾದರೂ ಇರಯ್ಯ
ಸ್ವತಂತ್ರಧೀರ ಸಿದ್ಧೇಶ್ವರಾ !

೧೫೯

ಹೊತ್ತಿನ ಹುತ್ತದ ಹಾವುಗಳನ್ನೇ
ಕತ್ತಿನ ಮಾಲೆಯನ್ನಾಗಿ ಮಾಡಿಕೊಳ್ಳುವ
ಕಲೆಯ ಕಲಿಸಯ್ಯಾ ;
ವಿಧಿಯ ಮದಹಸ್ತಿಯ ಚರ್ಮವನ್ನೇ
ಉಡುವ ವಸ್ತ್ರವನ್ನಾಗಿಸುವ
ಕುಶಲತೆಯ ಕಲಿಸಯ್ಯ ;
ಕರ್ಮದ ಕೊಲ್ಲುವ ಶಿಲುಬೆಯನ್ನೇ
ಕೈಯ ಶೂಲವನ್ನಾಗಿಸಿಕೊಳ್ಳುವ
ಕಸಬನು ಕಲಿಸಯ್ಯ ;
ಕಾಮದ ಗರಗಸವಳ್ಳಿಯನ್ನೇ
ಬೂದಿ ಮಾಡಿ ಬಳಿದುಕೊಳ್ಳುವ
ಬಗೆಯ ತಿಳಿಸಯ್ಯ ;
ಸ್ವತಂತ್ರಧೀರ ಸಿದ್ಧೇಶ್ವರಾ,
ಬದುಕಿನ ವಿಷವನ್ನೇ
ಬಾಳಿನ ರಸವನ್ನಾಗಿಸುವ
ರಸಾಯನಶಾಸ್ತ್ರವ ಕಲಿಸಯ್ಯ ;

೧೬೦

ನಿನ್ನ ಮಗ್ಗದ ಲಾಳಿಯಾಗುವ ಭಾಗ್ಯವಿಲ್ಲದಿದ್ದರೆ ಹೋಗಲಿ,
ಅದರ ಹರಿಯದ ಎಳೆಯಾಗುವ
ಹಿಗ್ಗನ್ನಾದರೂ ಕರುಣಿಸಯ್ಯ ;
ನಿನ್ನ ಕಣದ ಮೇಟಿಯಾಗುವ ಮೇಲ್ಮೆಯಿಲ್ಲದಿದ್ದರೆ ಹೋಗಲಿ,
ಅದರ ಹಂತಿಯ ಹಗ್ಗವಾಗುವ
ಹಿಗ್ಗನ್ನಾದರೂ ದಯಪಾಲಿಸಯ್ಯ ;
ನಿನ್ನ ತಿದಿಯ ಉಸಿರಾಗುವ ಹಿರಿಮೆಯಿಲ್ಲದಿದ್ದರೆ ಹೋಗಲಿ,
ಅದರ ಕುಲುಮೆಯ ಇದ್ದಿಲಾಗುವ
ಅಗ್ಗಳಿಕೆಯನ್ನಾದರೂ ಅನುಗ್ರಹಿಸಯ್ಯ
ಸ್ವತಂತ್ರಧೀರ ಸಿದ್ಧೇಶ್ವರಾ,
ನಿನ್ನ ಮಂದಿರದ ನಂದಾದೀಪವಾಗುವ ಗರಿಮೆಯಿಲ್ಲದಿರೆ ಹೋಗಲಿ,
ಅದರ ಪೊರಕೆಯಾಗುವ ಪುಣ್ಯವನ್ನಾದರೂ ನೀಡಯ್ಯ !

೧೬೧

ದಿನ ದಿನ ಗುಡಿಸಿಯೂ ದಿನ ದಿನ ಕಸ
ಈ ಮನೆಯಲ್ಲಿ ;
ದಿನ ದಿನ ಉಣಿಸಿಯೂ ದಿನ ದಿನ ಹಸಿವೆ
ಈ ತನುವಿನಲ್ಲಿ ;
ದಿನ ದಿನ ಹಿಗ್ಗು, ದಿನ ದಿನ ಕುಗ್ಗು
ಈ ಮನದಲ್ಲಿ ;
ದಿನ ದಿನ ಗಳಿಕೆ, ದಿನ ದಿನ ದುರಾಶೆ
ಈ ಧನದಲ್ಲಿ ;
ಮತ್ತೆ ಮತ್ತೆ ಮಾಗಿ, ಮತ್ತೆ ಮತ್ತೆ ಸುಗ್ಗಿ
ಈ ವನದಲ್ಲಿ !
ಹಂಬಲದ ಹೊಂಬಿಸಿಲು ನಿರಾಶೆಯ ಬಿರುಬಿಸಿಲಾಗಿ,
ಮತ್ತೆ ಹಾರೈಕೆಯ ಹೂಬಿಸಿಲಾಗುವುದು
ಈ ಗಗನದಲ್ಲಿ ;
ಈ ಅಂತವಿಲ್ಲದ ವಿರೋಧಾಭಾಸದ,
ಕೊನೆಯಿಲ್ಲದ ಕಣ್ಣುಮುಚ್ಚಾಲೆಯ
ಪರಮರಹಸ್ಯವೇನು ಹೇಳಾ ಸ್ವತಂತ್ರಧೀರ ಸಿದ್ಧೇಶ್ವರಾ !

೧೬೨

ಶಿಖರಗಳ ಸಾಲುಗಳನ್ನೊಮ್ಮೆ , ಮೋಡಗಳ ಮಾಲೆಗಳನ್ನೊಮ್ಮೆ ,



ತರಂಗಗಳ ಲೀಲೆಗಳನ್ನೊಮ್ಮೆ ನೋಡಿ ನಂದಿಸುವೆ ;
ಮಸಣದ ಜ್ವಾಲೆಗಳನ್ನೊಮ್ಮೆ , ಹಸಿವೆಯ ಶೂಲಗಳನ್ನೊಮ್ಮೆ ,
ಕ್ಲೇಶಗಳ ಕ್ಷ್ವೇಳಗಳನ್ನೊಮ್ಮೆ ನೋಡಿ ನೊಂದುಕೊಳ್ಳುವೆ !
ಹೂಗಳ ಹಾಸವನ್ನೊಮ್ಮೆ , ಶಿಶುಗಳ ಉಲ್ಲಾಸವನ್ನೊಮ್ಮೆ ,
ಕಲೆಯ ಕೈಲಾಸವನ್ನೊಮ್ಮೆ ನೋಡಿ ನಲಿಯುವೆ ; ರೋಗಿಯ
ಆಕ್ರೋಶವನ್ನೊಮ್ಮೆ , ದುಗುಡದ ವಿಶ್ವಾಸವನ್ನೊಮ್ಮೆ ,
ಅನಾಥರ ನಿಟ್ಟುಸಿರನ್ನೊಮ್ಮೆ ಕಂಡು ಕಳವಳಿಸುವೆ ;
ಉಪವನಕ್ಕೆ ಅನತಿದೂರದಲ್ಲಿಯೇ ಮಸಣ,
ಆಸ್ಪತ್ರೆಯ ಒಂದೆಡೆಯಲ್ಲಿ ಶಿಶು ಜನನ, ಇನ್ನೊಂದೆಡೆಯಲ್ಲಿ ಮರಣ !
ಇತ್ತ ಮಾಂಗಲ್ಯ ಧಾರಣ, ಅತ್ತ ಸೆದಿಗೆಯ ನಿರ್ಮಾಣ !
ನಗುತ್ತ ಅಳಬೇಕೋ ಅಳುತ್ತ ನಗಬೇಕೋ ನಾನರಿಯೆ ತಂದೆ !
ಕಾಯಕದ ವರದ ಹಸ್ತವಿದೆ ಮುಂದೆ ; ನಂಬಿರುವೆನು ಅದನೊಂದೆ !
ಮಾಡುವೆನದನೆ ನಿನಗಾಗಿ ನಿನ್ನಿಂದೆ,
ನಿನಗಾಗಿ ನಿನ್ನಿಂದೆ – ಸ್ವತಂತ್ರಧೀರ ಸಿದ್ಧೇಶ್ವರಾ !

೧೬೩

'ಯಾರು ನಿನ್ನ ನಾಯಕ ? ಯಾರು ನಿನ್ನ ನಾಯಕ ?'
ಎಂದು ಕೇಳುವರಯ್ಯ ಕೇಳಲೆಂದೇ ಹುಟ್ಟಿದವರು !
ಹೇಳುವೆನಿಂದು ಉತ್ತರವನವರಿಗೆ ;
ಕಾಯಕವೆ ನನ್ನ ನಾಯಕ,
ನೀನು ಕಾಯಕದ ನಾಯಕ, ಸ್ವತಂತ್ರಧೀರ ಸಿದ್ಧೇಶ್ವರಾ !

೧೬೪

ನುಡಿಸಲು ಬಾರದ ನರ
ಗಾನಕ್ಕೆ ಬದಲಾಗಿ ಅಧ್ವಾನವ ಪಡೆದರೆ
ಅದು ವೀಣೆಯ ತಪ್ಪೆ ?
ವರ್ಣವಿನ್ಯಾಸವರಿಯದ ಮನುಜ
ಚಿತ್ರಕ್ಕೆ ಪ್ರತಿಯಾಗಿ ವಿಚಿತ್ರವ ಪಡೆದರೆ
ಅದು ಕುಂಚದ ತಪ್ಪೆ ?
ಸಹೃದಯತೆಯಿಲ್ಲದೆ ವಿಮರ್ಶಕ
ರಸಕ್ಕೆ ಎರವಾಗಿ ಕಸವ ಕಂಡರೆ
ಅದು ಕವಿಯ ತಪ್ಪೆ ?
ಶುಭಮತಿಯಿಲ್ಲದ ಸಮಾಜ
ಹಿತಕ್ಕೆ ಬಳಸದೆ ಅಹಿತಕ್ಕೆ ಬಳಸಿದರೆ

ಅದು ವಿಜ್ಞಾನದ ತಪ್ಪೆ ?
ಸ್ವತಂತ್ರಧೀರ ಸಿದ್ಧೇಶ್ವರಾ,
ಬದುಕಲು ಬರದ ಮೂಳ
ಬಾಳಿನಲ್ಲಿ ಗೋಳನೇ ಕಂಡರೆ
ಅದು ಬಾಳಿನ ತಪ್ಪೆ ?

೧೬೫

ಮೌನದ ವೀಣೆಗೆ ಮಾತಿನ ತಂತಿಯೇಕಯ್ಯ ?
ಕೃತಿಯ ಬಿಲ್ಲಿಗೆ ಕನಸಿನ ಬಾಣವೇಕಯ್ಯ ?
ನಿಜದ ಬಳ್ಳಿಗೆ ಹುಸಿಯ ಹೂಗಳೇಕಯ್ಯ ?
ನಲ್ಮೆಯ ತಕ್ಕಡಿಗೆ ಆಣೆಯ ಕಾಣಿಯೇಕಯ್ಯ ?
ಸ್ವತಂತ್ರಧೀರ ಸಿದ್ಧೇಶ್ವರಾ,
ಇಹದ ಬದುಕಿಗೆ
ಪರದ ನಿಕಷವೇಕಯ್ಯ ?

೧೬೬

ಗೋಲ ಗುಮ್ಮಟವೂ ಅಲ್ಲ, ಗೋಳ ಗುಮ್ಮಟವೂ ಅಲ್ಲ,
ಕೇಳೀ ಗುಮ್ಮಟವಯ್ಯ ಬಾಳು ;
ನುಡಿದುದನೆ ಪಡಿನುಡಿವ ಜಡ ಗುಮ್ಮಟವಲ್ಲ,
ನವ್ಯಧ್ವನಿ ನವೀನ ಕೃತಿಗಳ
ಕಮ್ಮಟವಯ್ಯ ಬಾಳು ;
ಸತ್ತವರ ಸುಂದರ ಸ್ಮಾರಕ ಮಾತ್ರವಲ್ಲ,
ಇದ್ದವರ ಉದ್ಧಾರ ಮಠವಯ್ಯ ಬಾಳು ;
ಸಿರಿ, ಶ್ರಮ, ಸುಖಗಳ ತ್ರಿಪುಟಿ ಮಾತ್ರವಲ್ಲ,
ಶೀಲ, ಸೃಜನ, ಸಂಸ್ಕೃತಿಗಳ
ಸುವರ್ಣಸಂಪುಟವಯ್ಯ ಬಾಳು ;
ಕೀರ್ತಿವಾರ್ತೆಯ ಚಟ ಮಾತ್ರವಲ್ಲ,
ಮರಣವನ್ನು ಮೀರಬೇಕೆಂಬ ಹಟವಯ್ಯ ಬಾಳು ;
ಹೊಟ್ಟೆ ಬಟ್ಟೆಯ, ಅರ್ಥ ಕಾಮದ ಕಾಟ ಮಾತ್ರವಲ್ಲ,
ಹೊಲಬಿನ ಹೋರಾಟ,
ಹದುಳದ ಹೂದೋಟವಯ್ಯ ಬಾಳು !
ಸ್ವತಂತ್ರಧೀರ ಸಿದ್ಧೇಶ್ವರನ
ಶಿವಸೃಷ್ಟಿಯಲ್ಲಿ



ಹಳತು ಹೊಸತುಗಳ ಮೇಲಾಟವಯ್ಯ ಬಾಳು !

೧೬೭

ಬಾಳ ಬಂಡಿಗೆ ಬುದ್ಧಿ ಭಾವಗಳೆರಡು ಗಾಲಿಗಳು,
ಶೀಲವೇ ಕೀಲವಯ್ಯ ;
ಬಾಳ ಹಕ್ಕಿಗೆ ಅರ್ಥ ಕಾಮಗಳೆರಡು ರೆಕ್ಕೆಗಳು,
ಧರ್ಮವೇ ಧಾರಣಶಕ್ತಿಯಯ್ಯ ;
ಬಾಳ ಹಣತೆಗೆ ರೀತಿ ನೀತಿಗಳೇ ಎಣ್ಣೆ ಬತ್ತಿಗಳು,
ಪ್ರೀತಿಯೇ ಜ್ಯೋತಿಯಯ್ಯ ;
ಸ್ವತಂತ್ರಧೀರ ಸಿದ್ಧೇಶ್ವರಾ,
ಬಾಳ ಹಣ್ಣಿನಲ್ಲಿ ಶಕ್ತಿ ರಕ್ತಿಗಳೇ ಬೀಜ ಸಿಪ್ಪೆಗಳು,
ಭಕ್ತಿಯೇ ಮಧುರ ರಸವಯ್ಯ !

೧೬೮

ಬಿತ್ತುವಾಗೊಂದು ಹಿಗ್ಗು,
ಬೆಳೆಯುವಾಗೊಂದು ಹಿಗ್ಗು,
ಬೆಳೆಯ ಕಾಯುವಾಗೊಂದು ಹಿಗ್ಗು,
ಬೆಳೆಯ ಕುಯ್ಯುವಾಗೊಂದು ಹಿಗ್ಗು,
ರಾಶಿ ಮಾಡುವಾಗೊಂದು ಹಿಗ್ಗು,
ಆಯ ಕೊಡುವಾಗೊಂದು ಹಿಗ್ಗು,
ಉಳಿದುದ ಉಣ್ಣುವಾಗೊಂದು ಹಿಗ್ಗು !
ಬರೆಯುವಾಗೊಂದು ಹಿಗ್ಗು,
ಓದುವಾಗೊಂದು ಹಿಗ್ಗು,
ಓದಿಸಿ ಕೇಳುವಾಗೊಂದು ಹಿಗ್ಗು,
ಬೋಧಿಸಿ ಹೇಳುವಾಗೊಂದು ಹಿಗ್ಗು,
ಶೋಧಿಸಿ ಪ್ರಕಟಿಸುವಾಗೊಂದು ಹಿಗ್ಗು,
ತಿಳಿದವರು ಹಿಗ್ಗಿಸಿದಷ್ಟೂ ಹಿಗ್ಗುವುದಯ್ಯ ಹಿಗ್ಗು ;
ತಿಳಿಯದವರು ಕುಗ್ಗಿಸಿದಷ್ಟೂ ಕುಗ್ಗುವುದಯ್ಯ ಹಿಗ್ಗು !
ತಿಳಿದು ನಡೆದರೆ ಗಳಿಗೆ ಗಳಿಗೆಯೂ ರಸದ ತಳಿಗೆ,
ತಿಳಿಯದೆ ನಡೆದರೆ ಗಳಿಗೆ ಗಳಿಗೆಯೂ ವಿಷದ ಗುಳಿಗೆಯಯ್ಯಾ
ಸ್ವತಂತ್ರಧೀರ ಸಿದ್ಧೇಶ್ವರಾ !

೧೭೯

ಗುರಿಯ ಹಕ್ಕಿಯ ಗರಿಗಳನ್ನು ಕಿತ್ತೆನಯ್ಯ
ಕ್ಷಣಿಕ ವಿನೋದಕ್ಕಾಗಿ ;
ಕಣಸಿನ ಕುಸುಮದ ಎಸಳುಗಳನ್ನು ಹರಿದೆನಯ್ಯ
ನಿಮಿಷದ ಆಮೋದಕ್ಕಾಗಿ ;
ವಿಶ್ವಾಸದ ಕೊಡೆಯ ಕಡ್ಡಿಗಳನ್ನು ಮುರಿದೆನಯ್ಯ
ಹುಸಿ ಪ್ರಮೋದಕ್ಕಾಗಿ ;
ಪ್ರೀತಿಯ ಪೀತಾಂಬರದ ಎಳೆಗಳನ್ನು ಸೆಳೆದೆನಯ್ಯ
ಸುಳ್ಳು ಉಲ್ಲಾಸಕ್ಕಾಗಿ ;
ಸ್ವತಂತ್ರಧೀರ ಸಿದ್ಧೇಶ್ವರಾ,
ಬಾಳ ಹೊತ್ತಗೆಯ ಹಾಳೆಗಳನ್ನು ಹಾಳು ಮಾಡಿದೆನಯ್ಯ
ಹಾಳು ಹವ್ಯಾಸಕ್ಕಾಗಿ !

೧೮೦

ಬದುಕಿನ ಬೆಲೆಯನ್ನು ಸಲ್ಲಿಸಬೇಕು ;
ಬಿಡುಗಡೆಯ ಬೆಲೆಯನ್ನು ಸಲ್ಲಿಸಬೇಕು ;
ಒಲವಿನ ಬೆಲೆಯನ್ನು ಸಲ್ಲಿಸಬೇಕು ;
ಚೆಲುವಿನ ಬೆಲೆಯನ್ನು ಸಲ್ಲಿಸಬೇಕು ;
ಪ್ರಗತಿಯ ಬೆಲೆಯನ್ನು ಸಲ್ಲಿಸಬೇಕು ;
ಎಲ್ಲದರ ಬೆಲೆಯನ್ನೂ ಸಲ್ಲಿಸ ಬೇಕಿಲ್ಲಿ !
ಒಮ್ಮೆ ಬೆವರಿನ ಬೆಲೆ, ಒಮ್ಮೆ ಬವರದ ಬೆಲೆ,
ಒಮ್ಮೆ ಕಣ್ಣೀರಿನ ಬೆಲೆ, ಒಮ್ಮೆ ಕೆನ್ನೀರಿನ ಬೆಲೆ,
ಒಮ್ಮೆ ಸಹನೆಯ, ಸಂಯಮದ, ಸ್ವಾರ್ಥತ್ಯಾಗದ,
ಸೇವಾಯೋಗದ ಬೆಲೆ
ಒಂದಿಲ್ಲೊಂದು ಬೆಲೆಯ
ಸಲ್ಲಿಸಿದವರೇ ಸಲ್ಲುವರಯ್ಯ
ಇಲ್ಲಿಯೂ, ಅಲ್ಲಿಯೂ, ಎಲ್ಲೆಲ್ಲಿಯೂ !
"ಸಲ್ಲಿಸು, ಸಲ್ಲು ; ಸಲ್ಲು, ಗೆಲ್ಲು !"
ಇದು ಸ್ವತಂತ್ರಧೀರ ಸಿದ್ಧೇಶ್ವರನ ಸೊಲ್ಲು !

೧೮೧



ನವಿಲು ತೀರ್ಥದ ಹೇರೊಡಲು ತುಂಬಿತು ;
ಪಂಪಾಕ್ಷೇತ್ರದ ಪೆರ್ಮಡಿಲು ತುಂಬಿತು ;
ಬಾಖ್ರಾ   ನಂಗಾಲಿನ ಮರಿ ಕಡಲು ತುಂಬಿತು ;
ಈ ಬಾಳ ಕಿರಿಗೊಡ ಮಾತ್ರ, ಬರಿದಾಗಿಯೇ ಉಳಿಯಿತಯ್ಯ !
ಆಗಾಗ ಅರ್ಧ ತುಂಬಿ ತುಳುಕಿ ತಲ್ಲಣಗೊಳಿಸಿತಯ್ಯ !
ಬರಿಗೊಡವ ತಾಳಿಕೊಳ್ಳಬಹುದು,
ಅರೆಗೊಡವ ತಾಳಲಾಗದಯ್ಯ !
ಪೂರ್ಣ ತುಂಬಿಸು,
ಇಲ್ಲವೆ ಬರಿದಾಗಿ ಉಳಿಸು
ನಿನ್ನಿಷ್ಟದಂತೆ !
ಆದರೆ, ಕೊಡ ಮಾತ್ರ ನಿನ್ನದೆಂದೆನಿಸಯ್ಯ,
ಸ್ವತಂತ್ರಧೀರ ಸಿದ್ಧೇಶ್ವರಾ !

೧೮೨

ಒಂಬತ್ತು ಬಾಗಿಲಗಳಿಗೂ ಕದವಿಲ್ಲ,
ಕೀಲಿಯಿಲ್ಲ
ಆದರೂ ರತ್ನ ಕಳವಾಗಿ ಹೋಗಿಲ್ಲ
ಇದುವರೆಗೂ !
ಅದು ಕಳವಾಗುವಾಗ ಕಾಯ್ವ ತಳವಾರ ಹುಟ್ಟಿಲ್ಲ ಇನ್ನುವರೆಗೂ !
ಅದನು ಕಾಯುವ ಕಾಣದ ಕಾವಲುಗಾರನ ಕಣ್ಣು ತಪ್ಪಿಸಿ
ಅದನು ಕದ್ದವರು ಹುಟ್ಟಿಲ್ಲ
ಇಲ್ಲಿಯುವರೆಗೂ !
ಅದರ ಬೆಲೆ ಕಟ್ಟುವವರೂ ಬಂದಿಲ್ಲ
ಇಂದಿನವರೆಗೂ !
ಇರುವಾಗ ಅದರ ಬೆಲೆ ಬಲ್ಲವರು ಬಹಳಿಲ್ಲ ;
ಕಳವಾದ ಮೇಲೆ ಹುಡುಕಲು
ಕಳಕೊಂಡವರೆ ಉಳಿವುದಿಲ್ಲ !
ನೀ ಕೊಟ್ಟ ಈ ಅನರ್ಘ್ಯ ರತ್ನ
ನಿನ್ನವರಿಗೇ ತೊಡವಾಗಲಯ್ಯ,
ನಿನ್ನ ಮಕ್ಕಳಿಗೆ ಅಡವಾಗಲಯ್ಯ
ಸ್ವತಂತ್ರಧೀರ ಸಿದ್ಧೇಶ್ವರಾ !

೧೭೩

ಲಾಭದ ಲೋಭಿಗಳಿಂದ
ಗಂಗಾಜಲವನ್ನು ಕೊಳ್ಳುವುದಕ್ಕಿಂತ
ಗಂಗಾನದಿಯನ್ನೇ ಆಶ್ರಯಿಸುವುದು ಒಳಿತಯ್ಯ ;
ಆಶೆಯ ದಾಸರಿಂದ
ಧರ್ಮದ ಮರ್ಮ ತಿಳಿವುದಕ್ಕಿಂತ
ಧರ್ಮಕ್ಕೆ ಮೊರೆ ಹೋಗುವುದು ಮೇಲಯ್ಯ ;
ಧುರೀಣರೆಂಬವರಿಂದ
ದೇಶಭಕ್ತಿಯ ಕಲಿವುದಕ್ಕಿಂತ
ದೇಶವನ್ನೇ ಆಶ್ರಯಿಸುವುದು ಶ್ರೇಯಸ್ಕರವಯ್ಯ ;
ಸ್ವತಂತ್ರಧೀರ ಸಿದ್ಧೇಶ್ವರಾ,
ನಿನ್ನ ಹೆಸರಿನಲ್ಲಿ ಸುಲಿಗೆಯ ಸತ್ರ ನಡೆಸುವರಿಗಿಂತ
ನಿನ್ನನ್ನೇ ಆಶ್ರಯಿಸುವುದು ಲೇಸಿನಲ್ಲಿ ಲೇಸಯ್ಯ !

೧೭೪

ವಾರಾಂಗನೆಯ ಕೊರಳ
ನೀಲಮಣಿಯಾಗುವುದಕ್ಕಿಂತ
ಗರತಿಯ ಕೊರಳ ಕರ್ಮಣಿಯಾಗುವುದು ಮೇಲಯ್ಯ ;
ಮಿಹಿರಕುಲನ ಮನೆಯ
ಆನೆಯಾಗುವುದಕ್ಕಿಂತ
ಧರ್ಮವ್ಯಾಧನ ಮನೆಯ
ನಾಯಿಯಾಗುವುದು ಲೇಸಯ್ಯ ;
ವಾಲ್ಪೋಲನ ಸಂಪುಟದ
ಸಚಿವನಾಗುವುದಕ್ಕಿಂತ
ವಾಷಿಂಗ್ಟನ್ನನ ಮನೆಯ
ಪ್ರಹರಿಯಾಗುವುದು ಚೆನ್ನವಯ್ಯ ;
ಜಾರನ ಅರಮನೆಯ
ಪಾರುಪತ್ಯಗಾರನಾಗುವುದಕ್ಕಿಂತ
ಲೆನಿನ್ನನ ಮನೆಯ
ಬಾಣಸಿಯಾಗುವುದು ವಿಹಿತವಯ್ಯ ;
ದಾನವೇಂದ್ರನ ಯುವರಾಜನಾಗುವುದಕ್ಕಿಂತ
ಶ್ರೀರಾಮಚಂದ್ರನ
ಪಾದುಕೆಗಳಾಗುವುದು ಶ್ರೇಯಸ್ಕರವಯ್ಯ ;
ಸ್ವತಂತ್ರಧೀರ ಸಿದ್ಧೇಶ್ವರಾ,



ನಿನ್ನನುಳಿದು ಮಾಡುವ ಯಜ್ಞದ
ಯಜಮಾನನಾಗುವುದಕ್ಕಿಂತ
ನಿನ್ನ ತಳೆದು ಕಸಗುಡಿಸುವ
ಜಲಗಾರನಾಗುವುದು ಕರಲೇಸಯ್ಯ !

೧೭೫

ಅಪ್ರಮಾಣಿಕ ವಿಶ್ವಾಸಕ್ಕಿಂತ ಪ್ರಾಮಾಣಿಕ ಸಂಶಯವೇ ಶ್ರೇಷ್ಠವಯ್ಯ ;
ಕೃತ್ರಿಮ ಸ್ನೇಹಕ್ಕಿಂತ ವೈಚಾರಿಕ ವೈರವೇ ಲೇಸಯ್ಯ ;
ಸುಳ್ಳಿನ ಗೆಲವಿಗಿಂತ ಸತ್ಯದ ಸೋಲೇ ಶ್ರೇಯಸ್ಕರವಯ್ಯ ;
ಹೊಲ್ಲದ ಹೊಗಳಿಕೆಗಿಂತ ಸಲ್ಲುವ ಟೀಕೆಯೇ ಸ್ವಾಗತಾರ್ಹವಯ್ಯ ;
ನಿನ್ನ ಮರೆದು ಪಡೆವ ಸುಖಕ್ಕಿಂತ
ನಿನ್ನನರಿದು ಪಡುವ ದುಃಖವೇ ಮೇಲಯ್ಯ–ಸ್ವತಂತ್ರಧೀರ ಸಿದ್ಧೇಶ್ವರಾ !

೧೭೬

ಹಸಿ ಬಿಸಿಯ ಗಣಿಸುವುದೆ ಹಸಿವೆ ?
ಸ್ವಾದು ಸವುಳನೆಣಿಸುವುದೆ ತೃಷೆ ?
ಹಾಸಿಗೆಗೀಸಿಗೆಯ ಕಾಯುವುದೆ ಕಾಮ ?
ಕಾಲಾಕಾಲವ ಲೆಕ್ಕಿಸುವುದೆ ಕ್ರೋಧ ?
ಅನ್ಯರ ತನ್ನವರ ಗಮನಿಸುವುದೆ ಲೋಭ ?
ಮಾನಾಪಮಾನಗಳ ಲಕ್ಷಿಸುವುದೆ ಮೋಹ ?
ಮನೆ ಮಠಗಳ ಮನ್ನಿಸುವುದೆ ಮದ ?
ಲಿಂಗ ವಯಗಳ ಈಕ್ಷಿಸುವುದೆ ಮತ್ಸರ ?
ಇತಿಮಿತಿಗಳ ಅವಲೋಕಿಸುವುದೆ ಅತ್ಯಾಸೆ ?
ಉಚಿತಾನುಚಿತವ ವಿವೇಚಿಸುವುದೆ ಜಿಪುಣತನ ?
ಸ್ವತಂತ್ರಧೀರ ಸಿದ್ಧೇಶ್ವರಾ,
ನಿನ್ನ, ನಿನ್ನವರನೊಲಿವುದೆ ಪತಿತಮನ ?

೧೭೭

ಗುರುತ್ವಾಕರ್ಷಣ ಶಕ್ತಿಯಿದೆಯೆಂಬುದನ್ನು
ಸಿದ್ಧಗೊಳಿಸಲು

ನಾನೇ ಮರದಿಂದ ಬೀಳಬೇಕಿಲ್ಲ ;
ರಕ್ತ ಸಂಚರಣ ಸಿದ್ಧಾಂತವನ್ನು
ಸ್ಥಿರೀಕರಿಸಲು
ನನ್ನ ನರಗಳನ್ನೇ ಹರಿದು ತೋರಬೇಕಿಲ್ಲ ;
ವಿಷದ ಮಾರಕತೆಯನ್ನು
ದೃಢೀಕರಿಸಲು
ನಾನೇ ವಿಷ ಪ್ರಾಶನ ಮಾಡಬೇಕಿಲ್ಲ ;
ದುರ್ಗುಣಗಳ ದುಷ್ಫಲಗಳನ್ನು
ದರ್ಶಿಸಲು
ನಾನೇ ದುರ್ಗುಣಿಯಾಗಬೇಕಿಲ್ಲ ;
ಸ್ವತಂತ್ರಧೀರ ಸಿದ್ಧೇಶ್ವರಾ,
ನೀನಿಲ್ಲವೆಂದು ಸಾಧಿಸಲು
ನಾನೆಂಬುದನ್ನೇ ನಿರಾಕರಿಸಬೇಕಿಲ್ಲ !

೧೭೮

ನಿಯಮಗಳಂತೆ ಆಡದ ಆಟದಲ್ಲಿ
ಆನಂದವಾವುದಯ್ಯ ?
ಮನಸ್ಸಿಲ್ಲದ ಮದುವೆಯಲ್ಲಿ
ಮುದವಾವುದಯ್ಯ ?
ಮತಿಯೊಪ್ಪದ ಮತದಲ್ಲಿ
ಹಿತವಾವುದಯ್ಯ ?
ಮೃದುವಚನರಹಿತ ದಾನದಲ್ಲಿ
ಮೇಲ್ಮೆಯೆಲ್ಲಿಯದಯ್ಯ ?
ತಾಯಿಯಿಲ್ಲದ ಮನೆಯಲ್ಲಿ ?
ವಾತ್ಸಲ್ಯವೆಲ್ಲಿಯದಯ್ಯ ?
ಮಕ್ಕಳಿಲ್ಲದ ಮನೆಯಲ್ಲಿ
ಉಕ್ಕಂದವೆಲ್ಲಿಯದಯ್ಯ ?
ಕೂಡಿ ಹೆಜ್ಜೆಯಿಡದ ಕವಾಯತಿನಲ್ಲಿ
ಅಂದವೆಲ್ಲಿಯದಯ್ಯ ?
ಸ್ವತಂತ್ರಧೀರ ಸಿದ್ಧೇಶ್ವರಾ,
ನಿನ್ನ ಹೆಜ್ಜೆಯೊಡನೆ ಒಂದಾಗದ ಹೆಜ್ಜೆಯಲ್ಲಿ,
ನಿನ್ನ ಉದ್ದೇಶವನ್ನನುಸರಿಸದ ಉದ್ಯೋಗದಲ್ಲಿ,



ಅಭ್ಯುದಯ ನಿಃಶ್ರೇಯಸಗಳೆಲ್ಲಿಯವಯ್ಯ ?

೧೭೯

ನಿನ್ನ ತಿಗರಿಗೆ ಮಣ್ಣು ಮಾಡಿಕೊಳ್ಳಯ್ಯ ನನ್ನನ್ನು ;
ನಿನ್ನ ಭಟ್ಟಿಗೆ ಅದಿರು ಮಾಡಿಕೊಳ್ಳಯ್ಯ ನನ್ನನ್ನು ;
ನಿನ್ನ ಗರಗಸಕ್ಕೆ ಮುಂಡಿಗೆ ಮಾಡಿಕೊಳ್ಳಯ್ಯ ನನ್ನನ್ನು ;
ನಿನ್ನ ಸಬಳಕ್ಕೆ ಸಾಣೆ ಮಾಡಿಕೊಳ್ಳಯ್ಯ ನನ್ನನ್ನು ;
ನಿನ್ನ ಗಾಣಕ್ಕೆ ಕಬ್ಬು ಮಾಡಿಕೊಳ್ಳಯ್ಯ ನನ್ನನ್ನು ;
ನಿನ್ನ ಹಂತಿಗೆ ತೆನೆ ಮಾಡಿಕೊಳ್ಳಯ್ಯ ನನ್ನನ್ನು ;
ಸ್ವತಂತ್ರಧೀರ ಸಿದ್ಧೇಶ್ವರಾ,
ನಿನ್ನ ಉದ್ದೇಶಕ್ಕೆ ತಕ್ಕ
ಉಪಕರಣ ಮಾಡಿಕೊಳ್ಳಯ್ಯ ನನ್ನನ್ನು

೧೮೦

ಕಣ್ಣು ಕಾಣಬಲ್ಲುದಲ್ಲದೆ
ಕೇಳಲರಿಯದಯ್ಯ ;
ಕಿವಿ ಕೇಳಬಲ್ಲುದಲ್ಲದೆ ಕಾಣಲರಿಯದಯ್ಯ ;
ನಾಲಗೆ ರುಚಿಸಬಲ್ಲುದಲ್ಲದೆ
ಮೂಸಲರಿಯದಯ್ಯ ;
ನಾಸಿಕ ವಾಸಿಸಬಲ್ಲದಲ್ಲದೆ
ರುಚಿಸಲರಿಯದಯ್ಯ ;
ತ್ವಚವು ಸ್ಪರ್ಶಿಸಬಲ್ಲುದಲ್ಲದೆ
ದರ್ಶಿಸಲರಿಯದಯ್ಯ ;
ಒಂದೊಂದು ಇಂದ್ರಿಯಕ್ಕೆ
ಒಂದೊಂದು ಶಕ್ತಿ,
ಒಂದೊಂದರಲ್ಲಿಯೇ ರಕ್ತಿ.
ಎಲ್ಲ ಇಂದ್ರಿಯಗಳ ಮುಖದಲ್ಲಿದ್ದು
ಎಲ್ಲವನ್ನೂ ಕೇಳುವ, ನೋಡುವ,
ರುಚಿಸುವ, ವಾಸಿಸುವ, ಸ್ಪರ್ಶಿಸುವ
ನಿನ್ನನೇ ಅರಿಯದೆ
ಕಾಲ ಕಳೆದೆನಯ್ಯ
ಇಂದ್ರಿಯ ಲೋಲುಪ ನಾನು

ಸ್ವತಂತ್ರಧೀರ ಸಿದ್ಧೇಶ್ವರಾ !

೧೮೧

ನಿನ್ನ ಬರವಿನ ಮುನ್ನಚ್ಚರಿಕೆಯನ್ನೀವ
ರಾಡರ್ ಆಗಲಯ್ಯ ನನ್ನ ಹೃದಯ ;
ನಿನ್ನ ಅಡಿಯ ಅಯಸ್ಕಾಂತಕ್ಕೆ ಅಂಟಿಕೊಳ್ಳುವ
ಲೋಹಚೂರ್ಣವಾಗಲಯ್ಯ ನನ್ನ ಜೀರ್ಣಶೀರ್ಣಮನ ;
ನಿನ್ನ ಸಂಕಲ್ಪದ ಸಂಕೇತದ ಸುತ್ತು ಸುತ್ತುವ
ಕ್ಷಿಪಣಿಯಾಗಲಯ್ಯ ನನ್ನ ತನು ;
ಸ್ವತಂತ್ರಧೀರ ಸಿದ್ಧೇಶ್ವರಾ,
ನಿನ್ನ ಪ್ರಯೋಗಶಾಲೆಯಲ್ಲೊಂದು
ಟೆಸ್ಟ್ ಟ್ಯೂಬ್ ಆಗಲಯ್ಯ ನನ್ನ ಜೀವನ !

೧೮೨

ಖಂಡಾಂತರ ಯಾತ್ರೆ ಕೈಕೊಳ್ಳುವ
ಕ್ರೌಂಚಗಳ ಗಗನಪಥವನ್ನು
ಗುರುತಿಸಬಹುದು,
ಆದರೆ, ದೇಶಾಂತರಕ್ಕೆ ಹೊರಡುವ
ಕಥೆ, ಕೃತಿಗಳ ಭೂಪಥವನ್ನು
ಗುರುತಿಸುವುದು ಕಠಿಣವಯ್ಯ ;
ಸಾಗರದಿಂದ ಸಾಗರಕ್ಕೆ ಸಾಗುವ
ಜಲಚರ ಪ್ರಾಣಿಗಳ ಜಲಪಥವನ್ನು
ಗುರುತಿಸಬಹುದು,
ಜನಾಂಗದಿಂದ ಜನಾಂಗಕ್ಕೆ ಹರಡುವ
ಜಾಣಿಕೆ ಗೇಣಿಕೆಗಳ ಅಗೋಚರ ಪಥವನ್ನು
ಗುರುತಿಸುವುದು ಕಷ್ಟವಯ್ಯ ;
ಭೂಗರ್ಭದ ಲಾವಾರಸದ
ದುರ್ಗಮ್ಯ ಮಾರ್ಗವನ್ನೂ
ಹೇಗೋ ಗುರುತಿಸಬಹುದು,
ಮನದಲ್ಲಿಯೇ ಹರಿದಾಡುವ ಹಳವಂಡಗಳ
ಹಾದಿಯನ್ನು ಗುರುತಿಸುವುದು ದುಷ್ಕರವಯ್ಯ !
ಸ್ವತಂತ್ರಧೀರ ಸಿದ್ಧೇಶ್ವರಾ,



ನೆಲ-ನೀರು-ನಭ-ಬಾಹ್ಯಾಕಾಶಗಳ
ನೂರುಸಾವಿರ ದಾರಿಗಳನ್ನು ತೋರು, ಬಿಡು
ಮೈಯೆಲ್ಲ ವ್ಯಾಪಿಸಿರುವ ನಿನ್ನನ್ನು
ಮನಕ್ಕೆ ತರುವ ದಾರಿಯನ್ನು ಮಾತ್ರ
ತಪ್ಪದೆ ತೋರಯ್ಯ.

೧೮೩

'ನನ್ನ ನಿನ್ನ ನಡುವೆ ಅದೆಷ್ಟು ಅಂತರ !'
ಎಂದು ಉದ್ಗರಿಸುವಿಯಾ ?
ನನ್ನ ನನ್ನತನದ ನಡುವಿನ ಅಂತರ
ಇದಕ್ಕೂ ಹಿರಿದು !
ನನ್ನ ನನ್ನತನದ ನಡುವಣ ಅಂತರ ಹೋದರೆ
ನನ್ನ, ನಿನ್ನ ನಡುವಣ ಅಂತರವೂ ಅಳಿವುದಯ್ಯ
ಸ್ವತಂತ್ರಧೀರ ಸಿದ್ಧೇಶ್ವರಾ !

೧೮೪

ಸಾಸಿರ ಸಾಸಿರ ರೋಮ-ರಂಧ್ರ-ದ್ವಾರಗಳಲ್ಲಿ ಕುಳಿತು
ಕಾತರತೆಯಿಂದ ಕಾದಿದೆಯಯ್ಯ ಪ್ರಾಣ ;
ನಿಮಿಷ ನಿಮಿಷದ ಮುಂದೆ ನೀರೀಕ್ಷೆಯ ಪಕ್ಷಿಯಾಗಿ
ರೆಕ್ಕೆ ಬಡಿಯುತ್ತಲಿದೆಯಯ್ಯ ಮನ ;
ಕೋಟಿ ಕೋಟಿ ಕಿರಣ ಕುಸುಮಗಳ ದಳದಳಗಳಲ್ಲಿ
ದುಂಬಿಯಾಗಿ ಅರಸುತ್ತಲಿದೆಯಯ್ಯ ಚಿತ್ತ ;
ಸ್ಥಲದ ಜಲಧಿಯ ಮೀನು ಮೊಸಳೆಗಳಲ್ಲಿ
ಉಸಿರಾಗಿ ಚಲಿಸಲೆಳಸುತ್ತಿದೆಯಯ್ಯ ಅಹಂಕಾರ ;
ಅಣುವಿನೊಡಲಿನ ಪರಮಾಣುಪುಂಜದ
ರಹಸ್ಯಲೀಲೆಗಳಲ್ಲಿ
ರಮಿಸ ಬಯಸಿದೆಯಯ್ಯ ಬುದ್ಧಿ ;
ಈ ಒಡಲ ಕಡಲಿನಲ್ಲಿ
ಕಡೆಗೋಲಿಲ್ಲದೆ ಕಡೆಯುತ್ತಿವೆ
ಬಿಡುವಿಲ್ಲದಂತೆ
ಏನೇನೋ ನಾನಾ ವಿಧವಾಗಿ !
ವಿಷ ಹುಟ್ಟಿದರೆ
ದಕ್ಕಿಸಿಕೊಳ್ಳುವ ಶಕ್ತಿ ಕೊಡು,

ಅಮೃತ ಹುಟ್ಟಿದರೆ
ಸೊಕ್ಕಿ ಬೀಗದ ಸನ್ಮತಿಯ ಕೊಡು
ಸ್ವತಂತ್ರಧೀರ ಸಿದ್ಧೇಶ್ವರಾ !

೧೮೫

ಫಲವಿತ್ತ ರೆಂಬೆ ಬಾಗುತ್ತದೆ,
ಗೊನೆ ಹೊತ್ತ ಬಾಳೆ ಬಾಗುತ್ತದೆ,
ತೆನೆ ಹೆತ್ತ ದಂಟು ಬಾಗುತ್ತದೆ,
ಏನೇನೋ ಇಲ್ಲದುದು
ಬೀಗುತ್ತದೆ ನೋಡಾ
ಸ್ವತಂತ್ರಧೀರ ಸಿದ್ಧೇಶ್ವರಾ !
೧೮೬

ಸಂಜೆ ಮುಂಜಾವುಗಳು ನೀಡುವ
ಅಪರಂಜಿಯುಡುಗೆ
ಸ್ಥಿರವಲ್ಲ ಬುವಿಗೆ, ಬಾನಿಗೆ ;
ಮಳೆಗಾಲವೀವ ನೆರೆ
ಸ್ಥಿರವಲ್ಲ ತೊರೆಗಳಿಗೆ ಝುರಿಗಳಿಗೆ ;
ವಸಂತವೀವ ಚಿಗುರು, ಹೊಗರು
ಸ್ಥಿರವಲ್ಲ ತರುಗಳಿಗೆ, ಲತೆಗಳಿಗೆ ;
ಮಾಗಿಯೀವ ಬೋಳು, ಬೋಡು
ಸ್ಥಿರವಲ್ಲ ಬನಗಳಿಗೆ, ಉಪವನಗಳಿಗೆ ;
ಶೈಶವ ಸ್ಥಿರವಲ್ಲ, ಬಾಲ್ಯ ಸ್ಥಿರವಲ್ಲ,
ಯೌವನ ಸ್ಥಿರವಲ್ಲ
ಜೀವನವೇ ಸ್ಥಿರವಲ್ಲ ಜೀವಿಗಳಿಗೆ !
ಸ್ಥಿರತೆ ಯಾವ ವರ ?
ಅಸ್ಥಿರತೆ ಯಾವ ಶಾಪ ?
ಸ್ಥಿರತೆ ಬಂಧನ, ಅಸ್ಥಿರತೆ ನಂದನ ನನಗೆ !
ಸ್ಥಿರತೆಯೂ ಬೇಡ,
ಸ್ಥಾವರತೆಯೂ ಬೇಡ !
ನೀನೊಬ್ಬ ಸ್ಥಿರ, ಅಜರ,
ಅಮರನಾಗಿದ್ದರೆ ಸಾಲದೆ ?



ಅಮರತೆಯ ತಾಳಿಕೊಳ್ಳುವ
ಶಕ್ತಿ ನಿನಗೆ ಮಾತ್ರ !
ನನಗೆ ಅಸಹ್ಯ ಅಮರತೆಯ
ಆಜೀವ ಶಿಕ್ಷೆ ಬೇಡವಯ್ಯ
ಸ್ವತಂತ್ರಧೀರ ಸಿದ್ಧೇಶ್ವರಾ !

೧೮೭

'ಯಾವುದೂ ಸ್ಥಿರವಲ್ಲ !'
ಎಂದು ಉಸಿರ್ಗರೆವುದು ತರವಲ್ಲ ;
ಸ್ಥಿರ, ಅಸ್ಥಿರ,
ಎರಡೂ ಹರನ ವರ ;
ಎರಡರಲ್ಲೂ ಒಂದೇ ಸ್ವರ ; 'ಸ್ವತಂತ್ರಧೀರ ಸಿದ್ಧೇಶ್ವರ'
೧೮೮

ನಿನ್ನೆ ಮೊನ್ನೆಯವರೆಗೆ
ನಿಜವೆಂದು ನಂಬಿದುದು
ಇಂದು ಸಂದೇಹಕ್ಕೆ ಇನ್ನೊಂದು ಹೆಸರು ;
ನಿನ್ನೆ ಮೊನ್ನೆಯವರೆಗೆ
ಔಷಧವೆಂದು ವಿಶ್ವಾಸಿಸಿದುದು
ಇಂದು ವಿಷವೆಂದು ಕಸವೆಂದು ಪರಿಗಣಿತ ;
ನಿನ್ನೆ ಮೊನ್ನೆಯವರೆಗೆ
ತತ್ತ್ವಜ್ಞಾನವೆಂದು ತಿಳಿದುದು
ಇಂದು ಸಾಮಾನ್ಯಕ್ಕೂ ಸಾಮಾನ್ಯಜ್ಞಾನ ;
ನಿನ್ನೆ ಮೊನ್ನೆಯವರೆಗೆ
ನವನವೀನವೆನಿಸಿದುದು
ಇಂದು ಹಳದು, ಹಳಸಿದುದು, ಹಾಳು !
ಒಮ್ಮೆ ಎಲ್ಲ ಹೊಸತು,
ಮತ್ತೊಮ್ಮೆ ಎಲ್ಲ ಹಳತು ;
ನೀನು ಮಾತ್ರ ಹಳಬರಿಗೆ ಹಳಬ,
ಹೊಸಬರಲ್ಲಿ ಹೊಸಬ,
ನಿರಂತರಕ್ಕೆ ನಿರಂತರ,
ಚಿರಂತನಕ್ಕೆ ಚಿರಂತನ
ಅಜ, ಅಜರ, ಅಮರ, ಪರಾತ್ಪರ

ಸ್ವತಂತ್ರಧೀರ ಸಿದ್ಧೇಶ್ವರ !

೧೮೯

ಆದಿಯಿದ್ದರೆ ತಾನೆ ಅಂತ್ಯವಿರುವುದು ?
ಆದಿಯೇ ಇಲ್ಲದಿರೆ ಅಂತ್ಯವೆಲ್ಲಿಯದಯ್ಯಾ ?
ಮೂರ್ತವಾದುದಕೆ ತಾನೆ ಪ್ರಳಯವಿರುವುದು ?
ಮೂರ್ತವೇ ಅಲ್ಲದುದಕೆ ಪ್ರಳಯವೆಲ್ಲಿಯದಯ್ಯಾ ?
ನಾಮವಿದ್ದುದಕೆ ತಾನೆ ಸೀಮೆಯಿರುವುದು ?
ನಾಮವೇ ಇರದುದಕೆ ಸೀಮೆಯಲ್ಲಿಯದಯ್ಯ ?
ಸ್ವತಂತ್ರಧೀರ ಸಿದ್ಧೇಶ್ವರಾ,
ಅರಿವಿಗೆಟಕುವುದಕ್ಕೆ ತಾನೆ ಪರಿಧಿಯಿರುವುದು ?
ಅರಿವಿಗೇ ನಿಲುಕದ ನಿನಗೆ ಪರಿಧಿಯಾವುದಯ್ಯಾ ?

೧೯೦

ರಾಗ-ದ್ವೇಷಗಳ ನಡುವೆ ಹಗ್ಗ-ಹೋರಾಟ !
ಅದೊಮ್ಮೆ ಗೆದ್ದರೆ ಇದೊಮ್ಮೆ ಬೀಳುತ್ತದೆ,
ಅದು ಒಮ್ಮೆ ಬಿದ್ದರೆ ಇದು ಒಮ್ಮೆ ಏಳುತ್ತದೆ !
ಒಂದರ ಏಳು ಬೀಳಿನಲ್ಲಿ ಇನ್ನೊಂದರ ಅಂಗವಿದೆ,
ಹೊರಗೆ ಪರಸ್ಪರ ವಿರೋಧಿಯಾಗಿ ತೋರಿದರೂ
ಒಳಗೆ ಸೂಕ್ಷ್ಮತಮ ಸಂಗವಿದೆ !
ರಾಗವೇ ಇಲ್ಲದಿರೆ ದ್ವೇಷವೆಲ್ಲಿಯದು ?
ದ್ವೇಷವೇ ಇಲ್ಲದಿರೆ ರೋಷವೆಲ್ಲಿಯದು ?
ರೋಷವೇ ಇಲ್ಲದಿರೆ ಬುದ್ಧಿನಾಶವೆಲ್ಲಿಯದು ?
ಬುದ್ಧಿನಾಶವೇ ಇಲ್ಲದಿರೆ ಆತ್ಮನ ಹ್ರಾಸವೆಲ್ಲಿಯದು ?
ರಾಗವೂ ಬೇಡ, ದ್ವೇಷವೂ ಬೇಡ,
ವಿರಾಗವೂ ಬೇಡ,
ಯೋಗ ಯಾಗವೂ ಬೇಡ,
ನಿನ್ನಲ್ಲಿ ಅನುರಾಗವ ಕರುಣಿಸಯ್ಯ
ಸ್ವತಂತ್ರಧೀರ ಸಿದ್ಧೇಶ್ವರಾ !

೧೯೧



ನಿನ್ನ ಜ್ಞಾನ ದೊರೆಯದಿದ್ದರೆ ಹೋಗಲಿ,
ನಿನ್ನ ಧ್ಯಾನವಿದೆಯಯ್ಯ ನನಗೆ ;
ನಿನ್ನ ಧ್ಯಾನ ಸಾಧಿಸದಿದ್ದರೆ ಹೋಗಲಿ,
ನಿನ್ನವರ ಊಳಿಗವಿದೆಯಯ್ಯ ನನಗೆ ;
ನಿನ್ನವರ ಊಳಿಗ ಸಿಕ್ಕದಿದ್ದರೆ,
ದಕ್ಕದಿದ್ದರೆ ಹೋಗಲಿ,
ಅವರಡಿಯ ಹುಡಿಯಿದೆಯಯ್ಯ ನನಗೆ ;
ಅವರಡಿಯ ಹುಡಿಯನ್ನೂ ಪಡೆಯಲಾಗದಿದ್ದರೆ
ನಾನೆ ಹುಡಿಯಾಗುವೆನಯ್ಯ
ಅವರಡಿಯ ಕೆಳಗೆ –
ಸ್ವತಂತ್ರಧೀರ ಸಿದ್ಧೇಶ್ವರಾ !

೧೯೨

ಆಶೆಯ ನೆರಳು ನಿರಾಶೆ,
ಆಶೆಯೇ ಇಲ್ಲದಿರೆ
ನಿರಾಶೆ ಎಲ್ಲಿಯದಯ್ಯ ?
ಸುಖದ ಹಂಬಲದಲ್ಲಿ ದುಃಖದ ಸೆಲೆ,
ಸುಖದ ಹಂಬಲವೇ ಇಲ್ಲದಿರೆ
ದುಃಖವೆಲ್ಲಿಯದಯ್ಯ ?
ಲಾಭದ ಲೋಭದಲ್ಲಿ ಹಾನಿಯ ಕೊನರು,
ಲಾಭದ ಲೋಭವೇ ಇಲ್ಲದಿರೆ
ಹಾನಿಯೆಲ್ಲಿಯದಯ್ಯ ?
'ಬೇಕಿ'ನ ಜೋಕಾಲಿಯಲ್ಲಿ 'ಬೇಡ'ದ ಜೀಕು,
ಬೇಕೆಂಬುದೇ ಇಲ್ಲದಿರೆ
ಬೇಡವೆಂಬುದೆಲ್ಲಿಯಯ್ಯ ?
ಸ್ವತಂತ್ರಧೀರ ಸಿದ್ಧೇಶ್ವರಾ,
ನಾನೆಂಬುದಿರುವಾಗ
ನೀನೆಂಬ ಪರಿಕಲ್ಪನೆ,
ನಾನೆಂಬುದೇ ಇಲ್ಲವಾದಾಗ
ನೀನೆಂಬರಾರಯ್ಯ ?

೧೯೩

ಹಣ ಕೊಳ್ಳಲಾಗದುದೂ ಇದೆಯಯ್ಯ
 ನಿನ್ನ ಸೃಷ್ಟಿಯಲ್ಲಿ ;
ಯಂತ್ರ ಮಾಡಲರಿಯದುದೂ ಇದೆಯಯ್ಯ
 ನಿನ್ನ ಲೋಕದಲ್ಲಿ ;
ಜ್ಞಾನ ವಿಜ್ಞಾನ ತಿಳಿಯಲಾಗದುದೂ ಇದೆಯಯ್ಯ
 ನಿನ್ನ ವಿಶ್ವದಲ್ಲಿ ;
ಸಮೃದ್ಧಿ ನೀಡಲಾಗದುದೂ ಇದೆಯಯ್ಯ
 ನಿನ್ನ ಜಗತ್ತಿನಲ್ಲಿ ;
 ಸ್ವತಂತ್ರಧೀರ ಸಿದ್ಧೇಶ್ವರಾ,
ಮರಣ ಗೆಲಲಾಗದುದೂ ಇದೆಯಯ್ಯ
 ನಿನ್ನ ಪ್ರಪಂಚದಲ್ಲಿ !

೧೯೪

ಅಲೆಮಾರಿ ಮನಕ್ಕೆ ನೆಲೆಯೂರಿ ನಿಲ್ಲಲು
 ನಿನ್ನ ಮನನದ ಮನೆಯನ್ನು ಕೊಡಯ್ಯಾ ;
ಹೆಪ್ಪುಗಟ್ಟಿದ ಮನಕ್ಕೆ ಹರಿವ ಚೇತನ ಬರಲು
 ನಿನ್ನ ತ್ರಿಶೂಲದ ತಿವಿತವ ನೀಡಯ್ಯಾ !
ಸೀಳಿ ಹೋಳಾದ ಮನಕ್ಕೆ ಹೊಂದಿ ಒಂದಾದ ಸ್ಥಿತಿ ತರಲು
 ನಿನ್ನ ಒಲವಿನ ವಜ್ರದಂಟು ದಯಪಾಲಿಸಯ್ಯಾ ;
ಬಂಧನಕ್ಕೆ ಸಿಲುಕಿ ಸುಂದಾದ ಮನದ ನಿರ್ಬಂಧನಕ್ಕೆ
 ನಿನ್ನ ಅಗ್ನಿನೇತ್ರದ ಶಾಖಮಯೂಖವ ಕರುಣಿಸಯ್ಯಾ !
ಶಂಕೆಯಿಂದ ಮಂಕಾದ ನೋಟದ ಕೊಂಕಳಿಯಲು
 ನಿನ್ನ ಕೋಟಿಕೋಟಿ ಬ್ರಹ್ಮಾಂಡಗಳ ಕಾಣ್ಕೆಯನ್ನೀಯಯ್ಯಾ ;
ಹರಿದು ಹರಡಿದ ದೃಷ್ಟಿಯ ಬರಡು ನೀಗಿಸಲು
 ಇಷ್ಟದಲ್ಲಿಯೆ ನೆಟ್ಟ ದಿಟ್ಟ ದಯಪಾಲಿಸಯ್ಯಾ !
ಎಲ್ಲವನ್ನೂ ಒಮ್ಮೆ ಬಿಡಿಯಾಗಿ, ಒಮ್ಮೆ ಇಡಿಯಾಗಿ ನೋಡಿ
 ಅಣುರಚನೆಯಲ್ಲಿಹುದೇ ಬ್ರಹ್ಮಾಂಡನಿಚಯದಲ್ಲಿಹುದೆಂಬ
 ಪ್ರಜ್ಞೆಯನೆ ಅನುಗ್ರಹಿಸಯ್ಯ
 ಸ್ವತಂತ್ರಧೀರ ಸಿದ್ಧೇಶ್ವರ !



೧೯೫

ನೆಟ್ಟು ಕಡಿದಂತೆ ಬೆಟ್ಟಗಳನ್ನು ಕಷ್ಟವಿಲ್ಲದೆ ಕಡಿಯಬಹುದೀಗ,
 ಆದರೆ ಅಜ್ಞಾನ ಗ್ರಂಥಿಗಳನ್ನು ಕಡಿಯುವುದು
 ಅಷ್ಟು ಸುಲಭವೇನಯ್ಯ ?
ಓಲ್ಗಾ, ಗಂಗಾ, ಮಿಸಿಸಿಪಿ, ಹೋ ಆಂಗ್ ಹೋಗಳಿಗೂ
 ಕಟ್ಟೆ ಕಟ್ಟಬಹುದು
 ಆದರೆ ಕಣ್ಣೀರಿಗೆ ಕಟ್ಟೆ ಕಟ್ಟುವುದು ಸುಲಭ ಸಾಧ್ಯವೇನಯ್ಯ ?
ಲಕ್ಷ ಲಕ್ಷ ನಕ್ಷತ್ರಗಳ ವಿಸ್ತಾರವನ್ನೂ ಒಮ್ಮಿಲ್ಲೊಮ್ಮೆ ಅಳೆಯಬಹುದು,
 ಆದರೆ ಅಂತರಂಗದ ಆಳ ಅಗಲಗಳನ್ನಳೆವುದು ಸುಲಭವೇನಯ್ಯ ?
 ಸ್ವತಂತ್ರಧೀರ ಸಿದ್ಧೇಶ್ವರಾ,
 ನಿನ್ನಿಂದಾದ ಏನೆಲ್ಲವನ್ನೂ ಅರಿಯಬಹುದು,
 ಆದರೆ ನಿನ್ನನ್ನೇ ಅರಿವುದು ಸುಲಭವೇನಯ್ಯ ?

೧೯೬

ಹೆಪ್ಪಿನ ಮಜ್ಜಿಗೆಗೆ
 ಹೆಮ್ಮೆಯ ಕೋಡು ಮೂಡಿದರೆ
ಹಾಲು ಕರೆದ ಹಸುವಿಗಿಂತ
 ಹಿರಿದಾಗಬಲ್ಲುದೇನಯ್ಯ ?
ಉಪ್ಪಿನ ಉರದಲ್ಲಿ
 ಹಮ್ಮು ಕಚಕುಳಿ ಇಟ್ಟರೆ
ಬೆರೆಸಿಕೊಂಡ ಹಿಟ್ಟಿಗಿಂತ
 ಹಿರಿದಾಗಬಲ್ಲುದೇನಯ್ಯ ?
ಶಂಖದ ಒಡಲಿನಲ್ಲಿ
 ಬಿಮ್ಮಿನ ತಿದಿ ಊದಿದರೆ
ಶರಧಿಗಿಂತ ಹಿರಿದಾಗಬಲ್ಲುದೇನಯ್ಯ ?
 ಸ್ವತಂತ್ರಧೀರ ಸಿದ್ಧೇಶ್ವರಾ,
 ನಿನ್ನನೋಲೈಸುವ ಸ್ಥಲಕಾಲಗಳು
 ನಿನಗಿಂತ ಹಿರಿದಾಗಬಲ್ಲುವೇನಯ್ಯ ?

೧೯೭

ಬರ್ಲಿನ್ ಗೋಡೆಯನ್ನು ಕಟ್ಟ

ನಗರವನ್ನು ಒಡೆದರಾಗಲಿ
ಜರ್ಮನ್ ಜನಾಂಗವನ್ನು ಒಡೆದರೇನಯ್ಯಾ ?
ಚೀಣಾ ಗೋಡೆಯನ್ನು ಕಟ್ಟಿ
ಇನ್ನೇನ ತಡೆದರೂ
ವಿಚಾರ ವಾಹಿನಿಯನ್ನು ತಡೆಯಲಾದೀತೇನಯ್ಯಾ ?
ಸಾಗರಗಳ ದಿಗ್ಬಂಧನ ಗೈದು
ಸರಕುಗಳ ಸಾಗಾಟ ತಡೆಯಬಹುದಾಗಲಿ
ಆಶೋತ್ತರಗಳ ಓಡಾಟವನ್ನು ತಡೆಯಬಹುದೇನಯ್ಯಾ ?
ಹರಡುವ ಗಂಧಕ್ಕೆ ಗಡಿಗಳನ್ನು ಹಾಕುವ ಹವ್ಯಾಸ,
ಹಬ್ಬುವ ಬೆಳಕಿಗೆ ಬಂಧನಗಳನ್ನು ಬಿಗಿವ ಹವ್ಯಾಸ,
ಚೆಲ್ಲವರಿವ ಒಲವಿಗೆ ಎಲ್ಲೆಗಳನ್ನು ರಚಿಸುವ ಹವ್ಯಾಸ,
ನಿನ್ನ ಕರುಣೆಗೆ ಗೋಡೆಗಳನ್ನು ಕಟ್ಟುವ ಹವ್ಯಾಸ
ಹಾಸ್ಯಾಸ್ಪದ ಹವ್ಯಾಸಗಳಲ್ಲವೇನಯ್ಯ,
ಸ್ವತಂತ್ರಧೀರ ಸಿದ್ಧೇಶ್ವರಾ ?

೧೯೮

ಸುರಿವ ಮಳೆ ಅಷ್ಟೇ ನಮ್ಮ ಮನೆಯ ಮೇಲೆ,
ಮಂದಿಯ ಮನೆಯ ಮೇಲೆ,
ಆದರೆ, ದೃಷ್ಟಿಭ್ರಾಂತಿಯಿಂದ
ಮಂದಿಯ ಮನೆಯ ಮೇಲೆಯೇ ಹೆಚ್ಚೆಂದು ಭ್ರಮಿಸುತ್ತೇವೆ ! ಇರುವ
ಸುಖದುಃಖ ಅಷ್ಟೇ
ಇಲ್ಲಿಯೂ, ಅಲ್ಲಿಯೂ, ಎಲ್ಲೆಲ್ಲಿಯೂ
ಆದರೆ, ನಮಗಿಂತ ಅನ್ಯರು ಸುಖಿಯೆಂದು
ಕರುಬಿ ಕೊರಗುತ್ತೇವೆ !
ಸ್ವತಂತ್ರಧೀರ ಸಿದ್ಧೇಶ್ವರಾ,
ನಿನ್ನ ಕರುಣೆ ಅಷ್ಟೇ ಎಲ್ಲರ ಮೇಲೆ
ಭಿನ್ನ ಭಿನ್ನ ರೂಪಗಳಲ್ಲಿ
ಆದರೂ, ಅವರಿವರ ಮೇಲೆ ಹೆಚ್ಚೆಂದು
ತಲೆಹರಟೆ ಕೊಚ್ಚುತ್ತೇವೆ !

೧೯೯

ವೈದುಷ್ಯ ವಣಿಕ
ತರದಿರು ನಿನ್ನ ತಲೆಯ ಇಲ್ಲಣವನ್ನಿಲ್ಲಿ,
ಕಲಿಯೆ ಬಾ ಒಲಿದೆದೆಯ ತಿಲ್ಲಾಣವನ್ನಿಲ್ಲಿ ;



ನಾಟ್ಯಶಾಸ್ತ್ರವಲ್ಲ,
ನಾಟ್ಯವಾಗಿ ಬಾ ಇಲ್ಲಿ ;
ಕಾವ್ಯಮೀಮಾಂಸೆಯಲ್ಲ,
ಕಾವ್ಯವಾಗಿ ಬಾ ಇಲ್ಲಿ ;
ಆಶ್ವಾಸನವಲ್ಲ,
ಆಚರಣವಾಗಿ ಬಾ ಇಲ್ಲಿ ;
ಪ್ರವಚನವಲ್ಲ,
ಅನುಷ್ಠಾನವಾಗಿ ಬಾ ಇಲ್ಲಿ ;
ಬೋಧನೆಯಲ್ಲ,
ಆರಾಧನೆಯಾಗಿ ಬಾ ಇಲ್ಲಿ ;
ಇದು ಸ್ವತಂತ್ರಧೀರ ಸಿದ್ಧೇಶ್ವರನ ಸಾನ್ನಿಧ್ಯ
ಪೂಜಾರಿಯಾಗಿ ಅಲ್ಲ,
ಭಕ್ತನಾಗಿ ಬಾ ಇಲ್ಲಿ !

೨೦೦

ಮೈಲಿಗಲ್ಲು ಮಾರ್ಗದರ್ಶನ ಮಾಡಬಹುದಾಗಲಿ
ನಿನ್ನ ಸಹಚರನಾಗಬಲ್ಲುದೆ, ಮಾನವ ?
ಮರ ನೆರಳು ನೀಡಬಹುದಾಗಲಿ
ಕೊಡೆಯಾಗಿ ನಿನ್ನೊಡನೆ
ನಡೆಯಬಲ್ಲುದೆ, ಮಾನವ ?
ನಿಲ್ದಾಣದವರೆಗೆ ಕಳಿಸಬಂದವರು
'ಸುಖಾಸ್ತೇಪಂಥಾನಃ' ಎಂದು ಹೇಳಿ
ಹಿಂದಿರುಗುವರಾಗಲಿ
ನಿನ್ನ ಹಿಂದೆ ಬರುವರೆ, ಮಾನವ ?
ಬರಬಲ್ಲುದು ಧರ್ಮ ನಿನ್ನೊಡನೆ ನಾಯಿಯಾಗಿ !
ಬರಬಲ್ಲುವು ಒಳಿತು ಸೈಪುಗಳು ನಿನ್ನ ನೆರಳಾಗಿ !
ಬರದವರಿಗಾಗಿ ಬಾಯ್ಬಿಟ್ಟು,
ಬರುವವರ ಬಿಟ್ಟುಕೊಟ್ಟು,
ಕೆಟ್ಟೆನೆಂದು ಕುಟ್ಟಿಕೊಂಡು ಅಳದಿರು ಮಾನವ !
ನಿನ್ನೊಳೇ ಇರುವವನು,
ಸ್ಮರಿಸಿದಾಗ ಬರುವವನು.
ಮರೆದಾಗಲೂ ಪೊರೆವವನು
ಸ್ವತಂತ್ರಧೀರ ಸಿದ್ಧೇಶ್ವರನೆಂದು ನಂಬು !

೨೦೧

ಹಳರೆಕ್ಕೆ ಕಳಚಿದುವು, ಹೊಸ ರೆಕ್ಕೆ ಕೊನರಿದುವು,
ಹಕ್ಕಿ ಮಾತ್ರ ಮೊದಲಿನದೇ ಅಯ್ಯ ;
ಹಣ್ಣೆಲೆಗಳು ಉದುರಿದುವು, ಹಸಿರೆಲೆಗಳು ಚಿಗುರಿದುವು,
ಮರ ಮಾತ್ರ ಮೊದಲಿನದೇ ಅಯ್ಯ ;
ಹಳ ನೀರು ಹೋಯಿತು, ಹೊಸ ನೀರು ಬಂದಿತು,
ಹಳ್ಳ ಮಾತ್ರ ಮೊದಲಿನದೇ ಅಯ್ಯ ;
ನಿನ್ನ ಹೆಸರಿನಲ್ಲಿ ಹಳ, ಹೊಸ ಗ್ರಂಥ ಪಂಥಗಳೂ,
ವೇದಾಂತ ಸಿದ್ಧಾಂತ ರಾದ್ಧಾಂತಗಳೂ ಹುಟ್ಟಿದುವು
ನೀನು ಮಾತ್ರ ಮೊದಲಿಗ,
ಮೂಲಿಗರಲ್ಲಿ ಮೂಲಿಗನಯ್ಯ,
ಸ್ವತಂತ್ರಧೀರ ಸಿದ್ಧೇಶ್ವರಾ !

೨೦೨

ಎವರೆಷ್ಟನು ಏರುವ, ಅಂತರಿಕ್ಷಕ್ಕೆ ಹಾರುವ,
ಬಾಹ್ಯಾಕಾಶವನ್ನು ಮೀರುವ ಭರದಲ್ಲಿ
ಭೂಮಿಯ ಮೇಲೆ ಬದುಕುವುದೇ ಗೌಣವಾಯಿತೇನಯ್ಯಾ ?
ಕೃಷಿಯ ಯಾಂತ್ರೀಕರಣ, ಕೈಗಾರಿಕೆಯ ಯಾಂತ್ರೀಕರಣ,
ಮನೆಮನೆಯ ಯಾಂತ್ರೀಕರಣದ ಉಬ್ಬಿನಲ್ಲಿ
ಮಾನವೀಕರಣಕ್ಕೇ ಮಹತ್ವವಿಲ್ಲದಾಯಿತೇನಯ್ಯಾ ?
ಅಣುವಿನ ವಿಭಜನೆ, ಮನದ ವಿಶ್ಲೇಷಣೆ,
ಕುಟುಂಬ ಯೋಜನೆಗಳ ಅಬ್ಬರದಲ್ಲಿ
ಸ್ನೇಹ ಸಂಯೋಜನೆಗೇ ಸಮಯವಿಲ್ಲದಾಯಿತೇನಯ್ಯಾ ?
ಸ್ವತಂತ್ರಧೀರ ಸಿದ್ಧೇಶ್ವರಾ,
ನಿನ್ನ ನಾಮ ರೂಪಗಳ ನಾನಾ ವಾದ ವಿವಾದಗಳಲ್ಲಿ
ನಿನಗೇ ಸ್ಥಾನವಿಲ್ಲದಾಯಿತೇನಯ್ಯಾ ?

೨೦೩

‘ನವೀಕರಣ, ನವೀಕರಣ’ವೆಂದು
ನಲುಗುತ್ತಲಿಹರಯ್ಯ ನವಯುವಕರು ;
‘ಮಾ ನವೀಕರಣ, ಮಾ ನವೀಕರಣ’ವೆಂದು
ಯಾರೆನ್ನುವರು ?



ನಾನಂತೂ ಎನ್ನಲಾರೆ !
ಆದರೆ, ‘ಮಾನವೀಕರಣ, ಮಾನವೀಕರಣ’ವೆಂದು
ಎನ್ನದಿರಲಾರೆ !
ನವೀಕರಣದೊಡನೆ
ಮಾನವೀಕರಣವೂ ಸಾಗಿದರೆ ಸರಿ,
ಇಲ್ಲದಿದ್ದರೆ ಬಲು ಬರಿ !
ನನ್ನ ದೇಶದಲ್ಲಿ ಇವೆರಡೂ
ಒಟ್ಟಿಗೆ ನಡೆಯುವಂತೆ ಮಾಡಾ,
ಸ್ವತಂತ್ರಧೀರ ಸಿದ್ಧೇಶ್ವರಾ !

೨೦೪

ಎಗ್ಗ ಉರುಲು ಹಾಕಿಕೊಂಡನೆಂದು
ಹಗ್ಗಕ್ಕೆ ಶಿಕ್ಷೆ ವಿಧಿಸುವುದೆ ?
ಶಲಭ ಸುಟ್ಟುಕೊಂಡು ಸತ್ತಿತೆಂದು
ದೀಪಕ್ಕೆ ದಂಡ ಹಾಕುವುದೆ ?
ಉಂಡುದು ಅಜೀರ್ಣವಾಯಿತೆಂದು
ಬಾಣಸಿಯನ್ನು ಬಂಧಿಸುವುದೆ ?
ಸ್ವತಂತ್ರಧೀರ ಸಿದ್ಧೇಶ್ವರಾ,
ನಿನ್ನ ಹೆಸರಿನಲ್ಲಿಯೇ
ನಡೆಯಬಾರದುದೆಲ್ಲ ನಡೆವುದೆಂದು
ನಿನಗೇ ಬಹಿಷ್ಕಾರ ಹಾಕುವುದೆ ?

೨೦೫

ಜಲದಲ್ಲಿ ಮೀನು ಚಲಿಸುವುದು
ಬದುಕಲೆಂದಲ್ಲದೆ
ಜಲಕ್ರೀಡೆಗಾಗಿ ಅಲ್ಲವಯ್ಯ ;
ಉಪ್ಪಾರನು ಬುನಾದಿ ತೋಡುವುದು
ಕೂಲಿಗಾಗಿಯಲ್ಲದೆ
ಭೂಗರ್ಭಶೋಧನೆಗಾಗಿ ಅಲ್ಲವಯ್ಯ ;

ಅಂಬಿಗನು ಹರಿಗೋಲು ಹಾಕುವುದು
ಹೊಟ್ಟೆಗಾಗಿಯಲ್ಲದೆ
ನೌಕಾವಿಹಾರಕ್ಕಾಗಿ ಅಲ್ಲವಯ್ಯ ;
ಹಾವಾಡಿಗನು ಹಾವು ಸಾಕುವುದು
ಜೀವನೋಪಾಯಕ್ಕಾಗಿಯಲ್ಲದೆ
ಜೀವದಯೆಗಾಗಿ ಅಲ್ಲವಯ್ಯ ;
ಸ್ವತಂತ್ರಧೀರ ಸಿದ್ಧೇಶ್ವರಾ,
ನಾನು ನಿನ್ನ ನೆನೆವುದು
ನನ್ನ ಧನ್ಯತೆಗಾಗಿಯಲ್ಲದೆ
ನಿನ್ನ ಮಾನ್ಯತೆಗಾಗಿ ಅಲ್ಲವಯ್ಯ !

೨೦೬

ಪಾಪಿ ನಡೆದನೆಂದು ತಾಪಗೊಳ್ಳುವುದೆ,
ಪುಣ್ಯವಂತ ನಡೆದನೆಂದು ಪ್ರಮುದಿತವಾಗುವುದೆ ದಾರಿ ?
ಕಾಗೆ ಕುಳಿತಿತೆಂದು ಕೊರಗುವುದೆ,
ಕೋಗಿಲೆ ಕುಳಿತಿತೆಂದು ಹರ್ಷಿಸುವುದೆ ಮರ ?
ಸೂಳೆ ಮಿಂದಳೆಂದು ಸಿಡಿಮಿಡಿಗೊಳ್ಳುವುದೆ,
ಗರತಿ ಮಿಂದಳೆಂದು ಹಿರಿಹಿರಿ ಹಿಗ್ಗುವುದೆ ತೊರೆ ?
ತನ್ನ ಬೆಳಕಿನಲ್ಲಿ ಖೊಟ್ಟನೋಟು ಹುಟ್ಟತೆಂದು ಸಿಟ್ಟಾಗುವುದೆ,
ಬೈಬಲ್, ಭಗವದ್ಗೀತೆ, ಬಸವ ವಚನ ಓದಿದರೆಂದು
ಉಲ್ಲಾಸ-ಗೊಳ್ಳುವುದೆ ಸೊಡರು ?
ಸ್ವತಂತ್ರಧೀರ ಸಿದ್ಧೇಶ್ವರಾ,
ನಾವು ನುತಿಸಿದರೆ ನೀನು ಹಿಗ್ಗುವೆ,
ಇಲ್ಲದಿದ್ದರೆ ಕುಗ್ಗುವಿಯೆಂಬುದು
ಕಗ್ಗತನವಯ್ಯ !

೨೦೭

ಹಸುವಿಗೆ ಹತ್ತಿಯ ಕಾಳು ತಿನ್ನಿಸುವುದು
ಹೆಚ್ಚು ಹಾಲು ಕೊಡಲೆಂದಲ್ಲದೆ



ಹಸುವಿನ ಮೇಲಣ ಮರುಕದಿಂದಲ್ಲವಯ್ಯ ;
ಹಣ್ಣಿನ ತೋಟಕ್ಕೆ ಬೇಲಿಯಿಕ್ಕುವುದು
ಹಣ್ಣು ಉಳಿಯಲೆಂದಲ್ಲದೆ
ಮರಗಳ ಮೇಲಣ ಮಮತೆಯಿಂದಲ್ಲವಯ್ಯ ;
ಮಾನವರೆಲ್ಲ ಮಾಡುವುದು
ಕೊನೆಯ ವಿಶ್ಲೇಷಣೆಯಲ್ಲಿ
ಬಹುತೇಕ ತಮಗಾಗಿಯಯ್ಯ ;
ಸ್ವತಂತ್ರಧೀರ ಸಿದ್ಧೇಶ್ವರಾ,
ನಾ ನಿನ್ನ ನೆನೆವುದು
ನಿನಗಾಗಿಯಲ್ಲ, ನನಗಾಗಿಯಯ್ಯ !

೨೦೮

ಹೊಯ್ವ ಕೈ ಬಳಲುವುದಲ್ಲದೆ
ಹೊಡೆವ ಕೊಡತಿ ಬಳಲುವುದೆ ಅಯ್ಯ ?
ಕಾಯ್ವ ಕೃಷಿಕ ಬಳಲುವನಲ್ಲದೆ
ಕೆಯ್ಸೊಲ ಬಳಲುವುದೆ ಅಯ್ಯ ?
ನಡೆವ ಕಾಲು ಬಳಲುವುದಲ್ಲದೆ
ನಡೆದ ಹಾದಿ ಬಳಲುವುದೆ ಅಯ್ಯ ?
ಪಡೆವ ಮಾನವ ಬಳಲುವನಲ್ಲದೆ
ಕೊಡುವ ಸ್ವತಂತ್ರಧೀರ ಸಿದ್ಧೇಶ್ವರ ಬಳಲುವನೆ ಅಯ್ಯ ?

೨೦೯

ಎಲ್ಲ ನಿನ್ನ ದಾನ,
ಒಪ್ಪಿದೆನಯ್ಯ !
ಆದರೆ, ಈ ನಿನ್ನ ದಾನ ಬೇಡುತ್ತಿದೆ
ಮತ್ತೊಂದು ದಾನವ
ಸಮುದ್ರ ಸ್ನಾನದಂತೆ !
ಈ ನಿನ್ನ ವಾಹನ ಬೇಡುತ್ತಿದೆ
ಮತ್ತೊಂದು ವಾಹನ
ಚಂದ್ರಯಾನ ವಾಹನದಂತೆ !

ಆ ಇನ್ನೊಂದು ದಾನವಾವುದೆಂಬುದನು
ಅರಿತು ಬೇಡಿಕೊಳ್ಳುವ,
ಆ ಇನ್ನೊಂದು ವಾಹನವಾವುದೆಂಬುದನು
ತಿಳಿದು ಕೇಳಿಕೊಳ್ಳುವ
ಕಷ್ಟದಲಿ ಶ್ರದ್ಧೆಯನ್ನು ನೀಡು,
ಕಷ್ಟಕ್ಕೆ ತಕ್ಕ ಬುದ್ಧಿಯನ್ನು ನೀಡು,
ಅಂತ್ಯದಲಿ ಸಿದ್ಧಿಯನ್ನು ನೀಡು !
ಸಿದ್ಧಿ ಸಿಕ್ಕದಿದ್ದರೆ ಹೋಗಲಿ,
ಕಷ್ಟ ಕೊಡುವ
ಮನಶ್ಶುದ್ಧಿಯನ್ನು ನೀಡು
ಸ್ವತಂತ್ರಧೀರ ಸಿದ್ಧೇಶ್ವರಾ !

೨೧೦

ಹೊರಗಿನ ಕತ್ತಲೆ ಚೆದುರಿದಾಗ
ಒಳಗಿನ ಕತ್ತಲೆ,
ಒಳಗಿನ ಕತ್ತಲೆ ಕರಗಿದಾಗ
ಹೊರಗಿನ ಕತ್ತಲೆ !
ಒಳ ಹೊರಗು ಒಮ್ಮೆಗೇ ಬೆಳಗುವ ಕಾಲ
ಬರಲಾರದೇನಯ್ಯ ಒಮ್ಮೆಯಾದರೂ ?
ತನುವಿಗೆ ಹಿತವೆನಿಸಿದಾಗ
ಮನದಲ್ಲೇನೋ ಉದ್ವಿಗ್ನತೆ,
ಮನಕ್ಕೆ ನೆಮ್ಮದಿಯೆನಿಸಿದಾಗ
ತನುವಿಗೆಂಥದೋ ಅಸ್ವಸ್ಥತೆ !
ತನುಮನಗಳ ಸಮಸುಖ
ಸಾಧ್ಯವಾಗದೇನಯ್ಯಾ
ಇನ್ನಾದರೂ ?
ಒಂದಿದ್ದಾಗ ಇನ್ನೊಂದಿಲ್ಲದ ವ್ಯಥೆ,
ಇದ್ದಾಗೊಂದು ವ್ಯಥೆ,
ಇಲ್ಲದಿದ್ದಾಗೊಂದು ವ್ಯಥೆ
ಇದೇ ಜೀವನದ ಕಥೆಯೇನಯ್ಯಾ
ಸ್ವತಂತ್ರಧೀರ ಸಿದ್ಧೇಶ್ವರಾ ?



೨೧೧

ಹಕ್ಕಿಯ ಹಾರಾಟ
ಪಕ್ಕದ ಬಲದಿಂದಲೋ ಪ್ರಾಣದ ಬಲದಿಂದಲೊ ?
ಬೀಜದ ಮೊಳೆತ
ಭೂಮಿಯ ಬಲದಿಂದಲೋ ನೀರಿನ ಬಲದಿಂದಲೊ ?
ನೋಡುವವನ ನೋಟ
ಕಣ್ಣಿನ ಬಲದಿಂದಲೋ ಬೆಳಕಿನ ಬಲದಿಂದಲೊ ?
ಬಾಳಿನ ಸಾರ್ಥಕತೆ
ಬುದ್ಧಿಯ ಬಲದಿಂದಲೋ ಭಾವನೆಯ ಬಲದಿಂದಲೊ ?
ಎರಡರ ಬಲದಿಂದಲೆಂದಾತ
ನಮ್ಮ ಸ್ವತಂತ್ರಧೀರ ಸಿದ್ಧೇಶ್ವರ !

೨೧೨

ಲೋಕದಲ್ಲಿ ಜ್ಞಾನ ವಿಜ್ಞಾನ ಬೆಳೆಯುತ್ತಿರುವ ಪ್ರಮಾಣದಲ್ಲಿಯೇ
ನನ್ನ ಅಜ್ಞಾನವೂ ಬೆಳೆಯುತ್ತಲಿದೆಯಯ್ಯಾ !
ಜಗದಲ್ಲಿ ಶಕ್ತಿ ಬೆಳೆಯುತ್ತಿರುವ ಪ್ರಮಾಣದಲ್ಲಿಯೇ
ನನ್ನ ಅಶಕ್ತಿಯೂ ಬೆಳೆಯುತ್ತಲಿದೆಯಯ್ಯಾ !
ಪ್ರಪಂಚದಲ್ಲಿ ಐಶ್ವರ್ಯ ಬೆಳೆಯುತ್ತಿರುವ ಪ್ರಮಾಣದಲ್ಲಿಯೇ
ನನ್ನ ದಾರಿದ್ರ್ಯವೂ ಬೆಳೆಯುತ್ತಲಿದೆಯಯ್ಯಾ !
ಸ್ವತಂತ್ರಧೀರ ಸಿದ್ಧೇಶ್ವರಾ,
ನಿನ್ನ ಕ್ಷಮೆ ಬೆಳೆಯುತ್ತಿರುವ ಪ್ರಮಾಣದಲ್ಲಿಯೇ
ನನ್ನ ತಪ್ಪುಗಳೂ ಬೆಳೆಯುತ್ತಿವೆಯಯ್ಯಾ !

೨೧೩

ವಿಜ್ಞಾನವನ್ನೇ ಅಧರಾರಣಿ ಮಾಡಿ
ತತ್ತ್ವಜ್ಞಾನವನ್ನೇ ಉತ್ತರಾರಣಿ ಮಾಡಿ
ಅಂತರ್ಮಂಥನದ ಅಭ್ಯಾಸದಿಂದ
ಹೊತ್ತಿಸಲು ಕಲಿಸಯ್ಯ ಚಿದಗ್ನಿಯ
ಆ ಅಗ್ನಿಗೇ,
“ಅಗ್ನೇ ನಯ ಸುಪಥಾ ರಾಯೇ ಅಸ್ಮಾನ್

ವಿಶ್ವಾನಿ ದೇವ ವಯುನಾನಿ ವಿದ್ವಾನ್
ಯುಯೋಧ್ಯಸ್ಮಜ್ಜುಹುರಾಣಮೇನೋ
ಭೂಮಿಷ್ಠಾಂ ತೇ ನಯ ಉಕ್ತಿಂ ವಿಧೇಯ''
ಎಂದು ಪ್ರಾರ್ಥಿಸುವೆ !
ಆ ಅಗ್ನಿಯಲ್ಲಿ ಸುಡಲಿ ಅಂಧ ಶ್ರದ್ಧೆಗಳೆಲ್ಲ ;
ಆ ಅಗ್ನಿಯಿಂದ ಬರಲಿ ಶುದ್ಧಿ ಸಿದ್ಧಿಗಳೆಲ್ಲ ;
ಆ ಅಗ್ನಿಯಿಂದಲೇ ಅನುಭವದಡುಗೆಯ ಮಾಡಿ
ಅದನುಂಡು, ಉಣ್ಣಿಸಿ
ನಿಜಾನಂದವ ಪಡೆಯಲು ಕಲಿಸಯ್ಯ,
ಸ್ವತಂತ್ರಧೀರ ಸಿದ್ಧೇಶ್ವರಾ !

೨೧೪

ಗರಿ ನನಗೆ ಹೊರೆಯೆಂದರೆ
ಹಾರಬಹುದೆ ಹಕ್ಕಿ ?
ಕತ್ತಲೆ ನನಗೆ ಕಹಿಯೆಂದರೆ
ಮೂಡಬಲ್ಲುದೆ ಚುಕ್ಕಿ ?
ಕೇಶ ನನಗೆ ಭಾರವೆಂದರೆ
ಹೆಣೆಯಬಹುದೆ ಹೆಳಲ ?
ಊದುವುದು ನನಗೆ ತಲೆನೋವೆಂದರೆ
ನುಡಿಸಬಹುದೆ ಕೊಳಲ ?
ಅಗಿಯುವುದು ನನಗೆ ಆಗದೆಂದರೆ
ತಿನ್ನಬಹುದೆ ರೊಟ್ಟಿಯ ?
ಅರಲು ನನಗೆ ಸೇರದೆಂದರೆ
ಮಾಡಬಹುದೆ ಮಿಟ್ಟಿಯ ?
ಸ್ವತಂತ್ರಧೀರ ಸಿದ್ಧೇಶ್ವರಾ,
ಸಾಧನೆ ನನಗೆ ನೀಗದೆಂದರೆ
ಪಡೆಯಬಹುದೆ ಸಿದ್ಧಿಯ ?

೨೧೫

ಜೀವನದ ವನದಲ್ಲಿ ಪರಿಣತಿಯ ಪುಷ್ಪ ಅರಳಲಯ್ಯ ;
ಪರಿಣತಿಯ ಪುಷ್ಪದಿಂದ ಪ್ರತಿಭೆಯ ಪರಿಮಳ ಹೊರಡಲಯ್ಯ ;



ಪ್ರತಿಭೆಯ ಸ್ಫಟಿಕದ ಘಟದಲ್ಲಿ
ಚಾರಿತ್ರ್ಯ – ಜ್ಯೋತಿ ಪ್ರಕಾಶಿಸಲಯ್ಯ ;
ಸಚ್ಚಾರಿತ್ರ್ಯದ ಸಿಂಪಿನಲ್ಲಿ ಸದ್ಧೇಯರತಿಯ
ಮುತ್ತು ಮೂಡಲಯ್ಯ ;
ಸದ್ಧೇಯರತಿಯ ಕೆಚ್ಚಲಿನಿಂದ
ಸಾಧನೆಯ ಹಾಲು ಸುರಿಯಲಯ್ಯ ;
ಸಾಧನೆಯ ಹಾಲು ತ್ರಿವಿಧ ತಪದಲ್ಲಿ ಕಾಯ್ದು
ಹಮ್ಮಳಿವಿನ ಹೆಪ್ಪಿನಿಂದ ಹೆತ್ತು,
ಸ್ವಾನುಭವದ ಕಡೆಗೋಲಿನಿಂದ ಮಥಿತವಾಗಿ
ಸಿದ್ಧಿಯ ಬೆಣ್ಣೆಯಾಗಿ ಹೊರಹೊಮ್ಮಲಯ್ಯ
ಸ್ವತಂತ್ರಧೀರ ಸಿದ್ಧೇಶ್ವರಾ !

೨೧೬

ಜೋಳಿಗೆಯ ಹಿಡಿದುಕೊಂಡೇ ಹುಟ್ಟಿದೆ
ಇಂದಿಗೂ ಜೋಳಿಗೆ ತಪ್ಪಿಲ್ಲ,
ಜೋಳಿಗೆಯದೇನೂ ತಪ್ಪಿಲ್ಲ !
ಅರಿವೆಯ ಜೋಳಿಗೆ ಹೋಗಿ
ಅರಿವಿನ ಜೋಳಿಗೆ ಬಂದಿದೆ ;
ತುಂಬುವ ಜೋಳಿಗೆ ಹೋಗಿ
ತುಂಬದ ಜೋಳಿಗೆ ಬಂದಿದೆ !
ಈ ಜೋಳಿಗೆಯ ಹಿಡಿದು ತಿರುಗಿದೆ,
ತಿರೆಯ ಅರಿವಿನ ದೊರೆಗಳ ಮನೆ ಮನೆಗೆ ;
ಒಡ್ಡಿದೆ ಬರಿ ಜೋಳಿಗೆಯ ಅವರೆದುರಿಗೆ !
ನೀಡಿದರವರು ಬೇಡಿದುದ, ಬೇಡದುದ !
ಓಡಿ ಬಂದೆ ಮನೆಗೆ ನೋಡುವಾತುರದಿಂದ,
ತೆರೆದೆ ಜೋಳಿಗೆ ಉಕ್ಕುವ ತವಕದಿಂದ !
ನೋಡಿದೆ...ಕೋಡಿದೆ...ಬಾಡಿದೆ !
ಬರಿದೋ ಬರಿದು ಜೋಳಿಗೆ !
ಆಗ ತಿಳಿಯಿತು,
ಇದು ಹರುಕು ಜೋಳಿಗೆಯೆಂಬುದು !
ಮೊದಲೇ ತುಂಬದ ಜೋಳಿಗೆ,
ಸಾಲದುದಕ್ಕೆ ತೂತು ಬಿದ್ದ ಜೋಳಿಗೆ !

ಹೊಲಿದುಕೊಳ್ಳಬೇಕೀ ಹರಿದ ಜೋಳಿಗೆಯನ್ನು !
ಹೊಲಿದುಕೊಳ್ಳದೆ ಹಲವರ ಬೇಡಿ ಫಲವೇನು ?
ಅವರು ನೀಡಿ ಫಲವೇನು ?
ಇದನು ಹೊಲಿದುಕೊಳ್ಳಲು
ಶ್ರದ್ಧೆಯ ಸೂಜಿ
ಶುದ್ಧಿಯ ದಾರವ ನೀಡಾ,
ಎಲ್ಲ ನೀಡುವ ಸ್ವತಂತ್ರಧೀರ ಸಿದ್ಧೇಶ್ವರಾ !

೨೧೭

ನಾಟಕದ ಸೀತೆಯೇ ನಿಜವಾದ ಸೀತೆಯೆಂದು
ಭ್ರಮಿಸಿದಂತೆ ಆಯಿತ್ತಯ್ಯ ಎನ್ನ ಬಾಳು !
ತೆರೆಯ ಮೇಲಿನ ತವಸಿಯೇ ವಿರತಿಯ ಒರತೆಯೆಂದು
ಭ್ರಮಿಸಿದಂತೆ ಆಯಿತ್ತಯ್ಯ ಎನ್ನ ಬದುಕು !
ಸ್ವತಂತ್ರಧೀರ ಸಿದ್ಧೇಶ್ವರಾ,
ನೆರಳೇ ವಸ್ತು , ಕನಸೇ ನನಸು,
ಹಗ್ಗವೇ ಹಾವು, ಮಾತೇ ಕೃತಿ,
ಹೊಳೆದದ್ದೆ ಚಿನ್ನ, ಮಿಂಚಿದ್ದೆ ರನ್ನ,
ಬೆಳ್ಳಗಿದ್ದುದೆ ಹಾಲು, ಬಯಕೆಯೇ ಪೂರೈಕೆಯೆಂದು
ಭ್ರಮಿಸಿದಂತೆ ಆಯಿತ್ತಯ್ಯ ಎನ್ನ ಇರವು !

೨೧೮

ಹಿಂದೆ ಪ್ರಾಯದ ಪೆಂಪೆ ಪೆಂಪಾಗಿದ್ದಿತು,
ಇಂದು ಅಭಿಪ್ರಾಯದ ಪೆಂಪೆ, ಪೆಂಪಾಗಿದೆಯಯ್ಯ !
'ನನ್ನ ಅಭಿಪ್ರಾಯದಲ್ಲಿ,' ಎಂದೇ ಮಾತಿಗಾರಂಭ,
ಮುಂದೆ ನಡೆವುದೆಲ್ಲ ಮಾತಿನ ವ್ಯಾಪಾರ, ಮಾತಿನ ಆರಂಭ !
ಮಾತನೆ ಬಿತ್ತಿ, ಮಾತನೆ ಬೆಳೆದು,



ಮಾತಿನ ಎತ್ತುಗಳ ಕಟ್ಟಿ,
ಮಾತಿನ ತೆನೆಗಳ ತುಳಿಸಿ,
ಮಾತನೆ ತೂರಿ, ಮಾತಿನ ರಾಶಿ ಮಾಡಿಟ್ಟುಕೊಂಡರೆ
ಯಾತಕ್ಕೆ ಬರುವುದಯ್ಯ ?
ಕೃತಿಗೆ ಮಾತಿನ ಕ್ಲೋರೋಫಾರ್ಮ್
ಕೊಡುವುದು ಸಾಕಿನ್ನು,
ಮಾತಿಗೆ ಕೃತಿಯ ಆ್ಯನೆಸ್ತೀಸಿಯಾ
ಕೊಡಲು ಕಲಿಸಯ್ಯ
ಸ್ವತಂತ್ರಧೀರ ಸಿದ್ಧೇಶ್ವರಾ !

೨೧೯

ವ್ಯಾಸಂಗಕ್ಕೆ ಸಮಯವಿಲ್ಲ, ಸತ್ಸಂಗಕ್ಕೆ ಸಮಯವಿಲ್ಲ,
ನಾಡು, ನುಡಿ, ನಾಡಿಗರ ಸೇವೆಗೆ ಸಮಯವಿಲ್ಲ !
ಇನ್ನುಳಿದುದಕ್ಕೆ ಎಂತಾದರೂ ಸಮಯ ಸಿಕ್ಕುವುದಯ್ಯ !
ಜೂಜಿಗೆ, ಜಿದ್ದಿಗೆ, ಚಾಡಿಗೆ, ಕೇಡಿಗೆ, ನಿಂದೆಗೆ, ಸಿಂದಿಗೆ
ಎಲ್ಲ ದುರ್ವ್ಯಸನ ದುರ್ವ್ಯಾಪಾರಗಳಿಗೂ ಸಮಯವಿದೆ,
ನಿನ್ನ ಮಕ್ಕಳಿಗೆ ಆಗಿ, ಒಳಿತಿಗೆ ಬಾಗಿ,
ಸತ್ಕರ್ಮದಲ್ಲಿ ಮಾಗಿ
ನಿನ್ನೆಡೆಗೆ ಸಾಗಲು ಸಮಯವಿಲ್ಲವಯ್ಯ
ಸ್ವತಂತ್ರಧೀರ ಸಿದ್ಧೇಶ್ವರಾ !

೨೨೦

ಸಭೆ, ಸಮಿತಿ, ಸಂಘ, ಸಮ್ಮೇಳನ, ಸಮಾರಂಭಗಳಲ್ಲಿ ಸೇರಿ ನೋಡಿದೆ,
ಒಂಟಿತನದ ಅನುಭವ ಅಂಟಿತ್ತು ಅಲ್ಲಿಯೂ ;
ಉಪಹಾರಗೃಹ, ನಾಟ್ಯನಿಲಯ, ಚಿತ್ರಮಂದಿರಗಳಿಗೆ ಹೋಗಿ ನೋಡಿದೆ,
ಅನಾಥ ಪ್ರಜ್ಞೆ ಬೆನ್ನಟ್ಟಿ ಬಂದಿತ್ತು ಅಲ್ಲಿಗೂ ;
ಮಠ, ಮಂದಿರ, ಆಶ್ರಮ, ಧ್ಯಾನಧಾಮಗಳಿಗೆ ಎಡತಾಕಿ ನೋಡಿದೆ,
ಭಗ್ನ-ವ್ಯಗ್ರ-ವಿಭಕ್ತ ವ್ಯಕ್ತಿತ್ವ ಕಾಡಿತ್ತು ಅಲ್ಲಿಯೂ ;

ಸಂತೆ, ಪೇಟೆ, ಪ್ರದರ್ಶನಗಳಲ್ಲಿ ಅಲೆದಾಡಿ ನೋಡಿದೆ,
ಏನನ್ನೋ ಕಳೆದುಕೊಂಡ ಅನುಭವ ಪೀಡಿಸಿತ್ತು ಅಲ್ಲಿಯೂ ; ವಾಚನ
ಾಲಯ, ವ್ಯಾಸಂಗಗೋಷ್ಠಿ, ವಿಚಾರ ಸಂಕಿರಣಗಳಿಗೆ ಹೋಗಿ ನೋಡಿದೆ,
ಸಕಲ ಸಂದೇಹಗಳ ಸಂದೋಹ ನೆರೆದಿತ್ತು ಅಲ್ಲಿಯೂ ;
ಕಾರ್ಯಾಲಯ, ಕಾರ್ಯಾಗಾರ, ಕ್ಲಬ್ಬುಗಳಲ್ಲಿ ಸುತ್ತಾಡಿ ನೋಡಿದೆ,
ಆತ್ಮಹಂತಕ ಯಾಂತ್ರಿಕತೆ ಬಾಧಿಸಿತ್ತು ಅಲ್ಲಿಯೂ !
ಸ್ವತಂತ್ರಧೀರ ಸಿದ್ಧೇಶ್ವರಾ,
ನೀನು ನೀಡಿದುದು ಸತ್ಯಸುಂದರ ಶಿವಗಳನ್ನು,
ನಾನು ಪಡೆದುದು ಅವುಗಳ ಶವಗಳನ್ನು !
ಈ ಭವವಾದರೂ ಸತ್ಯಸುಂದರ ಶಿವ-ಸಂಭವವಾಗುವಂತೆ
ಕರುಣಿಸಾ ; ಕರುಣಿಗಳರಸಾ !

೨೨೧

'ವಿಭಕ್ತದಲ್ಲಿಯೂ ಅವಿಭಕ್ತವನ್ನು ಅರಸು,' ಎಂದೆ
ಅವಿಭಕ್ತದಲ್ಲಿಯೂ ವಿಭಕ್ತವನ್ನು ಅರಸುತ್ತ ನಡೆದಿದ್ದೇನೆ ;
'ದಾನವನಲ್ಲಿಯೂ ಮಾನವನನ್ನು ಕಾಣು,' ಎಂದೆ
ಮಾನವನಲ್ಲಿಯೂ ದಾನವನನ್ನೇ ಹುಡುಕುತ್ತ ಹೊರಟಿದ್ದೇನೆ, ;
'ಕಾಮದೊಳಗಣ ಪ್ರೇಮವನ್ನು ಪಡೆ,' ಎಂದೆ
ಪ್ರೇಮದಲ್ಲಿಯೂ ಕಾಮವನ್ನೇ ಕಾಣುತ್ತ ನಡೆದಿದ್ದೇನೆ ;
'ಈ ಲೋಕದಲ್ಲಿಯೇ ನಾಕವನ್ನು ನಿರ್ಮಿಸು,' ಎಂದೆ
ನಾಕವನ್ನೇ ನರಕವಾಗಿಸುತ್ತ ನಡೆದಿದ್ದೇನೆ ;
ಸ್ವತಂತ್ರಧೀರ ಸಿದ್ಧೇಶ್ವರಾ,
'ಲೇಸೆನಿಸಿಕೊಂಡು ಮೂರು ದಿನ ಬದುಕು,' ಎಂದೆ
ಲೇಸಿಲ್ಲದೆ ನೂರು ವರ್ಷ ಬದುಕಲು ಹವಣಿಸುತ್ತಿದ್ದೇನೆ !

೨೨೨

ಈ ಶರೀರದಲ್ಲಿ ಎಂಥೆಂಥ ಶಕ್ತಿ ಸಾಗರಗಳನ್ನಿರಿಸಿಹೆಯಯ್ಯ !
ಅಲ್ಪ ಸಂತೋಷಿಯಾಗಿ ಅತ್ಯಲ್ಪದಿಂದಲೇ ತೃಪ್ತನಾದೆ ನಾನು !
ಇರುವ ಶಕ್ತಿ ಕೇಂದ್ರಗಳನ್ನೆಲ್ಲ ಸಂಪೂರ್ಣ ಉಪಯೋಗಿಸುವುದಿರಲಿ,
ಸಾಸಿರದಲ್ಲೊಂದರ ಸಾಸಿರ ಪಾಲಿನಲ್ಲಿ ಒಂದನ್ನು ಉಪಯೋಗಿಸಿಕೊಂಡಿದ್ದರೂ



ಅತಿಮಾನವನಾಗುತ್ತಿದ್ದೆ ನಾನು !
ಅಲ್ಪ ಸಂತೋಷವೇ ಆದರ್ಶವಾದರೆ
ಅತಿಮಾನವತೆಯ ಪ್ರಣಾಲಿಕೆ ಉನ್ಮಾದದ ಬಡಬಡಿಕೆ ;
ಒರತೆಗೆ ಬಲೆಯೊಡ್ಡಿ ತಿಮಿಂಗಿಲವ ಹಿಡಿಯಲಾದೀತೇನಯ್ಯ ?
ಸುಣ್ಣದ ಕಲ್ಲು ಸಂಗ್ರಹಿಸಿ ಸೇತುಬಂಧ ಗೈಯಲಾದೀತೇನಯ್ಯ ?
ರವದಿಯನ್ನೇರಿ ಜಲಧಿಯನ್ನು ದಾಟಲಾದೀತೇನಯ್ಯ
ಸ್ವತಂತ್ರಧೀರ ಸಿದ್ಧೇಶ್ವರಾ ?

೨೨೩

ಮಗು ಮಗುವಾಗಿಯೇ ಉಳಿಯಲೆನ್ನುತ್ತಾಳೆ ತಾಯಿ,
ಮಗು ಬೆಳೆದು ಯುವಕನಾಗುತ್ತದೆ ;
ಯುವಕ ಪತಿ ಯುವಕನಾಗಿಯೇ ಉಳಿಯಲೆನ್ನುತ್ತಾಳೆ ಸತಿ,
ಯುವಕ ಬೆಳೆದು ಮುದುಕನಾಗುತ್ತಾನೆ ;
'ಮುದುಕನಾದರೇನು, ಬದುಕಬೇಕು ಇನ್ನೂ' ಎನ್ನುತ್ತಾನೆ ಮುದುಕ,
ಮುದುಕ ಮಡಿದು ಕುಣಪವಾಗುತ್ತಾನೆ !
ಯಾರನ್ನೂ ಏನನ್ನೂ ಇರುವಂತೆ ಉಳಿಯಗೊಡುವುದಿಲ್ಲ ನೀನು !
ನೀನು ವಿವರ್ತನಲೋಲ, ಪರಿವರ್ತನಶೀಲ !
ಯಾವ ಉದ್ದೇಶಕ್ಕಾಗಿ ಈ ರೂಪಾಂತರ,
ಸ್ಥಿತ್ಯಂತರ, ಅವಸ್ಥಾಂತರಗಳಯ್ಯ ?
ನಿರುದ್ದೇಶವೆ ಉದ್ದೇಶವೆ, ಗುರಿಯಿಲ್ಲದಿಹುದೆ ಗುರಿಯೆ ?
ಇರಲಾರದಯ್ಯ, ಇಂತಿರಲಾರದಯ್ಯ !
ಗುರುವಾಗಿ ಗುರಿಯ ತೋರು,
ಚರನಾಗಿ ಗುರಿಯತ್ತ ಸಾಗಲು ಚೇತನ ನೀಡು,
ಹರನಾಗಿ, ತಮೋಹರನಾಗಿ, ಶಿವೇತರಹರನಾಗಿ,
ಬೆಳಕಿನ ಬಾಳ, ಸಾವಲ್ಲದ ಸಾವ ಕರುಣಿಸು
ಸ್ವತಂತ್ರಧೀರ ಸಿದ್ಧೇಶ್ವರಾ !

೨೨೪

ನಿಮಿಷ ನಿಮಿಷವೂ ನಿನಗೆ ನಿಕಷ, ನಿನ್ನ ದೌರ್ಬಲ್ಯದಲ್ಲಿ ಅದಕ್ಕೆ ಅವಕಾಶ !
ಒಂದು ನಿಮಿಷವೂ ಅಲಕ್ಷ್ಯದಿಂದಿರಬೇಡ,
ಲಕ್ಷ ಕೆಲಸವಿದ್ದರೂ ಲಕ್ಷ್ಯದಲ್ಲಿ ಲಕ್ಷ್ಯವಿಲ್ಲದಿರಬೇಡ !
ನಿಮಿಷದ ಅಲಕ್ಷ್ಯ ವರುಷಗಳ ಸಾಧನೆಗೆ ಸಮಾಧಿಯಾದೀತು ;
ಹಿಂದಕ್ಕೆಳೆಯುವ ಉಪಾಧಿಯಾದೀತು !
ಸ್ವತಂತ್ರಧೀರ ಸಿದ್ಧೇಶ್ವರನ ಆಣೆ ನಿನಗೆ
ಚಣಚಣವೂ ಪಣತೊಟ್ಟು ಮುಂದುವರಿ,
ಸದಾ ಕಣ್ಣೆದುರಿಗಿರಲಿ ಗುರಿ !

೨೨೫

ಹೊಗಳ ಹಾಸವನ್ನು ಕಂಡು ಅಳು ಬರುತ್ತದೆನಗೆ,
ಇಬ್ಬನಿಯ ಕಂಬನಿಗಳನ್ನು ಕಂಡು ನಗು ಬರುತ್ತದೆನಗೆ !
ವಿಚಿತ್ರ ವ್ಯಕ್ತಿಯಾಗಿಹೆನಯ್ಯ, ನಾನು !
ನಿನ್ನ ಹೊಗಳುವವರನ್ನು ಕಂಡರೆ ಅಳು ಬರುತ್ತದೆ,
ನಿನ್ನ ತೆಗಳುವವರನ್ನು ಕಂಡರೆ ನಗೆ ಬರುತ್ತದೆ !
ವಿಲಕ್ಷಣ ಪ್ರಾಣಿಯಾಗಿಹೆನಯ್ಯ, ನಾನು !
ನನ್ನ ಬಗ್ಗೆ ನನಗೇ ಅಳು ಬರುತ್ತಿದೆ,
ನನ್ನ ಬಗ್ಗೆ ನನಗೇ ನಗು ಬರುತ್ತಿದೆ,
ನನಗೇ ಸಮಸ್ಯೆಯಾಗಿರುವೆನಯ್ಯ, ನಾನು !
ನನಗೂ ಸಮಸ್ಯೆಯಾಗದೆ, ನಿನಗೂ ಸಮಸ್ಯೆಯಾಗದೆ,
ಸರ್ವರಿಗೂ ಸಮ್ಮುದಪ್ರದ ಸಹವರ್ತಿಯನ್ನಾಗಿಸಯ್ಯ
ಸ್ವತಂತ್ರಧೀರ ಸಿದ್ಧೇಶ್ವರಾ !

೨೨೬

ಸದ್ಯಸ್ತೃಪ್ತಿಯೇ ಗುರಿಯಾದರೆ ಸಣ್ಣ ಸಾಧನೆಗಳೇ ಗತಿಯಯ್ಯ ;
ಕ್ಷಿಪ್ರ ಫಲಾಕಾಂಕ್ಷೆಯೇ ಗಮ್ಯವಾದರೆ
ಚಪ್ಪರ ಬದನೆಯನ್ನೇ ಚಪ್ಪರಿಸಬೇಕಯ್ಯ ;
ನವಮಾಸಕ್ಕೆ ಮೊದಲೇ ಮಗುವ ಬೇಡಿದರೆ
ಹಲಿವುಳಿಕೆಯೇ ಗಳಿಕೆಯಯ್ಯ ;



ಮಿಡಿಯ ಹರಿದು ಅಡೆಗೆ ಹಾಕಿದರೆ
ಪಡೆವುದು ಹಣ್ಣಲ್ಲ, ಕಾಯಿಯೂ ಅಲ್ಲವಯ್ಯ ;
ಬಲಿವ ಮುನ್ನ ಭತ್ತ ಕುಟ್ಟಿದರೆ
ಹಿಟ್ಟೂ ಇಲ್ಲ, ಹೊಟ್ಟೂ ಇಲ್ಲವಯ್ಯ ;
ಸ್ವತಂತ್ರಧೀರ ಸಿದ್ಧೇಶ್ವರಾ,
ಧಿಡೀರ್ ಗತಿಯ ಮತಿಯ ಬಿಡಿಸಿ
ದೃಢ ನಿಷ್ಠೆಯ ನೀಡಾ !
ಮೂರುಸಲ ಬನ್ನಿಯ ಮರ ಸುತ್ತಿ
ಹೊಟ್ಟೆ ಮುಟ್ಟಿ ನೋಡಿಕೊಂಡ
ಬಂಜೆಯಂತಾಗದಿರಲಯ್ಯ ನನ್ನ ಸಾಧನೆ !

೨೨೭

ತಾನು ಮಧುಹೀರಿದ ಪುಷ್ಪವು
ಫಲಿಸುವಂತೆ ಮಾಡಿ ಹೋಗುತ್ತದೆ ಮಧುಮಕ್ಷಿಕ ;
ತಾನು ಕಚ್ಚಿದ ಶರೀರದ
ಮಹಾರೋಗ ಹೋಗುವಂತೆ ಮಾಡುತ್ತದೆ ತಕ್ಷಕ ;
ತಾನು ಸಾಕಿದ ಮರಿಯ
ಕೋಗಿಲೆಯಾಗಿಸುತ್ತದೆ ಕಾಗೆ ;
ತನ್ನ ನಂಬಿದ ಕೀಡೆಯ
ದುಂಬಿಯಾಗಿಸುತ್ತದೆ ತುಂಬಿ ;
ತಾನು ಸೇರಿದ ಮಣ್ಣಿನ
ಕಸುವು ಹೆಚ್ಚಿಸುತ್ತದೆ ಎರೆಹುಳ !
ಮತಿವಂತ ಮಾನವನಾಗಿ ಹುಟ್ಟಿ ನಾನು
ಪಥಬಿಟ್ಟು ಗತಿಗೆಟ್ಟು ಹೋದರೆ
ಹಾವು ಹುಳುಗಳಿಗಿಂತ ಹೇಯನಲ್ಲವೇನಯ್ಯ
ಸ್ವತಂತ್ರಧೀರ ಸಿದ್ಧೇಶ್ವರಾ!

೨೨೮

ಚಂದನದ ಅಂದಣದಲ್ಲಿ ಹೆಂಡದ ಹರವಿಯನ್ನಿಟ್ಟು
ಮೆರೆಸಿದಂತಾಯಿತ್ತಯ್ಯ ಎನ್ನ ಬಾಳು !
ಬೆಳ್ಳಿಯ ಬಟ್ಟಲದಲ್ಲಿ ಉಳ್ಳಿಯ ರಸ ತುಂಬಿ

ಕುಡಿದಂತಾಯಿತ್ತಯ್ಯ, ಎನ್ನ ಬದುಕು !
ನಿರ್ಜನ ವಿಪಿನಮಧ್ಯದಲ್ಲಿ ಗಂಧದೆಣ್ಣೆಯ ದೀಪ
ಉರಿಸಿದಂತಾಯಿತ್ತಯ್ಯ ಎನ್ನ ಇರವು !
ಸ್ವತಂತ್ರಧೀರ ಸಿದ್ಧೇಶ್ವರಾ,
ಶವಕ್ಕೆ ಮಾಡಿದ ಶೃಂಗಾರವಾದಂತಾಯಿತ್ತಯ್ಯ ಎನ್ನ ಜೀವನ !

೨೨೯

ಇದುವರೆಗಿನ ಬಾಳು ಹಾಳಾಯಿತೆಂದು ಹಳಹಳಿಸುತ್ತ
ಇನ್ನುಳಿದ ಬಾಳನ್ನೂ ಹಾಳುಮಾಡಿಕೊಳ್ಳೆನಯ್ಯಾ !
ಇದುವರೆಗಿನ ಹಾರೈಕೆಗಳು ಪೂರೈಕೆಗಳಾಗಲಿಲ್ಲವೆಂದು
ಮುಂದೆ ಹಾರೈಸುವುದನ್ನೇ ತೊರೆದು ಬಿಡೆನಯ್ಯಾ !
ಹಾಳಾದ ಬಾಳಿನ ಹಾಳು ಮಣ್ಣಿನಲ್ಲಿಯೇ
ಹಣ್ಣಾಗದ ಹಾರೈಕೆಗಳ ಗೊರಟೆಗಳನ್ನೂರಿ
ಕೃತಕೃತ್ಯತೆಯ ಕೈತೋಟವನ್ನು ಬೆಳೆಸುವೆನಯ್ಯ
ಸ್ವತಂತ್ರಧೀರ ಸಿದ್ಧೇಶ್ವರಾ !

೨೩೦

ಪರಿಪೂರ್ಣ ನಾನಾಗಬಲ್ಲನೆ ?
ಪರಿಪೂರ್ಣ ನೀನೊಬ್ಬನೇ, ಅಯ್ಯ ;
ಪರಿಪೂರ್ಣನಾಗದಿದ್ದರೂ
ಪರಿಪಕ್ವನ ಮಾಡಯ್ಯ, ತಂದೆ !
ನಿನ್ನ ನೆಲ, ಜಲ, ಗಾಳಿ, ಧೂಳಿ, ಬಿಸಿಲು ಮಳೆಗಳಲ್ಲಿ ಮಾಗಿಸಿ
ಪರಿಪಕ್ವ ಫಲವಾಗಿಸಯ್ಯ, ಈ ಕಸುಗಾಯಿಯನ್ನು !
ಕಸುಕು ಉಳಿಯದಂತೆ, ರಸ ಹುಳಿಯದಂತೆ,
ಸಿಪ್ಪೆ ಕೊಳೆಯದಂತೆ, ಹುಳ ಮೊಳೆಯದಂತೆ,
ತಿಂದವರು ತೊಂದರೆಗೊಳಗಾಗದಂತೆ



ಹದುಳದ ಕಳಿತ ಹಣ್ಣಾಗಿಸಯ್ಯ ಈ ಜೀವದ ಕಾಯಿಯನ್ನು !
ಒತ್ತಿ ಹಣ್ಣು ಮಾಡುವುದು ಬೇಡ,
ತಪನವಿತ್ತು ಹಣ್ಣು ಮಾಡಿದನು ;
ಹಣ್ಣಾದ ಮೇಲೆ ನೀನಾದರೂ ಸೇವಿಸು,
ನಿನ್ನವರಿಗಾದರೂ ಕೊಡು
ಸ್ವತಂತ್ರಧೀರ ಸಿದ್ಧೇಶ್ವರಾ !

೨೩೧

ಎಲ್ಲ ನಿನ್ನನ್ನು ಅವಲಂಬಿಸಿದೆಯೆಂದು ನಂಬಿ ನಡೆಯುವೆ,
ಎಲ್ಲ ನನ್ನನ್ನು ಅವಲಂಬಿಸಿದೆಯೆಂದು ನಂಬಿ ದುಡಿಯುವೆ ;
ಮೊಳೆಸುವವ, ಬೆಳೆಸುವವ ನೀನೇ ಎಂದು ನಂಬಿ ಬಿತ್ತುವೆ,
ಒಕ್ಕುವವ, ಪಡೆಯುವವ ನಾನೇ ಎಂದು ನಂಬಿ ಸಾಗು ಮಾಡುವೆ ;
‘ಈಗಲೋ, ಇನ್ನಾವಾಗಲೋ ಸಾವು’ ಎಂದು ಬಾಗುವೆ ನಿನ್ನಡಿಗೆ,
ನಾನು ಚಿರಂಜೀವಿಯೆಂಬಂತೆ ಸದಾಸಿದ್ಧನಿರುವೆ ಬಾಳ ಗರಡಿಗೆ !
ಸ್ವತಂತ್ರಧೀರ ಸಿದ್ಧೇಶ್ವರಾ,
ನೀನೇ ಎಲ್ಲ, ನಿನ್ನಿಂದಲೇ ಎಲ್ಲ–ಎಂದು ನಂಬಿ ಬದುಕುವೆ,
ನನ್ನಲ್ಲಿ ನೀನು, ನಿನ್ನಲ್ಲಿ ನಾನು–ಎಂದು ನಂಬಿ ಬೆದಕುವೆ !

೨೩೨

ದಿನದಿನವೂ ಹಲವು ಹನ್ನೆರಡು ಪರಾಭವಗಳನ್ನು ಅನುಭವಿಸಿಯೂ
ಅಜಿತ ನಾನಯ್ಯ, ಅಜೇಯ ನಾನಯ್ಯ !
ದಿನದಿನವೂ ಹಾನಿ ಗ್ಲಾನಿಗಳಿಗೆ ಒಳಗಾಗಿಯೂ
ಅವ್ಯಯ ನಾನಯ್ಯ, ಅಕ್ಷಯ ನಾನಯ್ಯ !
ದಿನದಿನವೂ ವಯಸ್ಸಾಗುತ್ತ ನಡೆದಿದ್ದರೂ
ಅಜರ ನಾನಯ್ಯ, ಅಕ್ಷರ ನಾನಯ್ಯ !
ನಿನ್ನ ಕಡಲಿನ ಮೇಲೆ ನಾನು
ತೋರ್ಕೆಯ ತೆರೆಯಾಗಿ ಮೂಡಿ,
ಸುತ್ತಿ ಸುಳಿದು, ಚಲಿಸಿ ಅಲೆದು,

ಹೊಯ್ದಾಡಿ, ಹಾಯ್ದಾಡಿ, ಹೊಡೆದಾಡಿ,
ಹೊಡಕರಿಸಿ ಮರೆಯಾಗಬಲ್ಲೆನಾಗಲಿ
ಒರೆಸಿ ಹೋಗೆನಯ್ಯ ನಶಿಸಿ ಹೋಗೆನಯ್ಯ
ಸ್ವತಂತ್ರಧೀರ ಸಿದ್ಧೇಶ್ವರಾ !

೨೩೩

ತುಕ್ಕು ಹಿಡಿದು ಉಳಿವುದಕ್ಕಿಂತ
ತಿಕ್ಕಿ ಬಳಸಿ ಅಳಿವುದು ಮೇಲಯ್ಯ ;
ಹುಳು ಹತ್ತಿ ಕೊಳೆವುದಕ್ಕಿಂತ
ಮಣ್ಣ ಬೆರೆತು ಮೊಳೆವುದು ಮೇಲಯ್ಯ ;
ಇಟ್ಟು, ನುಸಿ ಮುಟ್ಟಿ ನಶಿಸುವುದಕ್ಕಿಂತ
ತೊಟ್ಟು ಉಟ್ಟು ಹರಿಯುವುದು ಮೇಲಯ್ಯ ;
ಉಂಡು ಮಲಗಿ ಬೊಜ್ಜು ಬೆಳೆಸುವುದಕ್ಕಿಂತ
ಮಾಡಿ ಮಾಡಿ ಮಡಿವುದು ಮೇಲಯ್ಯ ;
ಓದಿ, ಬೋಧಿಸಿ, ವಾದಿಸುವುದಕ್ಕಿಂತ
ಅರಿತು, ಆಚರಿಸಿ, ಆದರ್ಶವಾಗುವುದು ಮೇಲಯ್ಯ ;
ಸ್ವತಂತ್ರಧೀರ ಸಿದ್ಧೇಶ್ವರಾ,
ಮಣಿಯನೆಣಿಸಿ ದಣಿವುದಕ್ಕಿಂತ
ಜನರ ತಣಿಸಿ ಕುಣಿವುದು ಮೇಲಯ್ಯ !

೨೩೪

ಇಂದು ಬಂದು ಮುಂದೆ ನಿಂತಿದೆ
ಸ್ವಾಗತಿಸಿದ, ಸಾರ್ಥಕ ಗೊಳಿಸಿದ !
ಹಿಂದಿನ ಮುಂದಿನ ದಂದುಗದಲ್ಲಿ ಮುಂದುಗಾಣದೆ
ಇಂದನ್ನು ಕಳೆದುಕೊಳ್ಳದಿರು !



ನಿನ್ನೆ ಏನನೂ ಮಾಡಲಿಲ್ಲವೆಂದು ಹಳಹಳಿಸುವವ
ನಾಳೆಗೇನು ಮಾಡಲಿಯೆಂದು ತಳಮಳಿಸುವವ
ಒಂದೇ ನಡೆಯದ ನಾಣ್ಯದ ಎರಡು ಮುಖಗಳು !
ಈ ಎರಡೂ ದೌರ್ಬಲ್ಯಗಳನ್ನು ಗೆಲ್ಲು,
ಚಿರವರ್ತಮಾನದಲ್ಲಿ ಮಾಡುತ್ತ ನಿಲ್ಲು !
ಈ ದಿನವಲ್ಲ, ಈ ಕ್ಷಣ ಮಿಗಿಲೆಂದು ನಂಬು,
ಕ್ಷಣ ಕ್ಷಣದಲ್ಲಿ ನಿನ್ನದೇನಾದರೂ ತುಂಬು !
ಸ್ವತಂತ್ರಧೀರ ಸಿದ್ಧೇಶ್ವರನ ಒಲಿಸಲು ಇದೇ ನೇರ ದಾರಿ !

೨೩೫

ಬದುಕು, ಜೀವಿ, ಬದುಕು !
ಬದುಕುವ ಬಯಕೆಯೇ ಬತ್ತಿಹೋದ ಹಾಗೆನಿಸಿದರೂ ಬದುಕು !
ಬದುಕು ನಿರಾಧಾರವಾಗಿ, ಭಾರವಾಗಿ, ಘೋರವೆಂದೆನಿಸಿದರೂ ಬದುಕು !
ಕುತ್ತುಗಳ ತುತ್ತ ನುಂಗಿ ಬದುಕು,
ನಿರಾಶೆಗಳ ನಂಜನೀಂಟಿ ಬದುಕು,
ಸೋಲುಗಳ ಹಾಸಿ ಹೊದೆದು ಬದುಕು,
ಸಾಲಗಳ ಹೊತ್ತು ಬದುಕು, ಸತ್ತು ಸತ್ತು ಬದುಕು,
ಬದುಕಲು ಕಾರಣಗೀರಣ ಬೇಕಿಲ್ಲ, ಬದುಕು !
ಬದುಕಲು ಯಾರ ಅನುಮತಿ ಅಪ್ಪಣೆಯೂ ಬೇಕಿಲ್ಲ, ಬದುಕು !
"ಏನಾಶೇ ಬಹವೋ ದೋಷಾಃ
ಜೀವನ್ಭದ್ರಾಣಿ ಪಶ್ಯತಿ !" ಬದುಕು,
ಏನಾದರೂ ಮಾಡಿ, ಎಂತಾದರೂ ಬದುಕು !
ಸ್ವತಂತ್ರಧೀರ ಸಿದ್ಧೇಶ್ವರ ಬದುಕಲೆಂದೇ ಹುಟ್ಟಿಸಿದ್ದಾನೆ ನಿನ್ನ,
ಇದುಕಾರಣ ಬದುಕಲೇಬೇಕು ನೀನು !
ಬದುಕು, ಬದುಕಗೊಡು ; ಬದುಕಗೊಡು, ಬದುಕು !

೨೩೬

ಒಳ್ಳೆಯ ಜೀವನಕ್ಕಿಂತ ಒಳ್ಳೆಯ ತತ್ವವನರಿಯೆನಯ್ಯ ;
ಒಳ್ಳೆಯ ನಡತೆಗಿಂತ ಒಳ್ಳೆಯ ಮತವನರಿಯೆನಯ್ಯ ;
ಒಳ್ಳೆಯ ನುಡಿಗಿಂತ ಒಳ್ಳೆಯ ಹಿತವನರಿಯೆನಯ್ಯ ;

ಸತ್ಯದಿಂದ ಬೇರೆ ಶಿವವ,
ಶಿವದಿಂದ ಬೇರೆ ಸುಂದರವ,
ಸುಂದರವನುಳಿದ ಆನಂದವನರಿಯೆನಯ್ಯಾ ;
ಸ್ವತಂತ್ರಧೀರ ಸಿದ್ಧೇಶ್ವರಾ, ನಿನ್ನನುಳಿದ ನಿಜವ,
ನಿಜಕು ಮಿಗಿಲಾದ ಧರ್ಮವ, ನಾನರಿಯೆನಯ್ಯಾ !

೨೩೭

ಯಾವ ಕಲ್ಲನು ಕೊಟ್ಟರೂ
ಕೆತ್ತುವನು ಮೂರ್ತಿಯ ಶಿಲ್ಪಿ
ಆದರೆ, ಶಿಲೆ ಒಳ್ಳೆಯದಿದ್ದಷ್ಟೂ ಶಿಲ್ಪ ಶ್ರೇಷ್ಠವಪ್ಪುದಯ್ಯ ;
ಹಾಳು ಗೋಡೆಯ ಮೇಲೆ ಬರೆಯೆಂದರೂ
ಬರೆಯುವನು ಚಿತ್ರವ ಚಿತ್ರಕಾರ
ಆದರೆ, ಭಿತ್ತಿ ಉತ್ತಮವಿದ್ದಷ್ಟೂ ಚಿತ್ರ ಉತ್ತಮವಪ್ಪುದಯ್ಯ ;
ಯಾವ ವಿಷಯವ ಕೊಟ್ಟರೂ
ಕವಿತೆ ಬರೆಯಬಲ್ಲ ಕವಿ
ಆದರೆ, ಮೆಚ್ಚಿಗೆಯ ವಿಷಯವಿದ್ದರೆ ಹೆಚ್ಚುವುದಯ್ಯ ಕವಿತೆಯ ಕಳೆ ;
ಸ್ವತಂತ್ರಧೀರ ಸಿದ್ಧೇಶ್ವರಾ,
ಹಾಗೆ, ಹೀಗೆ, ಹೇಗೋ ಬದುಕಿದರೂ ಸಾಗುವುದು ಬಾಳು
ಆದರೆ, ಗುರಿ ಘನವಾದಷ್ಟೂ ಅದರ ಗರಿಮೆ ಹೆಚ್ಚುವುದಯ್ಯ !

೨೩೮

ಏನು ಪಡೆದೆವೆಂಬುದು ಮುಖ್ಯವಲ್ಲ,
ಹೇಗೆ ದುಡಿದೆವೆಂಬುದು ಮುಖ್ಯವಯ್ಯ ;
ಏನ ನುಡಿದೆವೆಂಬುದು ಮುಖ್ಯವಲ್ಲ,
ಹೇಗೆ ನಡೆದೆವೆಂಬುದು ಮುಖ್ಯವಯ್ಯ ;
ಏನು ಗಳಿಸಿದೆವೆಂಬುದು ಮುಖ್ಯವಲ್ಲ,
ಹೇಗೆ ಬಳಸಿದೆವೆಂಬುದು ಮುಖ್ಯವಯ್ಯ ;



ಏನ ಕೇಳಿದೆವು, ಹೇಳಿದೆವೆಂಬುದು ಮುಖ್ಯವಲ್ಲ,
ಹೇಗೆ ಬಾಳಿದೆವೆಂಬುದು ಮುಖ್ಯವಯ್ಯ ;
ಸ್ವತಂತ್ರಧೀರ ಸಿದ್ಧೇಶ್ವರಾ,
ಏನ ಗೆದ್ದೆವೆಂಬುದು ಮುಖ್ಯವಲ್ಲ,
ಏನಾಗಿದ್ದೇವೆಂಬುದು ಮುಖ್ಯವಯ್ಯ !

೨೩೯

ಕುಕ್ಕದಿರೆ ಕಡಿಯದಿರೆ ಕೊಕ್ಕಿಗೆ ಬೆಲೆಯಾವುದಯ್ಯಾ ?
ನೆಕ್ಕದಿರೆ ನುಡಿಯದಿರೆ ನಾಲಗೆಗೆ ಬೆಲೆಯಾವುದಯ್ಯಾ ?
ಹಿಕ್ಕದಿರೆ, ಹೆಡಸು ಹೆಕ್ಕದಿರೆ ಹಣಿಗೆಗೆ ಬೆಲೆಯಾವುದಯ್ಯಾ ?
ರಸವಂತಿಕೆಯೂ ಇಲ್ಲ, ಗೇಯತೆಯೂ ಇಲ್ಲದಿರೆ
ಕವಿತೆಗೆ ಬೆಲೆ ಯಾವುದಯ್ಯಾ ?
ಆರೋಗ್ಯಕ್ಕೂ ಇಲ್ಲ, ಆನಂದಕ್ಕೂ ಇಲ್ಲದಿರೆ
ಆಟಕ್ಕೆ ಬೆಲೆಯಾವುದಯ್ಯಾ ?
ಉದರ ಪೋಷಣೆಗೂ ಇಲ್ಲ, ಹೃದಯ ವಿಕಸನಕ್ಕೂ ಇಲ್ಲದಿರೆ
ಶಿಕ್ಷಣಕ್ಕೆ ಬೆಲೆ ಯಾವುದಯ್ಯಾ ?
ತನಗೂ ಇಲ್ಲ, ಅನ್ಯರಿಗೂ ಸಲ್ಲದಿರೆ
ಸಂಪತ್ತಿಗೆ ಬೆಲೆ ಯಾವುದಯ್ಯಾ ?
ವ್ಯಷ್ಟಿಯ ಅಭ್ಯುದಯಕ್ಕೂ ಇಲ್ಲ, ಸಮಷ್ಟಿಯ ಸುಸ್ಥಿತಿಗೂ ಸಲ್ಲದಿರೆ
ಸರಕಾರಕ್ಕೆ ಬೆಲೆಯಾವುದಯ್ಯಾ ?
ಸ್ವತಂತ್ರಧೀರ ಸಿದ್ಧೇಶ್ವರಾ,
ನಾಡಿನೇಳ್ಗೆಗೂ ಇಲ್ಲ, ನುಡಿಯ ಮೇಲ್ಮೆಗೂ ಸಲ್ಲದಿರೆ
ಜೀವನಕ್ಕೆ ಬೆಲೆಯಾವುದಯ್ಯಾ ?

೨೪೦

ಎಷ್ಟೆಂದರೂ ನೀನು ಮನೆಯ ಕುಂಡದಲ್ಲಿ ಬೆಳೆದ ಬಳ್ಳಿ
ಬನದ ನೆಲದಲ್ಲಿ ಬೆಳೆದ ವಲ್ಲರಿಯಲ್ಲ,
ನಿನ್ನ ಹೂಗಳು ನಿನ್ನವೋ ? ಇಲ್ಲವೆ,
ಅನ್ಯರು ಚಿತ್ರೀಕರಣಕ್ಕಾಗಿ ತಂದಿರಿಸಿದ ಹಾಳೆಯ ಹೂವೊ ?

ಹೂವಿದ್ದೂ ಹೂವಲ್ಲ, ಹೂವಿಗೂ ಕಂಪಿಲ್ಲ,
ಹಾಸವಿಲ್ಲ, ಉಲ್ಲಾಸವಿಲ್ಲ, ಸುವಿಲಾಸವಿಲ್ಲ !
ಇವು ಹಣ್ಣಾಗುವ ಹೂಗಳೂ ಅಲ್ಲ,
ಚೆಲುವಿಗೆ ಕಣ್ಣಾಗುವ ಹೂಗಳೂ ಅಲ್ಲ,
ಬರಿಯ ಬಣ್ಣದ ಹೂಗಳೆಂದಾತ ಸ್ವತಂತ್ರಧೀರ ಸಿದ್ಧೇಶ್ವರ !

೨೪೧

ಗದ್ಯದಲ್ಲಿ ಬರೆಯಬಹುದಾದುದನ್ನು
ಪದ್ಯದಲ್ಲಿ ಬರೆಯುವುದು ಪೆದ್ದತನವಯ್ಯಾ ;
ಏಕಾಂತದಲ್ಲಿ ಮಾಡಬೇಕಾದುದನ್ನು
ಲೋಕಾಂತದಲ್ಲಿ ಮಾಡುವುದು ಮೊದ್ದುತನವಯ್ಯಾ ;
ಮೌನಿಯಾಗಿರಬೇಕಾದ ಹೊತ್ತಿನಲ್ಲಿ
ಮಾತಾಳಿಯಾಗುವುದು ಮಂಕುತನವಯ್ಯಾ ;
ತಕ್ಕ ಕಾಲದಲ್ಲಿ ತಗದ ಕಜ್ಜವನ್ನೂ, ತಗದ ಕಾಲದಲ್ಲಿ ತಕ್ಕ ಕಜ್ಜವನ್ನೂ
ಗೈಯುವುದು ಗಾಂಪತನವಯ್ಯಾ ;
ಅಳಬೇಕಾದಾಗ ನಗುವುದೂ, ನಗಬೇಕಾದಾಗ ಅಳುವುದೂ
ಮರುಳತನವಯ್ಯಾ ;
ಹಮ್ಮಿಣಿ ಬಿಗಿ ಹಿಡಿಯಬೇಕಾದಾಗ ಸಡಿಲು ಬಿಡುವುದೂ,
ಸಡಿಲು ಬಿಡಬೇಕಾದಾಗ ಬಿಗಿ ಹಿಡಿವುದೂ ಬೆಪ್ಪತನವಯ್ಯಾ ;
ಸ್ವತಂತ್ರಧೀರ ಸಿದ್ಧೇಶ್ವರಾ,
ಕೆಲಸ ಮಾಡುತ್ತಲೇ ಮಾಡಬಹುದಾದ ನಿನ್ನ ಸ್ಮರಣೆಯನ್ನು
ಕೆಲಸ ನಿಲ್ಲಿಸಿ ಮಾಡುವುದು ಗಾವಿಲತನವಯ್ಯಾ !

೨೪೨

ಕಾಯಕದಲ್ಲಿ ಕೈಗಳು, ನಿನ್ನಲ್ಲಿ ಮನ ಮಗ್ನವಾದ ಬಳಿಕ
ಮಾರನೇಗೈಯ್ವನಯ್ಯಾ, ಸೈತಾನನೇಗೈಯ್ವನಯ್ಯಾ,
ಆಹ್ರಿಮನ್ನನೇನು ಮಾಡುವನಯ್ಯಾ,
ಮಾಯೆಯೇನು ಮಾಡುವುದಯ್ಯಾ, ಮೋಹವೇನು ಮಾಡುವುದಯ್ಯಾ,



ಕಾಲ-ಕರ್ಮ-ವಿಧಿ-ನಿಯತಿಗಳೇನ ಮಾಡುವುದಯ್ಯಾ ?
ಸ್ವತಂತ್ರಧೀರ ಸಿದ್ಧೇಶ್ವರಾ,
ಕಾಯವು ಕಾಯಕದಲ್ಲಿ ನಿರತವಾಗಿರುವಂತೆ,
ಮನ ನಿನ್ನಿಂದ ಭರಿತವಾಗಿರುವಂತೆ
ಕರುಣಿಸಾ, ಕರುಣಿಗಳರಸಾ !

೨೪೩

ಸ್ವತಂತ್ರಧೀರ ಸಿದ್ಧೇಶ್ವರಾ,
ನಿನ್ನ ಮಕ್ಕಳು ಕೆಲಸಬೊಗಸೆಗಳನ್ನು ಬಿಟ್ಟು
ನಿನ್ನ ನುತಿಸುತ್ತ ಕುಣಿಯಬೇಕೆನ್ನುವಿಯಂತೆ,
ಮೂಗು ಹಿಡಿದು, ಮಣಿಯನೆಣಿಸಿ ದಣಿಯಬೇಕೆನ್ನುವಿಯಂತೆ,
ಧೂಪ ಉರಿಸಿ, ದೀಪ ಬೆಳಗಿ ತಣಿಯಬೇಕೆನ್ನುವಿಯಂತೆ
ನಿಜವೆ ? ಹೌದೆ ? ನಾನಂಬೆನಿದನು !
ಮಕ್ಕಳನ್ನೇ ಕೆಲಸಗೇಡಿಗಳನ್ನಾಗಿ,
ಮೈಗಳ್ಳರನ್ನಾಗಿ, ಮುಗ್ಗುಲುಗೇಡಿಗಳನ್ನಾಗಿ
ಮಾಡುವ ತಂದೆ ನೀನಾಗಿರಲಾರೆ !
ಯಾವ ಬಿಕನಾಸಿ ಪ್ರಾರಂಭಿಸಿದನೋ ಈ ಪೀಕಲಾಟವನ್ನು,
ಮೌಢ್ಯದ ಮೇಲಾಟವನ್ನು, ಅಂಧತೆಯ ಪೈಪೋಟಿಯನ್ನು !
ಮಂಥರತೆಗೆ ಮರುಳಾಗದೆ
ವಿಶ್ವವಿಕಾಸರಥಕ್ಕೆ ಹೆಗಲುಗೊಡುವ,
ಜೀವನಪರಿಪೂರ್ಣತೆಯ ಹೋರಾಟಕ್ಕಿಳಿವ,
ಜೀವರಾಶಿಗಳ ಲೇಸಿಗಾಗಿ ಹೆಣಗುವ
ಸಾಹಸ, ಶ್ರದ್ಧೆ, ಶಕ್ತಿಗಳ ನೀಡಯ್ಯಾ
ತಂದೆಗೆ ತಕ್ಕ ಮಗನ ಮಾಡಯ್ಯಾ !

೨೪೪

ವಿಕೃತಿಗೆ ಕಲೆಯ ಆಕೃತಿಯಿತ್ತರೆ ಸಂಸ್ಕೃತಿಯಾಗಬಲ್ಲುದೇನಯ್ಯಾ ?
ಕುಕರ್ಮಕ್ಕೆ ಧರ್ಮದ ಬಣ್ಣ ಬಳಿದರೆ ಸತ್ಕರ್ಮವಾಗಬಲ್ಲುದೇನಯ್ಯಾ ?
ಸುಲಿಗೆಗೆ ಶಾಸನದ ಮುಖವಾಡ ಹಾಕಿದರೆ ನ್ಯಾಯಸಮ್ಮತವಾಗಬಲ್ಲದೇನಯ್ಯಾ?

ಅನೀತಿಗೆ ಪ್ರೀತಿಯೆಂದು ಕರೆದಾಕ್ಷಣ ಪರಿಪೂತವಾಗಬಲ್ಲುದೇನಯ್ಯಾ ?
ಸ್ವತಂತ್ರಧೀರ ಸಿದ್ಧೇಶ್ವರಾ,
ಮೌಢ್ಯಕ್ಕೆ, ಮನದ ಜಾಡ್ಯಕ್ಕೆ ಶಾಸ್ತ್ರಧಾರ ಒದಗಿಸಿದರೆ
ಜೀವನದೇವತೆಗೆ ನೈವೇದ್ಯವಾಗಬಲ್ಲುದೇನಯ್ಯಾ ?

೨೪೫

ನಿನ್ನ ನೆರಳಿನಲ್ಲಿಯೇ ಬೆಳೆಸಿ ಬಾಡಿಸದಿರಯ್ಯ ಈ ಬಾಳ ಬಳ್ಳಿಯನ್ನು !
ಬಿಸಿಲು ಮಳೆಗಳಲ್ಲಿಯೇ ಬೆಳೆದು ನಳನಳಿಸುವಂತೆ ಮಾಡಿದನ್ನು !
ನೀನು ಕುಣಿಸಿದಂತೆ ಕುಣಿವ
ಸೂತ್ರದ ಬೊಂಬೆಯಾಗದಿರಲಯ್ಯ ಈ ಬಾಳು
ಬೀಳುತ್ತ , ಏಳುತ್ತ , ಹೋರುತ್ತ , ಏರುತ್ತ ,
ಕಾಲಕರ್ಮಗಳ ಮೀರುತ್ತ ಮುನ್ನಡೆವ
ಸಾಹಸ-ಶಿಶು, ಛಲದಬಾಲ, ಹೆಬ್ಬಯಕೆಯ ಯುವಕನಾಗಲಿದು !
ಸ್ವತಂತ್ರಧೀರ ಸಿದ್ಧೇಶ್ವರಾ,
ನಿನ್ನ ಕೃಪೆಯ ಹಂಗನೇ ಹಾಸಿ, ಹಂಗನೇ ಹೊದೆದು,
ಹಂಗನೇ ಸವಿದು ಭಂಗಬಡುವ ಬಾಳಾಗದಿರಲಿದು
ಇರಿದರೂ, ತರಿದರೂ, ತುರಿದರೂ, ಹುರಿದರೂ
'ದೇಹಿ'ಯೆನ್ನದ ದಿಟ್ಟ ಗಟ್ಟಿ ಎಟ್ಟಿ ಬಾಳಾಗಲಯ್ಯ ಇದು !

೨೪೬

ಚಂದ್ರನೊಲು ನನ್ನ ಕಲಂಕ ನನಗಿರಲಿ,
ತನಿವಗೆಯ ತಂಪು ಮಂದಿಗಿರಲಿ ;
ಗುಲಾಬಿಯೊಲು ನನ್ನ ಮುಳ್ಳು ನನಗಿರಲಿ,
ತನಿಗಂಪು ಮಂದಿಗಿರಲಿ ;
ಮರದವೊಲು ಮಂದಾಗ್ನಿ ನನಗಿರಲಿ,
ಪತ್ರ ಪುಷ್ಪ ಫಲ ಮಂದಿಗಿರಲಿ ;
ಸರಸಿಯೊಲು ಬೇರು ಬಳ್ಳಿಯ ತೊಡಕು ನನಗಿರಲಿ,
ಕಮಲ ಕುಮುದಗಳು ಮಂದಿಗಿರಲಿ ;



ಸ್ವತಂತ್ರಧೀರ ಸಿದ್ಧೇಶ್ವರಾ,
ನಿನ್ನಂತೆ ಸುಡುವ ನಂಜು ನನಗಿರಲಿ,
ಅಮೃತ ಮಂದಿಗಿರಲಯ್ಯಾ !

೨೪೭

ಮೈದಾಸನ ಹಸ್ತದಿಂದ ದೂರವಿರಿಸಯ್ಯ ನನ್ನನ್ನು
ಸುವರ್ಣಮೂರ್ತಿಯಾಗಿ ಅಲ್ಲ, ಮಾನವನಾಗಿ ಬದುಕುವಾಸೆ ನನಗೆ ;
ಪುಷ್ಪಕ, ಐರಾವತಗಳಿಂದ ದೂರವಿರಿಸಯ್ಯ ತಂದೆ
ಇದೇ ಲೋಕದಲ್ಲಿಯೇ ಜೀವಿಸುವಾಸೆ ನನಗೆ ;
ಅಪ್ಸರೆಯರಿಂದ ಅತಿದೂರವಿರಿಸಯ್ಯ ತಂದೆ
ಕೈ ಹಿಡಿದ ಮಡದಿಯೊಡನೆ ಕಾಲ ಕಳೆವಾಸೆ ನನಗೆ ;
ಸ್ವತಂತ್ರಧೀರ ಸಿದ್ಧೇಶ್ವರಾ,
ಸಿಂಹಾಸನ, ಮಣಿಮುಕುಟ, ದಂಡ, ಕಮಂಡಲು,
ಹಾವುಗೆ ಗದ್ದುಗೆಗಳಿಂದ ದೂರವಿರಿಸಯ್ಯ
ಸಾಮಾನ್ಯ ಮಾನವನಾಗಿ ಬಾಳುವಾಸೆ ನನಗೆ !

೨೪೮

ಮರುಹುಟ್ಟನಳಿಪ ಮೋಕ್ಷವೆನಗೆ ಬೇಡವಯ್ಯ,
ಮತ್ತೆ ಈ ಪವಿತ್ರ ಭಾರತದಲ್ಲಿ ಹುಟ್ಟುವಾಸೆ ನನಗೆ !
ಕಾಯಕ ತಪ್ಪಿಸುವ ಧ್ಯಾನಮೌನಾದಿಗಳು ಬೇಕಿಲ್ಲವಯ್ಯ ನನಗೆ
ಕಾಯಕ ಮಾಡುತ್ತಲೇ ಕೊನೆಯುಸಿರು ಬಿಡುವ ಬಯಕೆ ನನಗೆ !
ಪರೋಪಜೀವಿತ್ವದ ಪ್ರತೀಕಗಳಾದ ಪದವಿ ಪೀಠಗಳು
ಬೇಡವಯ್ಯ ನನಗೆ
ದುಡಿದುಣ್ಣುವ ಮಹಾಪದವಿ, ಪರಮ ಪೀಠವನ್ನು ಪಡೆವಾಸೆ ನನಗೆ !
ಸ್ವತಂತ್ರಧೀರ ಸಿದ್ಧೇಶ್ವರಾ,
ಆ ಲೋಕದ ಆಸೆಯಿಂದ,
ಈ ಲೋಕವ ಮರೆವುದು ಬೇಕಿಲ್ಲ ನನಗೆ
ಈ ಲೋಕವನ್ನೇ ನಾಕವಾಗಿಸುವ

ಮಹಾಮಣಿಹದಲ್ಲಿ ಪಾಲುಗೊಳ್ಳುವಾಸೆ ನನಗೆ !

೨೪೯

ನನ್ನ ನೋವಿನ ಕೆನೆಯನ್ನು
ನಿನ್ನ ನಾಮದ ಮಂಥಾನದಿಂದ ಕಡೆದು
ನೆಲವಿನ ನವನೀತವ ಪಡೆವೆನಯ್ಯ !
ನನ್ನ ಇರುಹಿನ ಒರಳಿನಲ್ಲಿ
ಮರಹಿನ ನೆಲ್ಲನು ಸುರುವಿ
ನಿನ್ನ ನೆನಹಿನ ಒನಕೆಯಿಂದ ಕುಟ್ಟಿ
ಅರುಹಿನ ಅಕ್ಕಿಯ ಪಡೆವೆನಯ್ಯ !
ನನ್ನ ಬದುಕಿನ ಬೀಸುಕಲ್ಲಿನಲ್ಲಿ
ಬದಿಯ ಬರಗನು ಹಾಕಿ
ನಿನ್ನ ಹೆಸರನೇ ಹಾಡುತ್ತ ಬೀಸಿ
ತುಷ್ಟಿಯ ಪಿಷ್ಟವ ಪಡೆವೆನಯ್ಯ !
ನನ್ನ ಬಾಳಿನ ಕಣದಲ್ಲಿ
ನನ್ನ ಕರ್ಮದ ತೆನೆಗಳ ಹರಹಿ
ನಿನ್ನ ಸ್ಮರಣೆಯ ಮೇಟಿಗೆ
'ನೀನು, ನಿನ್ನದು' ಎಂಬ ಎತ್ತುಗಳ ಕಟ್ಟಿ ತುಳಿಸಿ
ಧರ್ಮದ ರಾಶಿ ಮಾಡಿಕೊಳ್ಳುವೆನಯ್ಯ
ಸ್ವತಂತ್ರಧೀರ ಸಿದ್ಧೇಶ್ವರಾ !

೨೫೦

ಅರಿವು ಮರೆವುಗಳ ಮಧ್ಯದ ಮರಳುಗಾಡಿನಲ್ಲಿ
ಮೃಗಜಲವನರಸುತ್ತ ಅಲೆಯುತ್ತಿಹೆನಯ್ಯ ;
ಹುಟ್ಟಿನ ಹಣತೆಯ ಅರೆಬೆಳಕಿನಲ್ಲಿ
ಅಜರತೆಯ ಮಾಯಾಮೃಗದ ಬೆಂಬತ್ತಿ ಸುತ್ತುತ್ತಿಹೆನಯ್ಯ ;
ತನುವಿನ ತೆಪ್ಪವನ್ನೇರಿ ಕಾಲದ ಕಡಲನ್ನೀಸಲು



ಹುಸಿ ಹಂಬಲಗಳ ಹುಟ್ಟು ಹಾಕುತ್ತಿಹೆನಯ್ಯ ;
ಸ್ವತಂತ್ರಧೀರ ಸಿದ್ಧೇಶ್ವರಾ,
ಆಯುಷ್ಯದ ಚಿಪ್ಪನ್ನು ಹಿಡಿದು
ಅನಾದಿ ಅನಂತವ ಅಳೆಯಲು ಆರಂಭಿಸಿಹೆನಯ್ಯ !

೨೫೧

ಹಾಜರಿ ಹಾಕುತ್ತಲೆ ಓಡಿಹೋಗುವ ಬಾಲಕನಂತೆ ನಲವು,
ಹಾಜರಿದ್ದು ಕಲಿಯುವ ಬಾಲಕನಂತೆ ನೋವು
ಜೀವನದ ಪಾಠಶಾಲೆಯಲ್ಲಿ ;
ನೋವಿನ ತೆರೆಯ ಮೊಗದಲ್ಲಿ ನಗೆಯ ನೊರೆ
ಬಾಳಿನ ಹೊನಲಿನಲ್ಲಿ ;
ನೋವಿನ ಹಾವಿಗೆ ನಲವಿನ ಪರೆ
ಬದುಕಿನ ಹುತ್ತದಲ್ಲಿ ;
ನೋವಿನ ಬಟ್ಟಲಿನಲ್ಲಿ ನಲವಿನ ಮದಿರೆ
ಜೀವನದ ಮೇಜವಾನಿಯಲ್ಲಿ !
ನಾಣ್ಯದ ಒಂದು ಮುಖ ಬೇಕು,
ಇನ್ನೊಂದು ಬೇಡವೆಂದರೆ ಹೇಗಯ್ಯ ?
ನೋವು ನಲವಿನ ನೆಳಲು ಬೆಳಕಿನಾಟದಲ್ಲಿಯೇ
ನೆಮ್ಮದಿ ಪಡೆವ ಪರಿ ಕಲಿಸಯ್ಯ - ಸ್ವತಂತ್ರಧೀರ ಸಿದ್ಧೇಶ್ವರಾ !

೨೫೨

ಇನ್ನೇನೋ ಇಲ್ಲದೆ ಬದುಕ ಬಲ್ಲೆ,
ನೋವಿಲ್ಲದೆ ಬದುಕಲಾರೆನಯ್ಯಾ !
ಕೂರ್ಪರನಗಲಿದ ನೋವು, ಗುರಿಯ ಮುಟ್ಟದ ನೋವು,
ಆಸೆ ಅರಳದ ನೋವು, ಒಲವು ಫಲಿಸದ ನೋವು,
ನಿನ್ನನರಿಯದ ನೋವು, ನನ್ನ ಮರೆಯದ ನೋವು
ಒಂದೊಂದೂ ಊಟೆಯಯ್ಯ ಜೀವನದ ಝರಿಗೆ !
ಬಾಳು ಎಚ್ಚರಗೊಳ್ಳುವುದಯ್ಯ ನೋವಿನ ಕರೆಗೆ !
ನೋವೆ ನಾವೆಯಯ್ಯ ಬದುಕಿನ ತೊರೆಗೆ !

ನೋವಿನ ಹೂವಿನ ಮಧುವಿಗೆ
ಮಧುಕರನಾಗುವ ಭಾಗ್ಯವ ಕರುಣಿಸಯ್ಯ
ಸ್ವತಂತ್ರಧೀರ ಸಿದ್ಧೇಶ್ವರಾ !

೨೫೩

ಕುಗ್ಗೆನ್ನ ಹೃದಯವ ಹಿಗ್ಗಿಸಿತಯ್ಯ ಹೆಚ್ಚಿನ ಹಿಗ್ಗಿಗಾಗಿ ;
ಕುಗ್ಗೆನ್ನ ಬಗೆಯ ಹೊಲವ ಹರಗಿ ಬಿತ್ತಿತಯ್ಯ ಹೊಸ ಸುಗ್ಗಿಗಾಗಿ ;
ಕುಗ್ಗೆನ್ನ ಮನದ ತೆನೆ ಸುಟ್ಟಿತಯ್ಯ ಸವಿಬೆಳಸಿಗಾಗಿ ;
ಕುಗ್ಗೆನ್ನ ಕಂಕಿ ಹೊಲ ಉರಿಸಿತಯ್ಯ ಹೊಸ ಹುಲುಸಿಗಾಗಿ !
ಕುಗ್ಗುಲಗ್ಗೆಯಿಟ್ಟಾಗಲೇ
ಜೀವ ಕೋಟೆಯಲ್ಲಿ ಜಾಗೃತ ಯೋಧರು,
ಇಲ್ಲದಿರೆ, ಕೋಟೆಯೇ ಕುಂಭಕರ್ಣನಯ್ಯ !
ಕುಗ್ಗಿನಿಂದ ಸಹನಶಕ್ತಿಯ ವಿಕಾಸ,
ಸಹನಶಕ್ತಿಯ ವಿಕಾಸದಿಂದ ಶೀಲ ಪ್ರಕಾಶ,
ಶೀಲ ಪ್ರಕಾಶದಿಂದ ಸದ್ಭಾಗ್ಯ ವಿಲಾಸ,
ಅಭ್ಯುದಯ ನಿಃಶ್ರೇಯಸ !
ಕುಗ್ಗಿನ ಮೊಗ್ಗೆಯಲ್ಲಿ ಹಿಗ್ಗಿನ ಪರಿಮಳವ
ಪಡೆವ ಫಲ ನನ್ನದಾಗಿರಲಯ್ಯ, ಸ್ವತಂತ್ರಧೀರ ಸಿದ್ಧೇಶ್ವರಾ !

೨೫೪

ಬಾ ದುಃಖವೆ, ನನ್ನ ಸುಖವಾಗು ನೀನು ;
ಬಾ ನಿರಾಶೆಯೆ, ನನ್ನ ಆಶೆಯಾಗು ನೀನು ;
ಬಾ ಹಾನಿಯೇ, ನನ್ನ ಲಾಭವಾಗು ನೀನು ;
ಬಾ ಅಕೀರ್ತಿಯೆ, ನನ್ನ ಕೀರ್ತಿಯಾಗು ನೀನು ;
ಬಾ ತೆಗಳಿಕೆಯೆ, ನನ್ನ ಹೊಗಳಿಕೆಯಾಗು ನೀನು !
ಸ್ವತಂತ್ರಧೀರ ಸಿದ್ಧೇಶ್ವರನ ನಂಬಿದ ನನಗೆ
ಬೇಕಾವುದು, ಬೇಡವಾವುದು ?
ಇಷ್ಟವಾವುದು, ಅನಿಷ್ಟವಾವುದು ?



೨೫೫

ನನಗಿಷ್ಟು ದುಃಖವಿತ್ತೆಯೆಂದು ದುಃಖವಿಲ್ಲವಯ್ಯ ನನಗೆ
ನನ್ನ ದುಃಖವ ನೋಡಿ ನಿನಗೆ ದುಃಖವಾದೀತೆಂದು
ದುಃಖಿಸುವೆನಯ್ಯ !
ನಾನು ಒರಟು, ನಾನು ಗೊರಟು,
ಹೇಗೋ ಸಹಿಸಬಲ್ಲೆನಯ್ಯ ದುಃಖವನ್ನು !
ನೀನು ಕರುಣಾಕರ, ಭಕ್ತವತ್ಸಲ,
ನನ್ನ ದುಃಖವ ನೋಡಿ
ನೀನು ಹೇಗೆ ಸಹಿಸುವಿಯೆಂಬುದೇ
ಯಾತನೆ ಮೂಡಿಸುವ ಯೋಚನೆಯಯ್ಯ ನನಗೆ
ಸ್ವತಂತ್ರಧೀರ ಸಿದ್ಧೇಶ್ವರಾ !

೨೫೬

ಮೃಗಜಲದಲ್ಲಿ ಮೀನು ಹಿಡಿದವರುಂಟೆ ?
ಚಿತ್ರದ ಕಡಲ ಮುಳುಗಿ ಮುತ್ತು ತಂದವರುಂಟೆ ?
ಕನಸಿನಲ್ಲಿ ಕಂಡ ನದಿಯ ಕಟ್ಟಿ
ನೀರಾವರಿ ಮಾಡಿದವರುಂಟೆ ?
ಮಳೆಬಿಲ್ಲಿನ ಬಣ್ಣಗಳಿಂದ
ಚಿತ್ರವ ಬರೆದವರುಂಟೆ ?
ಕನ್ನಡಿಯೊಳಗಣ ಗಂಟನಿಂದ
ವ್ಯಾಪಾರವ ಮಾಡಿದವರುಂಟೆ ?
ಕಲ್ಪನೆಯ ಕೆಳದಿಯ ಕೂಡಿ
ಮಕ್ಕಳ ಹಡೆದವರುಂಟೆ ?
ಸ್ವತಂತ್ರಧೀರ ಸಿದ್ಧೇಶ್ವರಾ,
ಸುಖ ದುಃಖಗಳ ಹಾಸು ಹೊಕ್ಕುಗಳಿಲ್ಲದೆ

ಬಾಳ ಬಟ್ಟೆ ನೆಯ್ದವರುಂಟೆ ?

೨೫೭

ನಾಣ್ಯವಿಲ್ಲದೆ ಮಾನ್ಯರಾದವರಿರಬಹುದು ;
ರೂಪಿಲ್ಲದೆ ಗಣ್ಯರಾದವರಿರಬಹುದು ;
ಧರ್ಮವಿಲ್ಲದೆ ಧನ್ಯರಾದವರಿರಬಹುದು ;
ಗುಣವಿಲ್ಲದೆ ಘನತೆಯ ಪಡೆದವರಿದ್ದರೆ ತೋರಾ
ಸ್ವತಂತ್ರಧೀರ ಸಿದ್ಧೇಶ್ವರಾ !

೨೫೮

ನಾನು ಆಡುವುದೇ ಆಡುವುದು ನನ್ನ ಬಗ್ಗೆ ;
ನಾನು ಬೇಡುವುದೇ ಹಾಡುವುದು ನನ್ನ ವಿಷಯಕ್ಕೆ ;
ನಾನು ಮಾಡುವುದೇ ಮಾಡುವುದು ನನ್ನನ್ನು ;
ನಾನು ನೀಡುವುದೇ ಮೂಡಿಸುವುದು ನನ್ನನ್ನು ;
ನಾನು ಭಾವಿಸುವುದೇ ರೂಪಿಸುವುದು ನನ್ನ ಜೀವನವ ;
ನಾನು ಬಯಸುವುದೇ ನಿರ್ಧರಿಸುವುದು ನನ್ನತನವ ;
ನಾನು ನಂಬಿದುದೇ ನಿರ್ಣಯಿಸುವುದು ನನ್ನ ಮತಿ, ಗತಿಯ !
ಇದು ಕಾರಣ, ಅಲ್ಲವಾದುದ,
ಹೊಲ್ಲವಾದುದ, ಖುಲ್ಲವಾದುದ
ಆಡದಂತೆ, ಬೇಡದಂತೆ,
ಮಾಡದಂತೆ, ನೀಡದಂತೆ
ನೀನೆನ್ನನಿರಿಸಾ
ಸ್ವತಂತ್ರಧೀರ ಸಿದ್ಧೇಶ್ವರಾ !

೨೫೯

ನಿನಗೆ ನಾನು ಶರಣು ಹೋಗದ ಮುನ್ನ ನಡೆದುದೇನೇ ಇರಲಿ,



ನಿನ್ನ ನಂಬಿದ ಮೇಲೂ ನನ್ನ ಜೀವನ
ಅನೀರೀಕ್ಷಿತಗಳ ಅಪ್ಪಳಿಕೆಗೆ ಸಿಕ್ಕ ನೌಕೆಯಾಗಬಹುದೇನಯ್ಯಾ
?
ಅನಿಶ್ಚಿತತೆಯ ಚಕ್ರತೀರ್ಥದಲ್ಲಿ ಸಿಕ್ಕ
ತರಗೆಲೆಯಂತಾಗಬೇಕೇನಯ್ಯಾ ?
ಅವಿಶ್ವಾಸದ ತುಳಿತಕ್ಕೆ ಸಿಕ್ಕ ತೃಣವಾಗಬೇಕೇನಯ್ಯಾ ?
ಅಕಸ್ಮಾತ್ತುಗಳ ಧೃತರಾಷ್ಟ್ರಲಿಂಗನಕ್ಕೆ ಸಿಕ್ಕ
ಭೀಮ-ಪ್ರತಿಮೆಯಾಗಬೇಕೇನಯ್ಯಾ ?
ದ್ವಂದ್ವಗಳ ಧರ್ಮಸಂಕಟಗಳ ರಣರಂಗವಾಗಬೇಕೇನಯ್ಯಾ ?
ಸ್ವತಂತ್ರಧೀರ ಸಿದ್ಧೇಶ್ವರಾ,
ಇವೆಲ್ಲ ಇನ್ನೂ ಇವೆಯಾಗಿ
ನಾನಿನ್ನೂ ನಿನ್ನನ್ನು ನಿಜವಾಗಿ ನಂಬಿಲ್ಲವಯ್ಯಾ !

೨೬೦

ನೀನೇನೋ ಹಿರಿದಪ್ಪ ಅಂಗಡಿಯನಿಕ್ಕಿ ಕುಳಿತಿರುವೆ,
ಆದರೆ ನಾನಲ್ಲಿಗೆ ಗ್ರಾಹಕನಾಗಿ ಬರಲಾರೆನಯ್ಯಾ !
ನನ್ನ ಕಲಬೆರಕೆಯ ಸರಕು ಅಲ್ಲಿ ಸಲ್ಲದೆಂಬ ಸಂಕೋಚ,
ನಿನ್ನ ಸರಕಿಗೆ ತೆರಲು ನೀನೊಪ್ಪುವ ನಾಣ್ಯ
ನನ್ನಲ್ಲಿಲ್ಲವೆಂಬ ನಾಚಿಕೆ !
ನಿತ್ಯ ಹೊರಡುವೆ ನಿನ್ನ ಅಂಗಡಿಯತ್ತ,
ನಿತ್ಯ ಮರಳುವೆ ಅರ್ಧದಾರಿಯಿಂದಲೇ !
ಒಂದನ್ನು ಕೊಟ್ಟು ನಿನ್ನ ಅಂಗಡಿಯ ಏನೆಲ್ಲವನ್ನೂ-
ಕೊನೆಗೆ ನಿನ್ನನ್ನೂ ಕೊಳ್ಳಬಹುದು !
ಆದರೆ, ಅದನ್ನು ಕೊಡಲು ಸಿದ್ಧನಾಗದ ಸಿದ್ಧಯ್ಯ
ಆವ ಮುಖದಿಂದ ನಿನ್ನ ಅಂಗಡಿಯತ್ತ ಬರಬಲ್ಲನಯ್ಯಾ -

ಸ್ವತಂತ್ರಧೀರ ಸಿದ್ಧೇಶ್ವರಾ !

೨೬೧

ನಿನ್ನ ಉದ್ದರಿ ಖಾತೆಯಲ್ಲಿ ನನ್ನ ಹೆಸರೇ ಮೊದಲ ಪುಟದಲ್ಲಿ !
ಉಳಿದವರು ಅಷ್ಟಿಷ್ಟು ಬಾಕಿ ಮುಟ್ಟಿಸಿದರೂ
ನಾನು ಒಂದು ಪೈಸೆಯನ್ನೂ ಪಾವತಿ ಮಾಡಿಲ್ಲವಯ್ಯ !
ಬಡ್ಡಿ ಕೇಳದ ದೊಡ್ಡ ಮನಸ್ಸಿನ ಸೆಟ್ಟಿ ನೀನು,
ಬಡ್ಡಿ ಹಾಕಿದ್ದರೆ ಏನಾಗುತ್ತಿತ್ತೋ ನನ್ನ ಪಾಡು !
ಏಸು ಜನ್ಮ ಬರಿ ಬಡ್ಡಿಗಾಗಿಯೇ ದುಡಿಯಬೇಕಾಗುತ್ತಿತ್ತೋ ;
ಉದ್ದರಿ ವಸೂಲಿಗಾಗಿ ನನ್ನನ್ನು ಕಾಡುವ, ಪೀಡಿಸುವ, ಕೊಳ್ಳುವ,
ಮಾರುವ ಕೌಶಿಕ ನಕ್ಷತ್ರಕ ವೀರಬಾಹುಕರ ಕಳಿಸಯ್ಯ,
ಬಾಕೀದಾರನಾಗಿ ಸಾವುದ ತಪ್ಪಿಸಯ್ಯಾ !
ಅವರ ಕಾಲಗುಣದಿಂದಲಾದರೂ
ನಿನ್ನ ಕಾಲೆಡೆಯಲ್ಲಿ ಸ್ಥಳ ಸಿಕ್ಕಲಿ
ಸ್ವತಂತ್ರಧೀರ ಸಿದ್ಧೇಶ್ವರಾ !

೨೬೨

ಈ ಕಾಯಿ ನೆಟ್ಟಗಿದೆಯೆ, ಕೆಟ್ಟಿದೆಯೆ ?
ಮೇಲಿನ ಜುಬ್ಬರ ಕರಟ ಗಟ್ಟಿಯಾಗಿಯೇ ಇವೆ,
ಆದರೆ, ಒಳಗಿನ ನೀರು ಕೆಟ್ಟಿದೆ,
ಒಳಗೆ ಕೊಬ್ಬರಿ ಕೊಳೆತು ನಾರುತ್ತಿದೆ !
ನುಡಿಸಿದರೆ 'ಟೊಕ್ ಟೊಕ್' ಸದ್ದು !
ಸೀಳಿದೆಯೆ ಎಲ್ಲಿಯೋ ಬಿದ್ದು ?
ಈ ಕಾಯಿ ಗಟ್ಟಿಯಿದ್ದೂ ನೆಟ್ಟಗಿಲ್ಲ !
ಈ ಇನ್ನೊಂದು ಕಾಯಿ ನೆಟ್ಟಗಿದೆಯೆ, ಕೆಟ್ಟಿದೆಯೆ ?
ಮೇಲಿನ ಕರಿ ಜುಬ್ಬರ, ಎಲುವಿನ ಕರಟ ಗಟ್ಟಿಯಾಗಿಯೇ ಇವೆ,
ಆದರೆ, ಒಳಗಿನ ಕೆನ್ನೀರು ಕೆಟ್ಟಿದೆ,
ಮಜ್ಜೆಯ ಕೊಬ್ಬರಿ ಕೊಳೆತು ನಾರುತ್ತಿದೆ !
ನುಡಿಸಿದರೆ 'ಠಕ್ ಠಕ್' ಸದ್ದು !



ಇರಬಹುದೆ ಇದಕ್ಕೆ ಮದ್ದು ?
ಈ ಕಾಯಿಯೂ ಗಟ್ಟಿಯಿದ್ದೂ ನೆಟ್ಟಗಿಲ್ಲ
ಸ್ವತಂತ್ರಧೀರ ಸಿದ್ಧೇಶ್ವರಾ !

೨೬೩

ಮಾತುಮಾತಿಗೆ ನಿನ್ನ ಹೆಸರ ಬಳಸಿಕೊಳ್ಳುವೆನಯ್ಯಾ
ನನ್ನ ಲಾಭಕ್ಕಾಗಿ ;
ಮಾತುಮಾತಿಗೆ ಬಡವರ ಹೆಸರ ಬಳಸಿಕೊಳ್ಳುವೆನಯ್ಯಾ
ನನ್ನ ಸ್ವಾರ್ಥಕ್ಕಾಗಿ ;
ಮಾತುಮಾತಿಗೆ ಶಾಸ್ತ್ರ ಸಮಾಜಗಳ ಮಾತು ಎತ್ತುವೆನಯ್ಯಾ
ನನ್ನ ಸುಖಕ್ಕಾಗಿ ;
ಮಾತುಮಾತಿಗೆ ದೇಶ ಧರ್ಮಗಳ ದುರುಪಯೋಗಿಸಿಕೊಳ್ವೆನಯ್ಯಾ
ನನ್ನ ಹಿತಕ್ಕಾಗಿ !
ನನ್ನ ದುರುಪಯೋಗಕ್ಕೆ ಒಳಗಾಗದ
ವಿಷಯ, ವಸ್ತು, ವ್ಯಕ್ತಿಯಿದ್ದರೆ ತೋರಾ,
ಸ್ವತಂತ್ರಧೀರ ಸಿದ್ಧೇಶ್ವರಾ !

೨೬೪

ಸಾಯುವವರೆಗೂ ಶಾಸ್ತ್ರ ಹೇಳಿದರೇನು
ಸುಳ್ಳು ಹೇಳುವುದ ಬಿಡಲಿಲ್ಲ ಶಾಸ್ತ್ರಿಗಳ ಬಾಯಿ ;
ಸಾಯುವವರೆಗೆ ಪೂಜೆ ಮಾಡಿದೊಡೇನು
ಭಕ್ತರ ಬೋಳಿಸುವುದ ಬಿಡಲಿಲ್ಲ ಪೂಜಾರಿಯ ಕೈ ;
ಹಲವು ಅರಸೊತ್ತಿಗೆಗಳು ಬಂದು ಹೋದರೇನು,
ಹಳ್ಳಿಗರ ಕೂಗ ಕೇಳಿರಲಿಲ್ಲ ಡಿಳ್ಳಿಯ ಕಿವಿ ;
ಹಲವು ವರ್ಗಾವರ್ಗಿಗಳು ನಡೆದಿದ್ದರೇನು,
ಶ್ರೀಸಾಮಾನ್ಯರ ದುಃಸ್ಥಿತಿಯ ಕಾಣಬೇಕಿದೆ ಅಧಿಕಾರಿಯ ಕಣ್ಣು ;
ಹಲವು ಸಲ ನಗರಾಧ್ಯಕ್ಷನಾದೊಡೇನು,
ಕೊಳೆಗೇರಿಗಳ ಹೊಲಸುನಾತವ ಅರಿಯಬೇಕಿದೆ
ಪ್ರಥಮಪೌರನ ಮೂಗು !
ಸ್ವತಂತ್ರಧೀರ ಸಿದ್ಧೇಶ್ವರಾ,
ಅಮೀಬಾ ಅರಿವಿನ ಜನ್ಮ ಪಡೆದೊಡೇನು,

ಮೂಲವಿಕಾರಗಳ ಮರೆಯಬೇಕಿನ್ನೂ ನಾನು !

೨೬೫

ಈ ಹೊತ್ತಗೆ ಹಲವು ಆವೃತ್ತಿಗಳ ಕಂಡರೂ
ಮೂಲ ಆವೃತ್ತಿಯ ತಪ್ಪುಗಳ ತಿದ್ದುಪಡಿಯಾಗಲೇ ಇಲ್ಲ !
ಈ ಮನೆ ಹಲವು ಸಲ ಬಿದ್ದು ಹಲವು ಸಲ ಮತ್ತೆ ಕಟ್ಟಿದರೂ
ಮೂಲ ನಕ್ಷೆಯ ತಪ್ಪು ಸರಿಪಡಲೇ ಇಲ್ಲ !
ಈ ಮರ ಮತ್ತೆ ಮತ್ತೆ ಬಿದ್ದು ಮತ್ತೆ ಮತ್ತೆ ಚಿಗಿತರೂ
ಮೂಲ ಬೀಜದ ಕಹಿಯು ಸಿಹಿಯಾಗಲೇ ಇಲ್ಲ !
ಈ ಚಿತ್ರ ಹಲವು ಸಲ ಮಾಸಿ ಹಲವು ಸಲ ಬಣ್ಣದುಂಬಿದರೂ
ಮೂಲರೇಖಾವಿನ್ಯಾಸದೋಷ ದೂರಾಗಲೇ ಇಲ್ಲ !
ಸ್ವತಂತ್ರಧೀರ ಸಿದ್ಧೇಶ್ವರಾ,
ಈ ಜೀವಿ ಅಗಣಿತ ಜನ್ಮಗಳನ್ನೆತ್ತಿದ್ದರೂ
ಮೂಲ ಸ್ವಭಾವ ಬದಲಾಗಲೇ ಇಲ್ಲ !
ನೀನೊಲಿದಲ್ಲದೆ ಇದು ಸಾಧ್ಯವಿಲ್ಲ !
ಒಲಿದು ಬದಲಿಸಿ ಬದುಕಿಗೆ ಬೆಲೆ ಬರಿಸಾ,
ಸ್ವತಂತ್ರಧೀರ ಸಿದ್ಧೇಶ್ವರಾ !

೨೬೬

ಬದುಕುವುದು ಬಹು ಸುಲಭ, ಬಾಳುವುದೇ ಕಠಿನವಯ್ಯಾ ;
ನರನಾಗುವುದು ಸುಕರ, ಮಾನವನಾಗುವುದೇ ದುಷ್ಕರವಯ್ಯಾ ;
ಗೃಹ ಕಟ್ಟುವುದು ಕಷ್ಟವೇನಲ್ಲ, ಗೃಹಸ್ಥನಾಗುವುದು ಕಷ್ಟಕರವಯ್ಯಾ ;
ಮದುವೆಯಾಗುವುದು ಮೋಜಿನ ವಿಷಯ,
ಸಂಸಾರ ಸಾಗಿಸುವುದು ಗೋಜಿನ ವಿಷಯವಯ್ಯಾ ;
ಸುಖಿಸುವುದೇನೋ ಸುಲಭ, ಆನಂದಿಸುವುದು ಅಪರೂಪವಯ್ಯಾ ;
ತಿನ್ನುವುದು ಬಲು ಹಗುರು, ಉಣ್ಣುವುದು ಹಗುರಲ್ಲವಯ್ಯಾ;
ಉಪಕಾರ ಮಾಡುವುದು ಅರಿದೇನಲ್ಲ, ಉಪಕಾರ ಸ್ಮರಿಸುವುದು ವಿರಳವಯ್ಯಾ ;
ಸ್ವತಂತ್ರಧೀರ ಸಿದ್ಧೇಶ್ವರಾ,
ನಿನ್ನ ನಾಮ ಜಪಿಸುವುದು ಬಹು ಸುಲಭ,



ನಿನ್ನ ಒಲವ ಗಳಿಸುವುದು ಬಹು ಕಠಿನವಯ್ಯಾ !
ನೀನೇ ಒಲಿದು ಸಲಹಯ್ಯಾ !

೨೬೭

ಕರೆದರೆ ಬರುವುದೇನಯ್ಯಾ
ಕಳೆದ ಹೊತ್ತು ?
ಕರೆದರೆ ಬರುವುದೇನಯ್ಯಾ
ಬರಡಾವಿನಿಂದ ಹಾಲು ?
ಕರೆದರೆ 'ಓ' ಎನ್ನುವುವೇನಯ್ಯಾ
ಕಿರುಕುಳ ದೈವಂಗಳು ?
ಕರೆದರೆ ಕರೆಯುವುದು ಬರಲಿರುವ ಹೊತ್ತನ್ನು ;
ಕರೆದರೆ ಕರೆಯುವುದು ಕರು ಹಾಕಿದ ಗೋವನ್ನು ;
ಕರೆದರೆ ಕರೆಯುವುದು ಸ್ವತಂತ್ರಧೀರ ಸಿದ್ಧೇಶ್ವರನನ್ನು !

೨೬೮

ನೀರಿಲ್ಲದ ಮೋಡ, ಹಣ್ಣು ಕೊಡದ ಗಿಡ, ನೆರೆ ತಡೆಯದ ದಡ
ಇದ್ದರೇನೋ ಶಿವ ಶಿವಾ, ಇರದಿದ್ದರೇನೋ ಶಿವ ಶಿವಾ !
ಸುಂದರ ಮುಖವಿಲ್ಲದ ಸುಂದರ ಶರೀರ,
ರಮಣೀಯಾರ್ಥವಿಲ್ಲದ ರಮಣೀಯ ಶಬ್ದಪರಿವಾರ,
ಜನರ ಹಿತ ಸಾಧಿಸದ ಬಣಗು ಸರಕಾರ
ಇದ್ದರೇನೋ ಶಿವಶಿವಾ, ಇರದಿದ್ದರೇನೋ ಶಿವಶಿವಾ !
ಉಣ್ಣಲು ಇಲ್ಲದ ಅಮೃತಾಹಾರ,
ಉಡಲು ಒದಗದ ಪೀತಾಂಬರ,
ತೊಡಲು ಬಾರದ ಹಾರ ಕೇಯೂರ
ಇದ್ದರೇನೋ ಶಿವಶಿವಾ, ಇರದಿದ್ದರೇನೋ ಶಿವಶಿವಾ !
ಬುದ್ಧಿ ವಿರಹಿತ ಶ್ರದ್ಧೆ,
ಪತಿಯೆ ಇಲ್ಲದ ಪ್ರಬುದ್ಧೆ,
ನಿನ್ನನರಿಯದ ವಿದ್ಯೆ
ಇದ್ದರೇನೋ ಶಿವಶಿವಾ, ಇರದಿದ್ದರೇನೋ ಶಿವಶಿವಾ
ಸ್ವತಂತ್ರಧೀರ ಸಿದ್ಧೇಶ್ವರಾ !

೨೧೯

ಪಾರ್ಥೇನಿಯಂ ಪಾಥೇಯವಾಗಬಲ್ಲುದೇನಯ್ಯಾ ?
ಆಕ್ಟೋಪಸ್ ಅತಿಥೇಯವಾಗಬಲ್ಲುದೇನಯ್ಯಾ ?
ನೀರೋನ ನೀತಿ ಉಪಾದೇಯವಾಗಬಲ್ಲುದೇನಯ್ಯಾ ?
ಪೃಥ್ವೀವಲ್ಲಭರಿಗೆ ಪ್ರಜಾಪ್ರಭುತ್ವ,
ಪುರೋಹಿತಶಾಹಿಗೆ ಸಮತಾ ತತ್ವ
ಜೀನನಿಗೆ ದಾನ, ಹೀನನಿಗೆ ನಕ್ಷತ್ರಗಾನ,
ದೀನನಿಗೆ ತತ್ವಜ್ಞಾನ ಅನುಪ್ರೇಯವೆನಿಸಬಹುದೇನಯ್ಯಾ ?
ಸ್ವತಂತ್ರಧೀರ ಸಿದ್ಧೇಶ್ವರಾ,
ನಿನ್ನ ಕಣ್ಣಿಗೇ ಮಣ್ಣೆರಚುವ ಉಪಾಯ
ಶ್ರೇಯವೆನಿಸಬಲ್ಲುದೇನಯ್ಯಾ ?

೨೨೦

ನಾಮಪದದ ವೈರಿ ವಿಶೇಷಣ,
ಕವಿತೆಯ ವೈರಿ ವ್ಯಾಕರಣ,
ರಮಣೀಯತೆಯ ವೈರಿ ವಿವರಣೆ,
ಸ್ವಂತಿಕೆಯ ವೈರಿ ಅನುಕರಣೆ,
ಬೆಳವಣಿಗೆಯ ವೈರಿ ಭದ್ರತೆ,
ಉನ್ನತಿಯ ವೈರಿ ಕ್ಷುದ್ರತೆ,
ಒಲವಿನ ವೈರಿ ಸಂಶಯ,
ಚೆಲುವಿನ ವೈರಿ ಅತಿಪರಿಚಯ,
ವಿದ್ಯೆಯ ವೈರಿ ಅಹಂಕಾರ,
ಸಿದ್ಧಿಯ ವೈರಿ ಮಮಕಾರ
ಸ್ವತಂತ್ರಧೀರ ಸಿದ್ಧೇಶ್ವರಾ,
ನನಗೆ ವೈರಿ ನಾನೇ, ನನಗೆ ವೈರಿ ನಾನೇ !



೨೨೧

ವಿಲಾಯತಿಯ ಎಮ್ಮೆಯಾದೊಡೇನು,
ಅದು ತಿನ್ನುವುದು ಹುಲ್ಲನ್ನೇ ;
ವಾರಾಣಸಿಯ ಬೆಕ್ಕಾದರೇನು,
ಅದು ತಿನ್ನುವುದು ಇಲಿಯನ್ನೇ ;
ಮಂತ್ರಿಣಿಯ ತಲೆಯ ಹೇನಾದರೇನು,
ಅದು ತಿನ್ನುವುದು ಹೆಡಸನ್ನೇ ;
ಶ್ವೇತಭವನದ ಸೊಣಗವಾದೊಡೇನು,
ಅದು ತಿನ್ನುವುದು ಅಡಗನ್ನೇ ;
ಮಾನಸಸರೋವರದ ಕಪ್ಪೆಯಾದರೇನು,
ಅದು ತಿನ್ನುವುದು ಹುಳುವನ್ನೇ ;
ಸ್ವತಂತ್ರಧೀರ ಸಿದ್ಧೇಶ್ವರಾ,
ಬುದ್ಧ ಬಸವ ಬಾಪೂಜಿಯರ
ದೇಶದಲ್ಲಿ ವಾಸಿಸಿದ್ದರೇನು
ನಾನು ಮೆಚ್ಚಿರುವುದು ನಾಯಿತನವನ್ನೇ !

೨೨೨

ಎಲ್ಲ ಪ್ರಾಣಿಗಳಿಗೂ ಒಂದೊಂದು ಪ್ರಾಣಿಗುಣ,
ನನಗೇಕೆ ಇನಿತೊಂದು ಪಶುಗುಣಗಳನ್ನು ಇತ್ತಿಹೆಯಯ್ಯಾ ?
ವಿಷಯದ ಹಸಿರ ಮೆಲ್ಲುವಾಗ ಹಸು ಹುಲ್ಲೆ ಮೇಕೆ,
ಕಾಮದ ಬೂದಿಯಲ್ಲಿ ಹೊರಳುವಾಗ ಕತ್ತೆ ನಾನಯ್ಯಾ !
ಒಡೆಯ ನುಡಿದಾಗೊಮ್ಮೆ ಕೌಲೆತ್ತು ನಾನು,
ಆಮಿಷದ ಎಲುಬನಗಿದಾಗ ನಾಯಿ ನಾನಯ್ಯಾ !
ಮದವೇರಿದಾಗ ಮದ್ದಾನೆ,
ಕುಟಿಲಧ್ಯಾನದಲ್ಲಿರುವಾಗ ಬಕ,
ತಳತಂತ್ರಕ್ಕಿಳಿದಾಗ ನರಿ,
ಕದ್ದು ಕುಡಿವಾಗ ಬೆಕ್ಕು,
ಕಚ್ಚುವಾಗ ಹಾವು, ಕುಟುಕುವಾಗ ಚೇಳು,

ಕುಕ್ಕುವಾಗ ಹದ್ದು, ಹಸಿದಾಗ ತೋಳ,
ದೂಷಕನಾದಾಗ ಮೂಷಕ,
ಶೋಷಕನಾದಾಗ ಕೀಟಕ,
ಮನದ ಕೈಗೊಂಬೆಯಾದಾಗ ಮರ್ಕಟ !
ಎನಿತೊಂದು ಪಶುತನಗಳ, ಪಶುಗುಣಗಳ ಮೊಟ್ಟೆ ನಾನು !
ಇವುಗಳಲ್ಲಿ ಒಂದೊಂದರಿಂದಲೂ ಕೆಟ್ಟೆ ನಾನು !
ನನ್ನ ಪಶುತನ ನಿನ್ನ ಪಶುಪತಿತನದಲ್ಲಿ
ಕರಗಿ ಹೋಗಲಯ್ಯ, ತಂದೆ !
ನನ್ನ ಪ್ರಾಣಿಗುಣಗಳೆಲ್ಲ ನಿನ್ನ ಕಲ್ಯಾಣ ಗುಣಗಳಲ್ಲಿ
ಮಿಂದು ಮಡಿಯಾಗಿ
ತೊಡಕಾಗದೆ ತೊಡವಾಗಲಯ್ಯ
ಸ್ವತಂತ್ರಧೀರ ಸಿದ್ಧೇಶ್ವರಾ !

೨೭೩

ಮನದಲ್ಲಿ ಹುಟ್ಟುವ ಹೊಲಸು
ಮನದಲ್ಲಿಯೇ ತೊಳೆದು ಅಳಿದು ಹೋದರೆ ಕ್ಷೇಮವಯ್ಯ !
ಮೊದಲು ಮನವನ್ನು ಹೊಲಸುಗೊಳಿಸಿ,
ಆಮೇಲೆ ರಸನೆಯನ್ನು, ಮಾತನ್ನು ಹೊಲಸುಗೊಳಿಸಿ,
ಕೇಳುವವರ ಕಿವಿಗಳನ್ನು ಕಲುಷಿತಗೊಳಿಸಿ,
ಕೃತಿಗಿಳಿದಾಗ ಕಾಯವನ್ನೆಲ್ಲ ಕಿಲ್ಬಿಷಗೊಳಿಸುವುದಕ್ಕಿಂತ
ಹುಟ್ಟಿದಲ್ಲಿಯೇ ಸುಟ್ಟು ಹೋಗುವುದು ಶ್ರೇಯಸ್ಕರವಯ್ಯ !
ನನ್ನ ಮನದಿ ಹೊಲಸು ಮೂಡುತ್ತಲೇ
ನಿನ್ನ ನೆನಹು ಅಗ್ಗವಣಿಯಾಗಿ ಸುರಿದು
ತೊಳೆದು ಮಡಿ ಮಾಡಲಯ್ಯ ಅದನ್ನು !
ಒಲೆಯ ಬೂದಿ ಒಲೆಯಲ್ಲಾದರೂ ಇರಲಿ,
ತಿಪ್ಪೆಯನ್ನಾದರೂ ಸೇರಲಿ,
ಹಾರಿ ಮನೆಯನ್ನೆಲ್ಲ ಮಲಿನಗೊಳಿಸದಿರಲಯ್ಯ
ಸ್ವತಂತ್ರಧೀರ ಸಿದ್ಧೇಶ್ವರಾ !



೨೭೪

ಮನದ ಸರಸಿಯ
ತರಂಗಸಂಗೀತದಲ್ಲೊಂದು ಸೊಗಸು,
ಅದರ ನಿಸ್ತರಂಗ ನೀರವತೆಯಲ್ಲೊಂದು ಸೊಬಗಯ್ಯ !
ನೀರು ನಿರ್ಮಲವಾಗಿದ್ದರೆ ಸಾಕು
ತೆರೆಯೆದ್ದರೂ ಸರಿಯೆ, ಇರದಿದ್ದರೂ ಸರಿಯೆ !
ನೀರು ಕೆಡುವ ಲಕ್ಷಣ ತೋರುತ್ತಲೆ
ನಿನ್ನ ನೆನಹು ಕ್ಲೋರಿನ್ನಾಗಿ
ಸೇರಿ ಶೋಧಿಸಲಯ್ಯ, ಶುದ್ಧೀಕರಿಸಲಯ್ಯ
ಸ್ವತಂತ್ರಧೀರ ಸಿದ್ಧೇಶ್ವರಾ !

೨೭೫

ಉಣಿಸಿ ತಿನಿಸಿ ಹಸಿವೆ ಹೆಚ್ಚಿಸುವ
ಕಾಮದಿಂದೆನ್ನ ಕಾಪಾಡಯ್ಯ, ತಂದೆ ;
ನನ್ನನೇ ನನಗೆ ಆಹಾರವಾಗಿಸುವ
ಕ್ರೋಧದಿಂದೆನ್ನ ಕಾಯಯ್ಯಾ ತಂದೆ ;
ಗಳಿಸಿದಷ್ಟೂ ಬಡವನನ್ನಾಗಿಸುವ
ಲೋಭದಿಂದೆನ್ನ ರಕ್ಷಿಸಯ್ಯ, ತಂದೆ ;
ಕಣ್ಣಿದ್ದೂ ಕುರುಡನನ್ನಾಗಿಸುವ
ಮೋಹದಿಂದೆನ್ನ ದೂರವಿರಿಸಯ್ಯ, ತಂದೆ ;
ನನ್ನ ಪತನಕ್ಕೆ ನನ್ನಿಂದಲೇ ಪಥ ಮಾಡಿಸುವ
ಮದದಿಂದೆನ್ನ ಪಾರುಮಾಡಯ್ಯ, ತಂದೆ ;
ಸ್ವತಂತ್ರಧೀರ ಸಿದ್ಧೇಶ್ವರಾ,
ನಾ ಹೆಣವಾಗುವ ಮೊದಲೇ ನನ್ನ ಕುಣಿ ತೋಡುವ
ಮತ್ಸರದಿಂದೆನ್ನ ಮುಕ್ತಗೊಳಿಸಯ್ಯ, ತಂದೆ !

೨೭೬

ಚಂದ್ರನ ಮೇಲೆ ಕಾಲು, ಭೂಮಿಯ ಮೇಲೆ ಮನ,
ಭೂಮಿಯ ಮೇಲೆ ಕಾಲು, ಚಂದ್ರನ ಮೇಲೆ ಮನ ;
ಅಲ್ಲಿಗೆ ಹೋದಾಗ ಇಲ್ಲಿಯ ಆಸೆ, ಇಲ್ಲಿರುವಾಗ ಅಲ್ಲಿಯ ಆಸೆ ;
ಇದೆಂಥ ತಿರುವುಮುರುವಯ್ಯ ಮನುಜನ ಮನಸ್ಸಿಗೆ ?
ಅಲೆಯುವ ಮನವ ಕಟ್ಟಿ ಹಾಕುವುದೆ ?
ಅಲೆಯ ಬಿಟ್ಟು ನೆಲೆಗೆ ತಲುಪಿಸುವುದೆ ?
ಮನವೇ ಇಲ್ಲದಂತೆ ಮಾಡುವುದೆ ?
ಮನವಿಲ್ಲದ ಮಾನವ ಮೊಟ್ಟೆಯಿಲ್ಲದ ಆಮ್ಲೆಟ್ಟು,
ಡೆನ್ಮಾರ್ಕದ ರಾಜಕುಮಾರನಿಲ್ಲದ ಹ್ಯಾಮ್ಲೆಟ್ಟು ಅಲ್ಲವೇನಯ್ಯಾ ?
ಈ ತುಡುಗು ದನದ ಕೊರಳಿಗೆ ಗುದ್ದಿ ಕಟ್ಟಿ,
ಅಲೆಯಲು ಬರುವಂತೆ ಉದ್ದ ಹಗ್ಗ ಕಟ್ಟಿ,
ಗುರಿಯ ಗೂಟಕ್ಕೆ ಬಿಗಿದರೆ ಸಾಲದೇನಯ್ಯಾ
ಸ್ವತಂತ್ರಧೀರ ಸಿದ್ಧೇಶ್ವರಾ ?

೨೭೭

ಪಂಜರದಲ್ಲಿರುವ ಈ ಪಂಚವರ್ಣದ ಪಕ್ಷಿಗೆ
ಆಗಾಗ ಹಾರಾಡುವ ಸ್ವಾತಂತ್ರ್ಯ ;
ಆಮೇಲೆ ಪಂಜರದಲ್ಲಿ ಪಾರತಂತ್ರ್ಯ !
ಇದೇ ಅದರ ಕೊರಗಿಗೆ ಕಾರಣ,
ಇದೇ ಅದರ ಬದುಕಿನ ಹೂರಣ !
ಪಂಜರದಲ್ಲಿಯೇ ಉಳಿದು
ಪೆವ್ವಲೋಫನ ಪಕ್ಷಿಯಾಗುವಂತಿಲ್ಲ.
ವನದ ಗಿಳಿಯಾಗಿ ಹಾರಿ ಸ್ವಚ್ಛಂದತೆಗೆ ಸಾಕ್ಷಿಯಾಗುವಂತಿಲ್ಲ !
ಈ ಅತಂತ್ರತೆ ಸ್ವತಂತ್ರತೆಗಳ ಕಲಸು ಮೇಲೋಗರವನ್ನೇ
ಉಂಡು ಬದುಕೆನ್ನುವಿಯೇನಯ್ಯಾ
ಸ್ವತಂತ್ರಧೀರ ಸಿದ್ಧೇಶ್ವರಾ ?



೨೭೮

ಮರ ಮೇಲಕ್ಕೆ ಬೆಳೆದು ಬೇರು ಆಳಕ್ಕೆ ಇಳಿದರೆ ಸರಿ,
ಬೇರು ಮೇಲಕ್ಕೆ ಬೆಳೆದು ಮರ ಕೆಳಗಿಳಿಯಬಹುದೇನಯ್ಯಾ?
ನೀರಿನ ಖಜಾನೆ ಮೇಲಿದ್ದು ನಲ್ಲಿಗಳು ಕೆಳಗಿದ್ದರೆ ಸರಿ,
ನಲ್ಲಿಗಳು ಮೇಲಿದ್ದು ಖಜಾನೆ ಕೆಳಗಿಳಿದರೆ ಹೇಗಯ್ಯಾ ?
ಕುಡಿಕೆ ನೆಲದ ಮೇಲುಳಿದು ಬಿರುಸು ಬಾಣ ಮೇಲಕ್ಕೆ ಹಾರಿದರೆ ಸರಿ,
ಬಿರುಸು ನೆಲದೊಳಗಿಳಿದು ಕುಡಿಕೆ ಮೇಲಕ್ಕೆ ಹಾರಿದರೆ ಹೇಗಯ್ಯಾ?
ಫ್ಯಾನು ಮೇಲಿದ್ದು ಗಾಳಿ ಕೆಳಗೆ ಬೀಸಿದರೆ ಸರಿ,
ಫ್ಯಾನು ಕೆಳಗಿದ್ದು ಗಾಳಿ ಮೇಲಕ್ಕೆ ಬೀಸಿದರೆಂತಯ್ಯಾ ?
ಸ್ವತಂತ್ರಧೀರ ಸಿದ್ಧೇಶ್ವರಾ,
"ಮನೋಮಯಃ ಪ್ರಾಣ ಶರೀರ ನೇತಾ" ಇದ್ದರೆ ಸರಿ,
"ಶರೀರಮಯಃ ಪ್ರಾಣಮನ ನೇತಾ" ಆದರೆ ಎಂತಯ್ಯಾ ?

೨೭೯

ಗಾಂಪರೂ ಮಾರಿಕೊಳ್ಳುವುದಿಲ್ಲ
ತಕ್ಕ ಬೆಲೆ ಬರದೆ ತಮ್ಮದೆಂಬುವುದನ್ನು,
ನೀನೂ ಹಲವು ಪೇಟೆ ಅಲೆಯುವೆ,
ಮಾರುಕಟ್ಟೆಯಿಂದ ಮಾರುಕಟ್ಟೆಗೆ ಅಂಡಲೆವೆ
ನಿನ್ನ ಹುಲ್ಲುಕಡ್ಡಿಗೂ ಕ್ರಯದೊರೆಯಲೆಂದು.
ಆದರೆ, ಎಲ್ಲಕ್ಕೂ ಆಧಾರವಾದ, ಅಮೂಲ್ಯವಾದ
ನಿನ್ನನೇ ಮಾರಿಕೊಳ್ಳುವೆ ಬಿಡಿಕಾಸನ್ನೂ ಬೇಡದೆ
ಸಿಕ್ಕು ಸಿಕ್ಕವರಿಗೆ, ಠಕ್ಕ ಗುರುಗಳಿಗೆ, ಕಪಟ ಸಂನ್ಯಾಸಿಗಳಿಗೆ,
ಕುಟಿಲ ನಾಯಕರಿಗೆ, ಒಳಗಿನ ವೈರಿಗಳಿಗೆ !
ಎಲ್ಲದಕ್ಕೂ ಬೆಲೆಯಿದೆ, ನಿನಗೇ ಬೆಲೆಯಿಲ್ಲವೆ ?
ನಿನ್ನ ಬೆಲೆ ನಿನಗೇ ಗೊತ್ತಿಲ್ಲವೆ ?
ಯೇ ಗುಲಾಮಸ್ತ್ ಅಕಲೋ ತದಬೀರಾತೊ ಹೋಷ್,
ತೂ ಚರಾ ಈ ಖೇಷ್ ರಾ ಅರ್ಜಾಂ ಫರೋಷ್ ?

ಎಂದು ಎಂದಿನಿಂದ ಕೇಳುತ್ತಲಿದ್ದಾನೆ ರೂಮಿ,
ಕೇಳಿದರೆ ತಾನೆ ಕಿವಿಯಿದ್ದೂ ಕಿವುಡ ಆಸಾಮಿ ?
ಯಾವ ಜೀವಿಗೂ ನೀಡದ
ಬುದ್ಧಿ, ಉಪಾಯ, ಜ್ಞಾನಗಳನ್ನು
ನಿನಗೆ ಕೊಟ್ಟು ಕೆಟ್ಟೆನೆನ್ನುತ್ತಿದ್ದಾನೆ.
ಸ್ವತಂತ್ರಧೀರ ಸಿದ್ಧೇಶ್ವರ !
ಏನುತ್ತರ ಹೇಳುವಿ ಹೇಳು,
ವೇಳೆಯಾಯಿತು ಏಳು,
ಬೆಳಕಿನ ಬಾಳನ್ನು ಬಾಳು !

೨೮೦

ಭಸ್ಮ ಬಳಿದೊಡಿಲ್ಲ, ಗಂಧ ತಳೆದೊಡಿಲ್ಲ, ಗಡ್ಡ ಬೆಳೆದೊಡಿಲ್ಲ,
ಶಿಲುಬೆ ಧರಿಸಿದೊಡಿಲ್ಲ, ಮುದ್ರೆ ಮೆರೆದೊಡಿಲ್ಲ,
ಬಾಹ್ಯ ಚಿಹ್ನೆಗಳಿಂದ ಭಕ್ತರಾದವರುಂಟೆ ?
ಬೂದಿ ಬಳಿದ ಮಾತ್ರಕ್ಕೆ ವಿರಕ್ತರಾದವರುಂಟೆ ?
ಬಳಸಲು ಬಾರದ ಆಯುಧ ಹಿಡಿದು ಶಕ್ತರಾದವರುಂಟೆ ?
ಮುಂಡನ ಮಾಡಿಸಿಕೊಂಡು ಅನಾಸಕ್ತರಾದವರುಂಟೆ ?
ಬರಿ ತನುವ ತೊಳೆದು ಮುಕ್ತರಾದವರುಂಟೆ ?
ವೇಷಗಾರಿಕೆ, ಮೋಸಗಾರಿಕೆ ಬೇರಲ್ಲ :
ಒಳಗ ತೊಳೆಯದೆ ದಾರಿ ಬೇರಿಲ್ಲ ;
ಅಂತರಂಗ ಶುದ್ಧವಾದರೆ ಗುರಿ ದೂರಿಲ್ಲ :
ಸ್ವತಂತ್ರಧೀರ ಸಿದ್ಧೇಶ್ವರನೇ ಬಲ್ಲ !

೨೮೧

ಸ್ವತಂತ್ರಧೀರ ಸಿದ್ಧೇಶ್ವರಾ,
ನಿನ್ನ ಕರುಣೆ ಕಾರಣವಾಗಿ ನನ್ನ ಮನ



ಶುಭಭಾವನೆಗಳ ಹೂಬುಟ್ಟಿಯಾಗಿರಲಯ್ಯಾ,
ಕೀಳುಭಾವನೆಗಳ ಕಸದ ಬುಟ್ಟಿಯಾಗದಿರಲಯ್ಯಾ ;
ಸುವಿಚಾರಗಳ ರತ್ನ ಮೌಕ್ತಿಕದಚ್ಚು ಆಗಿರಲಯ್ಯಾ,
ಕುವಿಚಾರಗಳ ಕಲಗಚ್ಚು ಆಗದಿರಲಯ್ಯಾ ;
ಸದ್ವೃತ್ತಿಗಳ ತಲಕಾವೇರಿ ಆಗಿರಲಯ್ಯಾ,
ದುರ್ವೃತ್ತಿಗಳ ಹೊಲೆಗೇರಿಯಾಗದಿರಲಯ್ಯಾ ;
ಪವಿತ್ರ ಪ್ರೇರಣೆಗಳ ಮಡಿವಳಗುಂಡವಾಗಿರಲಯ್ಯಾ ;
ಪಾಪಮಯ ಪಿಪಾಸೆಗಳ ಪಾಪಿಕೊಂಡ ಆಗದಿರಲಯ್ಯಾ ;
ಬುದ್ಧಿಮೂಲ ಶ್ರದ್ಧೆಯ ದಿವ್ಯ ವಸನವಾಗಿರಲಯ್ಯಾ,
ಹಸಿಬಿಸಿ ನಂಬಿಕೆಗಳ ಮಸಿಯರಿವೆಯಾಗದಿರಲಯ್ಯಾ ;
ವಿವೇಕ ವೈಚಾರಿಕತೆಗಳ ವಾಲೀಭಾಂಡಾರವಾಗಿರಲಯ್ಯಾ,
ಪತಿತ ಪ್ರಜ್ಞೆಯ ಪ್ಯಾಂಡೋರಳ ಪೆಟ್ಟಿಗೆಯಾಗದಿರಲಯ್ಯಾ !

೨೮೨

ಮನದ ಮಗುವನ್ನು ಮಲಗಿಸಲು
ನಿನ್ನ ನಾಮದ ತೊಟ್ಟಿಲವ ನೀಡಯ್ಯಾ ;
ಮನದ ಮಗುವಿಗೆ ನಿದ್ದೆ ಬರಿಸಲು
ನಿನ್ನ ಕಥೆಯ ಜೋಗುಳವ ಕಲಿಸಯ್ಯಾ ;
ಮನದ ಮಗುವಿನ ಹಸಿವೆ ಹಿಂಗಿಸಲು
ನಿನ್ನ ದಯೆಯ ಹಾಲನ್ನು ದಯಪಾಲಿಸಯ್ಯಾ ;
ಮನದ ಮಗುವಿನ ಕಾಯಿಲೆ ಕಳೆಯಲು
ನಿನ್ನ ಪ್ರಸಾದದ ಮದ್ದ ಕರುಣಿಸಯ್ಯಾ ;
ಸ್ವತಂತ್ರಧೀರ ಸಿದ್ಧೇಶ್ವರಾ,
ನನ್ನ ಮನದ ಮಗು
ನಿನ್ನ ಮನೆಯ ಮಗನಾಗಿ ಬೆಳೆಯಲಯ್ಯಾ !

೨೮೩

ಹೊಸ ಮಾವಿನ ಹೂವಿನ ಗೊಂಚಲುಗಳಲ್ಲಿ
ಈಗಲೀಗ ಮಿಡಿಗಾಯಿ ಮೂಡುತ್ತಲಿವೆ !
ಹಸಿರಿನಿಂದೊಗೆದ ನಸುಬಿಳಿಯ ಹೂವುಗಳಲ್ಲಿ
ಮತ್ತೆ ಹಸಿರಾಗಿ ಮೂಡಿರುವ ಮಿಡಿಗಾಯಗಳಿವು
ಮಾಗಿ ಹಣ್ಣಾದಾಗ ಬಂಗಾರದ ಬಣ್ಣ ರಸಕ್ಕೆ ಸಿಪ್ಪೆಗೆ;
ರಸ ಸೀಪಿದ ಮೇಲೆ ಸಿಪ್ಪೆ ಗೊರಟೆಗಳು ತಿಪ್ಪೆಗೆ !
ರಸವನ್ನುಳಿಸಿಕೊಂಡು
ಎಸೆಯುವುದು ಉಳಿದುದನತ್ತ ಬಾಳು !
ರಸವಂತಿಕೆಯೇ ಬಾಳು ;
ನೀರಸತೆಯೇ ಹಾಳು ;
ಶುಷ್ಕತೆ ರುಕ್ಷತೆಗಳೇ ಬೀಳು !
ನನ್ನ ಮನದ ಮಾಮರದ ಮಿಡಿಗಾಯಿಗಳು
ಮಾಗಿ, ಹಣ್ಣಾಗಿ, ಬಂಗಾರದ ಬಣ್ಣವಾಗಿ,
ಬಾಗಿ, ನಿನ್ನವರ ರಸನೆಗೆ ಸವಿರಸವಾಗುವಂತೆ
ಎಸಗಯ್ಯ, ಸ್ವತಂತ್ರಧೀರ ಸಿದ್ಧೇಶ್ವರಾ !

೨೮೪

ಬೆಟ್ಟಕ್ಕೆ ಬೇಗೆ ಹತ್ತಿದರೇನು
ಭಸ್ಮವಾಗುವುದು ಕಾಡು ಮಾತ್ರ ;
ಬೆಟ್ಟದ ಮೇಲೆ ಬಿರುಗಾಳಿ ಬೀಸಿದರೇನು
ಹಾರಿ ಹೋಗುವುದು ಹುಡಿ ಮಾತ್ರ ;
ಬೆಟ್ಟದ ಮೇಲೆ ಮರ ಮಳೆ ಹೊಯ್ದರೇನು
ಹರಿದು ಹೋಗುವುದು ಮಣ್ಣು ಮಾತ್ರ ;
ಬೆಟ್ಟದ ಮೇಲೆ ಹಿಮ ಬಿದ್ದೊಡೇನು
ಮಂಜುಗಟ್ಟುವುದು ಮರಳು ಮಾತ್ರ ;
ಸ್ವತಂತ್ರಧೀರ ಸಿದ್ಧೇಶ್ವರಾ,
ಬೆಟ್ಟದಷ್ಟು ಕಷ್ಟಗಳು ಮೇಲ್ವಾಯ್ದರೂ
ಬೆಟ್ಟದಂತೆ ಅಚಲವಾಗಿರುವ ಗಟ್ಟಿತನವ,
ಬೆಟ್ಟದ ಮುಡಿಯ ನಿರ್ಮಲತನವ,
ಅಲ್ಲಿಂದ ಕಾಣುವ ಹರಹಿನ ನೋಟವ



ಕರುಣಿಸಯ್ಯಾ !

೨೮೫

ಅಲ್ಲಿ ಬರ, ಇಲ್ಲಿ ಬರ, ಎಲ್ಲಿಲ್ಲ ಬರ ?
ಕೆಲಸದ ಬರ, ಕಾಳಿನ ಬರ, ಕಣಿಕೆಯ ಬರ, ಕುಡಿವ ನೀರಿಗೂ ಬರ !
ಹೊರಗೆ ಅನಾವೃಷ್ಟಿ, ಅತಿವೃಷ್ಟಿ ತಂದಿರುವ ಭೌತಿಕ ಬರ,
ಒಳಗೆ ಅಸಂಯಮ, ಅಸಹನೆ, ಅತಿರೇಕಗಳು ತಂದ ಆತ್ಮಿಕ ಬರ !
ಪ್ರೀತಿಯ ಬರ, ನೀತಿಯ ಬರ, ರೀತಿಯ ಬರ,
ಆತ್ಮೌಪಮ್ಯದ ಬರ, ಸಾತ್ವಿಕತೆಯ ಬರ, ಸಹಾನುಭೂತಿಯ ಬರ !
ಒಂದು ಬರವಿಲ್ಲದಲ್ಲಿ ಇನ್ನೊಂದು ಬರದ ಅಧಿಕಾರ,
ಒಮ್ಮೊಮ್ಮೆ ಎರಡೂ ಬರಗಳ ಸಮ್ಮಿಶ್ರ ಸರಕಾರ !
ಒಳಹೊರಗಿನ ಬರಗಳನೊಮ್ಮೆಗೇ
ಭಂಗಿಸುವ, ಹಿಂಗಿಸುವ ಪಾಂಗು ತಿಳಿಸಯ್ಯಾ,
ಗುಂಗು ಹಿಡಿಸಯ್ಯ, ಚೇಗು ಬರಿಸಯ್ಯಾ
ಸ್ವತಂತ್ರಧೀರ ಸಿದ್ಧೇಶ್ವರಾ !

೨೮೬

ಎದೆಯ ಹಿಗ್ಗು ಹಾಡಹಚ್ಚಲು ಹಾಡುತ್ತದೆ ಹಕ್ಕಿ ;
ನನಗೆ ಹಿಗ್ಗು ಹೆಚ್ಚಲೆಂದು ಹಾಡುವೆನು ನಾನು !
ಎದೆಯ ಹಿಗ್ಗು ಕುಣಿಯ ಹಚ್ಚಲು ಕುಣಿಯುತ್ತದೆ ನವಿಲು ;
ನನಗೆ ಹಿಗ್ಗು ಹೆಚ್ಚಲೆಂದು ಕುಣಿಯುವೆನು ನಾನು !
ಎದೆಯ ಹಿಗ್ಗು ಎಸಳ ಬಿಚ್ಚಲು ಅರಳುತ್ತದೆ ಹೂವು ;
ನನಗೆ ಹಿಗ್ಗು ಹೆಚ್ಚಲೆಂದು ಬಾಯ್ದೆರೆವೆ ನಾನು !
ತಮ್ಮ ಹಿಗ್ಗನು ಹಂಚುವ ಅವೆಲ್ಲಿ,
ನನ್ನ ಹಿಗ್ಗಿಗೂ ವಂಚಿತನಾಗಿರುವ ನಾನೆಲ್ಲಿ ?
ಒಳಗೆ ಹಿಗ್ಗಿ ಹೊರಗೆ ಹಿಗ್ಗು ಹಂಚಲು,
ಒಳಗೆ ಅರಳಿ ಹೊರಗೆ ಪರಿಮಳ ಹರಿಸಲು,
ಒಳಗೆ ಮಾಗಿ ಹೊರಗೆ ಸವಿ ಸೂಸಲು
ಕಲಿಸಯ್ಯ, ಸ್ವತಂತ್ರಧೀರ ಸಿದ್ಧೇಶ್ವರಾ !

೨೮೭

ನನ್ನ ನುಡಿ ನನ್ನಿಗೆ ಮೀಸಲಾಗಲಿ,
ನನ್ನ ನಡೆ ಲೇಸಿಗೆ ಮೀಸಲಾಗಲಿ,
ನನ್ನ ನಿಷ್ಠೆ ಕರ್ತವ್ಯಕ್ಕೆ ಮೀಸಲಾಗಲಿ,
ನನ್ನ ನಲ್ಮೆ ಸಕಲ ಜೀವಿಗಳಿಗೆ ಮೀಸಲಾಗಲಿ,
ನನ್ನ ತನು ನಾಡು ನುಡಿಗಳ ಊಳಿಗಕ್ಕೆ ಮೀಸಲಾಗಲಿ,
ನನ್ನ ಧನ ನಿನ್ನವರ ದಾಸೋಹಕ್ಕೆ ಮೀಸಲಾಗಲಿ,
ನನ್ನ ಮನ ಜೀವನ ನಿನಗೆ ಮೀಸಲಾಗಲಯ್ಯಾ
ಸ್ವತಂತ್ರಧೀರ ಸಿದ್ಧೇಶ್ವರಾ !

೨೮೮

ಪಂಜದಲ್ಲಿದ್ದೇ ಹತ್ತೂ ನಿಟ್ಟಿಗೆ
ಹಾರಿಬರುವ ಹಕ್ಕಿಯೆ,
ನಿನ್ನನ್ನು ನಾನಾವ ಅಂಕೆಯಲ್ಲಿ ಇರಿಸಲಿ ?
ಉಸಿರಿನ ಅಂಕೆಯಲ್ಲಿ ಇರಿಸಲೆ ?
ನಿನಗಿಂತ ಚಪಲ, ಚಟಿಲ, ಚಂಚಲವದು !
ಧ್ಯಾನಧಾರಣಾದಿಗಳಲ್ಲಿರಿಸಲೆ ?
ನನಗೆ ನಿಲುಕದ ಸಾಧನಗಳವು !
ಸ್ವತಂತ್ರಧೀರ ಸಿದ್ಧೇಶ್ವರನಲ್ಲಿ ನೋಟಕೂಟವ ಗಳಿಸಿ,
ನಿನ್ನ ನಿಲಿಸುವೆ ನೋಡಾ
ಪಕ್ಕವಿಲ್ಲದ ಹಕ್ಕಿಯೆ !

೨೮೯

ಬಯಸುವುದು ಜೀವಗುಣ,
ಬಯಸದಿರುವುದು ದೇವಗುಣವೇನಯ್ಯಾ ?
ಬಯಸನೆ ದೇವ, ಉತ್ಪತ್ತಿ ಸ್ಥಿತಿ ಲಯಗಳನ್ನು ?
ಬಯಸನೆ ಲೋಕಕಲ್ಯಾಣವನ್ನು ?
ಬಯಸನೆ ಸದ್ಭಕ್ತಗಾನವನ್ನು ?
ತನಗಾಗಿ ಬಯಸಿದರೆ ಜೀವಗುಣ,



ಎಲ್ಲರಿಗಾಗಿ ಬಯಸಿದರೆ ದೇವಗುಣವೆಂಬೆನಯ್ಯಾ
ಸ್ವತಂತ್ರಧೀರ ಸಿದ್ಧೇಶ್ವರಾ !

೨೯೦

ನನಗಾಗಿ ಏನನೂ ಬಯಸಲಾರದೆಂಬ ಸಂಕಲ್ಪ, ಶಪಥ
ಸಡಲಿದುದು ಯಾವುದೋ ವಿಷಗಳಿಗೆಯಲ್ಲೊಮ್ಮೆ
ಒಂದೆ ನಿಮಿಷದಿ ಇಲ್ಲದಾಯ್ತು ವರುಷಗಳ ಹೆಮ್ಮೆ !
ಬಯಕೆಯ ಬೀಜವಿದ ಮೊಳೆಯಗೊಟ್ಟರೆ
ಬೆಳೆದು ಬೊಬ್ಬುಳಿ ಬನವಾದೀತೆಂದು
ಮೊಳೆವ ಮೊದಲೇ ಕೊಳೆಸಿಬಿಟ್ಟೆ
ಮಣ್ಣೊಡನೆ ಮಣ್ಣಾಗಲು ಕಳಿಸಿಬಿಟ್ಟೆ
ಕೈಮೀರುವ ಮೊದಲೇ ಎಚ್ಚರಿಕೆ ಕೊಟ್ಟೆ !
ಎಂಥ ಕರುಣಾಮಯನು ನೀನು !
ನಿಮಿಷಕ್ಕೆ ನೂರ್ಕೋಟಿ ಪ್ರಮಾದಗಳು
ಪೃಥ್ವಿಯಲ್ಲಿ ಘಟಿಸುತ್ತಿದ್ದರೂ
ಈ ಅನಾಮಿಕನ ಅಧಃಪತನಕ್ಕೆ ಅಡ್ಡಬರಲು
ಸಮಯ ಸಿಕ್ಕಿತು ನಿನಗೆ !
ಅದೂ ಅಪ್ರಾರ್ಥಿತವಾಗಿ !
ಉಸಿರಿಗೊಮ್ಮೆ ಶರಣೆಂಬೆ ನಿನಗೆ ಇದಕಾಗಿ !
ಇನ್ನು ಸಿಲುಕೆನಯ್ಯಾ ಬಯಕೆಯ ಬಲೆಯಲ್ಲಿ ;
ಇನ್ನು ಮರೆಯೆನಯ್ಯಾ "ಬಯಸಿ ಬಂದುದು
ಅಂಗಭೋಗ, ಬಯಸದೆ ಬಂದುದು ಲಿಂಗಭೋಗ"
ಎಂಬ ಮಹಾ ವಾಕ್ಯವನು !
ಮತ್ತೆ ತಪ್ಪಿದೆನಾದೊಡೆ ತಲೆದಂಡ
ಸ್ವತಂತ್ರಧೀರ ಸಿದ್ಧೇಶ್ವರಾ !
೨೯೧

ಬಿಡಿಯು ಇಡಿಯ ಅಡಿಯಲ್ಲಿ ದುಡಿದರೆ ಮಾತ್ರ
ಬಿಡಿಗೂ ಹಿತ, ಇಡಿಗೂ ಹಿತ ;
ಇಲ್ಲದಿದ್ದರೆ ಅನಾಹುತವಯ್ಯಾ !
ಸಮಗ್ರ ಶರೀರಕ್ಕಾಗಿ ಸತ್ತು ಬದುಕದ ಜೀವಕಣಗಳು
ಏಡಿ ಹುಣ್ಣಾಗಿ ಬೆಳೆದು
ತಮ್ಮನ್ನೂ, ಇಡಿಯ ದೇಹವನ್ನೂ
ಕೇಡಿಗೆ ಈಡುಮಾಡುವಂತೆ,
ಸಮಾಜದಿಂದ ಸಿಡಿದು ನಿಂತು
ಸಮಾಜಕ್ಕೆ ಕೆಡುಕು ತರುವ
ಕಾಳಮತಿಯಿಂದೆನ್ನ ದೂರವಿರಿಸಯ್ಯ
ಸ್ವತಂತ್ರಧೀರ ಸಿದ್ಧೇಶ್ವರಾ !

೨೯೨

ಇನ್ನೊಬ್ಬರ ಕೈಯ ತುತ್ತ ಕಸಿದು ತಿನ್ನುವುದಕ್ಕಿಂತ
ಹಸಿದಿರುವುದೇ ಅಸನವಯ್ಯಾ ;
ಇನ್ನೊಬ್ಬರ ಹೆಸರ ಕೆಡಿಸಿ ಹೆಸರಾಗುವುದಕ್ಕಿಂತ
ಹೆಸರಿಲ್ಲದಿರುವುದೇ ಸಸಿನವಯ್ಯಾ ;
ಇನ್ನೊಬ್ಬರ ತುಳಿದು ಮುಂದೆ ಹೋಗುವುದಕ್ಕಿಂತ
ಹಿಂದೆ ಉಳಿದಿರುವುದೇ ಹಸನವಯ್ಯಾ !
ಅನ್ಯರ ಹಿತದಲ್ಲಿ ಅವಿತ
ತನ್ನ ಹಿತವನ್ನು ಅರಿಯದವ
ತನ್ನ ಹಿತವಾವುದೆಂಬುದನ್ನೇ ತಿಳಿಯದ
ತಿಳಿವಿನ ಹಗೆಯಯ್ಯಾ – ಸ್ವತಂತ್ರಧೀರ ಸಿದ್ಧೇಶ್ವರಾ !

೨೯೩

ಈ ವಿಶಾಲ ವಿಶ್ವದಲ್ಲಿ ನಾನೊಬ್ಬನೇ ಬದುಕಿಲ್ಲ
ನನ್ನೊಬ್ಬನಿಗಾಗಿಯೇ ಈ ಲೋಕವಿಲ್ಲ !
ನಾನು ಒಂಟಿಯಾಗಿ ಬದುಕುವಂತಿಲ್ಲ,
ನಾಲ್ವರಿಗಂಟಿಕೊಳ್ಳದೆ ಜೀವಿಸುವಂತಿಲ್ಲ,



ಲಕ್ಷಜನ ಅಪ್ರತ್ಯಕ್ಷವಾಗಿ ದುಡಿಯದೆ
ನನಗೆ ಬೇಕಾದುದೆಲ್ಲವ ಪಡೆಯುವಂತಿಲ್ಲ !
'ಜಗತ್ತಿರುವುದು ನನಗಾಗಿ', ಎಂದು ಎನ್ನುವವರೆನ್ನಲಿ
'ನಾನು ಜಗತ್ತಿಗಾಗಿ', ಎಂದೆನಿಸಯ್ಯ ಎನ್ನಿಂದ ;
'ದೇಶವಿರುವುದು ನನಗಾಗಿ', ಎಂದು ಎನ್ನುವವರೆನ್ನಲಿ
'ನಾನು ದೇಶಕ್ಕಾಗಿ,' ಎಂದೆನ್ನಿಸಯ್ಯ ನನ್ನಿಂದ ;
'ಎಲ್ಲರೂ ನನಗಾಗಿ,' ಎಂದು ಉಬ್ಬಿ ಕೊಬ್ಬದೆ,
'ನಾನೆಲ್ಲರಿಗಾಗಿ,' ಎಂದು ಆನಂದಿಸುವಂತೆ ಮಾಡಯ್ಯಾ,
ಸ್ವತಂತ್ರಧೀರ ಸಿದ್ಧೇಶ್ವರಾ !

೨೯೪

ಹೂ ಹೆತ್ತ ಬಳ್ಳಿಯ
ಬಾಣಂತಿತನ ಮಾಡುವವರಾರಯ್ಯ ?
ಫಲ ತೆತ್ತ ಮರದ
ಆಭಾರ ಮನ್ನಿಸುವವರಾರಯ್ಯ ?
ಬೆಳಕಿತ್ತ ದೀಪಕ್ಕೆ
ಮಾನಪತ್ರ ಕೊಡುವರಾರಯ್ಯ ?
ತೆನೆ ಹೊತ್ತ ದಂಟಿಗೆ
ಬಿರುದು ಬಾವಲಿ ಕೊಡುವರಾರಯ್ಯ ?
ಸ್ವತಂತ್ರಧೀರ ಸಿದ್ಧೇಶ್ವರಾ,
ಇಂದಿನ ನಮ್ಮ ನೆಮ್ಮದಿಗೆ ಕಾರಣರಾದ
ಲಕ್ಷಲಕ್ಷ ಅಜ್ಞಾತ ಉಪಕಾರಿಗಳ
ಉಪಕಾರ ಸ್ಮರಿಸುವರಾರಯ್ಯಾ ?

೨೯೫

ಅರಬ್ಬೀ ಸಮುದ್ರದಿಂದ ಅಟ್ಲಾಂಟಿಕ್ ಸಾಗರದತ್ತತ್ತ ಜಲ ಒಂದೇ
ಸಾಗರ, ಉಪಸಾಗರ, ಆಖಾತಾದಿ ಅನೇಕ ನಾಮಗಳು

ವ್ಯವಹಾರ ಸೌಕರ್ಯಕ್ಕಾಗಿ ಮಾತ್ರ ;
ಖಂಡ ಖಂಡಗಳಲ್ಲಿರುವ ದೇಶ ಪ್ರದೇಶಗಳಲ್ಲಿ ನೆಲ ಒಂದೇ
ಸಾಮ್ರಾಜ್ಯ, ರಾಜ್ಯ, ಪ್ರಾಂತ ಮುಂತಾದ ಹೆಸರುಗಳು
ಆಳುವವರ, ಆಡಳಿತದ ಸೌಲಭ್ಯಕ್ಕಾಗಿ ಮಾತ್ರ ;
ಉತ್ತರ ಧ್ರುವದಿಂದ ದಕ್ಷಿಣ ಧ್ರುವದವರೆಗೆ
ಮಾನವನ ಆಶೋತ್ತರಗಳು ಒಂದೇ
ಬೇರೆ ಬೇರೆ ಭಾಷೆ ಉಪ ಭಾಷೆಗಳು
ಅಭಿವ್ಯಕ್ತಿಯ ಅನುಕೂಲಕ್ಕಾಗಿ ಮಾತ್ರ ;
ಇದು ಕಾರಣ, ಸ್ವತಂತ್ರಧೀರ ಸಿದ್ಧೇಶ್ವರಾ,
ಎಲ್ಲ ದೇಶಗಳ, ಎಲ್ಲ ಭಾಷೆಗಳ,
ಎಲ್ಲ ವರ್ಗಗಳ, ಎಲ್ಲ ವರ್ಣಗಳ,
ಎಲ್ಲ ಮತಗಳ, ಎಲ್ಲ ಪಂಥ ಪಥಗಳ
ಎಲ್ಲ ಜನರನ್ನು ನನ್ನವರೆನ್ನುವ,
ನನ್ನವರಂತೆಯೇ ಪ್ರೀತಿಸುವ ಹೃದಯವನ್ನು ನೀಡಾ !

೨೯೬

ಹೃದಯರಸ ಬತ್ತಿದರೆ ಬಾಡುವುದಯ್ಯಾ ಮಾನವತೆಯ ಲತೆ ;
ಹೃದಯರಸ ಇಂಗಿದರೆ ಹಿಂಗುವುವಯ್ಯಾ ಮಾನವ ಸಂಬಂಧಗಳು ;
ಹೃದಯರಸ ಹೊಂದದಿರೆ ಕಂದಿ ಕುಂದುವುವಯ್ಯಾ ಕಲೆ, ಶಾಸ್ತ್ರ,
ವಿಜ್ಞಾನ, ವ್ಯವಹಾರಗಳು ;
"ಹೃದಿ ಅಯಂ, ಹೃದಿ ಅಯಂ,' ಎಂದು
ನೀನೇನೋ ನಿನದಿಸುತ್ತಲೇ ಇರುವಿ
ಹೃದಯ ದೇಗುಲವೇ ಹಾಳು ಬಿದ್ದಿರುವಾಗ
'ಅಯಂ, ವಯಂ, ಯೂಯಂ' ಎಲ್ಲ ಶೂನ್ಯವಲ್ಲವೇನಯ್ಯಾ
ಸ್ವತಂತ್ರಧೀರ ಸಿದ್ಧೇಶ್ವರಾ ?

೨೯೭

ಪ್ರೀತಿಸುವ ಹೃದಯವೊಂದಿದ್ದರೆ ಎಲ್ಲ ಇದ್ದ ಹಾಗೆ



ಅದಿಲ್ಲದಿರೆ ಎಲ್ಲ ಇದ್ದೂ ಇಲ್ಲದಂತಯ್ಯಾ !
ಸತ್ಯದರ್ಶನ ಸ್ನಿಗ್ಧ ಹೃದಯದ ಮೂಲಕ,
ಶಿವದ ಸಂಪಾದನೆ ಶುದ್ಧ ಹೃದಯದ ಮೂಲಕ,
ಸುಂದರದ ಸಾಧನೆ ಸಮೃದ್ಧ ಹೃದಯದ ಮೂಲಕ,
ಧರ್ಮ ಪರಿಪಾಲನೆ ಪ್ರಬುದ್ಧ ಹೃದಯದ ಮೂಲಕ,
ಶಾಸನ ಸರಕಾರಗಳ ಸಫಲತೆ ಸನ್ನದ್ಧ ಹೃದಯಗಳ ಮೂಲಕ,
ಜೀವನದ ಸಾರ್ಥಕತೆಯೇ ಸದುಹೃದಯದಿಂದಯ್ಯಾ !
ಗುರಿಗಳಲ್ಲಿ ಗುರಿ ಸಹೃದಯರ ಸೃಷ್ಟಿ ;
ಸಾಧನಗಳಲ್ಲಿ ಸಾಧನ ಹೃದಯದ ದೃಷ್ಟಿ !
ಸಿರಿವಂತಿಕೆಯನ್ನು ನೀಡು, ಬಿಡು
ಹೃದಯವಂತಿಕೆಯನ್ನು ಬಿಡದೆ ಕೊಡು,
ಸ್ವತಂತ್ರಧೀರ ಸಿದ್ಧೇಶ್ವರಾ !

೨೯೮

ತೆಂಗಿನ ಜುಬ್ಬರದಂಥ ಕೂದಲುಗಳನ್ನು
ಹಸ್ತಿದಂತದ ಹಣಿಗೆಯಿಂದ ಹಿಕ್ಕಿ ಫಲವೇನಯ್ಯಾ ?
ಇಲ್ಲಣದಂತಹ ಮುಖಕ್ಕೆ
ಶ್ರೀಗಂಧದ ಹುಡಿ ಹೂಸಿ ಪ್ರಯೋಜನವೇನಯ್ಯಾ ?
ಒಂಟೆಯ ಅಂಕ ಡೊಂಕ ಡುಬ್ಬಕ್ಕೆ
ಜರದ ಜೂಲು ಹೊದಿಸಿ ಸಾರ್ಥಕತೆ ಯಾವುದಯ್ಯಾ ?
ಸ್ವತಂತ್ರಧೀರ ಸಿದ್ಧೇಶ್ವರಾ,
ಹೃದಯಹೀನತೆಗೆ
ಧರ್ಮದ ಲಾಂಛನ ಹೊದಿಸೆ ಹದುಳವಾವುದಯ್ಯಾ ?

೨೯೯

ಊರ ಮುಂದೆ ಹೊಳೆ ಹರಿದಾಕ್ಷಣ
ಊರವರೆಲ್ಲ ನಿತ್ಯಸ್ನಾನಿಗಳು,
ಈಸಬಲ್ಲವರೇನಯ್ಯಾ ?
ಊರಲ್ಲಿ ನೂರು ದೇವಾಲಯಗಳಿವೆಯೆಂದು

ಊರವರೆಲ್ಲ ದೈವಭಕ್ತರು,
ಧರ್ಮಾತ್ಮರೇನಯ್ಯಾ ?
ಊರಲ್ಲಿ ಓಣಿ ಓಣಿಗೆ ಶಾಲೆಯಿದೆಯೆಂದು
ಊರವರೆಲ್ಲ ನೈಜ ವಿದ್ಯಾವಂತರಿರುವರೇನಯ್ಯಾ ?
ಊರಲ್ಲಿ ಎಲ್ಲ ತರದ ಆಸ್ಪತ್ರೆಗಳಿದ್ದಾಕ್ಷಣ
ಊರವರೆಲ್ಲ, ಆರೋಗ್ಯವಂತರು,
ನಿರೋಗಿಗಳೇನಯ್ಯಾ ?
ಸ್ವತಂತ್ರಧೀರ ಸಿದ್ಧೇಶ್ವರಾ,
ಶರೀರ ಸಜೀವವಿದ್ದಾಕ್ಷಣ
ಅಲ್ಲಿ ಮಾನವತೆಯೂ ಜೀವಂತವಿದೆಯೆನ್ನಬಹುದೇನಯ್ಯಾ ?
ದೇಹ ಜೀವಂತವಿದ್ದೂ
ದಯೆ ಸತ್ತಿರಬಹುದಯ್ಯಾ,
ಹೃದಯ ಬತ್ತಿರಬಹುದಯ್ಯಾ,
ಮಾನವತೆ ಮೃತವಾಗಿರಬಹುದಯ್ಯಾ !

೩೦೦

ನಗೆಯ ಉಗಮದ ಮೇಲೆ ಮಹಾ ಪ್ರಬಂಧವೊಂದನ್ನು
ಬರೆಯುತ್ತ ಬರೆಯುತ್ತ ನಗುವುದನ್ನೇ ಕಳೆದುಕೊಂಡನಯ್ಯಾ;
ಪ್ರೀತಿಯ ಮೂಲದ ಬಗ್ಗೆ ಶೋಧಿಸುತ್ತ, ಶೋಧಿಸುತ್ತ
ಪ್ರೀತಿಸುವುದನ್ನೇ ಕಳೆದುಕೊಂಡೆನಯ್ಯಾ ;
ಸುಖದ ಸೆಲೆಗಳನ್ನು ಅಗಿದಗಿದು ನೋಡುತ್ತ ನೋಡುತ್ತ,
ಸುಖದ ಹುಟ್ಟುದಾಣವನ್ನೇ ಕಳೆದುಕೊಂಡೆನಯ್ಯಾ ;
ಸ್ವತಂತ್ರಧೀರ ಸಿದ್ಧೇಶ್ವರಾ,
ಮಾನವತೆಯ ಬಗ್ಗೆ ಮಾತಾಡಿ ಮಾತಾಡಿ
ಮಾನವತೆಯನ್ನೇ ಕಳೆದುಕೊಂಡೆನಯ್ಯಾ !

೩೦೧

ಬೇರುಳಿಸಿ ಕಡಿದ ಗಿಡ ಚಿಗಿಯಬಹುದು ಮತ್ತೆ,



ಬೇರ್ವೆರೆಸಿ ಕಿತ್ತ ಗಿಡ ಚಿಗಿಯಬಹುದೇನಯ್ಯಾ ?
ಸಂರಕ್ಷಿತ ಬೀಜ ಮೊಳೆಯಬಹುದಾಗಲಿ
ಹುಳು ತಿಂದ ಬೀಜ ಮೊಳೆಯಬಹುದೇನಯ್ಯಾ ?
ಸೆಲೆಯಿದ್ದ ಭಾವಿ ತುಂಬಬಹುದು ಮತ್ತೆ,
ಹಾಳು ಬಿದ್ದ ಬಾವಿ ತುಂಬಬಹುದೇನಯ್ಯಾ ?
ಉಸಿರಿದ್ದ ರೋಗಿ ಗುಣವಾಗಬಹುದಾಗಲಿ
ಉಸಿರಳಿದ ರೋಗಿ ವಾಸಿಯಾಗಬಲ್ಲನೇನಯ್ಯಾ ?
ಸ್ವತಂತ್ರಧೀರ ಸಿದ್ಧೇಶ್ವರಾ,
ಮಾನವತ್ವ ಉಳಿದ ನರ ನರೋತ್ತಮನಾಗಬಹುದಾಗಲಿ
ಅಮಾನುಷನು ಅತಿ ಮಾನವನಾಗಬಲ್ಲನೇನಯ್ಯ
ನಿನ್ನ ಕೃಪೆಯಿಲ್ಲದೆ ?

೩೦೨

ಸಿರಿಯ ಸರಿ ಹಸುಗೆ, ಹೃದಯ ಹೃದಯಗಳ ಬೆಸುಗೆ,
ಬರಲಯ್ಯಾ ಭುವನಕ್ಕೆ ಒಲವಿನೊಸಗೆ !
ಕಳೆದು ಹೋದ ವಿಶ್ವಾಸ, ನೈಜ ಮನುಜತೆಯ ನಿಶ್ವಾಸ,
ಮರಳಲಯ್ಯಾ ಮನುಕುಲಕ್ಕೆ ನಂಬಿಕೆಯ ಉಲ್ಲಾಸ !
ಬಳಸಿಯೂ ಕರಗದ ಗಂಟು ನರರ ನರರ ನಂಟು,
ತಿರುಗಲಯ್ಯಾ ತಿರೆಗೆ ಕರುಳು ಕರುಳಿನ ಅಂಟು !
ಅವಿಶ್ವಾಸದ ಅಮಾವಾಸ್ಯೆಯಲ್ಲಿಯೇ
ವಿಶ್ವಾಸದ ಚಂದ್ರ ಮೂಡಲಿ ;
ಮನುಜನೆದೆಯ ಮಾಗಿಯಲ್ಲಿಯೇ
ಮಾನವ್ಯದ ಸುಗ್ಗಿ ಬರಲಿ !
ಸ್ವತಂತ್ರಧೀರ ಸಿದ್ಧೇಶ್ವರನ ಸೃಷ್ಟಿ
ಮಾನವತೆಯ ಮಂಗಳದ ರಂಗವಾಗಲಿ !

೩೦೩

ಆಗ,
'ಅಹಿಂಸಾ ಪರಮೋಧರ್ಮಃ,'
'ಸತ್ಯಾನ್ನಾಸ್ತಿ ಪರೋಧರ್ಮಃ,' ಇತ್ಯಾದಿ ;
ಈಗ,

‘ನ ಮಾನುಷಾತ್ ಪರೋಧರ್ಮಃ,’
ನಿಜ, ಮನುಷ್ಯರೇ ಇಲ್ಲವಾದರೆ
ಧರ್ಮ ಯಾರಿಗಾಗಿ ?
ಮನುಷ್ಯತ್ವವೇ ಧರ್ಮ,
ಮನುಷ್ಯರಿಗಾಗಿ ಧರ್ಮ !
ಮಾನವರಿಂದ, ಮಾನವರಿಗಾಗಿ,
ಮಾನವ ಧರ್ಮ ಮೂಡಿ
ಮೇಲೆತ್ತಲಯ್ಯಾ ಮಾನವರನ್ನು
ಸ್ವತಂತ್ರಧೀರ ಸಿದ್ಧೇಶ್ವರಾ !

೩೦೪

ವಿಜಯಗಳಲ್ಲಿ ವಿಜಯ ಮನೋವಿಜಯ,
ಪರಿವರ್ತನೆಗಳಲ್ಲಿ ಹಿರಿದು ಹೃದಯಪರಿವರ್ತನೆ,
ಕ್ರಾಂತಿಗಳಲ್ಲಿ ಹಿರಿದು ವಿಚಾರಕ್ರಾಂತಿ,
ಕಲೆಗಳಲ್ಲಿ ಹಿರಿದು ಜೀವನಕಲೆ,
ಭಾಷೆಗಳಲ್ಲಿ ಹಿರಿದು ಮಾತೃಭಾಷೆ,
ಭೂಮಿಗಳಲ್ಲಿ ಹಿರಿದು ಮಾತೃಭೂಮಿ,
ಹೃದಯಗಳಲ್ಲಿ ಹಿರಿದು ಮಾತೃಹೃದಯ,
ಶಕ್ತಿಗಳಲ್ಲಿ ಹಿರಿದು ಆತ್ಮಶಕ್ತಿ,
ಮುಕ್ತಿಗಳಲ್ಲಿ ಹಿರಿದು ಜೀವನ್ಮುಕ್ತಿ,
ಸ್ವತಂತ್ರಧೀರ ಸಿದ್ಧೇಶ್ವರಾ,
ಮತಗಳಲ್ಲಿ ಹಿರಿದು ಮನುಜಮತ !

೩೦೫

ಮೂಗು ಚುಚ್ಚಿಸಿಕೊಳ್ಳಲು ಮನಸ್ಸಿಲ್ಲದಿದ್ದರೆ
ಮೂಗುತಿಯ ಹಂಬಲವೇಕಯ್ಯ ?
ಉಳಿಯ ಮುಟ್ಟಲು ಮನಸ್ಸಿಲ್ಲದಿದ್ದರೆ
ಮೂರ್ತಿಯಾಗುವ ಹಂಬಲವೇತಕಯ್ಯ ?
ತೇಜಾಬಿನ ಗೋಜು ಬೇಡವೆಂದರೆ



ಅಪರಂಜಿಯಾಗುವ ಅಭೀಪ್ಸೆಯೇಕಯ್ಯ ?
ಸುತ್ತಿಗೆಯ ಪೆಟ್ಟುಗಳ ಸಹಿಸೆನೆಂದರೆ
ಅಲಗು ಆಗುವ ಅಭಿಲಾಷೆಯೇಕಯ್ಯ ?
ಸ್ವತಂತ್ರಧೀರ ಸಿದ್ಧೇಶ್ವರಾ,
ನಿನ್ನ ಮಕ್ಕಳಿಗೆ ಆಗಲು ಆಗದೆಂದರೆ
ನೀನಾಗುವ ಹಂಬಲವೇಕಯ್ಯ ?

೩೦೬

ಜಗತ್ತಿನಲ್ಲಿ ಜಾತಿಗಳು ಸಾವಿರ ಸಾವಿರ ಇವೆಯಂತೆ,
ನನ್ನ ದೇಶದಲ್ಲಿಯೇ ಸುಮಾರು ಮೂರು ಸಾವಿರ ಇವೆಯಂತೆ !
ಆರೈದು ನೋಡಿದರೆ ಎರಡೇ ಜಾತಿಗಳಯ್ಯಾ ಜಗದಲ್ಲಿ !
ಸ್ತ್ರೀ ಪುರುಷರೆಂಬ, ಕರಿಯ–ಬಿಳಿಯರೆಂಬ,
ಆಸ್ತಿಕ ನಾಸ್ತಿಕರೆಂಬ, ಪೌರ್ವಾತ್ಯ–ಪಾಶ್ಚಿಮಾತ್ಯರೆಂಬ,
ಸ್ಪೃಶ್ಯಾಸ್ಪೃಶ್ಯರೆಂಬ, ಕುಲಜ–ಕುಲಹೀನರೆಂಬ,
ಭವಿ ಭಕ್ತರೆಂಬ, ಮುಸ್ಲಿಂ–ಕಾಫರರೆಂಬ,
ಕ್ರಿಶ್ಚಿಯನ್ ಇನ್ಫಿಡೆಲರೆಂಬ ಎರಡು ಜಾತಿಗಳಲ್ಲ
ಒಳ್ಳೆಯವರು ಕೆಟ್ಟವರೆಂಬ
ಎರಡೇ ಜಾತಿ ನೋಡಾ,
ಸ್ವತಂತ್ರಧೀರ ಸಿದ್ಧೇಶ್ವರಾ !

೩೦೭

ನಿಜದ ಗುಡಿಯಲ್ಲಿ ಪೂಜೆ ಮಾಡುವವರು
ನಿನ್ನ ನೈಜ ಮಕ್ಕಳೆಂಬೆನಯ್ಯಾ ;
ಪ್ರೇಮದ ಇಗರ್ಜಿಯಲ್ಲಿ ಪ್ರಾರ್ಥನೆ ಮಾಡುವವರು
ನಿನ್ನ ಪ್ರೀತಿಯ ಮಕ್ಕಳೆಂಬೆನಯ್ಯಾ ;
ಮೈತ್ರಿಯ ಮಸೀದಿಯಲ್ಲಿ ನಮಾಜು ಮಾಡುವವರು
ನಿನ್ನ ಮಮತೆಯ ಮಕ್ಕಳೆಂಬೆನಯ್ಯ ;
ವಿವೇಕದ ವಿಹಾರದಲ್ಲಿ ಧ್ಯಾನ ಮಾಡುವವರು

ನಿನ್ನ ವಾತ್ಸಲ್ಯದ ಮಕ್ಕಳೆಂಬೆನಯ್ಯ ;
ಲೇಸಿನ ಬಸದಿಯಲ್ಲಿ ತಪವ ಗೈವವರು
ನಿನ್ನ ಮೀಸಲು ಮಕ್ಕಳೆಂಬೆನಯ್ಯಾ ;
ಗರಿಮೆಯ ಗುರುದ್ವಾರದಲ್ಲಿ ಗ್ರಂಥ ಪಠಿಸುವವರು
ನಿನ್ನ ಕರುಳಿನ ಮಕ್ಕಳೆಂಬೆನಯ್ಯಾ,
ಸ್ವತಂತ್ರಧೀರ ಸಿದ್ಧೇಶ್ವರಾ,
ನಿನ್ನ ಮಕ್ಕಳ ಹೃದಯದಲ್ಲಿ ನಿನ್ನ ಕಾಣುವವರ
ನೀನೇ ಎಂಬೆನಯ್ಯಾ !

೩೦೮

ಹೊಳೆಗಟ್ಟು ಮುಟ್ಟುವವರೆಗೆ ಹಲವು ಮುಖ ಹೊಲದ ನೀರಿಗೆ
ಹೊಳೆಗಟ್ಟ ಮುಟ್ಟಿದ ಮೇಲೆ ಏಕಮುಖವಯ್ಯಾ ;
ಹೆಳಲು ಮುಟ್ಟುವವರೆಗೆ ಹಲವೆಡೆಗಳ ಕೂದಲುಗಳು,
ಹೆಳಲು ಸೇರಿದ ಮೇಲೆ ಒಂದೆಡೆಯ ಕೂದಲುಗಳಯ್ಯ ;
ಹಣ್ಣಾಗುವವರೆಗೆ ಹಲವು ಪಕಳೆಗಳು ಹೂಗಳಿಗೆ
ಹಣ್ಣಾದ ಮೇಲೆ ಅನೇಕ ಏಕವಾಗುವುದಯ್ಯಾ ;
ಸ್ವತಂತ್ರಧೀರ ಸಿದ್ಧೇಶ್ವರಾ,
ನಿನ್ನನರಿಯುವ ಮೊದಲು ಹಲವು ಮತ, ಹಲವು ಪಥ ;
ನಿನ್ನನರಿದ ಮೇಲೆ ಒಂದೆ ಮತ, ಒಂದೆ ಪಥವಯ್ಯಾ ;

೩೦೯

ತಜ್ಞತೆಯು ಬೆಳೆಯುತ್ತಿರುವಂತೆಯೇ
ಕೃತಜ್ಞತೆಯು ಅಳಿಯುತ್ತಿದೆಯಯ್ಯಾ ;
ವ್ಯಕ್ತಿಗೌರವ ಹೆಚ್ಚುತ್ತಿರುವಂತೆಯೇ
ಪರಸ್ಪರ ಗೌರವ ಕ್ಷಯಿಸುತ್ತಿದೆಯಯ್ಯಾ ;
ಸಿರಿಸಂಪದಗಳು ವರ್ಧಿಸುತ್ತಿರುವಂತೆಯೇ
ಶಾಂತಿ ಸಂತೃಪ್ತಿಗಳು ಲುಪ್ತವಾಗುತ್ತಲಿವೆಯಯ್ಯಾ ;



ಮಾಹಿತಿಯು ಸಮೃದ್ಧವಾಗುತ್ತಿರುವಂತೆಯೇ
ಸನ್ಮತಿಯು ಬಡವಾಗುತ್ತಿದೆಯಯ್ಯಾ !
ಗಾತ್ರಕ್ಕೆ ಪಾತ್ರತೆಯ ಬಲಿ,
ಅಗಲಕ್ಕೆ ಆಳದ ಬಲಿ,
ಆಳಕ್ಕೆ ಎತ್ತರದ ಬಲಿ,
ಎತ್ತರಕ್ಕೆ ಬಿತ್ತರದ ಬಲಿ,
ನಿರ್ಜೀವಕ್ಕೆ ಜೀವದ ಬಲಿ,
ಬಾಳದುದಕ್ಕೆ ಬಾಳಿನ ಬಲಿ !
ಮಾನವ ಮಾಡುತ್ತಿರುವುದು ಮಾನವನಿಗೇ ತಿರುಗುಪ್ಪು,
ಮಾನವ ಬೇಡುತ್ತಿರುವುದು ಒಪ್ಪು,
ಪಡೆಯುತ್ತಿರುವುದು ತಪ್ಪು !
ಹೌಹಾರಿದ್ದಾನೆ ಮಾನವ
ದುರುಪಯೋಗಿಸಿ ನಿನ್ನ ದಾನವ !
ತನಗೆ ತಾನೇ ಅಲರ್ಜಿಯಾಗಿದ್ದಾನೆ !
ತನಗೆ ತಾನೇ ಮೂಕ ಅರ್ಜಿಯಾಗಿದ್ದಾನೆ !
ಸ್ವತಂತ್ರಧೀರ ಸಿದ್ಧೇಶ್ವರಾ,
ಇದುವರೆಗೆ ಏನೇನೋ ದಾನಗಳನ್ನಿತ್ತಿರುವೆ,
ಇಂದು ನೀಡು ನಮಗೆ    ನರರಿಗೆ
ಮಾನವರಾಗುವ ಮಹಾದಾನವನ್ನು !

೩೧೦

ಮನುಜನ ಕಣ್ಣಿಗೆ ಮನುಜ
ಮನುಜನಾಗಿಯೇ ಕಾಣಿಸುವುದು
ಅದೆಷ್ಟು ಕಠಿಕಷ್ಟವಯ್ಯಾ !
ಎಲ್ಲರೂ ಅವನನ್ನು ನೋಡುವುದು
ತಮ್ಮ ವಿಶಿಷ್ಟ ದೃಷ್ಟಿಯಿಂದಲೇ !
ವೈದ್ಯನ ದೃಷ್ಟಿಯಲ್ಲಿ ಅವನು ರೋಗಿ ಮಾತ್ರ,
ವಕೀಲನ ದೃಷ್ಟಿಯಲ್ಲಿ ಕಕ್ಷಿಗಾರ ಮಾತ್ರ,
ಜೇಲರನ ದೃಷ್ಟಿಯಲ್ಲಿ ಕೈದಿ ಮಾತ್ರ,
ವ್ಯಾಪಾರಿಯ ದೃಷ್ಟಿಯಲ್ಲಿ ಗಿರಾಕಿ ಮಾತ್ರ,
ಬಾಬಾಗಳ ದೃಷ್ಟಿಯಲ್ಲಿ ಪರಾಕಿ ಮಾತ್ರ,

ರಾಜಕಾರಣಿಯ ದೃಷ್ಟಿಯಲ್ಲಿ ಓಟು ಮಾತ್ರ,
ಬೆಲೆವೆಣ್ಣಿನ ದೃಷ್ಟಿಯಲ್ಲಿ ನೋಟು ಮಾತ್ರ,
ಕಂಡಕ್ಟರನ ದೃಷ್ಟಿಯಲ್ಲಿ ಟಿಕೆಟ್ಟು ಮಾತ್ರ,
ಬ್ಯಾಂಕರನ ದೃಷ್ಟಿಯಲ್ಲಿ ಡಿಪಾಜಿಟ್ ಮಾತ್ರ,
ಶಿಕ್ಷಕನ ದೃಷ್ಟಿಯಲ್ಲಿ ಹಾಜರಿ ವಹಿಯ ಅಂಕಿ ಮಾತ್ರ,
ಅಂಚೆಯವನ ದೃಷ್ಟಿಯಲ್ಲಿ ಗೃಹಸಂಖ್ಯೆ ಮಾತ್ರ !
ನಿನ್ನ ದೃಷ್ಟಿಯಲ್ಲಾದರೂ ನಾವು
ಮನುಷ್ಯರಾಗಿ ಕಾಣುತ್ತಿಹೆವೇನಯ್ಯಾ
ಸ್ವತಂತ್ರಧೀರ ಸಿದ್ಧೇಶ್ವರಾ ?

೩೧೧

ಬಾನವರನ್ನಾಗಿ ಮಾಡಿ ಬಾನಿಗೇರಿಸದಿರು,
ದಾನವರನ್ನಾಗಿ ಮಾಡಿ ರಸಾತಳಕ್ಕೆ ಕಳಿಸದಿರು,
ಮಾನವರನ್ನಾಗಿ ಮಾಡಿ ಇದೇ ಸುಂದರ ಜಗತ್ತಿನಲ್ಲಿಯೇ
ಉಳಿಸಿ ಬೆಳೆಸಿ ಬೆಳಗಿಸಯ್ಯ
ಸ್ವತಂತ್ರಧೀರ ಸಿದ್ಧೇಶ್ವರಾ !

೩೧೨

ಪುಷ್ಪ ಸುಂದರವೋ, ಪರ್ಣ ಸುಂದರವಿಲ್ಲ ;
ಪರ್ಣ ಸುಂದರವೋ, ಪುಷ್ಪ ಸುಂದರವಿಲ್ಲ ;
ಪರ್ಣಪುಷ್ಪಗಳೆರಡೂ ಸುಂದರವಾಗಿರುವುದು ವಿರಳವಯ್ಯಾ !
ವದನ ಸುಂದರವೋ, ಗುಣ ಸುಂದರವಿಲ್ಲ ;
ಗುಣ ಸುಂದರವೋ, ವದನ ಸುಂದರವಿಲ್ಲ ;
ವದನ ಗುಣಗಳೆರಡೂ ಸುಂದರವಾಗಿರುವುದು ವಿರಳವಯ್ಯಾ !
ನುಡಿ ಸುಂದರವೋ, ನಡೆ ಸುಂದರವಿಲ್ಲ ;
ನಡೆ ಸುಂದರವೋ, ನುಡಿ ಸುಂದರವಿಲ್ಲ ;



ನಡೆ ನುಡಿಗಳೆರಡೂ ಸುಂದರವಾಗಿರುವುದು ವಿರಳವಯ್ಯಾ !
ಸ್ವತಂತ್ರಧೀರ ಸಿದ್ಧೇಶ್ವರಾ,
ನೀನು ಸತ್ಯ ಶಿವ ಸುಂದರನಿದ್ದೂ
ನಿನ್ನ ಮಕ್ಕಳಲ್ಲೇಕೆ ಇವು ವಿರಳವಯ್ಯಾ ?

೩೧೩

ಎಂಥ ಶ್ರೇಷ್ಠ ಬೀಜವಿದ್ದೊಡೇನು,
ಮಣ್ಣಿನಲ್ಲಿ ಬೆರೆತು ಬೆಳೆದಾಗ ಮಾತ್ರ ಬೆಲೆಯದಕ್ಕೆ ;
ಎಂಥ ಫಲವತ್ತಾದ ನೆಲವಿದ್ದೊಡೇನು,
ಬೀಜ ಬಿದ್ದು ಬೆಳೆದಾಗ ಮಾತ್ರ ಬೆಲೆಯದಕ್ಕೆ ;
ಎಂಥ ಉದಾತ್ತ ತತ್ತ್ವ ವಿದ್ದೊಡೇನು,
ವ್ಯಕ್ತಿಗಳ ಬದುಕಿನಲ್ಲಿ ಬೆರೆತಾಗ ಮಾತ್ರ ಬೆಲೆಯದಕ್ಕೆ ;
ತತ್ತ್ವಗಳ ಬರವಿಲ್ಲ ಇಲ್ಲಿ,
ತತ್ತ್ವಕ್ಕೆ ತೊತ್ತಾಗುವವರ ಬರವಿದೆ !
ತತ್ತ್ವ ತತ್ತ್ವ ಎನ್ನುತ್ತಲೇ
ತತ್ತ್ವ ಹತ್ಯೆಗೈವವರ ಕಂಡಾಗ
ನಿನಗೆ ಜಿಗುಪ್ಸೆಯೋ ಕನಿಕರವೋ
ಸ್ವತಂತ್ರಧೀರ ಸಿದ್ಧೇಶ್ವರಾ ?

೩೧೪

ಭೂಮಿ ಬೇಕಾದಷ್ಟು ಫಲವತ್ತಾಗಿದೆ,
ಮಳೆ ಸಾಕಷ್ಟಿಲ್ಲ ;
ಮಳೆ ಸಾಕುಸಾಕೆನ್ನುವಷ್ಟಿದೆ,
ಭೂಮಿ ಬೆಳೆವುದಿಲ್ಲ !
ಬುದ್ಧಿ ಬೇಕಾದಷ್ಟಿದೆ,
ಹೃದಯ ಸೊನ್ನೆ !
ಹೃದಯ ಶ್ರೀಮಂತವಾಗಿದೆ,
ಬುದ್ಧಿಗೆ ದಾರಿದ್ರ್ಯ !

ಮೈ ಗಟ್ಟಿಯಿರುವಲ್ಲಿ ಮನ ಟೊಳ್ಳು,
ಮನ ಗಟ್ಟಿಯಿರುವಲ್ಲಿ ಮೈ ಪೊಳ್ಳು !
ಒಲವು ಉಳ್ಳವರಲ್ಲಿ ಬಲವಿಲ್ಲ,
ಬಲವಿದ್ದವರಲ್ಲಿ ಒಲವಿಲ್ಲ,
ಸಿರಿಯಿರುವವರಿಗೆ ಗುರಿಯಿಲ್ಲ,
ಗುರಿಯುಳ್ಳವರಿಗೆ ಸಿರಿಯಿಲ್ಲ !
ಒಂದಿದ್ದರೊಂದಿಲ್ಲ,
ಹಲ್ಲಿದ್ದವನಿಗೆ ಕಡಲೆಯಿಲ್ಲ,
ಕಡಲೆಯಿದ್ದವನಿಗೆ ಹಲ್ಲಿಲ್ಲ !
ಏನೀದೀ ಇಜ್ಜೋಡು ?
ಏನು ಮನುಕುಲದ ಪಾಡು ?
ಯುಗಯುಗ ಕಳೆದರೂ
ಒಂದೇ ಹಾಡು !
ಆದರೂ ಹತಾಶವಾಗಿಲ್ಲ ಮನುಜಮತಿ,
ಅಲುಗಿಲ್ಲ ಅದರ ಧೃತಿ !
ಬಲ ಒಲವು, ಅಧಿಕಾರ ನ್ಯಾಯ, ಗುರಿ ಸಿರಿ,
ಶಿವಶಕ್ತಿಗಳ ಸಮ್ಮಿಳನಕ್ಕಾಗಿ
ಹೋರುತ್ತಲೇ ಇದೆ. ಈ ಹೋರಾಟದಲ್ಲಿಯೇ ಸುಧೆ,
ಸ್ವತಂತ್ರಧೀರ ಸಿದ್ಧೇಶ್ವರಾ !

೩೧೫

ಹೋಳಿಯ ಹಾಡುಗಳಲ್ಲಿ ಅವಾಚ್ಯ ಶಬ್ದಗಳಿದ್ದರೆ
ಆಕ್ಷೇಪಿಸುವವರಿಲ್ಲ
ಮಹಾಕಾವ್ಯದಲ್ಲಿ ಒಂದೇ ಒಂದು ಅನುಚಿತ ಪದವಿದ್ದರೂ
ಎತ್ತಿ ತೋರುವರಯ್ಯಾ !
ಕಳ್ಳನ ಕಳ್ಳತನವ, ಸುಳ್ಳನ ಸುಳ್ಳತನವ,
ಖುಲ್ಲನ ಖುಲ್ಲತನವ ಕಣ್ಣೆತ್ತಿ ನೋಡದವರೂ
ಒಳ್ಳಿದನ ಅಲ್ಪಪ್ರಮಾದ ಕಂಡರೂ
ಕಣ್ಣು ಕೆಂಪಗೆ ಮಾಡುವರಯ್ಯಾ !



ಅಧಃಪಾತವನ್ನು ಕಂಡು ಮರುಗದವರೂ
ಆದರ್ಶ ಪಾತವನ್ನು ಕಂಡು ಕೊರಗುವರಯ್ಯಾ !
ಆದರ್ಶ ಪಾತಕ್ಕಾಗಿ ಕೊರಗಿದರೆ ಸಾಲದು,
ಆದರ್ಶ ರಕ್ಷಣೆಗಾಗಿ ಹೋರಾಡುವವರ,
ಆದರ್ಶ ಸಾಧನೆಯಲ್ಲಿ ಸಂಕಷ್ಟಗಳನ್ನು ಸಹಿಸುವವರ,
ಸಂಕ್ಲೇಶಗಳಲ್ಲಿ ದಹಿಸಿಯೂ
ಆದರ್ಶದ ಪಕ್ಷ ವಹಿಸುವವರ
ಎಲ್ಲೆಲ್ಲೂ ಹುಟ್ಟಿಸಯ್ಯಾ
ಸ್ವತಂತ್ರಧೀರ ಸಿದ್ಧೇಶ್ವರಾ !

೩೧೬

ಹಿತ್ತಾಳೆ ಕಿಲುಬು ಬಿಡುವುದೆಂದು
ಚಿನ್ನವೂ ಕಿಲುಬು ಬಿಟ್ಟರೆ ಹೇಗಯ್ಯ ?
ಕಬ್ಬಿಣ ತುಕ್ಕು ಹಿಡಿಯುವುದೆಂದು
ವಜ್ರಕ್ಕೂ ತುಕ್ಕು ಹಿಡಿದರೆ ಹೇಗಯ್ಯ ?
ಬೇರೆ ಕಟ್ಟಿಗೆಗೆ ಗೊರಲೆ ಹತ್ತುವುದೆಂದು
ತೇಗಿಗೂ ಗೊರಲೆ ಹತ್ತಿದರೆ ಹೇಗಯ್ಯ ?
ಸ್ವತಂತ್ರಧೀರ ಸಿದ್ಧೇಶ್ವರಾ,
ದಡ್ಡರು ಅಡ್ಡಹಾದಿ ಹಿಡಿಯುವರೆಂದು
ದೊಡ್ಡವರೂ ಅಡ್ಡಹಾದಿ ಹಿಡಿದರೆ ಹೇಗಯ್ಯ ?

೩೧೭

ಕೆಲವರು ಸ್ವತಂತ್ರರಾಗಿರಲೆಂದು
ಬಹುಜನರು ಬಂಧನದಲ್ಲಿಯೇ ಬಳಲಬೇಕೇನಯ್ಯಾ ?
ಕೆಲವರು ಒಡೆಯರಾಗಿರಲೆಂದು
ಬಹುಜನರು ಬಡವರಾಗಿಯೇ ಅಳಲಬೇಕೇನಯ್ಯಾ ?
ಕೆಲವರು ಅರಿವಿನ ದೊರೆಗಳಾಗಿರಬೇಕೆಂದು
ಬಹುಜನರು ಮರಹಿನ ಕುರಿಗಳಾಗಿಯೇ ಉಳಿಯಬೇಕೇನ
ಯ್ಯಾ

ಕೆಲವರು ಶ್ರೇಷ್ಠರೆನಿಸಿ ಮೆರೆಯಲೆಂದು
ಬಹುಜನರು ಕನಿಷ್ಠರಾಗಿಯೇ ಕೊಳೆಯಬೇಕೇನಯ್ಯಾ ?
'ಬಹುಜನ ಹಿತಾಯ, ಬಹುಜನ ಸುಖಾಯ' ಎಂಬುದು
ಕನಸಿನ ಕಲ್ಪವೃಕ್ಷವಾಗಿಯೇ ಬೆಳೆಯಬೇಕೇನಯ್ಯಾ ?
ಹೇಳಯ್ಯ, ಹೇಳಯ್ಯ
ಎಂದು ನಿನ್ನ ಸೃಷ್ಟಿಯಲ್ಲಿ
ವಿಷಮತೆಯ ವಿಷದ ಬಳ್ಳಿ
ಅಳಿದು ಸಮತೆಯ ಅಮೃತದ ವಲ್ಲರಿ
ಬೆಳೆವುದು ಹೇಳಯ್ಯ-ಸ್ವತಂತ್ರಧೀರ ಸಿದ್ಧೇಶ್ವರಾ !

೩೧೮

ಉಂಡುದಕ್ಕಿಂತ ಉಳಿಸಿದ ಎಂಜಲು ಹೆಚ್ಚು
ಉಳ್ಳ ಕೆಲವರ ಬೆಳ್ಳಿ ತಟ್ಟೆಗಳಲ್ಲಿ ;
ಬಳಿದು ತಂದ ಎಂಜಲವೇ ಪರಮ ಪ್ರಸಾದ
ಅಸಂಖ್ಯ ಅಭಾಗಿಗಳ ಮಣ್ಣ ಮಿಟ್ಟೆಗಳಲ್ಲಿ !
ಏನ ಕೊಂಡರೆ ಹಸಿವೆಯಾದೀತೆಂಬ ಹಳವಂಡ ಕೆಲವರಿಗೆ,
'ಏನ ತಿನ್ನಲಿ ಹಸಿವೆ ಹಿಂಗಿಸಲು ?' ಎಂಬ ಚಿಂತೆ ಬಹುಜನರಿಗೆ !
ಅಜೀರ್ಣವಾಗಿ ಆಸ್ಪತ್ರೆಗೆ ಹೋಗುವವರು ಕೆಲವರು,
ಹಸಿವೆಯಿಂದ ಕುಸಿದು ಆಸ್ಪತ್ರೆ ಸೇರುವವರು ಬಹುಜನರು !
'ಹಸಿವೆಯೇ ಇಲ್ಲ'ವೆನ್ನುವವರಿಗೆ ಮೈಮುರಿದು ದುಡಿಯಲು ಕಲಿಸಿ
'ಹಸಿವೆಯೇ ಹಿಂಗ'ದೆನ್ನುವವರಿಗೆ ಅಶನವನ್ನು ನೀಡಾ
ಸ್ವತಂತ್ರಧೀರ ಸಿದ್ಧೇಶ್ವರಾ !

೩೧೯

ನೀನು ಬಡವರ ಒಡೆಯ,
ದೀನರ ದೇವ, ದಲಿತರ ತಂದೆ!
ಬಡವರಿಗೂ ದೊರೆವ ಕಾಡಪತ್ರಿ,
ತುಂಬೆಯ ಹೂ ಪ್ರಿಯ ನಿನಗೆ ;
ಕಣ್ಣಪ್ಪನ ಅಡಗೋ, ಚೆನ್ನಯ್ಯನ ಅಂಬಲಿಯೋ
ಆರೋಗಣೆ ನಿನಗೆ ;



ಒಲೆಯ ಬೂದಿಯೋ, ಬಲಿಯದ ಭಸ್ಮವೋ
ಅನುಲೇಪನ ನಿನಗೆ !
ಎಂಥ ದೀನ ಬಂಧು ನೀನು
ಬಡವರಿಗೂ ಬೇಗ ದೊರೆಯಲೆಂದು
ಗಿಡ ಮೂಲಿಕೆಗಳಲ್ಲಿ ಮದ್ದನಿರಿಸಿದೆ ;
ಅಣಬೆ, ಅತ್ತಿ, ನುಗ್ಗೆ, ನೆಲ್ಲಿ, ಜಾಲಿಗಳಲ್ಲಿ
ಪೌಷ್ಟಿಕಾಂಶಗಳನಿರಿಸಿದೆ ;
ಶಿವದಾನ ಸೊಪ್ಪುಗಳಲ್ಲಿ, ನೇರಿಳೆ ಪೇರಲಗಳಲ್ಲಿ
ಪೋಷಣಾಂಶಗಳನಿರಿಸಿದೆ ;
ಸಾಮಾನ್ಯದಲ್ಲಿ ಅಸಾಮಾನ್ಯವನಿರಿಸಿದೆ !
ಅಸಾಮಾನ್ಯರೆನಿಸಿಕೊಳ್ಳುವವರ
ಸಾಮಾನ್ಯ ನಡವಳಿಕೆಗಳ
ನೋಡಿ ನೋಡಿ ರೋಸಿಹೋಗಿದ್ದೇವೆ ;
ಈಗ ಸಾಮಾನ್ಯರಲ್ಲಿಯ
ಅಸಾಮಾನ್ಯಶಕ್ತಿಯ
ಪ್ರಕಟಿಸಯ್ಯಾ
ಸ್ವತಂತ್ರಧೀರ ಸಿದ್ಧೇಶ್ವರಾ !

೩೨೦

ಬೆಟ್ಟದ ಮುಡಿಯ ಮೇಲೆ, ಉತ್ತುಂಗ ಮಹಡಿಗಳ ಮೇಲೆ ಮಾತ್ರ
ಹೂಬಿಸಿಲ, ಹೊಂಬಿಸಿಲ ಹರಡಿ ಹಿಗ್ಗದಿರು ಹೊಂಗದಿರ !
ಕೊಳೆಗೇರಿಗಳ ಕತ್ತಲೆ ಕವಿದ ಕುಟೀರಗಳ ಮೇಲೂ
ಹೊನ್ನ ಹೊತ್ತರೆಯ ಬರಿಸು ;
ಹಳ್ಳಿಹಳ್ಳಿಯ ಸಂದಿಗೊಂದಿಗಳ ಗುಡಿಸಲುಗಳ ಮೇಲೂ
ಬಂಗಾರ ಬೆಳಕ ಹರಿಸು !
ಉಳ್ಳವರ ಕೈಗೊಂಬೆಯಾಗದೆ
ಇಲ್ಲದವರ ಆಧಾರವಾಗು ದಿವಾಕರ !
ನೆನಪಿಡು, ಸ್ವತಂತ್ರಧೀರ ಸಿದ್ಧೇಶ್ವರ ಪ್ರೀತನಾಗುವುದು
ಹಣಹದ್ದುಗಳ ಹೊಂಜೊಡರಿನಿಂದಲ್ಲ
ಬಡಭಕ್ತರ ಮಣ್ಣ ಹಣತೆಯಿಂದ

೩೨೧

ದುರಾಚಾರಿಯಾದ ಪಂಡಿತನಿಗಿಂತ
ಸದಾಚಾರಿಯಾದ ಪಾಮರನೇ ಮೇಲಯ್ಯ ;
ನಿಷ್ಕ್ರಿಯನಾದ ಜ್ಞಾನಿಗಿಂತ
ಸಕ್ರಿಯನಾದ ಸಾಮಾನ್ಯನೇ ಶ್ರೇಷ್ಠನಯ್ಯ ;
ಹರಿದು ತಿನ್ನುವ ಬಲ್ಲಿದನಿಗಿಂತ
ಹಂಚಿ ಉಣ್ಣುವ ಬಡವನೇ ಲೇಸಯ್ಯ ;
ಸಣ್ಣತನದ ಸಾಹಿತಿಗಿಂತ
ದೊಡ್ಡತನದ ಓದುಗನೇ ವಂದ್ಯನಯ್ಯ ;
ಭೂಭಾರಿ ಕಾಷಾಯಧಾರಿಗಿಂತ
ಪರೋಪಕಾರಿ ಸಂಸಾರಿಯೇ ಹಿರಿಯನಯ್ಯ ;
ಸ್ವತಂತ್ರಧೀರ ಸಿದ್ಧೇಶ್ವರಾ,
ಪಥಗೆಟ್ಟ ಪ್ರಧಾನಿಗಿಂತ
ನೀತಿ ನಿಷ್ಠ ಮತದಾರರೇ ಮೇಲಯ್ಯ !

೩೨೨

ಮಾನವರ ಹೊಟ್ಟೆ ತುಂಬಲು
ಹೆಜ್ಜೆ ಹೆಜ್ಜೆಗೆ ಆಹಾರವಿರಿಸಿರುವೆಯಯ್ಯ
ಹಲವಾರು ರೂಪಗಳಲ್ಲಿ ;
ಕಾಳುಕಡ್ಡಿಗಳೋ, ಕಂದಮೂಲಗಳೋ, ಕಾಯಿ ಪಲ್ಯಗಳೋ,
ಹಾಲು ಹಣ್ಣುಗಳೋ, ಮೊಟ್ಟೆ ಮಾಂಸಗಳೋ
ಎಷ್ಟುತರದ ಆಹಾರಗಳು ಒಂದಿಷ್ಟು ಹೊಟ್ಟೆಗಾಗಿ !
ಪಶುಪಕ್ಷಿಗಳಿಗಿಲ್ಲದ ಈ ಆಹಾರ ವೈವಿಧ್ಯ,
ಈ ಅಪಾರ ಆಹಾರ ಸಮೃದ್ಧಿ ಮಾನವನಿಗೆ !
ಹೀಗಿದ್ದೂ ಈ ಲೋಕದ ಅರ್ಧದಷ್ಟು ಮಾನವರು
ಅರ್ಧ ಹೊಟ್ಟೆಯುಂಡೇ ಬದುಕಿದ್ದಾರೆ !
ಎಂಥ ನಾಚಿಕೆಗೇಡು ನರಕುಲಕ್ಕೆ !
ಕಲಿತಿಲ್ಲ ನಾವು ಹಂಚಿಕೊಂಡು ಉಣ್ಣುವುದಕ್ಕೆ !
ಮತಿಪಡೆದ ಮಾನವನ
ಮತಿಗೇಡಿತನ ನೋಡಿ
ನಗುತಿಹೆಯೇನಯ್ಯಾ, ಸ್ವತಂತ್ರಧೀರ ಸಿದ್ಧೇಶ್ವರಾ ?



೩೨೩

ಸರಪಳಿಯ ಬಲ ಅದರ ಅತಿ ದುರ್ಬಲ ಗೊಣಸಿನಷ್ಟೇ ;
ಸಮಾಜದ ಬಲ ಅದರ ಅತಿ ದುರ್ಬಲ ವರ್ಗದಷ್ಟೇ !
ಹಡಗಕ್ಕೆ ಎಲ್ಲಿ ತೂತು ಬಿದ್ದರೇನು, ಎಲ್ಲೆಲ್ಲಿಯೂ ನೀರು !
ಸಮಾಜದಲ್ಲಿ ಯಾರು ದಲಿತ ದುರ್ಬಲರಾದರೇನು, ಎಲ್ಲರಿಗೂ ಅಸಡ್ಡಾಳು !
ಕೇರಿಯ ಬೆಂಕಿ
ಊರಿನ ಬೆಂಕಿಯಾಗದೆ
ಆರಿಸದಿದ್ದರೆ ?
ಮೇಲು ಕೀಳೆಂಬ, ಬಡವ ಬಲ್ಲಿದರೆಂಬ
ಭೇದವ ಗಣಿಸುವುದೆ ಸುಡುವಗ್ನಿ ?
ಕ್ರಾಂತಿಯ ಅಗ್ನಿಗೆ ಸೌದೆಯಾಗುವ ಮುನ್ನ
ಒಡಲ ಅಗ್ನಿಗೆ ಅನ್ನವಾಗಿರೆಂದಾತ
ಸ್ವತಂತ್ರಧೀರ ಸಿದ್ಧೇಶ್ವರ !

೩೨೪

ಸಂಗ್ರಹಿಸಿದೆ ಸಂಗ್ರಹಿಸಿದೆ, ಸಂಗ್ರಹಿಸಿದೆ
ಸಕಲೈಶ್ವರ್ಯಗಳ ಸಂಗ್ರಹಿಸಿದೆ ಜೀವಿ,
ಧರಿಸಿ ಖಾಕಿ, ಖಾದಿ, ಕಾವಿ !
ಈಗ ಸಂಪತ್ತೇ ವಿಪತ್ತಾಗತೊಡಗಿದೆಯೇನು ?
ಒಳಗೊಳಗೇ ಹೆದರಿ ಕುದಿದು ಕೋಟಲೆಗೊಳ್ಳುತ್ತಿಹೆಯೇನು ?
ದಕ್ಕದ ಅನ್ನವನ್ನು ಕಕ್ಕುವ ಹಾಗೆ
ಹೆಚ್ಚಿನ ಸಂಪದವ ಇಲ್ಲದವರಿಗಿಕ್ಕು ;
ಇಲ್ಲದಿರೆ ಅದೇ ಆಗುವುದು ನುಂಗಿದ ದಕ್ಕು !

"ಪಾನೀ ಬಾಢೇ ನಾವ್ ಮೇಂ
ಘರ ಮೇಂ ಬಾಢೇ ದಾಮ್,
ದೋನೋಂ ಹಾಥ್ ಉಲೀಚಿಯೇ
ಯಹೀ ಸಯಾನೀ ಕಾಮ್"
ಎಂಬುದ ಮರೆಯದಿರು ಜೀವಿ !
ಮರೆತರೆ, ಸ್ವತಂತ್ರಧೀರ ಸಿದ್ಧೇಶ್ವರ ಸಾಕ್ಷಿಯಾಗಿ,
ಸಾವಿಲ್ಲದೆಯೇ ಸಾಯುವಿ !

೩೨೫

ಮದ್ದಿನ ಮನೆಯನ್ನು ಕಾಯಲು
ಕಿಡಿಯ ಕಾವಲುಗಾರನನ್ನು ಇರಿಸುವುದೆ, ಅಯ್ಯ ?
ಕುರಿಗಳನ್ನು ಕಾಪಾಡಲು
ತೋಳಗಳನ್ನು ನಿಯಮಿಸುವುದೆ, ಅಯ್ಯ ?
ಇಲಿಗಳ ಪಾಲನೆಗಾಗಿ
ಬೆಕ್ಕುಗಳನಿಕ್ಕುವುದೆ, ಅಯ್ಯ ?
ಕಪ್ಪೆಗಳ ಪೋಷಣೆಯನ್ನು
ಕಾಳೋರಗಗಳಿಗೆ ಒಪ್ಪಿಸುವುದೇ, ಅಯ್ಯ ?
ಸ್ವತಂತ್ರಧೀರ ಸಿದ್ಧೇಶ್ವರಾ,
ಮೂಕ ಜನತೆಯ ಆಗುಹೋಗುಗಳನ್ನು
ಸುಲಿಗೆಗಾರರ ಕೈಗೆ ಕೊಡುವುದೆ, ಅಯ್ಯ ?

೩೨೬

ಮುತ್ತು ಅರಸಿಯ ಕೊರಳ ಹಾರ ಸೇರುತ್ತದೆ,
ಅರಸನ ಕಿರೀಟ ಕುಂಡಲ ಸಾರುತ್ತದೆ
ಆದರೆ, ಮುತ್ತನಿತ್ತ ಸಿಂಪು ಮಾತ್ರ
ಇದ್ದಲ್ಲಿಯೇ ಒದ್ದಾಡುತ್ತದೆ !
ಹೂವು ದೇವದೇವೋತ್ತಮನ ಗುಡಿ ಸೇರುತ್ತದೆ,
ದಿವ್ಯ ಸುಂದರಿಯರ ಮುಡಿ ಸೇರುತ್ತದೆ,
ಆದರೆ, ಹೂವನಿತ್ತ ಬಳ್ಳಿ ಮಾತ್ರ
ಇದ್ದಲ್ಲಿಯೇ ಕೋಡಿ ಬಾಡುತ್ತದೆ !
ಕಸ್ತೂರಿ ಅರಮನೆ ಸೇರುತ್ತದೆ, ಗುರುಮನೆ ಸೇರುತ್ತದೆ,



ಸಾಮಂತ ಶ್ರೀಮಂತರ ಧವಳ ಸೌಧಗಳನ್ನು ಸೇರುತ್ತದೆ,
ಆದರೆ, ಕಸ್ತೂರಿ ಕೊಟ್ಟ ಮೃಗ ಮಾತ್ರ
ಕಾಡುಪಾಲಾಗಿಯೇ ಉಳಿಯುತ್ತದೆ !
ಹತ್ತಿ ವಸ್ತ್ರವಾಗಿ, ಗೋಧಿ ಬಿಸ್ಕತ್ತಾಗಿ, ಕಡಲೆ ಪುಟಾಣಿಯಾಗಿ,
ರೈತ ಬೆಳೆದುದೆಲ್ಲ ಏನೇನೋ ಆಗಿ ಎಲ್ಲೆಲ್ಲಿಗೋ ಹೋಗುತ್ತದೆ,
ಆದರೆ, ಬೆಳೆದ ರೈತ ಮಾತ್ರ ಇದ್ದಲ್ಲಿಯೇ ಕೊಳೆಯುತ್ತಾನೆ !
ಅದಿರು ಉಕ್ಕಾಗಿ, ತಾಮ್ರವಾಗಿ, ತವರಾಗಿ, ಬೆಳ್ಳಿ ಬಂಗಾರವಾಗಿ
ಏನೇನೋ ಆಗಿ ಉಳ್ಳವರ ಮನೆ ಸೇರುತ್ತದೆ, ಆದರೆ, ಗಣಿ
ಗಿರಣಿಗಳ ಕಾರ್ಮಿಕ ಮಾತ್ರ ಇದ್ದಂತೆಯೇ ಉಳಿಯುತ್ತಾನೆ !
ಕಲಿತವ ಅವಕಾಶ ಪಡೆದು
ಪರಮೋಚ್ಚ ಪದವಿಗೇರುತ್ತಾನೆ,
ಆದರೆ, ಕಲಿಸಿದವ ಮಾತ್ರ ಹಿಡಿಕಾಸಿನಲ್ಲಿಯೇ
ಹುಲುಬಾಳು ಹೊರೆಯುತ್ತಾನೆ !
ಇದು ನ್ಯಾಯವೇನಯ್ಯಾ ?
ಇದು ನ್ಯಾಯವೆಂದರೆ
ಅನ್ಯಾಯವಿನ್ನಾವುದಯ್ಯಾ
ಸ್ವತಂತ್ರಧೀರ ಸಿದ್ಧೇಶ್ವರಾ ?

೩೨೭

ಸ್ವತಂತ್ರಧೀರ ಸಿದ್ಧೇಶ್ವರಾ,
ಹೋಮರನಂಥ ವಿಶ್ವಕವಿಗಳು ಭಿಕ್ಷೆ ಬೇಡಬೇಕು,
ಹೆಂಡ ಮಾರುವವರು ಲಕ್ಷಾಧೀಶರಾಗಬೇಕು
ಇದೇ ನಿನ್ನ ಸಾಮಾಜಿಕ ನ್ಯಾಯವೇನಯ್ಯಾ ?
ದುಡಿವವರಿಗೆ ದುಗ್ಗಾಣಿ, ದುಡಿಸಿಕೊಳ್ವರಿಗೆ ಅಷ್ಟೈಶ್ವರ್ಯ,
ಇದುವೆ ನಿನ್ನ ಆರ್ಥಿಕ ವ್ಯವಸ್ಥೆಯೇನಯ್ಯಾ ?
ಮಾನವೋದ್ಧಾರಕರಿಗೆ ವಿಷದ ಬಟ್ಟಲು, ಗುಂಡು,
ಮಾನವೋತ್ಪೀಡಕರಿಗೆ ಸುಖಸಂಪದ
ಇದೇ ನಿನ್ನ ನೀತಿ ನಿಯಮವೇನಯ್ಯಾ ?
ಇರಲಾರದು, ಇರಬಾರದು !
ಇದ್ದರೆ ಇದರ ತಪ್ಪು ಯಾರದು ?
ನಿನ್ನ ಹೆಸರಿನಲ್ಲಿ ಇಷ್ಟು ದಿನ ಇವು ಬದುಕಿದುದೇ ತಪ್ಪು,
ನಿನ್ನ ಹೆಸರಿಗೆ ಇವುಗಳಿಂದ ಕಪ್ಪು,

ಇನ್ನಾದರೂ ಒಪ್ಪು !
ನೀನು ಒಪ್ಪು, ಬಿಡು, ನಾವು ಮಾತ್ರ
'ಶಿವಮಯ ಶಕ್ತಿ, ಶಕ್ತಿಮಯ ಶಿವ'ದ ಗುರಿಯ,
ಸರ್ವರಿಗೆ ಸಮಾನಾವಕಾಶದ ಗುರಿಯ,
ಸರ್ವೋದ್ಧಾರದ, ಸರ್ವಜನಸುಖದ ಗುರಿಯ
ಮುಟ್ಟಿಯೇ ತೀರುವೆವು,
ನಾವು ನಮ್ಮನೇ ಮೀರುವೆವು !

೩೨೮

ಸರ್ವೋದ್ಧಾರದ ವಿಚಾರಗಳ ಪ್ರಚಾರವೇ ಪುಣ್ಯ,
ಶೋಷಕ ಪೋಷಕ ವಿಚಾರಗಳ ಪ್ರಸಾರವೇ ಪಾಪ
ಸ್ವತಂತ್ರಧೀರ ಸಿದ್ಧೇಶ್ವರಾ !

೩೨೯

ದೊಡ್ಡದನ್ನು ಮಾಡಲು ಬರುವುದಿಲ್ಲ,
ಸಣ್ಣದನ್ನು ಮಾಡಲು ಮನಸ್ಸಿಲ್ಲ
ಬರಿದಾಗಿ ಹೋಯಿತಯ್ಯ ಬದುಕು !
ತನಗೂ ತಿಳಿಯಲಿಲ್ಲ,
ತಿಳಿದವರು ಹೇಳಿದರೂ ಕೇಳಲಿಲ್ಲ
ಮೌಢ್ಯವನ್ನೇ ಬಳಸಿದುದಾಯ್ತಯ್ಯ ಅದಕು, ಇದಕು, ಎದಕು !
ತಾನೂ ಸುಖಿಸಲಿಲ್ಲ, ಅನ್ಯರಿಗೂ ಸುಖಿಸಗೊಡಲಿಲ್ಲ
ವ್ಯರ್ಥವಾಗಿ ಹೋಯಿತಯ್ಯ ಸಿರಿ ಸಂಪತ್ತು !
ದುಷ್ಟ ಶಿಕ್ಷಣವನ್ನೂ ಮಾಡಲಿಲ್ಲ,
ಶಿಷ್ಟರಕ್ಷಣವನ್ನೂ ಮಾಡಲಿಲ್ಲ
ಕೆಲಸಕ್ಕೆ ಬಾರದಾಯಿತ್ತಯ್ಯ ಸತ್ತೆ, ಹುಕೂಮತ್ತು !
ಸ್ವತಂತ್ರಧೀರ ಸಿದ್ಧೇಶ್ವರನ ಸೃಷ್ಟಿಯಲ್ಲಿ
ಏನಿಲ್ಲ ಎಲ್ಲರೂ ನಲ್-ಬಾಳಲು ?
ಎಲ್ಲ ಇದೆ, ಎಲ್ಲ ಇದೆ, ಎಲ್ಲ ಇದ್ದೂ



ನಮ್ಮಲ್ಲಿಯೇ ಏನೋ ಇಲ್ಲವಾಗಿ
ಎಲ್ಲ ಹೊಲ್ಲವಾಗಿಹುದಯ್ಯ !

೩೩೦

ಕೊಬ್ಬರಿಯನ್ನು ಕಳೆದುಕೊಂಡು
ಕರಟಕ್ಕಾಗಿ ಕಚ್ಚಾಡುವವರ ಕಂಡು
ಕನಿಕರಿಸುತ್ತಿಹೆಯೇನಯ್ಯಾ ?
ಕಬ್ಬನ್ನು ಕಳೆದುಕೊಂಡು
ಸಿಪ್ಪೆ ಸೋಗೆಗಳಿಗಾಗಿ ಕಿತ್ತಾಡುವವರ ಕಂಡು
ಮರುಗುತ್ತಿಹೆಯೇನಯ್ಯಾ ?
ಜೇನನ್ನು ಕಳೆದುಕೊಂಡು ಮೇಣಕ್ಕಾಗಿ
ಧರ್ಮವನ್ನು ಕಳೆದುಕೊಂಡು ಭಸ್ಮಬೊಟ್ಟುಗಳಿಗಾಗಿ,
ಮನುಷ್ಯತ್ವವನ್ನು ಕಳೆದುಕೊಂಡು ಸೊತ್ತುಗಳಿಗಾಗಿ
ಕಡಿದಾಡುವವರ ಕಂಡು
ಕಂಬನಿದುಂಬಿಹೆಯೇನಯ್ಯಾ-ಸ್ವತಂತ್ರಧೀರ ಸಿದ್ಧೇಶ್ವರಾ ?

೩೩೧

ವಿದ್ಯೆಯನ್ನು ಮುಚ್ಚಿಟ್ಟು ಮುಚ್ಚಿಟ್ಟು
ವಿದ್ಯಾವಿಹೀನರ ಮಾಡಿದೆವಯ್ಯ ಬಹುಜನಸಮಾಜವನ್ನು ;
ದುಡಿವವರನ್ನು ಅಡಿಗೊತ್ತಿ ಅಡಿಗೊತ್ತಿ
ಬಡವರನ್ನಾಗಿ ಮಾಡಿದೆವಯ್ಯ ಬಹುಸಂಖ್ಯೆಯ ಶ್ರಮಿಕರನ್ನು ;
ಆದಿ ಜನರನ್ನೇ ಹೊರಗಿಟ್ಟು ಹೊರಗಿಟ್ಟು
ದಲಿತರನ್ನಾಗಿ ಮಾಡಿದೆವಯ್ಯ ದೇವರ ಮಕ್ಕಳನ್ನು ;
ಅಬಲೆಯರನ್ನು ಅದುಮಿಟ್ಟು ಅದುಮಿಟ್ಟು
ಅಸಹಾಯಕರನ್ನಾಗಿ ಮಾಡಿದೆವಯ್ಯ ಅಕ್ಕತಂಗಿಯರನ್ನು ;
ಉಳುವವರನ್ನು ಕೆಳಗೊತ್ತಿ ಕೆಳಗೊತ್ತಿ
ಬಲಹೀನರನ್ನಾಗಿ ಮಾಡಿದೆವಯ್ಯ ಬೇಸಾಯಗಾರರನ್ನು ;
ಓದಿಸುವವರನ್ನು ಉದಾಸೀನ ಮಾಡಿ ಮಾಡಿ

ಅಲಕ್ಷಿತರನ್ನಾಗಿ ಮಾಡಿದೆವಯ್ಯ ನಮ್ಮ ಶಿಕ್ಷಕರನ್ನು !
ಇವರೆಲ್ಲರ ದಾರಿದ್ರ್ಯವ ಹೊತ್ತು ನಿಂತಿದೆ
ಕೆಲವೇ ಕೆಲವರ ಸಿರಿವಂತಿಕೆಯ ಸೌಧ !
ಇವರೆಲ್ಲರ ಅಜ್ಞಾನವ ಎತ್ತಿ ನಿಂತಿದೆ
ಕೆಲವೇ ಕೆಲವರ ಜ್ಞಾನವಂತಿಕೆಯ ಸದ್ಮ !
ತಲೆಕೆಳಗಾದ ಪಿಡಮಿಡ್ದು ಈ ಸಮಾಜ !
ಬಿರುಗಾಳಿಗೆ ಉರುಳಿ ಬೀಳುವ ಮುನ್ನ
ನಿಡುಬುಡದ ಮೇಲೆ ನಿಲ್ಲಿಸಯ್ಯ ಇದನು
ಸ್ವತಂತ್ರಧೀರ ಸಿದ್ಧೇಶ್ವರಾ !

೩೩೨

ಸರಕಾರ ದರೋಡೆಕಾರನಾದಾಗ
ನೌಕರರು ನರಭಕ್ಷಕರಾಗದಿರುವರೇನಯ್ಯ ?
ಸಚಿವರೇ ಸುಲಿಗೆಗಾರರಾದಾಗ
ಆಪ್ತ ಸಹಾಯಕರು ಡಕಾಯಿತರಾಗರೇನಯ್ಯ ?
ಪೋಷಕರೇ ಶೋಷಕರಾದಾಗ
ಆಶ್ರಿತರು ಜೀವನ್ಮೃತರಾಗರೇನಯ್ಯ ?
ಸ್ವತಂತ್ರಧೀರ ಸಿದ್ಧೇಶ್ವರಾ,
ಸಮಾಜವೇ ಸಮಜವಾದಾಗ
ವ್ಯಕ್ತಿ ಪಶುವಾದರೆ ಆಶ್ಚರ್ಯವೇನಯ್ಯ ?

೩೩೩

ದೇಶವನ್ನು ಛಿದ್ರಿಸುವ ಯಾರನ್ನೂ
ನಾಯಕನೆಂದು ಒಪ್ಪೆನಯ್ಯಾ ನಾನು ;
ದೇಹ ಧಾರಿಯಾದ ಯಾರನ್ನೂ
ಭಗವಾನನೆಂದು ಒಪ್ಪೆನಯ್ಯಾ ನಾನು ;
ಅಹಂಕಾರಿಯಾದ ಯಾರನ್ನೂ
ಜ್ಞಾನಿಯೆಂದು ಒಪ್ಪೆನಯ್ಯಾ ನಾನು ;
ಅಂಧಶ್ರದ್ಧೆ ಬಿಡದ ಯಾರನ್ನೂ
ವಿಜ್ಞಾನಿಯೆಂದು ಒಪ್ಪೆನಯ್ಯಾ ನಾನು ;
ನಿನ್ನ ಮಕ್ಕಳಲ್ಲಿ ಭೇದ ಬಗೆಯುವ ಯಾರನ್ನೂ
ಭಕ್ತನೆಂದು ಒಪ್ಪೆನಯ್ಯಾ ನಾನು ;
ಸ್ವತಂತ್ರಧೀರ ಸಿದ್ಧೇಶ್ವರಾ,



ಸಮಾಜವನ್ನು ಒಡೆಯುವ ಯಾರನ್ನೂ
ಗುರುವೆಂದು ಒಪ್ಪೆನಯ್ಯಾ ನಾನು !

೩೩೪

ಮೂರು ಮೂರು ತಾಸು ಭಾಷಣ ಬಿಗಿವವರಿಗಿಂತ
ಊರ ದಾರಿಯ ಮುಳ್ಳು ತೆಗೆವವರಿಗೆ ತಲೆಬಾಗುವೆನಯ್ಯಾ ನಾನು ;
ಮೂರು ಹೊತ್ತು ಮಾರುದ್ದ ಪೂಜೆ ಮಾಡುವವರಿಗಿಂತ
ಮೂರು ನಿಮಿಷ ರೋಗಿಯ ಶುಶ್ರೂಷೆ ಮಾಡುವರಿಗೆ ಮಣಿವೆನಯ್ಯ ನಾನು ;
ಹೊಸ ಹೊಸ ಹಸಿಬಿಸಿ ಶಾಸನ ರಚಿಸುವವರಿಗಿಂತ
ಹಸಿದವರಿಗೆ ಅಶನವಿಕ್ಕುವವರಿಗೆ ವಂದಿಸುವೆನಯ್ಯ ನಾನು ;
ಗುಡಿ ಗುಂಡಾರ ಮಠ ಮಹಲುಗಳ ಕಟ್ಟಿಸುವವರಿಗಲ್ಲ,
ಬಡವರಿಗೆ ಗುಡಿಸಲು ಕೊಡುವರಿಗೆ ಕೈಮುಗಿವೆನಯ್ಯ ನಾನು ;
ವೇದಾಗಮಗಳಿಗೆ ಭಾಷ್ಯ ಬರೆಯುವವರಿಗಿಂತ
ನಿರಕ್ಷರರಿಗೆ ಅಕ್ಷರ ಕಲಿಸುವವರಿಗೆ ಕೈ ಜೋಡಿಸುವೆನಯ್ಯ ನಾನು ;
ಸ್ವತಂತ್ರಧೀರ ಸಿದ್ಧೇಶ್ವರಾ, ನಿನ್ನ ಹೆಸರು ಹೇಳಿ ಬದುಕುವವರಿಗಲ್ಲ,
ಹಸುಳೆ ಹೆಂಗಳೆಯರ ಏಳಿಗೆಗೆ ಯತ್ನಿಸುವರಿಗೆ
ನಮೋ ನಮೋ ಎಂಬೆನಯ್ಯ ನಾನು !

೩೩೫

ಸಿಂಹಾಸನದ ಮೇಲಿನ ಶಕ್ತಿಯ ಕಂಡರು,
ಸಿಂಹಾಸನದ ಹಿಂದಿನ ಶಕ್ತಿಯ ಕಂಡರು,
ಸಿಂಹಾಸನದ ಕೆಳಗಣ ಜನಶಕ್ತಿಯನ್ನೇ ಕಾಣರಯ್ಯ ಕೆಲವು ಇತಿಹಾಸಕಾರರು ;
ಅಣುವಿನೊಳಗಣ ಶಕ್ತಿಯ ಕಂಡರು,
ಮಹತ್ತಿನೊಳಗಣ ಶಕ್ತಿಯ ಕಂಡರು,
ಮನದೊಳಗಣ ಮಹಾಶಕ್ತಿಯನ್ನೇ ಕಾಣರಯ್ಯ ಕೆಲವು ವಿಜ್ಞಾನಿಗಳು ;
ಸಂಸಾರದೊಳಗಣ ಬಂಧನಗಳನ್ನು ಕಂಡರು,
ಕರ್ಮದೊಳಗಣ ಬಂಧನಗಳನ್ನು ಕಂಡರು,
ಬುದ್ಧಿಯೊಳಗಣ ಬಂಧನಗಳನ್ನೇ ಕಾಣರಯ್ಯ ಕೆಲವು ಬುದ್ಧಿಜೀವಿಗಳು ;
ಸ್ವತಂತ್ರಧೀರ ಸಿದ್ಧೇಶ್ವರಾ,
ಮಾತಿನ ಶಕ್ತಿಯನ್ನು ಕಂಡರು,

ರೀತಿಯ ಶಕ್ತಿಯನ್ನು ಕಂಡರು,
ಪ್ರೀತಿ ಸಹಾನುಭೂತಿಯ ಶಕ್ತಿಯನ್ನು
ಇನ್ನಷ್ಟು ಕಾಣಲಯ್ಯ ಮಾನವರು !

೩೩೬

ಯಾವ ಕಲ್ಲಾದರೂ ರತ್ನವನ್ನೊಡೆಯಬಹುದು,
ಆದರೆ, ಎಲ್ಲ ಕಲ್ಲೂ ರತ್ನವಾಗಬಹುದೇನಯ್ಯ ?
ಶಲಭ ಬಾವುಲಿಗಳೂ ದೀಪವನ್ನಾರಿಸಬಲ್ಲುವು,
ಆದರೆ, ಅವೇ ದೀಪ ಹೊತ್ತಿಸಬಲ್ಲುವೇನಯ್ಯ ?
ಯಾವ ದೊಣ್ಣೆಯಾದರೂ ಮಡಕೆಯನ್ನೊಡೆಯಬಲ್ಲದು,
ಆದರೆ, ಅದೇ ಮಡಕೆಯ ಮಾಡಬಲ್ಲುದೇನಯ್ಯ ?
ಯಾವ ಕೈಯಾದರೂ ಹೂವ ಕಿತ್ತುಕೊಳ್ಳಬಲ್ಲುದು,
ಆದರೆ, ಯಾವ ಕೈಯಿಂದ ಹೂವ ಹುಟ್ಟಿಸಲಾಗುವುದಯ್ಯ ?
ಸ್ವತಂತ್ರಧೀರ ಸಿದ್ಧೇಶ್ವರಾ,
ನೀನು ಸೃಷ್ಟಿಸಿದುದ ಕೆಡಿಸಬಲ್ಲವರಿಗೆ ಕೊರತೆಯಿಲ್ಲ,
ಕೆಟ್ಟುದನ್ನು ಸರಿಪಡಿಸುವವರ ಹೆಚ್ಚಿಸಯ್ಯ !

೩೩೭

ಮೇಣದ ಹುಟ್ಟು ಮಾಡಿದರೂ ಬಿಡರು,
ಸಿಗುರಿನ ಕವಚ ತೊಟ್ಟರೂ ಬಿಡರು,
ನಾರಿನ ಹೊದಿಕೆ ಹೊತ್ತರೂ ಬಿಡರು,
ಕೆಚ್ಚಲಿನ ರಕ್ಷಣೆ ಪಡೆದರೂ ಬಿಡರು,
ಏನ ಮಾಡಿದರೂ ಎಲ್ಲಿದ್ದರೂ ಬಿಡರು
ಸೃಷ್ಟಿಯೊಳಗಣ ಸವಿಯ ಸೂರೆಗೊಳ್ಳುವುದನ್ನು ನರರು !
ಸೃಷ್ಟಿಗೊಂಡಿಹ ಸವಿಯನೇನೋ ಸವೆಯೆ ಸವಿಯುವರು
ಸೃಷ್ಟಿಸುವರೆ ತಾವು ಸಹ ಹೊಸ ಸವಿಯನು ?
ಇದ್ದ ಸವಿಯ ಸವಿದು,
ಹೊಸ ಸವಿಯ ಹುಟ್ಟಿಸದವರು
ಅಡ್ಡಾಡುವ ಶವಗಳೆಂದಾತ



ಸ್ವತಂತ್ರಧೀರ ಸಿದ್ಧೇಶ್ವರ !

೩೩೮

ಹುಲಿಯ ಚರ್ಮದ ಮೇಲೆ ಕುಳಿತಾಕ್ಷಣ
ಹುಲಿಯ ಮೇಲೆ ಸವಾರಿ ಮಾಡಿದಂತಾಯಿತೇನಯ್ಯ ?
ಕಾಮನ ಚಿತ್ರ ದಹಿಸಿದ ಮಾತ್ರಕ್ಕೆ
ಕಾಮವ ಸುಟ್ಟು ಬೊಟ್ಟಿಟ್ಟ ಹಾಗಾಯಿತೇನಯ್ಯ ?
ಕಾಷಾಯಾಂಬರ ಧರಿಸಿದೊಡನೆ
ಮನಃಕಷಾಯಗಳು ಮಾಯವಾಗುವುವೇನಯ್ಯ ?
ಗೊತ್ತುವಳಿ ಸ್ವೀಕರಿಸಿದಾಕ್ಷಣ
ಕೃತಿಯ ಫಲ ಕರತಲಾಮಲಕವಪ್ಪುದೇನಯ್ಯ ?
ಪೂರ್ಣಕ್ರಾಂತಿಯ ಪಣ ತೊಟ್ಟುಬಿಟ್ಟರೆ
ಸಮಗ್ರ ಕ್ರಾಂತಿ ಸಫಲವಾಗಿ ಬಿಡುವುದೇನಯ್ಯ ?
'ಗರೀಬೀ ಹಟಾವ್' ಎಂದು ಘೋಷಿಸಿದಾಕ್ಷಣ
ಬರ, ಬಡತನಗಳು ಬಯಲಾಗುವುವೇನಯ್ಯ
ಸ್ವತಂತ್ರಧೀರ ಸಿದ್ಧೇಶ್ವರಾ !

೩೩೯

ಪರಿವರ್ತನೆ, ಪರಿವರ್ತನೆ, ಪರಿವರ್ತನೆಯೆಂದು
ಪರಿತಪಿಸುತ್ತಲಿಹರಯ್ಯ ಪರಿಣತರನೇಕರು !
ಪರಿವರ್ತನೆ ನಿಸರ್ಗದ ನಿಯಮ,
ಜೀವನಾಯನ, ಕಾಲದ ಪ್ರಥಮ ಲಕ್ಷಣ,
ಅಪರಿವರ್ತನೀಯ ಪರಿವರ್ತನೆಯ
ಆವರ್ತನ, ಪುನರಾವರ್ತನ !
'ಬಹುಜನ ಹಿತಾಯ ಬಹುಜನ ಸುಖಾಯ'
ಪರಿವರ್ತನೆಯನ್ನು ಪ್ರತಿಪಾದಿಸುವವರು
ಬಹುಜನರಿಗಾವ ಅವಕಾಶವನ್ನೀವರಯ್ಯ
ಪರಿವರ್ತನೆಯ ಪ್ರವರ್ತಕರಾಗಲು,
ಪರಿವರ್ತನೆಯ ಫಲ ಪಡೆಯಲು ?
ಬಹುಜನರ ಹೆಸರಿನಲ್ಲಿ ಕೆಲವರ ಹಿತಸಾಧನೆಯ

ಕಾರಸ್ಥಾನವಲ್ಲವೆ
ಪಟ್ಟಭದ್ರ ಹಿತಗಳ ಪರಿವರ್ತನೆಯ ಪ್ರತಿಪಾದನೆ ?
ಹೃದಯ ಪರಿವರ್ತನೆ ಹೊಂದದವರ
ಪರಿವರ್ತನೆಯ ಪ್ರಲಾಪ
ಬಹುಜನರ ವಂಚಿಸುವ
ಕಾರ್ಯಕಲಾಪವಯ್ಯ
ಸ್ವತಂತ್ರಧೀರ ಸಿದ್ಧೇಶ್ವರಾ !

೩೪೦

ಬಿದ್ದುದು ತಪ್ಪಲ್ಲ,
ಬಿದ್ದಲ್ಲಿಯೇ ಬಿದ್ದಿರುವುದು ತಪ್ಪಯ್ಯ ;
ಬಡವನಾಗಿ ಹುಟ್ಟಿದುದು ತಪ್ಪಲ್ಲ,
ಬಡವನಾಗಿಯೇ ಉಳಿಯುವುದು ತಪ್ಪಯ್ಯ ;
ಅಜ್ಞಾನಿಯಾಗಿ ಮೈದಾಳಿದುದು ತಪ್ಪಲ್ಲ,
ಅಜ್ಞಾನಿಯಾಗಿಯೇ ಉಳಿಯುವುದು ತಪ್ಪಯ್ಯ ;
ಸ್ವತಂತ್ರಧೀರ ಸಿದ್ಧೇಶ್ವರಾ,
ಶೋಷಿತನಾಗಿ ಜನಿಸಿದುದು ತಪ್ಪಲ್ಲ,
ಶೋಷಿತನಾಗಿಯೇ ಉಳಿಯುವುದು ತಪ್ಪಯ್ಯ !

೩೪೧

ತೋಳ ನಿರ್ಧರಿಸಿದ ನೀತಿ
ಕುರಿಗೆ ವರವಾಗಬಲ್ಲುದೇನಯ್ಯಾ ?
ಹುಲಿ ಹಮ್ಮಿದ ರೀತಿ
ಹುಲ್ಲೆಗೆ ಹಿತಕರವಾಗಬಲ್ಲುದೇನಯ್ಯಾ ?
ಬೆಕ್ಕು ನಟಿಸುವ ಪ್ರೀತಿ
ಇಲಿಗೆ ಆಪ್ಯಾಯನವಾಗುವುದೆಂತಯ್ಯಾ ?
ಹಾವು ಹೂಡಿದ ನಿಯತಿ
ಕಪ್ಪೆಗೆ ಕಲ್ಯಾಣಕರವಾದೀತೇನಯ್ಯಾ ?
ಕಟುಕ ರಚಿಸಿದ ಕಟ್ಟು ಕಟ್ಟಳೆಗಳು
ಹಸುವಿಗೆ ಹಸಾದವೆನಿಸಬಹುದೇನಯ್ಯಾ ?
ಕಳ್ಳರ, ಕೊಳ್ಳೆಗಾರರ ನಿಯಮಾವಳಿ



ಒಳ್ಳಿದರಿಗೆ ಒಪ್ಪಿತವಾಗಬಲ್ಲುವೇನಯ್ಯಾ ?
ಸ್ವತಂತ್ರಧೀರ ಸಿದ್ಧೇಶ್ವರಾ,
ಶೋಷಕರು ರಚಿಸಿದ ಶಾಸ್ತ್ರ ಶಾಸನ ಸಂವಿಧಾನಗಳು
ಶೋಷಿತರಿಗೆ ಸುಖದವಾಗಬಲ್ಲುವೇನಯ್ಯಾ ?

೩೪೨

ಹೊರಲಾಗದ ಕಲ್ಲನಿಳಿಸಿ ಹೊರಲಾಗದ ಬಂಗಾರದ ಗಟ್ಟಿ ಇರಿಸಿದರೆ
ಹೊರುವ ತಲೆಗಾವ ಸೌಕರ್ಯವಯ್ಯಾ ?
ಕಾಣಿಸದ ಗಾಜಿನ ಕನ್ನಡಕ ತೆಗೆದು
ಕುರುಡುಗೊಳಿಸುವ ರನ್ನದ ಕನ್ನಡಕವಿರಿಸಿದರೆ
ನೋಡುವ ಕಣ್ಣುಗಳಿಗಾವ ಸಹಕಾರವಯ್ಯಾ ?
ಕಬ್ಬಿಣದ ಬೇಡಿಗಳ ಕಡಿದು ಬೆಳ್ಳಿಯ ಹಗ್ಗ ಬಿಗಿದರೆ
ಮಾಡುವ ಕೈಗಳಿಗೆ ಅದಾವ ಉಪಕಾರವಯ್ಯಾ ?
ಒತ್ತುವ ಪಾದರಕ್ಷೆ ಬಿಡಿಸಿ ನಡುವ ಮುಳ್ಳಾವಿಗೆ ತೊಡಿಸಿದರೆ
ನಡೆದ ಕಾಲುಗಳಿಗೆ ಅದೆಂಥ ಸೌಲಭ್ಯವಯ್ಯಾ ?
ಸ್ವತಂತ್ರಧೀರ ಸಿದ್ಧೇಶ್ವರಾ,
ಜಾತಿ ವ್ಯವಸ್ಥೆಯನ್ನುಳಿಸಿ ಸಮಾನತೆಯ ಘೋಷಿಸಿದರೆ
ವಿಷಮತೆಗೆ ಆಹುತಿಯಾದವರಿಗೆ ಅದಾವ ಲಾಭವಯ್ಯಾ ?

೩೪೩

ಭಕ್ತಹಿತಾರ್ಥವಾಗಿ ಇದುವರೆಗೆ
ಏನೇನೋ ಅವತಾರಗಳನ್ನು ಎತ್ತಿರುವೆಯಂತೆ
ಈಗ ಹೊಸ ಅವತಾರಗಳನ್ನು ತಳೆದು ಇಳಿಯಯ್ಯಾ !
ಹಸಿದವರ ಮುಂದೆ ರೊಟ್ಟಿಯಾಗಿ ಅವತರಿಸು,
ಶೋಷಿತರ ಮುಂದೆ ವಿಮೋಚನೆಯಾಗಿ ಅವತರಿಸು,
ದಾಸ್ಯದಲ್ಲಿರುವವರೆದುರು ಸ್ವಾತಂತ್ರ್ಯವಾಗಿ ಅವತರಿಸು,
ವಾಸಿಯಾಗದ ರೋಗಿಗಳೆದುರು ವಾಸಿಗೊಳಿಪ ಭೈಷಜ್ಯವಾಗಿ ಅವತರಿಸು,
ನಿರಕ್ಷರಿಗಳೆದೆಯಲ್ಲಿ ವಿದ್ಯೆಯ ಅಮೃತವಾಗಿ ಅವತರಿಸು,
ಇನ್ನೂ ಸ್ಪೃಶ್ಯರೆನಿಸದವರಂಗದಲ್ಲಿ ಪಾವಿತ್ರ್ಯವಾಗಿ
ಪ್ರಾದುರ್ಭವಿಸು,
ಸ್ವತಂತ್ರಧೀರ ಸಿದ್ಧೇಶ್ವರಾ,
ಸಂಹಾರಕ್ಕಾಗಿ ತೊಟ್ಟ ಅವತಾರಗಳು ಸಾಕು,

ಸರ್ವೋದ್ಧಾರಕ್ಕಾಗಿ ಹೊಸ ಅವತಾರಗಳ ತಳೆಯಯ್ಯಾ !

೩೪೪

ಎಲುವಿನ ಗೂಡುಗಳಲ್ಲಿ
ನಲವಿನ ನೆತ್ತರ ಚಿಮ್ಮಿಸಬಲ್ಲವರ ತೋರಾ ;
ನಿಟ್ಟುಸಿರಿನ ಬಸಿರಿನಿಂದ
ನಲ್ಲುಸಿರಿನ ಪರಿಮಳವ ಬರಿಸಬಲ್ಲವರ ತೋರಾ ;
ವರ್ಣಾಂಧಕಾರದ ಒಡಲಿನಿಂದ
ವಿಶ್ವಪ್ರೇಮದ ಪ್ರತಿಭೆಯ ಬರಿಸಬಲ್ಲವರ ತೋರಾ ;
ನಿರ್ಗತಿಕರ ಗುಡಿಸಲಲ್ಲಿ
ನೋಬೆಲ್ ಪಾರಿತೋಷಕ ಪಡೆವವರ ರೂಪಿಸಬಲ್ಲವರ ತೋರಾ ;
ಅಬಲತೆಯ ಬಾಳೆಯಲ್ಲಿ
ಕುಲಿಶ ಸುದರ್ಶನಗಳ ಗೊನೆಯ ಕೊನರಿಸುವವರ ತೋರಾ ;
ಅನಾರೋಗ್ಯದ ಗಣಿಯಿಂದ
ಅಖಂಡಾರೋಗ್ಯದ ಚಿನ್ನ ತೆಗೆಯುವವರ ತೋರಾ ;
ಸ್ವತಂತ್ರಧೀರ ಸಿದ್ಧೇಶ್ವರಾ,
ಜನಮನದಲ್ಲಿ ನಿದ್ರಿಸುತ್ತಿರುವ
ಮಹಾಘನವನೆಚ್ಚರಿಸಬಲ್ಲವರ ತೋರಾ !

೩೪೫

ಹೆಂಡದ ಹರವಿಯನ್ನು ಪೂಜಿಸುವವರು ಹಲವರುಂಟು,
ಹಾಲಿನ ಹರವಿಯನ್ನು ಗೌರವಿಸುವವರ ಹೆಚ್ಚಿಸಯ್ಯಾ ;
ಹಣಕ್ಕೆ ಅಡ್ಡಬೀಳುವವರಿಗೆ ಕೊರತೆಯಿಲ್ಲ,
ಗುಣಕ್ಕೆ ಮಣಿಯುವವರನ್ನು ಹೆಚ್ಚಿಸಯ್ಯಾ ;
ಸತ್ತಾಧಾರಿಗಳನ್ನು ಸತ್ಕರಿಸುವವರ ಸಂಖ್ಯೆ ಸಣ್ಣದಿಲ್ಲ,
ಸಾತ್ವಿಕತೆಯನ್ನು ಸತ್ಕರಿಸುವವರ ಹೆಚ್ಚಿಸಯ್ಯಾ ;
ಗೆದ್ದ ಎತ್ತಿನ ಬಾಲ ಹಿಡಿವವರು ಸಾಕಷ್ಟಿದ್ದಾರೆ,
ಬಿದ್ದ ಎತ್ತಿನ ಆರೈಕೆ ಮಾಡುವವರ ಹೆಚ್ಚಿಸಯ್ಯಾ ;
ಕೂಡಿದವರನ್ನು ಅಗಲಿಸುವವರ ಬರವಿಲ್ಲ,
ಅಗಲಿದವರನ್ನು ಕೂಡಿಸುವವರ ಹೆಚ್ಚಿಸಾ ;
ಸ್ವತಂತ್ರಧೀರ ಸಿದ್ಧೇಶ್ವರಾ,



ಉಳ್ಳವರನ್ನು ಓಲೈಸುವವರು ಬೇಕಾದಷ್ಟಿದ್ದಾರೆ,
ಇಲ್ಲದವರಿಗೆ ಉಳುಬಾಳು ಒದಗಿಸುವವರ ಹೆಚ್ಚಿಸಯ್ಯಾ !

೩೪೬

ಮನೆ ಕಾಯುವ ನಾಯಿಯನ್ನು ಹೊರಗಿರಿಸಿ
ಕದ್ದು ಕುಡಿಯುವ ಬೆಕ್ಕನ್ನು ಒಳಗಿರಿಸಿಕೊಂಡೆವಯ್ಯಾ ;
ದುಡಿದಿಕ್ಕುವ ಬಡವರನ್ನು ಅಡಿಗೊತ್ತಿ
ದೋಚಿ ಉರಿವವರ ಹೊತ್ತು ಮೆರೆಸುವೆವಯ್ಯಾ ;
ಕಡು ನಿಷ್ಠೆಯ ಬಡಭಕ್ತರಿಗೆ ಇಲ್ಲೆನಿಸಿ
ಕಾಸು ಸುರಿವ ಲಂಡರಿಗೆ ದೇವದರ್ಶನ ಮಾಡಿಸುವಯ್ಯಾ ;
ಕಲಾ ತಪಸ್ವಿಗಳನ್ನು ಕಡೆಗಣಿಸಿ
ಕಲೆಯ ವ್ಯಭಿಚಾರ ನಡೆಸುವವರ ತಲೆಯಮೇಲಿರಿಸಿಕೊಳ್ವೆವಯ್ಯಾ ;
ಸ್ವತಂತ್ರಧೀರ ಸಿದ್ಧೇಶ್ವರಾ,
ನೀನು ಮೆಚ್ಚಿದವರ ತುಚ್ಛೀಕರಿಸಿ
ಸಿರಿ ಹೆಚ್ಚಿದವರ ಮೊಚ್ಚೆ ಒರೆಸುವೆವಯ್ಯಾ !

೩೪೭

ಚಂದನವಾದರೆ ತೆಯ್ಯಿಸಿಕೊಂಬ ತೊಂದರೆಯೆಂದು
ಈಚಲ ಮರವಾಗುವುದೇ ಲೇಸೆನ್ನಬಹುದೇನಯ್ಯ ?
ಚಿನ್ನವಾದರೆ ಒರಸಿಕೊಂಬ ಕಿರುಕುಳವೆಂದು
ಹಿತ್ತಾಳೆಯಾಗುವುದೇ ವಾಸಿಯೆನ್ನಬಹುದೇನಯ್ಯಾ ?
ಕಬ್ಬಾದರೆ ನುರಿಸಿಕೊಂಬ ಕೋಟಲೆಯೆಂದು
ಕಂಟಿಯಾಗುವುದೇ ಚಿನ್ನವೆನ್ನಬಹುದೇನಯ್ಯ ?
ಕದಳಿಯಾದೊಡೆ ಕೊಯ್ಸಿಕೊಂಬ ಕ್ಲೇಶವೆಂದು
ಕತ್ತಾಳೆಯಾಗುವುದೇ ಮೇಲೆನ್ನಬಹುದೇನಯ್ಯ ?
ಸ್ವತಂತ್ರಧೀರ ಸಿದ್ಧೇಶ್ವರಾ,
ರಾಮ ಧರ್ಮಜರಾದರೆ ವನವಾಸ ತಪ್ಪಿದ್ದಲ್ಲವೆಂದು
ಚೆಂಗೀಜ ತೈಮೂರರಾಗುವುದೇ ಒಳಿತೆನ್ನಬಹುದೇನಯ್ಯಾ ?

೩೪೮

ದುಷ್ಟರ ಭ್ರಷ್ಟರ ದಾಸನಾಗಿ ಮೃಷ್ಟಾನ್ನ ಸವಿವುದಕ್ಕಿಂತ
ಸಜ್ಜನರ ಸೇವಿಸಿ ಮಜ್ಜಿಗೆ ಅಂಬಲಿ ಉಂಬುದು ಲೇಸಯ್ಯ ;
ಕಟುಕರ ಅಂಗಡಿಯ ನಾಯಾಗಿ ಕೊಳೆತ ಪಲ ಅಗಿವುದಕ್ಕಿಂತ
ಮರದ ಗಿಳಿಯಾಗಿ ಫಲ ಭುಂಜಿಸುವುದು ಲೇಸಯ್ಯ ;
ದಾಸ್ಯದ ಉಪ್ಪರಿಗೆಯಲ್ಲಿದ್ದು ಸಿರಿಯ ಕೊಪ್ಪರಿಗೆ ಭೋಗಿಸುವುದಕ್ಕಿಂತ
ಬಿಡುಗಡೆಯ ಗುಡಿಸಲಲ್ಲಿ ರೊಟ್ಟಿ ಚಟ್ನಿ ತಿನ್ನುವುದು ಲೇಸಯ್ಯ ;
ಮಾನಹೀನರಾಗಿ ನೂರು ವರ್ಷ ಬದುಕುವುದಕ್ಕಿಂತ
ಮಾನಧನರಾಗಿ ಮೂರುದಿನ ಬದುಕುವುದು ಲೇಸಯ್ಯ ;
ಸ್ವತಂತ್ರಧೀರ ಸಿದ್ಧೇಶ್ವರಾ,
ಪರಾವಲಂಬಿಯಾಗಿ ರಿಣಗೂಳು ತಿನ್ನುವುದಕ್ಕಿಂತ
ಸ್ವಾವಲಂಬಿಯಾಗಿ ಕಂದಮೂಲ ತಿನ್ನುವುದು ಲೇಸಯ್ಯ !

೩೪೯

ಹೊರುವವರು ಗಟ್ಟಿ ಇದ್ದರೆ
ಹೇರುವವರಿಗಾವ ಕೊರತೆಯಯ್ಯಾ ?
ಮೋಸಗೊಳ್ಳುವವರು ಸಾಕಷ್ಟಿದ್ದರೆ
ಮೋಸಗೊಳಿಸುವವರಿಗಾವ ಕೊರತೆಯಯ್ಯಾ ?
ಸುಲಿಗೆಗೊಳ್ಳುವವರು ತುಂಬ ಇದ್ದರೆ
ಸುಲಿಗೆ ಮಾಡುವವರಿಗಾವ ಕೊರತೆಯಯ್ಯಾ ?
ಲಂಚ ಕೊಡುವವರು ಬಹಳವಾದರೆ
ಲಂಚ ಕೊಳ್ಳುವವರಿಗಾವ ಕೊರತೆಯಯ್ಯಾ ?
ಬೀದಿಯ ರತಿಯರು ಹೆಚ್ಚಿದರೆ
ಬೀದಿಯ ಕಾಮಣ್ಣರಿಗಾವ ಕೊರತೆಯಯ್ಯಾ ?
ಸ್ವತಂತ್ರಧೀರ ಸಿದ್ಧೇಶ್ವರಾ,
ಕಷ್ಟಕ್ಕೆ ಒದಗುವವರದೇ ಕೊರತೆ,
ಊಟಕ್ಕೆ ಒದಗುವವರಿಗಾವ ಕೊರತೆಯಯ್ಯಾ ?

೩೫೦

ಮುಖಂಡರೇ ಶಿಖಂಡಿಗಳಾದರೆ



ಹಿಂಬಾಲಕರು ಇನ್ನೇನಾಗಬೇಕಯ್ಯ ?
ಶ್ರೇಷ್ಠರೇ ಕನಿಷ್ಠರಾದರೆ
ಕನಿಷ್ಠರು ಮತ್ತೇನಾಗಬೇಕಯ್ಯ ?
ರಕ್ಷಕರೇ ಭಕ್ಷಕರಾದರೆ
ರಾಕ್ಷಸರು ಎಲ್ಲಿಗೆ ಮುಟ್ಟಬೇಕಯ್ಯ ?
ಶಿಕ್ಷಕರೇ ಸೆರೆಗುಡುಕರಾದರೆ
ವಿದ್ಯಾರ್ಥಿಗಳು ಇನ್ನೆಲ್ಲಿಗೆ ತಲುಪಬೇಕಯ್ಯ ?
ಸೂರ್ಯನ ಶಾಖವೇ ೬೮ ಡಿಗ್ರಿಗಳಿಗಿಳಿದರೆ
ಮಾನವನ ಶಾಖ ಎಲ್ಲಿಗಿಳಿಯಬೇಕಯ್ಯ ?
ಸ್ವತಂತ್ರಧೀರ ಸಿದ್ಧೇಶ್ವರಾ,
ನಿನ್ನ ಭಕ್ತರೇ ಭುಕ್ತಾರರಾದರೆ
ಭೋಗವಾದಿಗಳೆತ್ತ ಹೋಗಬೇಕಯ್ಯ ?

೩೫೧

ಅಧಿಕಾರದ ಅಂತಸ್ತು ಮೇಲೇರಿದಂತೆ
ನೈತಿಕ ಮಟ್ಟ ಮೇಲೇರದಿರುವುದೇ
ಮಾನವ ಕ್ಲೇಶಗಳ ಮೂಲಕಾರಣವಯ್ಯ ;
ಸುಖ ಸಮೃದ್ಧಿಗಳು ಬೆಳೆದಂತೆ
ಸತ್ಕೃತಿ ಸಂಸ್ಕೃತಿಗಳು ಬೆಳೆಯದಿರುವುದೇ
ಬಾಳಿನ ಬಳಲಿಕೆಯ ಮುಖ್ಯ ಆಕರವಯ್ಯ ;
ವಿದ್ಯಾ ಬುದ್ಧಿಗಳು ವೃದ್ಧಿಹೊಂದಿದ ಪ್ರಮಾಣದಲ್ಲಿ
ಹೃದಯವಿಶುದ್ಧಿ ವರ್ಧಿಸದಿರುವುದೇ
ನಾಗರಿಕತೆಯ ನಿಷ್ಫಲತೆಯ ಪ್ರಮುಖ ಕಾರಣವಯ್ಯ ;
ಕಲಿತ ವಿದ್ಯೆ, ದೊರೆತ ಕೆಲಸಗಳ
ನಡುವಣ ವಿರಸ ದಾಂಪತ್ಯವೇ
ಇರವಿನ ಉರುಟುತನಕ್ಕೆ ಸೆಲೆಯಾಗಿಹುದಯ್ಯ ;
ಶಾಸನಗಳು ಹೆಚ್ಚಿದಂತೆಲ್ಲ
ಪ್ರಶಾಸನಪ್ರಾವೀಣ್ಯ ಹೆಚ್ಚದಿರುವುದೇ

ಅಸ್ತವ್ಯಸ್ತತೆಗಳ ಉಗಮಸ್ಥಾನವಯ್ಯ ;
ನಾಯಕರ ಆಶ್ವಾಸನಗಳಲ್ಲಿ
ಜನರ ವಿಶ್ವಾಸವಿಲ್ಲವಾದುದೇ
ಜನತಂತ್ರದ ವಿಫಲತೆಯ ಉದ್ಗಮಸ್ಥಾನವಯ್ಯ ;
ಸ್ವತಂತ್ರಧೀರ ಸಿದ್ಧೇಶ್ವರಾ,
ಏನೇನನೋ ಯಾರಾರನೋ
ನಂಬಿ ಕೆಟ್ಟುದುದೆ
ಯಾರಲ್ಲಿಯೂ ಯಾತರಲ್ಲಿಯೂ
ನಂಬಿಕೆ ಉಳಿಯದುದಕ್ಕೆ ಕಾರಣವಾಗಿದೆಯಯ್ಯ !

೩೫೨

ಕಲ್ಲ ದೋಣಿಯಲ್ಲಿ ಕಡಲ ದಾಟಿದವರುಂಟೆ ಅಯ್ಯ ?
ಆಕಾಶದೀಪದಲ್ಲಿ ಅಂತರಿಕ್ಷಯಾತ್ರೆ ಮಾಡಿದವರುಂಟೆ ಅಯ್ಯ ?
ಎತ್ತಿನ ಬಂಡಿಯಲ್ಲಿ ದಕ್ಷಿಣೋತ್ತರ ಧ್ರುವಗಳ ಮುಟ್ಟಿದವರುಂಟೆ, ಅಯ್ಯ ?
ಇಂಚುಪಟ್ಟಿಯಿಂದ ಹಿಮಗಿರಿಯ ಉದ್ದಗಲ ಅಳೆದವರುಂಟೆ, ಅಯ್ಯ ?
ಒಡ್ಡಿ ಒಚ್ಚೆಗಳಿಂದ ನಕ್ಷತ್ರಗಳ ಲೆಕ್ಕ ಮಾಡಿದವರುಂಟೆ, ಅಯ್ಯ ?
ತಕ್ಕಡಿ ಹಿಡಿದು ತಿರೆಯ ತೂಗಿದವರುಂಟೆ, ಅಯ್ಯ ?
ತಾನೋದಿದ ಪುಸ್ತಕಗಳ ಆಧಾರದಿಂದ ಎಲ್ಲ ಭಾಷೆಗಳ
ಎಲ್ಲ ಪುಸ್ತಕಗಳ ಗಣಿಸಿದವರುಂಟೆ, ಅಯ್ಯ ?
ಸ್ವತಂತ್ರಧೀರ ಸಿದ್ಧೇಶ್ವರಾ,
ನೀಲಿನಕ್ಷೆಗಳ, ಆಶ್ವಾಸನಗಳ ಆಧಾರದಿಂದ
ಬಡವರ ಹಸಿವೆಯನ್ನು ಹಿಂಗಿಸಿದವರುಂಟೆ, ಅಯ್ಯ ?

೩೫೩

ಸತ್ತ ಸಿಂಹಕ್ಕಿಂತ
ಜೀವಂತ ನಾಯಿ ಲೇಸಯ್ಯ ;
ಹೊತ್ತಿಗೆ ಒದಗದ ಮುತ್ತಿನ ಸತ್ತಿಗೆಗಿಂತ
ಹೊತ್ತಿಗಾದ ಮುತ್ತಲ ಎಲೆ ಮೇಲಯ್ಯ ;
ತಿಳಿಯದ ತಾವಿನಲ್ಲಿ ಹೂಳಿದ ನಿಧಾನಕ್ಕಿಂತ



ಕೈಯೊಳಿರುವ ಗದ್ಯಾಣ ಹೆಚ್ಚಿನದಯ್ಯಾ,
ತಲೆಯಲ್ಲುಳಿದ ವೇದೋಪನಿಷತ್ತುಗಳಿಗಿಂತ
ಕೃತಿಯಲ್ಲಿಳಿದ ಗರತಿಯ ಹಾಡು ಹಿತಕರವಯ್ಯಾ ;
ಪೂಜಾಸಾಮಗ್ರಿಗಳಲ್ಲಿ ಉಳಿದ ಡಾಂಭಿಕ ಅರ್ಚನೆಗಿಂತ
ಮನದಲ್ಲಿ ಇಳಿದ ಮೌನ ಭಕ್ತಿ ಮೇಲಯ್ಯ ;
ಸ್ವತಂತ್ರಧೀರ ಸಿದ್ಧೇಶ್ವರಾ,
ಚುನಾವಣಾ ಘೋಷಣೆಗಳಲ್ಲಿ ಉಳಿದ ಆಶ್ವಾಸನಗಳಿಗಿಂತ
ನೆರೆಯವರು ನೀಡಿದ ಶಿವದಾನ ಶ್ರೇಷ್ಠವಯ್ಯಾ !

೩೫೪

ಒಲವೇ ಬೆಳಕು, ಒಲವರವೇ ಕತ್ತಲೆಯಯ್ಯ ;
ರಸಿಕತೆಯೇ ಹುಣ್ಣಿಮೆ, ಅರಸಿಕತೆಯೇ ಅಮಾವಾಸ್ಯೆಯಯ್ಯ ;
ಸುರುಚಿಯೇ ವರ, ಕುರುಚಿಯೇ ಅಭಿಶಾಪವಯ್ಯ ;
ಜನ ಹಿತವೇ ಪುಣ್ಯ, ಜನ ಶೋಷಣೆಯೇ ಪಾಪವಯ್ಯ ;
ಸಂಯಮವೇ ಶಕ್ತಿ, ಶೈಥಿಲ್ಯವೇ ದೌರ್ಬಲ್ಯವಯ್ಯ ;
ಪಾವಿತ್ರ್ಯವೇ ನಂದನ, ಮಾಲಿನ್ಯವೇ ಮಸಣವಯ್ಯ ;
ಮಾನವೀಯತೆಯೇ ಮಾರ್ಗ,ಅಮಾನುಷತೆಯೇ ದುರಿತದ ದುರ್ಗವಯ್ಯ ;
ಸ್ವತಂತ್ರಧೀರ ಸಿದ್ಧೇಶ್ವರಾ,
'ತಾನು ಎಲ್ಲರಿಗಾಗಿ' ಎನ್ನುವುದೇ ಧರ್ಮ,
'ಎಲ್ಲರೂ ತನಗಾಗಿ' ಎನ್ನುವುದೇ ಅಧರ್ಮವಯ್ಯ !

೩೫೫

ಕಂಬನಿಯ ಕಂಡು ಕರಗದ ಹೃದಯ
ಕಷ್ಟವ ಕಂಡು ಮರುಗದ ಮನ

ಹೆರದ ಹೆಣ್ಣು, ತಿನಬರದ ಹಣ್ಣು, ಹಸಿಯಿರದ ಮಣ್ಣುಗಳಯ್ಯಾ ;
ಸೇವೆಯಲ್ಲಿ ಸಾರ್ಥಕವಾಗದ ಪ್ರೇಮ,
ಕೃತಿಯಾಗಿ ಕಂಗೊಳಿಸದ ಆಶ್ವಾಸನ,
ನಡೆಯದ ನಾಣ್ಯ, ಕಾದದ ಸೈನ್ಯ,
ಆಡಿನ ಕೊರಳ ಸ್ತನ್ಯವಯ್ಯಾ !
ಬಾಳಿಗೆ ಬಲವಾಗದ, ಚೆಲುವಾಗದ ಜ್ಞಾನ,
ಮನುಕುಲಕ್ಕೆ ಮಂಗಲವಾಗದ ವಿಜ್ಞಾನ
ಹಯನಿಲ್ಲದ ಧೇನು, ಜಲವಿರಹಿತ ಮೀನು,
ಕಳ್ಳಿಗಿಟ್ಟ ಜೇನಯ್ಯಾ
ಸ್ವತಂತ್ರಧೀರ ಸಿದ್ಧೇಶ್ವರಾ !

೩೫೭

ಅರಮನೆಯಲ್ಲಿದ್ದೊಡೇನು, ಗುರುಮನೆಯಲ್ಲಿದ್ದೊಡೇನು,
ತಿಗಣೆ ತಿಗಣೆಯೇ ;
ಪ್ರೇತವನದಲ್ಲಿದ್ದರೇನು, ಪ್ರಮದವನದಲ್ಲಿದ್ದರೇನು,
ಜಿಗಣೆ ಜಿಗಣೆಯೇ ;
ಕಾಶಿಯಲ್ಲಿದ್ದರೇನು, ರಾಮೇಶ್ವರದಲ್ಲಿದ್ದರೇನು,
ಕಾಗೆ ಕಾಗೆಯೇ ;
ಹಳ್ಳಿಯಲ್ಲಿದ್ದರೇನು, ಡಿಳ್ಳಿಯಲ್ಲಿದ್ದರೇನು,
ಗೂಗೆ ಗೂಗೆಯೇ ;
ಮಂದಿರದಲ್ಲಿದ್ದರೇನು, ಮಸೀದಿಯಲ್ಲಿದ್ದರೇನು,
ಮೂಷಕ ಮೂಷಕವೇ ;
ಪಂಡಿತರಲ್ಲಿದ್ದರೇನು, ಪಾಮರರಲ್ಲಿದ್ದರೇನು,
ದೂಷಕ ದೂಷಕನೇ ;
ತಂತ್ರಿಯಾದೊಡೇನು, ಮಂತ್ರಿಯಾದೊಡೇನು,
ಕೆಡುಕ ಕೆಡುಕನೇ ;
ಸ್ವಾಮ್ಯವಾದಿಯಾದರೇನು, ಸಾಮ್ಯವಾದಿಯಾದರೇನು ;
ಕುಡುಕ ಕುಡುಕನೇ ;
ಸಂಸಾರಿಯಾದರೇನು, ಸಂನ್ಯಾಸಿಯಾದರೇನು,



ಕಾಮುಕ ಕಾಮುಕನೇ ;
ಕರಿಯನಾದರೇನು, ಬಿಳಿಯನಾದರೇನು,
ಸಾಧಕ ಸಾಧಕನೇ ;
ಯಾರು ರಾಜನಾದರೇನು, ಯಾರು ರಾಣಿಯಾದರೇನು
ಕೃಷಿಕ ಕೃಷಿಕನೇ ;
ಯಾವ ವ್ಯವಸ್ಥೆ ಬಂದರೇನು, ಯಾವುದು ಹೋದರೇನು,
ಕಾರ್ಮಿಕ ಕಾರ್ಮಿಕನೇ ;
ಸ್ವತಂತ್ರಧೀರ ಸಿದ್ಧೇಶ್ವರಾ,
ಪುಢಾರಿಯಾದರೇನು, ಪಂಡಾ ಆದರೇನು, ಪೆಂಢಾರಿಯಾದರೇನು,
ಶೋಷಕ ಶೋಷಕನೇ !

೩೫೮

ಮಹಿಮೆ ಮಹಿಮೆಗೆ ಮಣಿದರೆ ಅಲ್ಪತೆ ಅಲ್ಪತೆಗೆ ಒಲಿವುದಯ್ಯ ;
ಗಿಳಿ ಮಾವಿಗೆ ಒಲಿದರೆ ಕಾಗೆ ಬೇವಿಗೆ ಒಲಿವುದಯ್ಯ ;
ಅಳಿ ಸುವಾಸನೆಗೆ ಒಲಿದರೆ ನೊಣ ಹೇಸಿಗೆಗೆ ಒಲಿವುದಯ್ಯ ;
ಸಾಧ್ವಿ ಸತೀತ್ವಕ್ಕೆ ಒಲಿದರೆ ಪತಿತೆ ವೇಶ್ಯಾವೃತ್ತಿಗೆ ಒಲಿವಳಯ್ಯ ;
ಪ್ರತಿಭೆ ನವ ನಿರ್ಮಾಣಕ್ಕೆ ಒಲಿದರೆ ಈರ್ಷ್ಯೆ ಚಾರಿತ್ರ್ಯವಧೆಗೆ
ಒಲಿವುದಯ್ಯ ;
ಒಲವು ಸೋತು ಗೆಲ್ಲಲು ಬಯಸಿದರೆ
ಬಲವು ಗೆದ್ದು ಸೋಲಲು ಹಂಬಲಿಸುವುದಯ್ಯ ;
ಆಪು ಆಳಿಸಿ ಆಳಲು ಆಶಿಸಿದರೆ
ಕೂಪು ನಗಿಸಿ ಅಳಿಯಲೂ ಹಿಂದೆಗೆಯದಯ್ಯ ;
ಕುಜನ ಕೆಡಿಸಿ ಸುಲಿದು ಸುಖಿಸಿದರೆ
ಸುಜನ ಕಟ್ಟಿ, ಕೊಟ್ಟು ನಂದಿಸುವನಯ್ಯ ;
ಸ್ವತಂತ್ರಧೀರ ಸಿದ್ಧೇಶ್ವರಾ
ಮಾನವತೆ ಹಂಚಿ ಉಣ್ಣಲು ಹವಣಿಸಿದರೆ
ದಾನವತೆ ಹರಿದು ತಿನ್ನಲು ಹಾತೊರೆವುದಯ್ಯಾ !

೩೫೯

ಅನ್ಯಾಯವು ಸಿಂಹಾಸನವೇರಿರುವಲ್ಲಿ
ನ್ಯಾಯದ ಮಾತನ್ನಾಡುವವನೇ ನಾಯಿ ಕಂಡಯ್ಯ !
ಅಜ್ಞಾನವು ಆಡಳಿತ ನಡೆಸುತ್ತಿರುವಲ್ಲಿ
ಜ್ಞಾನದ ಸುದ್ಧಿ ಎತ್ತುವವನೇ ಪೆದ್ದ ಕಂಡಯ್ಯ !
ಅನಾಚಾರದ ಅರಸೊತ್ತಿಗೆಯಿರುವಲ್ಲಿ
ಸದಾಚಾರದ ಬಗ್ಗೆ ಪ್ರಸ್ತಾಪಿಸುವವನೇ ಮೊದ್ದ ಕಂಡಯ್ಯ !
ನಗ್ನತೆಯೇ ನಾಗರಿಕತೆಯಾಗಿರುವಲ್ಲಿ
ಬಟ್ಟೆಯ ಬಗ್ಗೆ ನುಡಿವವನೇ ಮಡ್ಡ ಕಂಡಯ್ಯ !
ಸ್ವತಂತ್ರಧೀರ ಸಿದ್ಧೇಶ್ವರಾ, ಶೋಷಣೆಯೇ ಶಾಸ್ತ್ರವಾಗಿರುವಲ್ಲಿ
ಶೋಷಿತರ ಪಕ್ಷ ವಹಿಸುವವನೇ ಹಸಿ ದಡ್ಡ ಕಂಡಯ್ಯ !

೩೫೯

ಗುಡ್ಡದಷ್ಟು ಪುಸ್ತಕಗಳನ್ನು ಓದಿ
ಕಡ್ಡಿಯಷ್ಟೂ ಕೆಲಸ ಮಾಡದಿದ್ದರೆ
ಪುಸ್ತಕದ ಕಪಾಟಿಗಿಂತ ಕಡೆಯಲ್ಲವೆ ಅವನು ?
ಊರಿಗೊಂದು ವಾಗ್ದಾನ ಮಾಡಿ
ನೂರಕ್ಕೊಂದನ್ನೂ ನೆರವೇರಿಸದಿದ್ದರೆ
ಡಂಗುರ ಹೊಡೆವನಿಗಿಂತ ಕಡೆಯಲ್ಲವೆ ಅವನು ?
ಭದ್ರವಾದುದನ್ನೆಲ್ಲ ಛಿದ್ರಿಸುತ್ತ
ಗಟ್ಟಿ ಯಾವುದನ್ನೂ ಮಾಡದಿರೆ
ಮೂಷಕನಿಗಿಂತ ಕಡೆಯಲ್ಲವೆ ಅವನು ?
ದೋಷಗಳನ್ನು ಮಾತ್ರ ದೊಡ್ಡವಾಗಿಸಿ ತೋರಿ
ಲೇಸುಗಳ ಲವಲೇಶವನ್ನೂ ಮನ್ನಿಸದಿರೆ
ದೂಷಕನಿಗಿಂತ ಕಡೆಯಲ್ಲವೆ ಅವನು ?
ಅಂತರರ್ರಾಷ್ಟ್ರಾಯ ವೇದಿಕೆಗಳಿಂದ
ವಿಶ್ವಬಂಧುತ್ವವನ್ನು ಉಪದೇಶಿಸಿ
ಮನೆಯ ಜನರಲ್ಲಿಯೇ ಜಗಳ ಹುಟ್ಟಿಸಿದರೆ
ಠಕ್ಕರಿಗಿಂತ ಕಡೆಯಲ್ಲವೆ ಅವನು ?
ವಿಜ್ಞಾನಿಯೆಂದು ಜಂಬ ಕೊಚ್ಚಿಕೊಂಡು



ಬೆಕ್ಕು ಅಡ್ಡ ಹಾಯುತ್ತಲೆ ಗಕ್ಕನೆ ನಿಂತರೆ
ಮಡ್ಡರಿಗಿಂತ ಕಡೆಯಲ್ಲವೆ ಅವನು ?
ಸ್ವತಂತ್ರಧೀರ ಸಿದ್ಧೇಶ್ವರಾ,
ಬಡವರ ಪ್ರತಿನಿಧಿಯೆಂದು ಬಡಾಯಿ ಕೊಚ್ಚುತ್ತ
ಸಿರಿವಂತರೇ ನಾಚುವಂತೆ ಮೆರೆದರೆ
ಕಳ್ಳರಿಗಿಂತ ಕಡೆಯಲ್ಲವೆ ಅವನು ?

೩೬೦

ಅದಮ್‌–ಈವ್ದರಿಗೆ ಅದಾವ ಕೊರತೆಯಿದ್ದಿತಯ್ಯ ಸ್ವರ್ಗದಲ್ಲಿ
ನಿಷಿದ್ಧ ಫಲದಿಂದ ಪ್ರಲೋಭಿತರಾಗಲು ?
ರಾವಣನ ರಾಣೀವಾಸದಲ್ಲಿ ಅದೆಂಥ ರೂಪರಾಶಿ ಇರಲಿಲ್ಲವಯ್ಯ
ಸೀತೆಗೆ ಮನಸೋತು ಸಾವನ್ನಪ್ಪಲು ?
ಕೌರವನ ಬೊಕ್ಕಸದಲ್ಲಿ ಅದಾವ ಚಿನ್ನರನ್ನಗಳಿರಲಿಲ್ಲವಯ್ಯ
ಪಾಂಡವರ ರಾಜಸೂಯವನ್ನು ಕರುಬಲು ?
ಚೀಣದ ಹೂಣರಿಗೆ ಅದೆಲ್ಲಿ ನೆಲದ ಕೊರತೆಯಿದ್ದಿತಯ್ಯ
ಸ್ನೇಹಪರ ಭಾರತದ ಗಡಿಗಳಲ್ಲಿ ನುಗ್ಗಲು ?
ಹಣ್ಣು ಹೆಣ್ಣು ಹೊನ್ನು ಮಣ್ಣುಗಳು ನಿಮಿತ್ತ ಮಾತ್ರ !
ಅವುಗಳ ಹೀಯಾಳಿಸಲೇಕಯ್ಯ ?
ಮಾನವನ ಮನದ ಹೀನತನಕ್ಕೆ, ಶ್ವಾನತನಕ್ಕೆ,
ಸೂಕರತನಕ್ಕೆ ತಡೆ ಹಾಕುವುದ ಕಲಿ, ಕಲಿಸು
ಸ್ವತಂತ್ರಧೀರ ಸಿದ್ಧೇಶ್ವರ ಸಾಕ್ಷಿಯಾಗಿ !

೩೬೧

ಕದ್ದು ಹೂಗಳ ತಂದು ಪೂಜಿಸುವರು ಕೆಲವರು ನಿನ್ನನ್ನು ;
ಕದ್ದು ಕಾಸುಗಳ ತಂದು ಕರ್ಪೂರ ಉರಿಸುವರು
ಹಲವರು ನಿನ್ನ ಮುಂದೆ ;
ಲಂಚದ ಹಣದಿಂದ ಪಂಚಾಮೃತವ ತರುವರಾರೋ,
ಕಾಳಸಂತೆಯ ಹಣದಿಂದ ಪಲ್ಲಕ್ಕಿ ಕೊಡಿಸುವರಾರೋ,
ಖೊಟ್ಟಿ ಪರ್ಮಿಟ್ಟಿನ ಹಣದಿಂದ ಗೋಪುರ ಕಟ್ಟಿಸುವವರಾರೋ,

ಕಂಟ್ರೋಲಿನ ಕಾಂಚಾಣದಿಂದ ಕಳಸವಿಡಿಸುವರಾರೋ,
ಕಲಬೆರಕೆಯ ಸಂಪಾದನೆಯಿಂದ ಪ್ರಸಾದ ಹಂಚುವರಾರೋ,
ಮೋಸದ ಧನದಿಂದ ಧರ್ಮಶಾಲೆ ಕಟ್ಟಿಸುವವರಾರೋ
ಈ ಕದ್ದುಣ್ಣುವ ಕದೀಮರ ಕಳ್ಳ ಭಕ್ತಿಯ ಕಂಡು
ಕದ್ದು ನಗುತ್ತಿರುವಿಯೇನಯ್ಯಾ ?
ನಕ್ಕರೆ ಸಾಲದು, ಇಕ್ಕಯ್ಯಾ ಅವರನ್ನು ಇಕ್ಕುಳದೊಳಗೆ,
ಸ್ವತಂತ್ರಧೀರ ಸಿದ್ಧೇಶ್ವರಾ !

೩೬೨

ಹಸಿರಿಲ್ಲದಲ್ಲಿ ಹಸಿರು ಹುಟ್ಟಿಸುವುದು ಮಾನವ ಗುಣ,
ಹಸಿರಿದ್ದಲ್ಲಿ ಮೆದ್ದು ಮಲಗುವುದು ಪಶುಗುಣವಯ್ಯ ;
ಕೆಟ್ಟುದ ಸರಿಪಡಿಸುವುದು ಮಾನವ ಗುಣ,
ಸರಿಯಿದ್ದುದನ್ನೂ ಕೆಡಿಸುವುದು ದಾನವ ಗುಣವಯ್ಯ ;
ಕಸದಲ್ಲಿಯೇ ರಸ ಹುಟ್ಟಿಸುವುದು ಮಾನವ ಗುಣ,
ರಸವನ್ನೂ ವಿಷವನ್ನಾಗಿಸುವುದು ಅಸುರೀ ಗುಣವಯ್ಯ ;
ಅರಿಯದವರನ್ನೂ ಆದರಿಸುವುದು ಮಾನವ ಗುಣ,
ಅರಿತವರನ್ನೂ ಅನಾದರಿಸುವುದು ಅಮಾನುಷ ಗುಣವಯ್ಯ;
ಉಪಕಾರಕ್ಕೆ ಪ್ರತ್ಯುಪಕಾರ ಮಾಡುವುದು ಮಾನವ ಗುಣ,
ಉಪಕಾರಿಗೇ ಅಪಕಾರವೆಸಗುವುದು ಪಿಶಾಚಿ ಗುಣವಯ್ಯ ;
ಮಲಗಿದ್ದರೆ ಕುಳಿತು, ಕುಳಿತಿದ್ದರೆ ಎದ್ದು ನಿಂತು
ಬಂದವರಿಗೆ ಸ್ಥಳ ನೀಡುವುದು ಮಾನವ ಗುಣ,
ಇನ್ನೊಬ್ಬರ ಸ್ಥಳವನ್ನೂ ಆಕ್ರಮಿಸಿ
ಕಾಲು ಚಾಚಿ ಮಲಗುವುದು ನಿಶಾಚರ ಗುಣವಯ್ಯ ;
ಸ್ವತಂತ್ರಧೀರ ಸಿದ್ಧೇಶ್ವರಾ,
ದುಃಖಿತರ ಕಂಬನಿ ತೊಡೆವುದು ಮಾನವ ಗುಣ,
ಸುಖಿಗಳಿಗೂ ಕಂಬನಿ ಬರಿಸುವುದು ರಾಕ್ಷಸ ಗುಣವಯ್ಯ !



೩೬೩

ಕಡೆದರೆ ಬೆಣ್ಣೆ, ಕಟೆದರೆ ಮೂರ್ತಿ,
ಒಕ್ಕಿದರೆ ಕಾಳು, ಹಿಕ್ಕಿದರೆ ಕೇಶಗಳಯ್ಯ ;
ಅಟ್ಟರೆ ಅಡುಗೆ, ಸುಟ್ಟರೆ ಭಸ್ಮ,
ನೆಟ್ಟರೆ ಸಸಿ, ಇಟ್ಟರೆ ಒಡವೆಗಳಯ್ಯ ;
ಉರಿದರೆ ದೀಪ, ಉರಿಸಿದರೆ ಧೂಪ,
ತೆಯ್ದರೆ ಗಂಧ, ನೆಯ್ದರೆ ವಸ್ತ್ರವಯ್ಯ ;
ಸ್ವತಂತ್ರಧೀರ ಸಿದ್ಧೇಶ್ವರಾ,
ತಾಳಿದರೆ ಬಾಳು, ದುಡಿದರೆ ಪಾಲು,
ಕೀಳೊಪ್ಪೆ ಮೇಲು, ಕೊಡದಿಹುದೆ ಹಾಳು ಕಂಡಯ್ಯ

೩೬೪

ಒಳಿತನ್ನು ಮಾಡಿದವರಿಗೆ ಒಳಿತನ್ನು ಮಾಡುವವ ಮಾನವ,
ಒಳಿತನ್ನು ಮಾಡದವರಿಗೂ ಒಳಿತನ್ನು ಮಾಡುವವ ಮಹಾಮಾನವ,
ಕೆಡುಕನ್ನು ಮಾಡಿದವರಿಗೂ ಒಳಿತನ್ನು ಮಾಡುವವ
ದೇವ ಮಾನವ ನೋಡಯ್ಯಾ !
ಕೆಡುಕನ್ನು ಮಾಡಿದವರಿಗೆ ಕೆಡುಕನ್ನು ಮಾಡುವವ ನರ,
ಕೆಡುಕನ್ನು ಮಾಡದವರಿಗೂ ಕೆಡುಕನ್ನು ಮಾಡುವವ ಅಸುರ,
ಒಳಿತನ್ನು ಮಾಡಿದವರಿಗೂ ಕೆಡುಕನ್ನು ಮಾಡುವವ
ನಿಶಾಚರ ನೋಡಯ್ಯಾ !
ಪ್ರೀತಿಸಿದವರನ್ನು ಪ್ರೀತಿಸುವವ ಮಾನವ,
ಪ್ರೀತಿಸದವರನ್ನೂ ಪ್ರೀತಿಸುವವ ಮಹಾಮಾನವ,
ದ್ವೇಷಿಸುವವರನ್ನೂ ಪ್ರೀತಿಸುವವ ದೇವ ಮಾನವ ನೋಡಯ್ಯಾ !
ಸ್ವತಂತ್ರಧೀರ ಸಿದ್ಧೇಶ್ವರಾ,
ನೀನು ಸುಖವಿತ್ತಾಗ ನಿನ್ನನ್ನು ಸ್ಮರಿಸುವವ ನರ,
ನೀನು ಸುಖವಿತ್ತಾಗಲೂ ಸ್ಮರಿಸದವ ಅಸುರ,
ನೀನು ಎಲ್ಲ ಇತ್ತಾಗಲೂ ನಿಂದಿಸುವವ ನಿಶಾಚರ ನೋಡಯ್ಯಾ !

೩೬೫

ಹಾವಿಗೂ ದೇವತ್ವವನ್ನಿತ್ತ ಭಾವುಕತೆಯೊಂದೆಡೆಗೆ,
ಮಾನವನಿಗೂ ವಿಕಾರಗಳ ವಿಷ ಉಣ್ಣಿಸುತ್ತಿರುವ ಸಭ್ಯತೆಯಿನ್ನೊಂದೆಡೆಗೆ !
ಗೋವಿನ ಕಥೆ ಪಾವನ ಚರಿತೆಯಾದುದೊಂದೆಡೆಗೆ,
ಮನುಕುಲದ ಕಥೆಯೇ ಕೀಳ್ಮೆಯ ಸರಿತೆಯಾದುದು
ಇನ್ನೊಂದೆಡೆಗೆ !
'ಪಾಪಿಗಳ ಒಡಲೊಳಿಹ ಪರಮಾತ್ಮ'ನನ್ನು ಕಂಡುದು ಒಂದೆಡೆಗೆ,
ಪುಣ್ಯಾತ್ಮರ ಒಡಲಿನಲ್ಲಿಯೂ ಪಾಪವನ್ನೇ ಹುಡುಕುತ್ತಿಹುದು
ಇನ್ನೊಂದೆಡೆಗೆ !
ಕಟುಕನ ಮನೆಯೂ ಧರ್ಮಧಾಮವಾದುದೊಂದೆಡೆಗೆ,
ಮಠ ಮಂದಿರಗಳೂ ಅನೀತಿಯ ಆಗರಗಳಾದುದು
ಬೇರೊಂದೆಡೆಗೆ !
ಸಾಮಾನ್ಯರಲ್ಲಿಯೂ ನಿರ್ಮಾಲ್ಯ ನರ್ತಿಸುತ್ತಿರುವುದೊಂದೆಡೆಗೆ,
ಅಸಾಮಾನ್ಯರಲ್ಲಿಯೂ ಮಾಲಿನ್ಯ ತಾಂಡವವಾಡುತ್ತಿಹುದು
ಇನ್ನೊಂದೆಡೆಗೆ !
ಸ್ವತಂತ್ರಧೀರ ಸಿದ್ಧೇಶ್ವರಾ,
ನಿನ್ನ ಹೆಸರು ಸಹ ಎತ್ತದೆ
ನನ್ನಿ ನಲ್ಮೆ ನ್ಯಾಯಗಳಿಗಾಗಿ
ಬದುಕುವವರೊಂದೆಡೆಗೆ
ನಿನ್ನ ಹೆಸರಿನಲ್ಲಿಯೇ
ಹುಸಿ, ಸುಲಿಗೆ ಅನ್ಯಾಯಗಳ
ಆಚರಿಸುವವರಿನ್ನೊಂದೆಡೆಗೆ

೩೬೬

ಕರವೀರ, ಮುತ್ತಲ, ಬೂರುಗ, ಬೂಗನ್‌ವಿಲಿಯ
ಗಾಢ ವರ್ಣದ ಹೂಗಳಲ್ಲಿ ಗಂಧ ವಿರಳವಯ್ಯ ;
ಗಂಧವಿರುವ ಹೂಗಳಲ್ಲಿ ಫಲಿಸುವ ಹೂ ವಿರಳವಯ್ಯ ;
ಫಲಿಸಿದಾಕ್ಷಣ ಫಲಿಸಿದುದೆಲ್ಲ ಸಿಹಿಯಿರದಯ್ಯ ;
ಸಿಹಿಯಾಗಿದ್ದುದೆಲ್ಲ ಹಿತಕರವೆಂದು ಹೇಳಲಾಗದಯ್ಯ ;
ಹಿತಕರವಾದುದೆಲ್ಲ ಪ್ರಿಯಕರವಲ್ಲ,
ಪ್ರಿಯಕರವಾದುದೆಲ್ಲ ಆರೋಗ್ಯಕರವಾದುದೇನಲ್ಲವಯ್ಯ !



ಅಂತೆಯೇ, ಹುಟ್ಟಿದವರೆಲ್ಲ ಕೆಟ್ಟವರಲ್ಲ,
ಒಪ್ಪವಾಗಿ ಕಾಣುವರೆಲ್ಲ ಒಳ್ಳೆಯವರಲ್ಲ !
ನಿನ್ನ ಭಜಿಸುತ್ತ ಕುಣಿವವರಲ್ಲಿ ಕುಜನರಿರಬಹುದು,
ನಾಸ್ತಿಕರಲ್ಲಿಯೂ ನಿಜಮಾನವರಿರಬಹುದಯ್ಯ
ಸ್ವತಂತ್ರಧೀರ ಸಿದ್ಧೇಶ್ವರಾ !

೩೬೭

ಮತ್ತೇರಿಸುವ ಮದವೂ ಮದ್ಯ,
ಸುಲಿಗೆಯ ಸಿಹಿ ತಿಂಡಿಯೂ ಮಾಂಸ,
ನುಡಿದಂತೆ ನಡೆಯದಿಹುದೇ ವ್ಯಭಿಚಾರವಯ್ಯಾ !
ಆಲಸ್ಯವೂ ಅಫೀಮು, ಅವಜ್ಞೆಯೂ ಹಷಿಷು,
ಅಲಕ್ಷ್ಯ ಅಸಹನೆಗಳೇ ಭಂಗ್ ಗಾಂಜಾಗಳಯ್ಯಾ !
ದುಡಿಯದೆ ಪಡೆಯುವುದೂ ತುಡುಗು,
ನಂಬದೆ ನುಡಿಯುವುದೂ ಸುಳ್ಳು,
ಪಾಪವನ್ನು ತಡೆಯದಿಹುದೂ ಪಾಪವಯ್ಯಾ !
ತೇಜೋವಧೆಯೂ ವಧೆ, ಅನರ್ಹ ಸ್ತುತಿಯೂ ನಿಂದೆ,
ಜುಲುಮೆಯ ಅಹಿಂಸೆಯೂ ಹಿಂಸೆಯಯ್ಯಾ !
ರೋಷವೂ ಬೆಂಕಿ, ದ್ವೇಷವೂ ವಿಷ,
ಮೋಸವೂ ಅಮಾನುಷತೆಯಯ್ಯಾ !
ಸ್ವತಂತ್ರಧೀರ ಸಿದ್ಧೇಶ್ವರಾ,
ಆಶೆಯೂ ಪಾಶ, ನಿರಾಶೆಯೂ ನಾಸ್ತಿಕತೆಯಯ್ಯಾ !

೩೬೮

ಬೇಲಿ ಮುಳ್ಳಿನ ಆಶ್ರಯವನ್ನಿತ್ತರೂ
ಬಳ್ಳಿ ಪುಷ್ಪದ ಪುರಸ್ಕಾರವನ್ನೀಯುವಂತೆ,
ತುಳಿದ ಕಾಲಿಗೇ ಹುಲ್ಲು ಇಬ್ಬನಿಯ ತಂಪ ತಳೆವಂತೆ,
ಕಡಿದ ಕೊಡಲಿಗೇ ಗಂಧದ ಮರ ನರುಗಂಪ ಬಳಿವಂತೆ
ಕೆಡುಕಿಗೆ ಪ್ರತಿಯಾಗಿ ಒಳಿತನೇ ನೀಡುವರಯ್ಯ – ನಿನ್ನ ಶರಣರು !
ಹಾಲೆರೆದ ಕೈಗೇ ಹಾವು ವಿಷವನೂಡುವಂತೆ,
ನೀರೆರೆದ ಕೈಗೇ ಕಂಟ ಮುಳ್ಳ ನೀಡುವಂತೆ,

ಮೈತೊಳೆದ ನೀರಿಗೇ ಹಿತ್ತಾಳೆ ಕಿಲುಬು ಕೊಡುವಂತೆ
ಒಳಿತಿಗೆ ಪ್ರತಿಯಾಗಿ ಕೆಡುಕನೆ ಈವರಯ್ಯ
ದುಷ್ಟರು, ದುರ್ಜನರು !
ಕೆಡುವ ಕಾಯದೊಳಿದ್ದೂ ಕೆಡುಕ ಸಾಧಿಸುವವರು
ಒಡೆದ ಮಡಕೆಯ ನೆಮ್ಮಿ ಕಡಗುವ ಜಡದಂತೆ
ಜಡರಯ್ಯ ಸ್ವತಂತ್ರಧೀರ ಸಿದ್ಧೇಶ್ವರಾ !

೩೬೯

ಅಕ್ಷರಗಳಿಗೆ ಅರ್ಥ ಬರುವುದು
ಅವು ವಸ್ತುವೊಂದಕ್ಕೆ ಅನ್ವಯಿಸಿದಾಗ ;
ಸೊನ್ನೆಗಳಿಗೆ ಬೆಲೆ ಬರುವುದು
ಅವು ಅಂಕಿಯೊಂದನ್ನು ಆಶ್ರಯಿಸಿದಾಗ ;
ರೇಖೆಗಳಿಗೆ ರೂಪ ಬರುವುದು
ಅವು ಆಕೃತಿಯೊಂದನ್ನು ರೂಪಿಸಿದಾಗ ;
ಸಂಜ್ಞೆಗಳಿಗೆ ಸಾರ್ಥಕ್ಯ ಬರುವುದು
ಅವು ಸೂತ್ರವೊಂದಕ್ಕೆ ಸಂಬಂಧಿಸಿದಾಗ ;
ಬೆಳಕಿನ ಕಿರಣಗಳಿಗೆ ಬೆಳಕು ಬರುವುದು
ಅವು ಭೌತವಸ್ತುವೊಂದಕ್ಕೆ ತಾಗಿದಾಗ ;
ಸ್ವತಂತ್ರಧೀರ ಸಿದ್ಧೇಶ್ವರಾ,
ಜೀವಿಗೆ ಗೌರವ ಬರುವುದು
ಒಳಿತಿಗೆ ಅಂಟಿ, ಒಳಿತಿಗಾಗಿ ಬದುಕಿದಾಗ.

೩೭೦

ಸಂಶಯ ಸಮುದ್ರದಲ್ಲಿ ಮುಳುಗಿ
ಶ್ರದ್ಧೆಯ ಸುಪ್ಪಾಣಿಯ ಮುತ್ತನ್ನು
ಅರಸಿ ತಂದವರುಂಟು ;



ನಂಬಿಕೆಯ ಅಂಬುಧಿಯಲ್ಲಿ ಮುಳುಗಿಯೂ
ಸಂಶಯದ ಒಡಕು ಸಿಂಪನ್ನು
ಬಳಿದು ತಂದವರೂ ಉಂಟಯ್ಯ ;
ಅತೃಪ್ತಿಯ ಆಳಕ್ಕಿಳಿದು
ತೃಪ್ತಿಯ ತವನಿಧಿಯನ್ನು
ಪಡೆದು ತಂದವರುಂಟು ;
ತೃಪ್ತಿಯ ಗಣಿಯನ್ನೇ ಅಗಿದು
ಅತೃಪ್ತಿಯ ಒಣ ಮಣ್ಣನ್ನೇ
ತುಂಬಿ ತಂದವರೂ ಉಂಟಯ್ಯ ;
ಸದ್ದುಗದ್ದಲಗಳ ಸಂತೆಯಲ್ಲಿಯೇ ಕದಡಿದರೂ ಕಲಕದ ಶಾಂತಿಯನ್ನು
ಸಂಪಾದಿಸಿದವರೂ ಉಂಟು ;
ಪ್ರಶಾಂತಿನಿಲಯದಲ್ಲಿದ್ದೂ ಅಶಾಂತಿಯ ಅಪ್ಪಳಿಕೆಗಳಿಗೆ
ಗುರಿಯಾದವರೂ ಉಂಟಯ್ಯ ;
ಸ್ವತಂತ್ರಧೀರ ಸಿದ್ಧೇಶ್ವರಾ,
ನಿನಗೆ ಶ್ರೀಗಂಧ ಕಸ್ತೂರಿಗಳ ಹೂಸಿ
ಲೇಸುಗಾಣದೇ ಗಾಸಿಯಾಗಿ ಹೋದವರುಂಟು ;
ಪಲ, ಎಂಜಲು ಫಲಗಳನ್ನರ್ಪಿಸಿ
ಸದ್ಗತಿಯ ಸಾಧಿಸಿದವರೂ ಉಂಟಯ್ಯ !

೩೭೧

ಅಜೀರ್ಣಕ್ಕೆ ಕಾರಣ
ಅಂಬಲಿಯಾದರೇನು, ಅಮೃತವಾದರೇನು
ಫಲಿತಾಂಶ ಒಂದೇ ಅಯ್ಯ ;
ವಿವಾಹದ ವಿಫಲತೆಗೆ ಕಾರಣ
ಗಂಡನಾದರೇನು, ಹೆಂಡತಿಯಾದರೇನು
ಪರಿಣಾಮ ಒಂದೇ ಅಯ್ಯ ;
ಜೀವನದಲ್ಲಿ ಜಿಗುಪ್ಸೆಗೆ ಕಾರಣ
ಬಡತನವಾದರೇನು, ಒಡೆತನವಾದರೇನು
ಫಲಶ್ರುತಿ ಒಂದೇ ಅಯ್ಯ ;
ಕಲಹ ಕೋಲಾಹಲಕ್ಕೆ ಕಾರಣ
ಮನಸ್ತಾಪವಾದರೇನು, ಪ್ರೇಮ ಸಂಶಯವಾದರೇನು

ಪಡೆಯುವ ಫಲ ಒಂದೇ ಅಯ್ಯ ;
ಸಚಿವ ಸಂಪುಟದ ಪತನಕ್ಕೆ ಕಾರಣ
ಸಚಿವರಾದರೇನು, ಶಾಸನಕಾರರಾದರೇನು
ಪತನ ಮಾತ್ರ ಒಂದೇ ಅಯ್ಯ ;
ಸ್ವತಂತ್ರಧೀರ ಸಿದ್ಧೇಶ್ವರಾ, ನರನ ಪಶುತನಕ್ಕೆ ಕಾರಣ
ಧರ್ಮಾಂಧತೆಯಾದೊಡೇನು, ದೇಶಾಂಧತೆಯಾದೊಡೇನು,
ಭಾಷಾಂಧತೆಯಾದೊಡೇನು, ವರ್ಣಾಂಧತೆಯಾದೊಡೇನು,
ಪಶುತನ ಒಂದೇ ಅಯ್ಯ !

೩೭೨

ಸೋಲನ್ನೇ ಗೆಲವನ್ನಾಗಿ ಮಾರ್ಪಡಿಸಿಕೊಂಡರು ಕೆಲವರು,
ಗೆಲವನ್ನೂ ಸೋಲನ್ನಾಗಿ ಪರಿವರ್ತಿಸಿಕೊಂಡರಯ್ಯ ಹಲವರು ;
ದುಃಖವನ್ನು ಸುಖವನ್ನಾಗಿ ಬದಲಿಸಿಕೊಂಡರು ಕೆಲವರು,
ಸುಖವನ್ನೇ ದುಃಖಕ್ಕೆ ತಿರುಗಿಸಿಕೊಂಡರಯ್ಯ ಹಲವರು ;
ಹಿಂಸೆಯನ್ನು ಅಹಿಂಸೆಗೆ ತಿರಿಚಿದರು ಕೆಲವರು,
ಅಹಿಂಸೆಯನ್ನೂ ಹಿಂಸೆಗೆ ರೂಪಾಂತರಿಸಿದರಯ್ಯ ಹಲವರು ;
ಕತ್ತಲೆಯನ್ನು ಬೆಳಕಿನಿಂದ ಬೆಳಗಿಸಿದರು ಕೆಲವರು,
ಕತ್ತಲೆಯಾಗಿ ಬೆಳಕನ್ನೂ ಕಬಳಿಸಿದರಯ್ಯ ಹಲವರು ;
ಸ್ವತಂತ್ರಧೀರ ಸಿದ್ಧೇಶ್ವರಾ,
ಮಾನವನನ್ನು ದೇವಮಾನವನನ್ನಾಗಿ ಮಾರ್ಪಡಿಸಿದರು ಹಲವರು,
ಮಾನವನನ್ನೂ ಅಮಾನವನನ್ನಾಗಿ ಮಾಡಿದರಯ್ಯ ಕೆಲವರು !

೩೭೩

ಮಹಾನಗರದಲ್ಲಿ ನೋಡಲು ಸಿಕ್ಕದುದು
ಹಾಳುಹಳ್ಳಿಯೊಂದರಲ್ಲಿ ಸಿಕ್ಕಬಹುದಯ್ಯಾ ;
ಸಮುದ್ರದಲ್ಲಿ ಸಿಕ್ಕದ ಸ್ವಾದಿಷ್ಟತೆ
ಒರತೆಯ ನೀರಿನಲ್ಲಿ ಸಿಕ್ಕುವುದಯ್ಯಾ ;
ಶಂಖದಲ್ಲಿ ಸಿಕ್ಕದ ಸುಪ್ಪಾಣಿಯ ಮುತ್ತು
ಸಿಂಪಿನಲ್ಲಿ ಸಿಕ್ಕುವುದಯ್ಯಾ ;
ಚಂಪೂಕಾವ್ಯದಲ್ಲಿ ಸಿಕ್ಕದ ರಸೋತ್ಕರ್ಷ



ಹಳ್ಳಿಯ ಹಾಡುಗಳಲ್ಲಿ ಸಿಕ್ಕುವುದಯ್ಯಾ ;
ಅರಮನೆಯಲ್ಲಿ ಅಲಭ್ಯವೆನಿಸುವ ನ್ಯಾಯನಿಷ್ಠೆ
ಚಾವಡಿಯೊಂದರಲ್ಲಿ ಲಭಿಸಬಹುದಯ್ಯಾ ;
ಸ್ವತಂತ್ರಧೀರ ಸಿದ್ಧೇಶ್ವರಾ,
ಗುರುಮನೆಯಲ್ಲಿ ದೊರೆಯದ ಧರ್ಮರತಿ
ಗುಡಿಸಲಿನಲ್ಲಿ ದೊರೆಯಬಹುದಯ್ಯಾ !

೩೭೪

ಬಣ್ಣ ಒಂದೇ ಇದ್ದರೆ
ಗುಣವೂ ಒಂದೇ ಎಂದು
ಹೇಳಬಹುದೆ ಅಯ್ಯ ?
ಬಣ್ಣ ಚೆನ್ನಾಗಿದ್ದ ಮಾತ್ರಕ್ಕೆ
ಗುಣವೂ ಚೆನ್ನಾಗಿದೆಯೆಂದು
ತೀರ್ಮಾನಿಸಿ ಬಿಡಬಹುದೆ ಅಯ್ಯ ?
ಬಣ್ಣ ಚೆನ್ನಾಗಿರದಿರೆ
ಗುಣವೂ ಚೆನ್ನಾಗಿಲ್ಲವೆಂದು
ಸಾರಿಬಿಡಬಹುದೆ ಅಯ್ಯ ?
ಚಿನ್ನದಲ್ಲಿರದೆ ಚುಚ್ಚುವ ಗುಣ ?
ಕಾರ್ಬೊನ್ನಿನಲ್ಲಿರದೆ ಕಾಯುವ ಗುಣ ?
ನಿಗ್ರೋನಲ್ಲಿರದೆ ಮಾನವ ಗುಣ ?
ಬಿಳಿಯನಲ್ಲಿರದೆ ಬರ್ಬರ ಗುಣ ?
ಕಪ್ಪಿನಲ್ಲಿರದೆ ಕಂಪು ?
ಕೆಂಪಿನಲ್ಲಿರದೆ ಕಟುತೆ ?
ಹಳದಿಯಲ್ಲಿರದೆ ಪಾಂಡು ?
ಬಿಳಿಯಲ್ಲಿರದೆ ತೊನ್ನು ?
ನೀಲದಲ್ಲಿರದೆ ವಿಷ ?
ಹಸುರಾಗಿರದೆ ಹಾವಸೆ ?
ಬಣ್ಣಕ್ಕೆ ಬೆಲೆ
ಗುಣದ ಕೊಲೆಯಿರುವಲ್ಲಿ
ಇನ್ನಾವ ರಾಜ್ಯವೇ ಇರಬಹುದು,
ನಿನ್ನ ರಾಜ್ಯ ಇರಲಾರದಯ್ಯಾ

ಸ್ವತಂತ್ರಧೀರ ಸಿದ್ಧೇಶ್ವರಾ !

೩೭೫

ಒಳ್ಳೆಯ ಹೊಲದಲ್ಲಿ ಬಿತ್ತಿದರೂ
ಜಳ್ಳು ಬೀಜ ಮೊಳೆಯದ ಬೀಜವೇ,
ಕಲ್ಲು ಸಂದಿಯಲ್ಲಿ ಬಂದು ಬಿದ್ದಿದ್ದರೂ
ಒಳ್ಳೆಯ ಬೀಜ ಬೆಳೆಯುವ ಬೀಜವೇ ;
ಗೀರ್ವಾಣ ಗ್ರೀಕ್ ಭಾಷೆಗಳಲ್ಲಿದ್ದರೂ
ಕ್ಷುಲ್ಲಕ ವಿಚಾರ ಕ್ಷುಲ್ಲಕ ವಿಚಾರವೇ,
ಕೋಲಾಮಿ, ಕೊರವಂಜಿಯರ ನುಡಿಯಲ್ಲಿದ್ದರೂ
ಒಳ್ಳೆಯ ವಿಚಾರ ಒಳ್ಳೆಯ ವಿಚಾರವೇ ;
ಲೋಕಸಭೆಯಲ್ಲಿ ಕೇಳಿಸಿದರೂ
ಕೀಳ್ನುಡಿಯು ಕೀಳ್ನುಡಿಯೇ,
ಗ್ರಾಮಪಂಚಾಯತಿಯಲ್ಲಿ ಕೇಳಿದರೂ
ಒಳ್ನುಡಿಯು ಒಳ್ನುಡಿಯೇ ;
ಪರಮೋಚ್ಚ ಪ್ರಶಸ್ತಿಯನ್ನು ಪಡೆದಿದ್ದರೂ
ಲಘು ಕೃತಿಯು ಲಘು ಕೃತಿಯೇ,
ಅವಜ್ಞೆ ಅವಹೇಳನೆಗಳಿಗೆ ಗುರಿಯಾಗಿದ್ದರೂ
ಮಹತ್ಕೃತಿಯು ಮಹತ್ಕೃತಿಯೇ ;
ಹರುಕು ಚಿಂದಿಯಲ್ಲಿದ್ದರೂ
ಸ್ಫುರದ್ರೂಪವು ಸ್ಫುರದ್ರೂಪವೆ,
ದಿವ್ಯ ದುಕೂಲದಲ್ಲಿದ್ದರೂ
ಕುರೂಪವು ಕುರೂಪವೆ ;
ಸ್ವತಂತ್ರಧೀರ ಸಿದ್ಧೇಶ್ವರಾ,
ಮೈ ತೊಳೆದೂ ಮನ ಕೊಳೆಯಾಗಿರುವವರ
ಪೂಜೆಯೂ ಪೂಜೆಯೇ,
ಮೈ ಕೊಳೆಯಾಗಿದ್ದರೂ ಮನ ತಿಳಿಯಾಗಿರುವವರ
ಕೈಕೂಲಿ ಹಮಾಲಿಯೂ ಪೂಜೆಯೆ !

೩೭೬



ಬಿಳಿಯ ಬಟ್ಟೆಗೇ ಕಪ್ಪು ಕಲೆಯ ಭಯ,
ಕರಿಯ ಬಟ್ಟೆಗಾವ ಭಯವಯ್ಯಾ ?
ಕೋಗಿಲೆಗೇ ಮಾಗಿಯ ಭಯ,
ಕಾಗೆಗೆ ಯಾವ ಭಯವಯ್ಯಾ ?
ಒಳ್ಳಿದರಿಗೇ ಕತ್ತಲೆಯ ಭಯ,
ಕಳ್ಳರಿಗೆಲ್ಲಿಯ ಭಯವಯ್ಯಾ ?
ಹದಿಬದೆಗೇ ಹಿಸುಣರ ಭಯ,
ಬೆಲೆವೆಣ್ಣಿಗೆ ಅದಾವ ಭಯವಯ್ಯಾ ?
ಮಾನವಂತನಿಗೇ ಮಾನಹಾನಿಯ ಭಯ,
ಮಾನಗೇಡಿಗಳಿಗೆ ಯಾವ ಭಯವಯ್ಯಾ ?
ಭಕ್ತರಿಗೇ ಭವಾವಳಿಯ ಭಯ,
ರಕ್ತರಿಗೆಲ್ಲಿಯ ಭಯವಯ್ಯಾ ?
ಸ್ವತಂತ್ರಧೀರ ಸಿದ್ಧೇಶ್ವರಾ,
ಧರ್ಮಾತ್ಮನಿಗೇ ಧರ್ಮಚ್ಯುತಿಯ ಭಯ,
ಅಧರ್ಮಿಗೆ ಅದಾವ ಭಯವಯ್ಯಾ ?

೩೭೭

ಕಂಪ್ಯೂಟರ್ ಮಾನವನೊಂದು ಕಡೆಗೆ,
ಕೃತ್ರಿಮ ಜೀನ್ಸ್ ಮಾನವನಿನ್ನೊಂದು ಕಡೆಗೆ
ನೀ ಹುಟ್ಟಿಸಿದ, ಹುಟ್ಟಿಸುವ ಮಾನವರಿಗೆ
ಸವಾಲು ತೂರಿ ನಿಂತಿದ್ದಾರೆ !
ಸಂಕರ ಧಾನ್ಯ, ಸಂಕರ ಪುಷ್ಪ, ಸಂಕರ ಫಲಗಳು ಬಂದಿವೆ,
ಸಂಕರ ತಳಿಯೂ ಬರಲಿದೆಯೇನಯ್ಯಾ ?
ಬಂದರೆ ಅದರ ಇತಿಮಿತಿಗಳೇನಯ್ಯಾ ?

ಮತಿ ಮಂಕಾಗಿದೆಯಯ್ಯಾ !
ನಿನ್ನನುಳಿದ ಮತಿಯ ಪ್ರಗತಿ
ಪ್ರಚ್ಛನ್ನ ದುರ್ಗತಿಯೇನಯ್ಯಾ-ಸ್ವತಂತ್ರಧೀರ ಸಿದ್ಧೇಶ್ವರಾ ?

೩೭೮

ಕೊಲೆ ತಪ್ಪಿಸಲು ನೆರವಾದರೆ ಕತ್ತಲೆಯೂ ಹಿತಕಾರಿ,
ಕೊಳ್ಳೆ ಹೊಡೆಯಲು ನೆರವಾದರೆ ಬೆಳಕೂ ಅಹಿತಕಾರಿಯಯ್ಯ ;
ಅಸು ಉಳಿಸಲು ನೆರವಾದರೆ ಹುಸಿಯೂ ಪುಣ್ಯ,
ವಿಷವಿಕ್ಕಲು ನೆರವಾದರೆ ನನ್ನಿಯೂ ಪಾಪವಯ್ಯ ;
ದುಡಿದುಣ್ಣಲು ನೆರವಾದರೆ ಕರ್ಮವೂ ಪೂಜೆ,
ದುಡಿಯದೆ ಹೊಡೆಯಲು ಕಲಿಸೆ ಧರ್ಮವೂ ದರೋಡೆಯಯ್ಯ ;
ಬಾಳ ಬೆಳಗಲು ನೆರವಾದರೆ ಬಿಜ್ಜೆಯೇ ಬಜ್ಜರ,
ಬಾಳಿಗೇ ಕಾವಳ ತರುವ ಶಿಕ್ಷಣವೂ ರಾಕ್ಷಸಿಯಯ್ಯ ;
ಸ್ವತಂತ್ರಧೀರ ಸಿದ್ಧೇಶ್ವರನ ಸೃಷ್ಟಿಯಲ್ಲಿ
ವಿಕಾಸಕ್ಕೆ ದಾರಿ ಮಾಡುವ ವಿನಾಶವೂ ಪ್ರಚ್ಛನ್ನ ವರ,
ವಿನಾಶಕ್ಕೆ ಕರೆದೊಯ್ವ ವಿಕಾಸವೂ ಶಾಪವಯ್ಯಾ !

೩೭೯

ಏನಿದೇನಿದೇನಿದಯ್ಯ
ಗೆಲವಿನ ಸೋಲು, ಸೋಲಿನ ಗೆಲವು,
ಸಿರಿಯ ಬಡತನ, ಬಡತನದ ಒಡೆತನ,
ಸಮೃದ್ಧಿಯ ಕೊರತೆ, ಕೊರತೆಯ ಸಿರಿವಂತಿಕೆ ?
ಇದೇನು ವಿಲಕ್ಷಣವಯ್ಯ
ಸೇವೆಯ ಸ್ವಾರ್ಥ, ಸ್ವಾರ್ಥದ ಸೇವೆ,
ತ್ಯಾಗದ ಲೋಭ, ಲೋಭದ ತ್ಯಾಗ,
ಪ್ರೇಮದ ದ್ವೇಷ, ದ್ವೇಷದ ಪ್ರೇಮ ?



ಹೂವೆಂದು ಎತ್ತಿದುದು ಹಾವಾಗುವುದು,
ಬೆಲ್ಲವೆಂದು ಬಗೆದುದು ಬೇವಾಗುವುದು,
ಶೂಲವೆಂದು ತಿಳಿದುದು ಮಾಲೆಯಾಗುವುದು
ನಿನ್ನ ವಿನೋದಪ್ರಿಯತೆಯ ಕುರುಹೋ
ನಮ್ಮ ಸೀಮಿತ ಮತಿಯ ಮರಹೊ
ಸ್ವತಂತ್ರಧೀರ ಸಿದ್ಧೇಶ್ವರಾ ?

೩೮೦

ಅರಿಯದೆ ಮಾಡಿದ ಪಾಪಕ್ಕಿಂತ
ಅರಿದರಿದೂ ಮಾಡಿದ ಪಾಪ ಹೀನತರವಾದುದಯ್ಯಾ ;
ಹಸಿವೆಗಾಗಿ ಮಾಡಿದ ಪಾತಕಕ್ಕಿಂತ
ಹೆಸರಿಗಾಗಿ ಮಾಡಿದ ಪಾತಕ ಹೇಯತರವಾದುದಯ್ಯಾ ;
ಒತ್ತಾಯಕ್ಕೊಳಗಾಗಿ ಮಾಡಿದ ಅಪರಾಧಕ್ಕಿಂತ
ಆಸೆಯ ಒತ್ತಡಕ್ಕೆ ಒಳಗಾಗಿ ಮಾಡಿದ ಅಪರಾಧ
ಅಧಮತರವಾದುದಯ್ಯಾ ;
ಮತ್ತಿನಲ್ಲಿದ್ದಾಗ ಮಾಡಿದ ಹಿಂಸೆಗಿಂತ
ಎಚ್ಚತ್ತಿರುವಾಗ ಮಾಡಿದ ಹಿಂಸೆ ಕ್ರೂರತರವಾದುದಯ್ಯಾ ;
ಆತ್ಮರಕ್ಷಣೆಗಾಗಿ ಮಾಡಿದ ಅಕೃತ್ಯಕ್ಕಿಂತ
ಸ್ವಾರ್ಥಸಾಧನೆಗಾಗಿ ಮಾಡಿದ ದುಷ್ಕೃತ್ಯ ಘೋರತರವಾದುದಯ್ಯಾ ;
ವಿದೇಶೀಯರ ದಬ್ಬಾಳಿಕೆಗಿಂತ
ಸ್ವದೇಶೀಯರ ದುರಾಡಳಿತ ದುಷ್ಟತರವಾದುದಯ್ಯಾ ;
ಸ್ವತಂತ್ರಧೀರ ಸಿದ್ಧೇಶ್ವರಾ,
ನನ್ನ ಹೆಸರಿನಲ್ಲಿ ನಾನು ಮಾಡಿದ ಮೋಸಕ್ಕಿಂತ
ನಿನ್ನ ಹೆಸರಿನಲ್ಲಿ ಮಾಡಿದ ಮೋಸ ತುಚ್ಛತರವಾದುದಯ್ಯ !

೩೮೧

ಒಳಿತನೆಸಗುವ ಒಬ್ಬನಿಗೆದುರಾಗಿ
ಕೆಡುಕು ಮಾಡುವ ಕೆಲವರು ;
ದುಡಿದು ಉಣಿಸುವ ಒಬ್ಬನ ಸುತ್ತು
ಕಿತ್ತು ತಿನ್ನುವವರು ಹಲವರು ;
ಹಿಗ್ಗ ಹುಟ್ಟಿಸುವ ಒಬ್ಬನಿಗೆ ಪ್ರತಿಯಾಗಿ
ಕುಗ್ಗ ಹರಡುವವರು ಹಲವರು ;

ಸ್ವಚ್ಛತೆಯನುಳಿಸುವ ಒಬ್ಬನ ಬಳಸಿ
ಹೊಲಸು ಚೆಲ್ಲುವವರು ಹಲವರು ;
ಜಗಳ ಬಿಡಿಸುವ ಒಬ್ಬನ ಪಕ್ಕದಲ್ಲಿಯೇ
ಜಗಳ ಹಚ್ಚುವವರು ಹಲವರು ;
ಸ್ವತಂತ್ರಧೀರ ಸಿದ್ಧೇಶ್ವರಾ, ನಿನ್ನ ಸೃಷ್ಟಿಯಲ್ಲಿ
ಗಾಯಗಳ ಮಾಯಿಸುವವ ಒಬ್ಬನಾದರೆ
ಗಾಯಗೊಳಿಸುವವರು ಅನೇಕರು !

೩೮೨

ಇಟ್ಟಿಗೆ ಕಟ್ಟಿಗೆಗಳನ್ನು ಕೊಂಡಾಕ್ಷಣ
ಮನೆಯಾಯಿತೇನಯ್ಯಾ ?
ಹಿಟ್ಟು ಬೇಳೆ ಸಂಗ್ರಹಿಸಿದಾಕ್ಷಣ
ಅಡುಗೆಯಾಯಿತೇನಯ್ಯಾ ?
ಶಬ್ದಗಳ ಸರಪಳಿ ಹೆಣೆದಾಕ್ಷಣ
ಸಾಹಿತ್ಯವಾಯಿತೇನಯ್ಯಾ ?
ಮಣಿಗಳನ್ನು ಎಣಿಸಿದಾಕ್ಷಣ
ಜಪವಾಯಿತೇನಯ್ಯಾ ?
ತನುವ ದಂಡಿಸಿದಾಕ್ಷಣ
ತಪವಾಯಿತೇನಯ್ಯಾ ?
ಸ್ವತಂತ್ರಧೀರ ಸಿದ್ಧೇಶ್ವರಾ,
ನಿನ್ನವರಿಗೆ ತನುಮನಧನವ ಸವೆಸದೆ
ನಿನ್ನ ನೆನೆದಾಕ್ಷಣ ಭಕ್ತಿಯಾಯಿತೇನಯ್ಯಾ ?

೩೮೩

ಮಾಡುವವರಿಂದ ಕೆಲಸಕ್ಕೆ ಕಿಮ್ಮತ್ತು ಬರಬೇಕಲ್ಲದೆ
ಕೆಲಸದಿಂದ ಮಾಡುವವರಿಗೆ ಮೌಲ್ಯವೆಂದರೆ ಹೇಗಯ್ಯ ?
ಕೃಷ್ಣನಿಂದ ಗೋವಳತೆಗೆ, ಕ್ರೈಸ್ತನಿಂದ ಕುರಿಸಾಕಣೆಗೆ,
ಮಹಮ್ಮದನಿಂದ ವ್ಯಾಪಾರಕ್ಕೆ, ಬಸವನಿಂದ ಕರಣಿಕತನಕ್ಕೆ,
ಜೇಡರದಾಸ ಕಬೀರದಾಸರಿಂದ ನೇಕಾರಿಕೆಗೆ,
ಕಕ್ಕಯ್ಯ ಹರಳಯ್ಯ ಧೂಳಯ್ಯರಿಂದ ಚರ್ಮಕರ್ಮಕ್ಕೆ,
ಗಾಂಧೀಜಿಯಿಂದ ನೂಲುಗಾರಿಕೆಗೆ ಬರಲಿಲ್ಲವೆ ಬೆಲೆ ?
ಮಾಡುವ ಕೆಲಸವಾವುದಾದರೇನು,



ಮಾಡುವವರಲ್ಲಿ ಮೇಲ್ಮೆಯಿದ್ದರೆ ಆ ಕೆಲಸಕ್ಕೂ ಹಿರಿಮೆ,
ಇಲ್ಲದಿರೆ ಹಿರಿಯದೆಂದ ಕೆಲಸವೂ ಕಿರಿಯದಯ್ಯಾ
ಸ್ವತಂತ್ರಧೀರ ಸಿದ್ಧೇಶ್ವರಾ ;

೩೮೪

ಜ್ವರದಿಂದ ನಾಲಗೆ, ಕಾಮಾಲೆಯಿಂದ ಕಣ್ಣು,
ತದ್ದಿನಿಂದ ತ್ವಚ, ಉನ್ಮಾದದಿಂದ ಮಿದುಳು,
ಲೋಭದಿಂದ ಕೈ, ಚಾಡಿಯಿಂದ ಕಿವಿ,
ಕ್ಲೈಬ್ಯದಿಂದ ಹೃದಯ, ದೌರ್ಬಲ್ಯದಿಂದ ಮನ
ತಮ್ಮ ನೈಜ ಗುಣಗಳನ್ನು ಕಳೆದುಕೊಂಡರೆ
ತಪ್ಪು ಅವುಗಳದೇನಯ್ಯಾ ?
ತಪ್ಪು ತನ್ನದಿದ್ದರೂ ಅನ್ಯರ ತಲೆಗದನ್ನು ಕಟ್ಟಲು
ಎಷ್ಟೊಂದು ಕುಯುಕ್ತಿಗಳು ಕುತಂತ್ರಗಳು ನರಕುಲದಲ್ಲಿ ?
ಅನವರತ ಅನ್ಯತ್ರತೆಗಳನ್ನು ಅರಸುವುದರಲ್ಲಿಯೇ
ಕಳೆವ ಕಾಲವನ್ನು ಒಳಗ ತೊಳೆಯಲು ಕಳೆದರೆ
ನಳನಳಿಸುವ ಸಿವದ ಬೆಳೆ ಬರದೆ ಅಲ್ಲಿ
ಸ್ವತಂತ್ರಧೀರ ಸಿದ್ಧೇಶ್ವರಾ ?

೩೮೫

ಹಣ ಹರಟುತ್ತಿರುವಾಗ
ಗುಣ ತೆಪ್ಪಗಿರದೆ ಇನ್ನೇನ ಮಾಡುವುದಯ್ಯಾ ?
ಸುಳ್ಳು ತಮ್ಮಟೆ ಹೊಡೆಯುತ್ತಿರುವಾಗ
ಸತ್ಯ ಸುಮ್ಮನಿರದೆ ಇನ್ನೇನ ಮಾಡುವುದಯ್ಯಾ ?
ಮೋಸ ಕೇಕೆ ಹಾಕುತ್ತಿರುವಾಗ
ವಿಶ್ವಾಸ ಮೌನ ವಹಿಸದೆ ಮತ್ತೇನ ಮಾಡುವುದಯ್ಯಾ ?
ಮಾತು ಬೊಬ್ಬೆಯಿಕ್ಕಿ ಅಬ್ಬರಿಸುತ್ತಿರುವಾಗ
ಕೃತಿ ಕಂಗೆಡದೆ ಪೆರತೇನ ಮಾಡಬಲ್ಲುದಯ್ಯಾ ?
ಸ್ವತಂತ್ರಧೀರ ಸಿದ್ಧೇಶ್ವರಾ,
ಪ್ರಚಾರ ಅಯೋಗ್ಯತೆಗೆ ಪಟ್ಟಗಟ್ಟುತ್ತಿರುವಾಗ
ಯೋಗ್ಯತೆ ಬಾಯಿ ಮುಚ್ಚಿರದೆ ಮತ್ತೇನ ಮಾಡಬಲ್ಲುದಯ್ಯಾ ?

### ೩೮೬

ಹಣ್ಣು ಸಿಹಿಯಾಗಿದ್ದರೆ ಸಾಲದೆ–
ಬೇರುಗಳೂ ಸಿಹಿಯಾಗಿರಬೇಕೆಂಬ ಹಟವೇತಕಯ್ಯ ?
ಹೂವುಗಳು ಸುಗಂಧಯುತವಾಗಿದ್ದರೆ ಸಾಲದೆ,
ಕಾಂಡ ಕಂಟಕಗಳೂ ಕಂಪಿನಿಂದ ಕೂಡಿರಬೇಕೆಂಬ ಛಲವೇತಕಯ್ಯ ?
ಹಾಸಿಗೆ ಮೃದುವಾಗಿದ್ದರೆ ಸಾಲದೆ,
ಮಂಚವೂ ಮೃದುವಾಗಿರಬೇಕೆಂಬ ಹಂಬಲವೇತಕಯ್ಯ ?
ಮನೆ ಬೆಳಕಾಗಿದ್ದರೆ ಸಾಲದೆ,
ಮಾಳಿಗೆಯೂ ಬೆಳಕಾಗಿರಬೇಕೆಂಬ ಬಯಕೆಯೇತಕಯ್ಯ ?
ಕೊಟ್ಟಿಗೆ ಶುಚಿಯಾಗಿದ್ದರೆ ಸಾಲದೆ,
ತಿಪ್ಪೆಯೂ ಶುಚಿಯಾಗಿರಬೇಕೆಂಬ ಹವ್ಯಾಸವೇತಕಯ್ಯ ?
ಸ್ವತಂತ್ರಧೀರ ಸಿದ್ಧೇಶ್ವರಾ,
ಬದುಕು ಬಂಗಾರವಾಗಿದ್ದರೆ ಸಾಲದೆ,
ಸಮಾಧಿಯೂ ಸುವರ್ಣದ್ದಾಗಬೇಕೆಂಬ ಹುಚ್ಚೇತಕಯ್ಯ ?

### ೩೮೭

ಆಲದ ಮರದಂತೆ ಹೊರಲಾರದಷ್ಟು ಹಣ್ಣು ಬಿಟ್ಟು ಫಲವೇನು ?
ತಿನ್ನಲು ತಿರುಳಿಲ್ಲ, ಕುಡಿಯಲು ರಸವಿಲ್ಲ !
ಹೊನ್ನವರೆಯಂತೆ ಹೊರಲಾರದಷ್ಟು ಹೂ ಬಿಟ್ಟು ಫಲವೇನು ?
ಮುಡಿಯಲು ಮನವಿಲ್ಲ, ಮೂಸಲು ವಾಸನೆಯಿಲ್ಲ !
ತಾಳದ ಮರದಂತೆ ನೀಳವಾಗಿ ಬೆಳೆದು ಫಲವೇನು ?
ಕೊರೆದರೆ ತೊಲೆಯಿಲ್ಲ, ನೆಟ್ಟರೆ ಕಂಬವಲ್ಲ !
ಸ್ವತಂತ್ರಧೀರ ಸಿದ್ಧೇಶ್ವರಾ,
ಟೇಪ್‌ರೆಕಾರ್ಡರಿನಂತೆ ಹೊರಲಾರದಷ್ಟು
ಹೊತ್ತಗೆಗಳ ಗ್ರಹಿಸಿ ಫಲವೇನು ?
ತನಗೆ ತಿಳಿವಾಗಲಿಲ್ಲ,



ಅನ್ಯರಿಗೆ ಉಪಯೋಗವಿಲ್ಲ !

### ೩೮೮

ಗುಂಪು ಗುಂಪಾಗಿ ಬೆಳೆದರೂ
ಗುಂಪುಗಾರಿಕೆಯ ಗಾಂಪತನವಿಲ್ಲ
ಗುಂಪು ಮರಗಳಲ್ಲಿ ;
ಒಂದರ ಬಾಹು ಇನ್ನೊಂದರ ಹೆಗಲಮೇಲೆ,
ಒಂದರ ಹಸ್ತ ಇನ್ನೊಂದರ ಹಸ್ತದಲ್ಲಿ,
ಒಂದರ ನೆರಳು ಇನ್ನೊಂದರ ನೆರಳಿನಲ್ಲಿ,
ಎಲ್ಲ ಸಮರಸ ಇಲ್ಲ ವಿರಸ !
ನರರಲ್ಲೇಕೆ ಗುಂಪುಗಾರಿಕೆ
ವಿರಸ ವಿರೋಧ ವಿಷಮತೆಗಳು
ಚಿಮ್ಮಿ ಹೊಮ್ಮುತ್ತಿರಬೇಕಯ್ಯಾ
ಸ್ವತಂತ್ರಧೀರ ಸಿದ್ಧೇಶ್ವರಾ ?

### ೩೮೯

ಎಲ್ಲರೂ ಎಲ್ಲರ ಮೇಲೆ ರೊಚ್ಚಿಗೆದ್ದಿದ್ದಾರೆ !
ಯಾತಕ್ಕಾಗಿ ಈ ರೊಚ್ಚು, ಏನು ಕಾರಣ ಈ ಕೆರಳಿಕೆ ?
ನಾನರಿಯೆನಯ್ಯಾ, ನೀನೆ ಒರೆಯಯ್ಯಾ !
ನೆಚ್ಚು ನಷ್ಟವಾದಾಗ ರೊಚ್ಚಿನದೇ ರಾಜ್ಯಭಾರವೇನಯ್ಯಾ ?
ಎದೆಯ ಮೆಚ್ಚು ಮಾಯವಾಗಿ
ಹೊಟ್ಟೆಯ ಕಿಚ್ಚು ಕಿಡಿಗೆದರಿದರೆ
ಹುಚ್ಚರ ಆಸ್ಪತ್ರೆಯಾಗದೇನಯ್ಯಾ ಜಗವೆಲ್ಲ ?
ಮಚ್ಚರದ ಮತ್ತಿನಲ್ಲಿರುವ ನಮ್ಮನ್ನು ಎಚ್ಚರಗೊಳಿಸಿ
ಅಚ್ಚ ನನ್ನಿ ನಲ್ಮೆ ನ್ಯಾಯಗಳ ದಾರಿಯಲ್ಲಿ

ನಯದೊಡನೆ ನಡೆಸಯ್ಯಾ
ಸ್ವತಂತ್ರಧೀರ ಸಿದ್ಧೇಶ್ವರಾ !

೩೯೦

ಮನೆಯ ಸಿರಿವಂತಿಕೆ
ನಾಗರಿಕತೆಯ ಪ್ರತೀಕ,
ಮನದ ಸಿರಿವಂತಿಕೆ
ಸಂಸ್ಕೃತಿಯ ಸಂಕೇತವಯ್ಯ.
ನಡಿಗೆ ನಾಗರಿಕತೆ, ನೃತ್ಯ ಸಂಸ್ಕೃತಿ,
ಮಾತು ನಾಗರಿಕತೆ, ಗೀತೆ ಸಂಸ್ಕೃತಿ,
ಬಣ್ಣ ನಾಗರಿಕತೆ, ಚಿತ್ರ ಸಂಸ್ಕೃತಿ,
ಶಿಲೆ ನಾಗರಿಕತೆ, ಶಿಲ್ಪ ಸಂಸ್ಕೃತಿ,
ಸ್ವತಂತ್ರಧೀರ ಸಿದ್ಧೇಶ್ವರಾ
ಕರ್ಮ ನಾಗರಿಕತೆ, ಕಾಯಕ ಸಂಸ್ಕೃತಿಯಯ್ಯಾ !

೩೯೧

ತಾಪವನ್ನು ತಾಳಿಕೊಳ್ಳುವುದೇ ತಪ,
ಗುರಿಯನ್ನು ನೆನೆದುಕೊಳ್ಳುವುದೇ ಜಪ,
ಸಹನೆಯನ್ನು ಕಳೆದುಕೊಳ್ಳದಿಹುದೇ ಸಮತೆ,
ಸಮತೆಯ ಸ್ಥಿರೀಕರಣವೇ ಸಮಾಧಿ,
ಆಗು ಹೋಗುಗಳಿಂದ
ಬೆಂಡಾಗದಿಹುದೇ ಯೋಗ ಕಾಣ ಭೋ !
ಸ್ವತಂತ್ರಧೀರ ಸಿದ್ಧೇಶ್ವರನು
ಹುಟ್ಟಿಸಿದಲ್ಲಿ ಹುಟ್ಟಿ,
ಇಟ್ಟಂತೆ ಇದ್ದು,
ಕೊಟ್ಟುದ ಮೆದ್ದು, ಕೊಡದಿಹುದ ಗೆದ್ದು,
ಮಾಡಿಯೂ ಮಾಡದೊಲು,
ಭೋಗಿಸಿಯೂ ಭೋಗಿಸದೊಲು ಇದ್ದು,
ಇದ್ದೂ ಹೊದ್ದದಂತಿಹುದೆ
ಪರಮಾರ್ಥ ಕಾಣ ಭೋ !



೩೯೨

ಸತ್ಕಾರ್ಯಕ್ಕೆ ಪ್ರೇರಣೆ ನೀಡುವುದೇ ಸುವಿಚಾರ,
ಉಳಿದುದೆಲ್ಲ ಅವಿಚಾರ ಕಾಣಿರೋ !
ಸತ್ಕಾರ್ಯದಲ್ಲಿ ನಿರತನಾಗಿರುವುದೇ ಸದಾಚಾರ,
ಉಳಿದುದೆಲ್ಲ ಶುಷ್ಕಾಚಾರ ಕಾಣಿರೋ !
ಕರ್ತವ್ಯವೇ ದೇವರು,
ಸತ್ಕರ್ಮವೇ ಪೂಜೆ,
ತ್ಯಾಗ ಸೇವೆಗಳೇ ಜಪತಪ ಸಮಾಧಿ ಕಾಣಿರೋ !
ಸ್ವತಂತ್ರಧೀರ ಸಿದ್ಧೇಶ್ವರನೊಲಿಯಲು
ಮಾಡದಂತೆ ಮಾಡುತ್ತ,
ನೀಡದಂತೆ ನೀಡುತ್ತ,
ಬೇಡದಂತೆ ಬಾಳುವುದೇ ದಾರಿ ಕಾಣಿರೋ !

೩೯೩

ಋಷಿಪ್ರತಿಭೆ ಸರ್ವಭೂತಾನುಕಂಪೆಯೊಡನೆ ಕೂಡಿದಾಗ
ರಾಮಾಯಣ ಮಹಾಕಾವ್ಯದ ಉದಯ ;
ಭೂಪತಿಯ ಸಂಪದಕ್ಕೆ ಅಮರ ಪ್ರೇಮದ ಪ್ರೇರಣೆ ದೊರೆತಾಗ
ಮಹಾ ಕಲಾಕೃತಿ ತಾಜಮಹಲಿನ ಜನನ ;
ಯಂತ್ರರ್ಷಿ ಪರಿಣತಿಗೆ ಸೌಂದರ್ಯ ಸ್ವಪ್ನ ಬಿದ್ದಾಗ
ವೃಂದಾವನ ನಂದನದ ನಿರ್ಮಾಣ ;
ಮಹಾತ್ಮಾಜೀಗೆ ದಾಸ್ಯೋದ್ಭೂತ ಅಧೋಗತಿಯ ಕರಾಳ ಚಿತ್ರ ಕಂಡಾಗ
ಭಾರತ ಸ್ವಾತಂತ್ರ್ಯದ ಅವತರಣ ;
ವಿಜ್ಞಾನಜ್ಯೋತಿಗೆ ವಿಶ್ವದರ್ಶನ ದೀಪ್ತಿ ಸೇರಿದಾಗ
ಸಾಪೇಕ್ಷವಾದದ ಸಮಾಗಮನ ;
ಸ್ವತಂತ್ರಧೀರ ಸಿದ್ಧೇಶ್ವರಾ,

ನರನ ಹವಣಿಕೆ ಹರನ ಹೂಡಿಕೆಗೆ ಒಳಗಾದಾಗ
ಶರಣಜೀವನದ ಉನ್ಮೀಲನ !

೩೯೪

ಬಹುಪಾಲು ಸಭೆ ಸಮ್ಮೇಳನಗಳ ನಭದಲ್ಲಿ
ಮಾತಿನ ಮೋಡ ಕವಿದು,
ಗೊತ್ತುವಳಿಗಳ ಗುಡುಗು,
ತಿದ್ದುಪಡಿಗಳ ಮಿಂಚು,
ಖಂಡನ ಮಂಡನಗಳ ಸಿಡಿಲು ತೋರಿದುವಾಗಲಿ
ಕೃತಿಯ ಮಳೆ ಸುರಿಯಲಿಲ್ಲವಯ್ಯ !
ಬಹುಪಾಲು ಸಂಘ ಸಂಸ್ಥೆಗಳ ಸರೋವರದಲ್ಲಿ
ಒಟಗುಡುವ ಕಪ್ಪೆ, ಕುಟಿಲ ಧ್ಯಾನದ ಬಕ,
ಹುಸಿ ಕಂಬನಿಯ ಮೊಸಳೆ,
ಒಂದನೊಂದು ನುಂಗುವ ಮೀನುಗಳು
ಮೈದೋರಿದುವಾಗಲಿ
ಆತ್ಮಕಮಲಗಳು ಅರಳಲಿಲ್ಲವಯ್ಯ !
ಬಹುಪಾಲು ಪಕ್ಷ ಪಂಗಡಗಳ ಗೊಂಡಾರಣ್ಯದಲ್ಲಿ
ಮುರಿದು ತಿನ್ನುವ ಮೃಗಗಳು,
ಹರಿದು ತಿನ್ನುವ ಖಗಗಳು ಮನೆಮಾಡಿದುವಾಗಲಿ
ನಲಿವ ನವಿಲು, ನುಡಿವ ಗಿಳಿ,
ಹಾಡುವ ಹಕ್ಕಿಗಳು ನೆಲೆಸಲಿಲ್ಲವಯ್ಯ !
ಸ್ವತಂತ್ರಧೀರ ಸಿದ್ಧೇಶ್ವರಾ,
ಬಹುಪಾಲು-ಗುಡಿ-ಗುರುದ್ವಾರ-ಇಗರ್ಜಿ-ಮಠ-ಮಸೀದೆಗಳಲ್ಲಿ
ಸದ್ದು ಗದ್ದಲ ಗೊಂದಲಗಳು
ಗುದ್ದಾಡಿ ಗುದುಮುರಿಗೆ ಹಾಕಿದುವಾಗಲಿ
ಎದ್ದು ಕಾಣಲಿಲ್ಲವಯ್ಯ ನೀನಲ್ಲಿ !
ಎದ್ದೋಡಿ ಹೋದೆಯೇನು ಅಲ್ಲಿಂದ ?

೩೯೫



ಅಂಗುಲಿಮಾಲಾನಲ್ಲಿ ಮೃತವಾಗಿರದಿದ್ದ ಮಾನವತೆ
ಭಂಗಿಗಳಲ್ಲಿ ಇಂಗಿಹೋಗಿರದಯ್ಯ ;
ದಶಶಿರನಲ್ಲಿ ನಶಿಸಿಹೋಗದ ಸಂಯಮನ
ಜನರ ಪ್ರತಿನಿಧಿಗಳಲ್ಲಿ ಲುಪ್ತವಾಗಬಾರದಯ್ಯ ;
ದುರ್ಯೋಧನನಲ್ಲಿ ನಷ್ಟವಾಗದಿದ್ದ ಭ್ರಾತೃಪ್ರೇಮ
ಹೆಗಲುಮನೆಯವರಲ್ಲಿ ಮುಗಿದಿರದಯ್ಯ ;
ಚೆಂಗೀಜನಲ್ಲಿ ಬತ್ತಿರದ ಪುತ್ರವಾತ್ಸಲ್ಯ
ಹಿಪ್ಪಿಗಳಲ್ಲಿ ಬರತು ಹೋಗಿರಲಾರದಯ್ಯ ;
ಸ್ವತಂತ್ರಧೀರ ಸಿದ್ಧೇಶ್ವರಾ,
ಅರ್ಥಕಾಮಗಳೆ ಪರಮಾರ್ಥವೆನ್ನುವವರಲ್ಲಿ
ಇಲ್ಲವಾಗದ ಜನಕಲ್ಯಾಣೇಚ್ಛೆ
ನಿನ್ನ ಭಕ್ತರಲ್ಲಿ ಇಲ್ಲವಾಗಬಾರದಯ್ಯ !

೩೯೬

ತಮ್ಮ ವಿಲಾಸಕ್ಕಾಗಿ ತಾಸಿಗೆ ಸಾಸಿರ ಪೋಲು ಮಾಡುವ ಲೋಲುಪ ಮಾಲೀಕರು
ತಮಗೆ ಕನಕಾಭಿಷೇಕ ಮಾಡಿಸುವ ಕಾರ್ಮಿಕರಿಗೆ
ಅಗತ್ಯ ಆಧಾರಿತ ವೇತನವನ್ನೇಕೆ ಕೊಡಬಾರದಯ್ಯಾ ?
ಸತ್ತೆಯಲ್ಲಿರುವವರ ಮೇಲೆ ರೊಕ್ಕದ ಮಳೆಯನ್ನೇ ಸುರಿಸುವ ಸಿರಿವಂತರು
ದುರ್ಬಲರನ್ನು, ದುಃಖಿತರನ್ನು ದೂರವಿಡುವರೇಕಯ್ಯಾ ?
ಸೈನ್ಯ-ಶಸ್ತ್ರಾಸ್ತ್ರಗಳಿಗೆ ಸಿಂಹಪಾಲು ನೀಡುವ ಸರಕಾರಗಳು
ಬಡವರ ಒಡಲಿಗೆ ಹಿಡಿ ಅನ್ನ ಒದಗಿಸಲೂ ಹಿಂದೆಗೆವರೇಕಯ್ಯಾ ?
ತಮ್ಮ ಅಧಿಕಾರಕ್ಕೆ ವಯೋಮಿತಿಯೇ ಇರಕೂಡದೆನ್ನುವವರು
ಬಡಶಿಕ್ಷಕರ ವಯೋಮಿತಿಯನ್ನೇಕೆ ಇಳಿಸುವರಯ್ಯಾ ?
ಎಷ್ಟು ಅಧಿಕಾರ ದೊರೆತರೂ ಇನ್ನಷ್ಟು ಬೇಕೆಂದು ಬಾಯ್ಬಿಡುವ ವರಿಷ್ಠರು
ಕನಿಷ್ಠರ ಕನಿಷ್ಠಾಧಿಕಾರಗಳಿಗೂ ಕರುಬುವರೇಕಯ್ಯಾ ?
ಸ್ವತಂತ್ರಧೀರ ಸಿದ್ಧೇಶ್ವರಾ,
ತಮಗೆ ಸ್ವಾತಂತ್ರ್ಯವನ್ನಷ್ಟೇ ಅಲ್ಲ, ಸ್ವಾಚ್ಛಂದ್ಯವನ್ನೂ ಬೇಡುವವರು
ಮತದಾರರ, ಶ್ರೀಸಾಮಾನ್ಯರ ಮೂಲ ಹಕ್ಕುಗಳಿಗೇ ದಾಳಿ ತರುವರೇಕಯ್ಯಾ ?

೩೯೭

ಕಳೆದುಕೊಂಡಿರುವುದು
ಒಂದು ಕಡೆಯಲ್ಲಿ,
ಹುಡುಕುತ್ತಿರುವುದು
ಇನ್ನೊಂದೆಡೆಯಲ್ಲಿ ;
ಬಯಸುತ್ತಿರುವುದು ಒಂದು,
ಪಡೆಯುತ್ತಿರುವುದು ಇನ್ನೊಂದು ;
ಸೇರ ಬಯಸಿದ ಊರು ಒಂದು,
ತುಳಿಯುತ್ತಿರುವ ದಾರಿ ಇನ್ನೊಂದು ;
ತಿನ್ನಲೆಳಸಿದ ಹಣ್ಣು ಒಂದು,
ಊರುತ್ತಿರುವ ಬೀಜ ಇನ್ನೊಂದು ;
ಬಯಸಿದುದು ಸುಖ,
ಒಕ್ಕಿದುದು ದುಃಖ ;
ಹಾರೈಸಿದುದು ಸ್ನೇಹ,
ದೊರೆಯುತ್ತಿರುವುದು ದ್ವೇಷ !
ತಿರುವುಮುರುವಿನ ತೊರೆ ಈ ತಿರೆ !
ಅತ್ತ ಈಸಿದರೆ ಇತ್ತ ಒತ್ತುವ,
ಇತ್ತ ಈಸಿದರೆ ಅತ್ತ ಒತ್ತುವ ತೊರೆ !
ಚಂಡಿಯ ಗಂಡರಾದರೆ ಮಾತ್ರ
ಒಂದು ಬಯಸಿದರೆ ಇನ್ನೊಂದು ನೀಡುವ
ಈ ಲೋಕದಲ್ಲಿ ಪಾರಾಗುವುದು ಸಾಧ್ಯವೇನಯ್ಯಾ
ಸ್ವತಂತ್ರಧೀರ ಸಿದ್ಧೇಶ್ವರಾ ?

೩೯೮

ಮನೆ ತುಂಬ ಮುಸುರೆ ಚೆಲ್ಲಿ



ನೊಣ ಓಡಿಸಲು ಓಡಾಡುವುದಕ್ಕಿಂತ
ಮನೆ ಸ್ವಚ್ಛವಾಗಿರಿಸುವುದೇ ಮೇಲಯ್ಯ ;
ಅಂಗಳ ತುಂಬ ಕೆಸರು ಕೆಡಹಿ
ಆಸರಗೋಲು ಹುಡುಕುವುದಕ್ಕಿಂತ
ಕೆಸರು ಬೀಳದಂತೆಸಗುವುದೇ ಲೇಸಯ್ಯ ;
ಸ್ವತಂತ್ರಧೀರ ಸಿದ್ಧೇಶ್ವರಾ,
ಸಮಾಜ ಹದಗೆಡುವವರೆಗೆ ಸುಮ್ಮನಿದ್ದು ಆಮೇಲೆ
'ಕ್ರಾಂತಿ, ಕ್ರಾಂತಿ'ಯೆಂದು ಕಿರುಚುವುದಕ್ಕಿಂತ
ಸಮಾಜವನ್ನು ಸದಾ ಸರಿಪಡಿಸುತ್ತಲಿರುವುದೇ
ಶ್ರೇಯಸ್ಕರವಯ್ಯಾ !

೩೯೯

ನಟನಟಿಯರ ದಾಂಪತ್ಯ
ಅದೊಂದು ಆಕಸ್ಮಿಕ ಘಟನೆ, ಬರಿ ನಟನೆ !
ರಸ, ಭಾವ, ಧ್ವನಿ, ಧ್ಯೇಯಗಳಿಲ್ಲದ ಸಾಹಿತ್ಯ
ಅದೊಂದು ವೃಥಾಯಾಸ, ವ್ಯರ್ಥ ರಚನೆ !
ಕಸ ಕಳೆಯದೆ, ಹಸಿ ನೋಡದೆ ಎಸಗುವ ಕೃಷಿಕೃತ್ಯ
ಅದೊಂದು ಪಾಳ್ಗಜ್ಜ, ನಿರರ್ಥಕ ಶ್ರಮ !
ಅಂತೆಯೇ, ಭಕ್ತಿಯಿಲ್ಲದ ಪೂಜೆ, ನಿಷ್ಠೆಯಿಲ್ಲದ ಧ್ಯಾನ,
ಶಾಂತಿಯಿಲ್ಲದ ಮೌನ, ಶಂಕೆಯಳಿಸದ ಜ್ಞಾನ,
ಚಿತ್ತ ತೊಳೆಯದ ಸ್ನಾನ, ತೃಷ್ಣೆಯಳಿಸದ ಪಾನ,
ಶ್ರದ್ಧೆಯಿಲ್ಲದ ಜಪ, ಶುದ್ಧಿಯಿಲ್ಲದ ತಪ,
ವಿಶ್ವಾಸವಿಲ್ಲದ ವ್ರತನೇಮಾದಿಗಳು
ಕಾಳಿಲ್ಲದ ತೆನೆ, ಕಾಯ್ಗಳಿಲ್ಲದ ಗೊನೆ,
ಅಂದಗಂಧಗಳಿಲ್ಲದ ನನೆಗಳಯ್ಯ
ಸ್ವತಂತ್ರಧೀರ ಸಿದ್ಧೇಶ್ವರಾ !

೪೦೦

ಏಸು ಕಾಲ ಕಳೆದರೇನು,
ಏಸುವಿನಂಥವರು ಏಸು ಜನ ಹುಟ್ಟಬಲ್ಲರಯ್ಯ ?

ದೇಶ ಕಾಲಗಳ ಸೋಸಿದರೆ ಉಳಿಯುವರು
ಸಾಸಿರಕ್ಕೆ ಮಿಗದ ಮೀಸಲು ಮಾನವರು !
ಉಳಿದವರು ?
ಚಂದ್ರನ ಉದಯಕ್ಕಾಗಿ ಆಹುತಿಯಾದ ನಕ್ಷತ್ರಗಳು,
ವಸಂತನ ಆಗಮನಕ್ಕಾಗಿ ಉದುರಿದ ಪಾಂಡು ಪತ್ರಗಳು,
ಮೊನಾಲಿಸಾದ ಮೂಡಿಕೆಗೆ ಮುನ್ನ
ಬರೆದು ಹರಿದ, ಮರೆಯಾದ ಕರಡು ಚಿತ್ರಗಳು,
ಸ್ವತಂತ್ರಧೀರ ಸಿದ್ಧೇಶ್ವರನ ಕಂಡುಕೊಳ್ಳುವ ಮುನ್ನ
ಪೂಜೆಗೊಂಡು ಫರಾರಿಯಾದ
ತೆತ್ತೀಸಕೋಟಿ ದೇವರ್ಕಳು !

೪೦೧

ಸಮಯ ಸಾಧಕರಿಗೆ ಅನುಕೂಲ ಸಮಯವೇ ಶಿವಸಮಯ,
ದೇಹಾರಾಧಕರಿಗೆ ಹೊಸಬಟ್ಟೆಯೇ ಬಾಳ ಬಟ್ಟೆಯಯ್ಯಾ !
ಕೂಳ ಬಕ್ಕರ ಕಂಗಳಿಗೆ ಆಹಾರವೇ ದೇಹಾರ,
ಹಿಂಸಾರಭಸಮತಿಗೆ ಹ್ಯಾನಿಬಾಲನೇ ಹೆಮ್ಮೆಯ ಹೆಗ್ಗಡೆಯಯ್ಯಾ !
ಕಾಮುಕನ ಕಂಗಳಿಗೆ ಕಂಡವಳೇ ರಂಭೆ ಊರ್ವಶಿ,
ಕಡುಜಿಪುಣನಿಗೋ ಹಮ್ಮಿಣಿಯೇ ಹೆದ್ದೈವವಯ್ಯಾ !
ಸೋಮಾರಿಗೆ ಶಯ್ಯಾಗೃಹವೇ ಸ್ವರ್ಗ,
ಹಗರಣಿಗರಿಗೆ ಹಾದರದ ಕಥೆಗಳೇ ಪರಮಾದರದ ಚರಿತೆಗಳಯ್ಯಾ !
ಲಾಭಗುಳಿಗೆ ರಕ್ತಶೋಷಣೆಯೇ ರಾಷ್ಟ್ರಭಕ್ತಿ,
ಶೋಷಕನಿಗೋ ಸುಲಿಗೆಯೇ ಸಮಾರಾಧನೆಯಯ್ಯಾ !
ಸ್ವತಂತ್ರಧೀರ ಸಿದ್ಧೇಶ್ವರಾ,
ಧರ್ಮದ ದಲ್ಲಾಳಿಗಳಿಗೋ ದೇವದೇವಿಯರೆ ಸರಕು-ಸರಂಜಾಮು,



ದೇಶಭಕ್ತಿಯ ವ್ಯಾಪಾರಿಗಳಿಗೆ ಜನರೆ ಜೀನಸುಗಳಯ್ಯಾ !

೪೦೨

ಸುಳ್ಳಿನಿಂದ ದೊರೆವುದು ಸುಳ್ಳುಸುಖವೆಂಬುದು ಸುಳ್ಳೇನಯ್ಯಾ ?
ಮಂಜಿನ ನೀರಿನಿಂದ
ನೀರಾವರೀ ಯೋಜನೆ ಸಾಧ್ಯವೇನಯ್ಯಾ ?
ಹರಿನಾಳಿಗೆಯ ನೀರಿನಿಂದ
ಹೈಡ್ರಾಲಿಕ್ ಶಕ್ತಿ ಸಂಭವನೀಯವೇನಯ್ಯಾ ?
ಆಕಾಶಬುಟ್ಟಿ ಅಪ್ಪೋಲೋ ೧೨ ಆಗಬಹುದೇನಯ್ಯಾ ?
ಸ್ವತಂತ್ರಧೀರ ಸಿದ್ಧೇಶ್ವರಾ,
ಸಟೆಯು ದಿಟವನ್ನಪ್ಪಿ ದಿಟವಾಗದೆ
ದಿಟಪುಟ ಸುಖವನೀಯಬಲ್ಲುದೇನಯ್ಯಾ ?

೪೦೩

ಬೆಳೆದಂತೆ ಕೂದಲುಗಳ ಉಳಿಸುವುದಾದರೆ
ಕ್ಷೌರಿಕನೇಕಿರಬೇಕಯ್ಯ ?
ಬೆಳೆದಂತೆ ಗಿಡಬಳ್ಳಿಗಳ ಬಿಡುವುದಾದರೆ
‘ಮಾಲಿ’ಯೇತಕ್ಕೆ ಬೇಕಯ್ಯ ?
ನೇಯ್ದಂತೆ ಬಟ್ಟೆ ಸುತ್ತಿಕೊಳ್ಳುವುದಾದರೆ
ಸಿಂಪಿಗನೇಕೆ ಬೇಕಯ್ಯ ?
ಬಂದಂತೆ ಕಾಳು ಕಡಿಗಳ ತಿನ್ನುವುದಾದರೆ
ಬಾಣಸಿಯೇಕೆ ಬೇಕಯ್ಯಾ ?
ಸನ್ನೆಯಿಂದ ಸಂಸಾರ ಸಾಗಿಸುವುದಾದರೆ
ಭಾಷೆಯೇಕೆ ಬೇಕಯ್ಯ ?
ಬಾಯಿಗೆ ಬಂದಂತೆ ಕಿರುಚುವುದಾದರೆ
ಸಂಗೀತವೇಕೆ ಬೇಕಯ್ಯ ?
ಕಾಲಿಗೆ ಬಂದಂತೆ ಕುಣಿಯುವುದಾದರೆ
ನಾಟ್ಯಶಾಸ್ತ್ರವೇಕೆ ಬೇಕಯ್ಯ ?
ಕಂಡಂತೆ ಚೆಂಡೆಸೆಯುವುದಾದರೆ

ಕ್ರೀಡಾನಿಯಮಗಳೇಕೆ ಬೇಕಯ್ಯ ?
ತೋಚಿದಂತೆ ಗೀಚುವುದಾದರೆ
ಕಾವ್ಯಮೀಮಾಂಸೆಯೇಕೆ ಬೇಕಯ್ಯ ?
ಸ್ವತಂತ್ರಧೀರ ಸಿದ್ಧೇಶ್ವರಾ,
ಹುಟ್ಟಿದಂತೆ ಬೆಳೆಯುವುದಾದರೆ
ನನ್ನಿ, ನಲ್ಮೆ, ನಯ, ನೀತಿ, ನ್ಯಾಯಗಳೇಕೆ ಬೇಕಯ್ಯಾ ?
ನೀನೇಕೆ ಬೇಕಯ್ಯ, ನಿನ್ನವರೇಕೆ ಬೇಕಯ್ಯ ?

೪೦೪

ಸಾಹಿತ್ಯದಲ್ಲಿ ಶಾಸ್ತ್ರವಿರಬಹುದು,
ಆದರೆ, ಶಾಸ್ತ್ರವೇ ಸಾಹಿತ್ಯವಾಗಬಹುದೇನಯ್ಯಾ?
ಧರ್ಮದಲ್ಲಿ ಅಸಂಗತವಾದುದಿರಬಹುದು,
ಆದರೆ, ಅಸಂಗತತೆಯೇ ಧರ್ಮವಾಗಬಹುದೇನಯ್ಯಾ?
ವಿಜ್ಞಾನದಲ್ಲಿಯೂ ಅಂಧಶ್ರದ್ಧೆ ಇರಬಹುದು,



ಆದರೆ, ಅಂಧಶ್ರದ್ಧೆಯೇ ವಿಜ್ಞಾನವಾಗಬಹುದೇನಯ್ಯಾ?
ಚಂದ್ರನಲ್ಲಿ ಕಲಂಕವಿರಬಹುದು,
ಆದರೆ, ಕಲಂಕವೇ ಚಂದ್ರನಾಗಬಹುದೇನಯ್ಯಾ?
ಕಾಳಿನಲ್ಲಿ ನುಸಿ, ತಲೆಯಲ್ಲಿ ಹೇನು, ಅನ್ನದಲ್ಲಿ ಹರಳು ಇರಬಹುದು,
ಆದರೆ, ನುಸಿಯೇ ಕಾಳು, ಹೇನೇ ತಲೆ, ಹರಳೇ ಅನ್ನವಾಗಬಹುದೇನ
ಯ್ಯಾ?
ಸ್ವತಂತ್ರಧೀರ ಸಿದ್ಧೇಶ್ವರಾ,
ಜೀವನದಲ್ಲಿ ಕಶ್ಮಲವಿರಬಹುದು,
ಆದರೆ, ಕಶ್ಮಲವೇ ಜೀವನವಾಗಬಹುದೇನಯ್ಯಾ?

೪೦೫

ವಸ್ತುಗಳ ಸೊಟ್ಟು ಡೊಂಕುಗಳನ್ನು ತಿದ್ದಲು ಉಳಿ, ಬಾಚಿ, ಚಾಣ, ಸುತ್ತಿಗೆಗಳು,
ಆಸ್ತಿಗಳ ಒಡೆಯರ ವಕ್ರತೆಗಳನ್ನು ತಿದ್ದಲು ಏನಯ್ಯ?
ವಸ್ತ್ರಗಳ ಮಡಿಕೆ ಮುದುಡಿಕೆಗಳನ್ನು ಸರಿಪಡಿಸಲು ಇಸ್ತ್ರಿಪೆಟ್ಟಿಗೆ,
ಶಾಸ್ತ್ರಗಳ ತಿರುವುಮುರುವುಗಳನ್ನು ಸರಿಪಡಿಸಲು ಏನಯ್ಯಾ?
ಮೈಯ ಗಾಯಗಳ ಮಾಯಿಸಲು ಮುಲಾಮುಗಳು, ಮದ್ದುಗಳು,
ಮನದ ಗಾಯಗಳನ್ನು ಮಾಯಿಸಲು ಏನಯ್ಯಾ?
ಉದರದ ಅಜೀರ್ಣವನ್ನು ಕಳೆಯಲು ಮಾತ್ರೆ ಮಿಶ್ರಣಗಳು
ಓದಿನ ಅರ್ಜೀವನ್ನು ಕಳೆಯಲು ಏನಯ್ಯಾ?
ಸ್ವತಂತ್ರಧೀರ ಸಿದ್ಧೇಶ್ವರಾ,
ನೀರಿನ ಗೊಡಗನ್ನು ಕಳೆಯಲು ಫಿಲ್ಟರ್, ಸ್ಫಟಿಕ, ಕ್ಲೋರೀನುಗಳು
ಅಂತರಂಗದ ಅಂತರಗಂಗೆಯ ಕಳೆಯಲು ಏನಯ್ಯಾ?

೪೦೬

ಅಸ್ಥಿಗಳ ಅಜರತೆಗಿಂತ ಅಕ್ಷಿಗಳ ನಶ್ವರತೆ
ಕೀಳೆನ್ನಬಹುದೇನಯ್ಯಾ?
ಅದ್ರಿಗಳ ಅಚಲತೆಗಿಂತ ಸಮುದ್ರಗಳ ಚಂಚಲತೆ

ಕೀಳೆನ್ನಬಹುದೇನಯ್ಯಾ?
ಸಿಂಹಗರ್ಜನೆಗಿಂತ ಪಕ್ಷಿಕೂಜನ
ಕೀಳೆನ್ನಬಹುದೇನಯ್ಯಾ ?
ಪಾರದರ್ಶಕ ದೂರದರ್ಶಕಕ್ಕಿಂತ ಸೂಕ್ಷ್ಮದರ್ಶಕ ಯಂತ್ರ
ಕೀಳೆನ್ನಬಹುದೇನಯ್ಯಾ ?
ವಜ್ರದ ಕಠಿನತೆಗಿಂತ ಕುಸುಮ ಕೋಮಲತೆ
ಕೀಳೆನ್ನಬಹುದೇನಯ್ಯಾ ?
ಮಹಾದ್ವಾರಕ್ಕಿಂತ ಗರ್ಭಗುಡಿಯ ಕಿರಿಯದ್ವಾರ
ಕೀಳೆನ್ನಬಹುದೇನಯ್ಯಾ ?
ಹನುಮ ತಂದ ಹೆಬ್ಬೆಟ್ಟಕ್ಕಿಂತ ಅಳಿಲು ಉದುರಿಸಿದ ಮಳಲು
ಕೀಳೆನ್ನಬಹುದೇನಯ್ಯಾ ?
ಸ್ವತಂತ್ರಧೀರ ಸಿದ್ಧೇಶ್ವರಾ,
ಪೃಥ್ವಿಯ ವಿಜಯಕ್ಕಿಂತ ಆತ್ಮವಿಜಯ
ಕೀಳೆನ್ನಬಹುದೇನಯ್ಯಾ ?

೪೦೭

ನದಿಯೆ ಬತ್ತಿರುವಾಗ
ನೀರ್-ಬೀಳು ಎಲ್ಲಿಯದಯ್ಯಾ?
ನೀರ್ ಬೀಳೆ ನಿಂತಿರುವಾಗ
ವಿದ್ಯುದುತ್ಪಾದನೆ ಎಲ್ಲಿಯದಯ್ಯಾ?
ಸ್ವತಂತ್ರಧೀರ ಸಿದ್ಧೇಶ್ವರಾ,
ಮಾನವ್ಯವೇ ಮೃತವಾದಾಗ
ನಲ್-ಬಾಳು ಎಲ್ಲಿಯದಯ್ಯಾ?
೪೦೮



ಕುಳಿತವರಿಂದ ಕುರ್ಚಿಗೆ ಕಿಮ್ಮತ್ತು ಬರಬೇಕಲ್ಲದೆ
ಕುರ್ಚಿಯಿಂದ ಕುಳಿತವರಿಗೆ ಕಿಮ್ಮತ್ತು ಬಂದರೆ ಹೇಗಯ್ಯ?
ತೊಟ್ಟವರಿಂದ ಉಟ್ಟುದಕ್ಕೆ ಬೆಲೆ ಬರಬೇಕಲ್ಲದೆ
ಬಟ್ಟೆಯಿಂದ ಉಟ್ಟವರಿಗೆ ಬೆಲೆ ಬಂದರೆ ಹೇಗಯ್ಯ?
ಕೂಸಿನಿಂದ ತೊಟ್ಟಿಲಕ್ಕೆ ಶ್ರೇಷ್ಠತೆ ಬರಬೇಕಲ್ಲದೆ
ತೊಟ್ಟಿಲಿನಿಂದ ಕೂಸಿಗೆ ಶ್ರೇಷ್ಠತೆ ಬಂದರೆ ಹೇಗಯ್ಯ?
ಇರುವವರಿಂದ ಮನೆಗೆ ಮನ್ನಣೆ ಬರಬೇಕಲ್ಲದೆ
ಮನೆಯಿಂದ ಇರುವವರಿಗೆ ಮನ್ನಣೆ ಬಂದರೆ ಹೇಗಯ್ಯ ?
ಚಿತ್ರದಿಂದ ಕಾಗದಕ್ಕೆ ಕೀರ್ತಿ ಬಂದರೆ ಸರಿ,
ಕಾಗದದಿಂದ ಚಿತ್ರಕ್ಕೆ ಕೀರ್ತಿ ಬಂದರೆ ಹೇಗಯ್ಯ?
ಚೇತನದಿಂದ ಜಡಕ್ಕೆ ಮಾನ್ಯತೆ ಬಂದರೆ ಸರಿ,
ಜಡದಿಂದ ಚೇತನಕ್ಕೆ ಮಾನ್ಯತೆ ಬಂದರೆ ಹೇಗಯ್ಯ?
ಸ್ವತಂತ್ರಧೀರ ಸಿದ್ಧೇಶ್ವರಾ,
ಮನುಜನಿಂದ ಹುಟ್ಟಿಗೆ ಘನತೆ ಬಂದರೆ ಸರಿ,
ಹುಟ್ಟನಿಂದ ಮನುಜನಿಗೆ ಘನತೆ ಬಂದರೆ ಹೇಗಯ್ಯ?

೪೦೯

ಕನಸಿನ ವೈರಿಯೊಡನೆ
ನನಸಿನಲ್ಲಿ ಕಾದುವುದೆಂತಯ್ಯ?
ಕಲ್ಪನೆಯ ಕೆಳದಿಯ ಕೈಯನ್ನು
ಹಂದರದಲ್ಲಿ ಹಿಡಿಯುವುದೆಂತಯ್ಯ?
ಇಲ್ಲದ ಕುದುರೆಯ ಜೂಜನ್ನು
ಗೆಲ್ಲುವ ಪರಿ ಎಂತಯ್ಯ?
ಗಗನಕುಸುಮಗಳ ಭಟ್ಟಿಯಿಳಿಸಿ
ಗಂಧದೆಣ್ಣೆ ತೆಗೆಯುವುದೆಂತಯ್ಯ?
ಸ್ವತಂತ್ರಧೀರ ಸಿದ್ಧೇಶ್ವರಾ,
ಮನುಜತ್ವವನ್ನು ಮೊದಲು ಪಡೆಯದೆ
ದೇವತ್ವವನ್ನು ಪಡೆಯುವುದೆಂತಯ್ಯ?
೪೧೦

ಎಲ್ಲವೂ ಸರಿಯೆಂದು ಹೇಳಿ ನುಸುಳಿ ಪಾರಾಗುವುದೆ,
ಇದೇ ಸರಿಯೆಂದು ಪಟ್ಟು ಹಿಡಿದು ಪೆಟ್ಟು ತಿನ್ನುವುದೆ ?
ಎಲ್ಲರೂ ನನ್ನವರೆಂದು ಸಾರಿ
ಯಾರಿಗೇನೂ ಮಾಡದೆ ಜಾರಿಕೊಳ್ಳುವುದೆ,
ಕೆಲವರಾದರೂ ತನ್ನವರೆಂದು
ಅವರಿಗಾಗಿ ಮಾಡಿ ಮಡಿಯುವುದೆ ?
ವಿಶ್ವವೇ ನನ್ನದೆಂದು ಇರುವ ಮನೆಯನ್ನೇ ಹಾಳುಗೆಡಹುವುದೆ,
ಇರುವ ಮನೆಯನ್ನೇ ಚೊಕ್ಕಟವಾಗಿಟ್ಟುಕೊಂಡು
ವಿಶ್ವವ ಮರೆಯುವುದೆ?
ಸ್ವತಂತ್ರಧೀರ ಸಿದ್ಧೇಶ್ವರಾ,
ಮರುಹುಟ್ಟು ಇದೆಯೆಂದು ಈ ಹುಟ್ಟನ್ನು ಕಡೆಗಣಿಸುವುದೆ,
ಈ ಹುಟ್ಟಿನ ಹುಟ್ಟನಲ್ಲಿಯೇ ಜೇನು ತುಂಬಿ
ಮರುಹುಟ್ಟನ್ನು ಮರೆಯುವುದೆ?

೪೧೧

ಹಲವು ಗೆಳೆಯರನ್ನು ಗಳಿಸಿಕೊಂಡೆನೆಂಬ ಹೆಮ್ಮೆ ನಿನಗೆ
ಆದರೆ, ನಿನಗೆ ನೀ ಗೆಳೆಯನಾದೆಯಾ ಒಮ್ಮೆಯಾದರೂ, ಓ ಜೀವಿ ?
ಅವರಿವರು ಹಗೆಗಳಾದರೆಂದು ಹಲ್ಲು ಕಡಿಯುವೆ ಹಗಲೆಲ್ಲ
ಆದರೆ, ನಿನಗೆ ನೀನೇ ಹಗೆಯಾದುದೆಷ್ಟುಸಲವೆಂದು
ಲೆಕ್ಕ ಮಾಡಿದೆಯಾ ಒಮ್ಮೆಯಾದರೂ, ಓ ಜೀವಿ ?
ಅವರಿವರು ಮೋಸ ಮಾಡಿದರೆಂದು ರೋಸಿ ನುಡಿಯುವೆ ನಿತ್ಯ
ಆದರೆ, ನಿನಗೆ ನೀ ಮೋಸಗೊಳಿಸಿದುದು ಏಸು ಸಲವೆಂದು
ಎಣಿಸಿದೆಯಾ ಒಮ್ಮೆಯಾದರೂ, ಓ ಜೀವಿ ?
ನಿನ್ನ ಬನ್ನಗಳಿಗೆ ಅನ್ಯರು ಕಾರಣರೆಂದು ಕಿನಿಸುವಿ ಪ್ರತಿದಿನ
ಆದರೆ, ನಿನ್ನ ಬಹುಪಾಲು ಬವಣೆಗಳಿಗೆ ನೀನೇ ಕಾರಣನೆಂಬುದ
ಜಾನಿಸಿದೆಯಾ ಒಮ್ಮೆಯಾದರೂ, ಓ ಜೀವಿ ?
ಸ್ವತಂತ್ರಧೀರ ಸಿದ್ಧೇಶ್ವರನ ಸಾಕ್ಷಿಯಾಗಿ ಹೇಳುವೆ,
ನಿನ್ನ ಉನ್ನತಿ-ಅವನತಿ ನಿನ್ನ ಕೈಯಲ್ಲಿಯೇ ಜೀವಿ !



೪೧೨

ನರೆಗೂದಲಿಗೆ ಕಪ್ಪು ಸವರಿ, ಗಲ್ಲದ ತೆರೆಗಳಿಗೆ ಕ್ರೀಮು ಬಳಿದು
ಅರಿಯದವರಿಂದ ಮುಪ್ಪನ್ನು ಮುಚ್ಚಿಡಬಹುದು
ಆದರೆ, ನಿನ್ನಿಂದಲೂ ಬಚ್ಚಿಡಬಲ್ಲೆಯಾ ಗೆಳೆಯ ?
ವಿಜ್ಞಾನ ತಂತ್ರಜ್ಞಾನಗಳ ನೆರವಿನಿಂದ
ಪೋಲೀಸರ ಕಣ್ಣು ತಪ್ಪಿಸಿ ಗುನ್ಹೆಗೈಯಬಹುದು
ಆದರೆ, ನಿನ್ನ ಕಣ್ಣು ತಪ್ಪಿಸಿಯೂ ಅಪರಾಧವೆಸಗಬಲ್ಲೆಯಾ ಕೆಳೆಯ ?
ವಿಮರ್ಶಕರ ಕಣ್ಣು ತಪ್ಪಿಸಿ ಕೃತಿಚೌರ್ಯ ಮಾಡಬಹುದು
ಆದರೆ, ನಿನ್ನ ಕಣ್ಣು ತಪ್ಪಿಸಿಯೂ ಕದಿಯ ಬಲ್ಲೆಯಾ ಮಿತ್ರ?
ನಿನ್ನ ಕಣ್ಣು ತಪ್ಪಿಸಿದರೂ ಕಣಕಣವೂ ಕಣ್ಣಾಗಿರುವ
ಸ್ವತಂತ್ರಧೀರ ಸಿದ್ಧೇಶ್ವರನ ಕಣ್ಣು ತಪ್ಪಿಸಬಲ್ಲೆಯಾ ಪ್ರಿಯಸಖ?

೪೧೩

ಇಲ್ಲಿ ಗುಡಿಗೆ ಬರುವವರೆಲ್ಲ ಭಕ್ತರಲ್ಲ,
ಶಾಲೆ ಸೇರುವವರೆಲ್ಲ ವಿದ್ಯಾರ್ಥಿಗಳಲ್ಲ,
ಶಸ್ತ್ರ ಹಿಡಿದವರೆಲ್ಲ ಶೂರರಲ್ಲ,
ಶಾಸ್ತ್ರ ಕಲಿತವರೆಲ್ಲ ಶಾಂತರಲ್ಲ,
ಗಡ್ಡ ಬಿಟ್ಟವರೆಲ್ಲ ಮುಸಲ್ಮಾನರಲ್ಲ,
ಶಿಲುಬೆ ಧರಿಸಿದವರೆಲ್ಲ ಕ್ರೈಸ್ತರಲ್ಲ,
ಲಿಂಗ ಧರಿಸಿದವರೆಲ್ಲ ಲಿಂಗಾಯತರಲ್ಲ,
ಜನಿವಾರ ಹಾಕಿದವರೆಲ್ಲ ಬ್ರಾಹ್ಮಣರಲ್ಲ,
ಪದವಿ ಪಡೆದವರೆಲ್ಲ ಪ್ರಬುದ್ಧರಲ್ಲ,
ಸ್ನಾನ ಮಾಡಿದವರೆಲ್ಲ ಶುದ್ಧರಲ್ಲ,
ಚರ್ಚೆ ಮಾಡುವವರೆಲ್ಲ ಸಾಕ್ರೆಟೀಸ್ ಅಲ್ಲ,
ರಾಜಕಾರಣದಲ್ಲಿರುವವರೆಲ್ಲ ಜಯಪ್ರಕಾಶ ಅಲ್ಲ,
ಸ್ವತಂತ್ರಧೀರ ಸಿದ್ಧೇಶ್ವರಾ,
'ಅಹಂ ಬ್ರಹ್ಮಾಸ್ಮಿ' ಎನ್ನುವವರೆಲ್ಲ ಅದ್ವೈತಿಗಳಲ್ಲ !

೪೧೪

ಮಾತು ಸೋತಾಗ ಮೌನ ಮಾತಾಡೀತು,

ಮೌನ ಸೋತಾಗ ಮುಂದೇನಯ್ಯಾ?
ಶಬ್ದ ಸೋತಾಗ ಅರ್ಥ ಸಹಕರೀಸೀತು,
ಅರ್ಥ ಸೋತಾಗ ಮುಂದೇನಯ್ಯಾ?
ತರ್ಕ ಸೋತಾಗ ತತ್ವ ಕೈಹಿಡೀದೀತು,
ತತ್ವ ಸೋತಾಗ ಮುಂದೇನಯ್ಯಾ?
ಅನುಭವ ಸೋತಾಗ ಅನುಭಾವ ಆಶ್ರಯ ನೀಡಿತು,
ಅನುಭಾವ ಸೋತಾಗ ಮುಂದೇನಯ್ಯಾ ?
ಸ್ವತಂತ್ರಧೀರ ಸಿದ್ಧೇಶ್ವರಾ,
ನಾನು ಸೋತಾಗ ನಿನ್ನವರು ನೆರವಾದರು,
ನಿನ್ನವರೇ ಸೋತರೆ ಮುಂದೇನಯ್ಯಾ ?

೪೧೫

ಸಮುದ್ರವೇ ನೀರಡಿಕೆಯೆಂದರೆ
ಅದಕ್ಕೆ ನೀರು ಕುಡಿಸುವವರಾರಯ್ಯಾ ?
ಹಿಮಾದ್ರಿಯೇ ನನಗೆ ನೆಗಡಿಯೆಂದರೆ
ಅದರ ಮೂಗನೊರಸುವವರಾರಯ್ಯಾ ?
ಸೂರ್ಯನೇ ನನಗೆ ಸೆಕೆಯೆಂದರೆ
ಅವನಿಗೆ ಗಾಳಿ ಹಾಕುವವರಾರಯ್ಯಾ?
ಚಂದ್ರನೇ ನನಗೆ ಚಳಿಯೆಂದರೆ
ಅವನಿಗೆ ಕಂಬಳಿ ಹೊದಿಸುವವರಾರಯ್ಯಾ ?
ನೆಲವೇ ನನಗೆ ಹಸಿವೆಯೆಂದರೆ
ಅದಕ್ಕೆ ಅಶನವೀಯುವವರಾರಯ್ಯಾ?
ಸ್ವತಂತ್ರಧೀರ ಸಿದ್ಧೇಶ್ವರಾ,
ಮಹಾತ್ಮರಿಗೇ ಮನ್ನಣೆಯ ದಾಹ ಅಂಟಿದರೆ
ಅದನ್ನು ನಿವಾರಿಸುವವರು ಯಾರಯ್ಯಾ ?

೪೧೬

ಹಣ ಕೊಂಡ ಅನರ್ಹ ಕೀರ್ತಿಗಿಂತ
ಗುಣ ಗಳಿಸಿದ ಅಕೀರ್ತಿಯೇ ಮೇಲಯ್ಯ ;



ಪ್ರಚಾರ ತಂದ ಸಲ್ಲದ ಖ್ಯಾತಿಗಿಂತ
ಸೇವೆಗೆ ಸಂದ ಅಖ್ಯಾತಿಯೇ ಮೇಲಯ್ಯ ;
ಅಧಿಕಾರ ಕಸಿದುಕೊಳ್ಳುವ ಅಪಾತ್ರ ಮನ್ನಣೆಗಿಂತ
ಸತ್ಪಾತ್ರತೆಗೆ ಸಿಕ್ಕುವ ಅಮನ್ನಣೆಯೇ ಮೇಲಯ್ಯ ;
ಕೀರ್ತಿಗಾಗಿ ಅರ್ಹತೆಯ ವಧೆ, ಗುಣದ ಕೊಲೆ,
ಚಾರಿತ್ರ್ಯದ ಹನನ, ಶೀಲದ ಸಮಾಧಿಯಾಗದಿರಲಯ್ಯಾ !
ಸಂಸ್ಕೃತಿಸುಮಗಳು ಸೂಸುವ ಸೌರಭವಾಗಿ,
ಚಾರಿತ್ರ್ಯ ಜ್ಯೋತಿ ಬೀರುವ ಬೆಳಕಾಗಿ,
ಪರಿಣತಿಯ ಪ್ರಭೆ, ಸೇವಾರತಿಯ ಸೊಂಪು,
ಪಾವನ ಜೀವನದ ಪರಾಗವಾಗಿ,
ಯಶ, ಖ್ಯಾತಿ, ಮನ್ನಣೆಗಳು ಬಾಳಲಯ್ಯ
ಸ್ವತಂತ್ರಧೀರ ಸಿದ್ಧೇಶ್ವರಾ !

೪೧೭

ಮೇಲೆ ಕುಳಿತವರನ್ನು ಕೆಳಗಿಳಿಸಬಹುದಾಗಲಿ
ಕೆಳಗೆ ಕುಳಿತವರನ್ನು ಕೆಳಗಿಳಿಸುವುದೆಂತಯ್ಯ ?
ಮುಂದೆ ಕುಳಿತವರನ್ನು ಹಿಂದೆ ಸರಿಸಬಹುದಾಗಲಿ
ಹಿಂದೆ ಕುಳಿತವರನ್ನು ಹಿಂದೆ ಸರಿಸುವುದೆಂತಯ್ಯ ?
ಮಾತುಗುಳಿಯನ್ನು ಸುಮ್ಮನಿರಿಸಬಹುದಾಗಲಿ
ಮೌನಿಯನ್ನು ಸುಮ್ಮನಿರಿಸುವುದೆಂತಯ್ಯ ?
ನಿದ್ರೆ ಹತ್ತಿದವರನ್ನು ಎಚ್ಚರಿಸಬಹುದಾಗಲಿ
ಎಚ್ಚರಿರುವವರನ್ನು ಎಚ್ಚರಿಸುವುದೆಂತಯ್ಯ ?
ಒಡೆಯರನ್ನು ವರಮಾನ ತೆರಿಗೆಯಿಂದ ಅಂಜಿಸಬಹುದಾಗಲಿ
ಬಡವರನ್ನು ಅದರಿಂದ ಬೆದರಿಸುವುದೆಂತಯ್ಯ ?
ಸ್ವತಂತ್ರಧೀರ ಸಿದ್ಧೇಶ್ವರಾ,
ಮರೆದವರನ್ನು ಅರಿವಿಗೆ ತರಬಹುದಾಗಲಿ
ಅರಿತೂ ಜಾರಿದವರನ್ನು ದಾರಿಗೆ ತರುವುದೆಂತಯ್ಯ ?

೪೧೮

ಮುನ್ನುಡಿ ಓದಿ ವಾದಿಸಿದನೊಬ್ಬ,
ಸಾದರ ಸ್ವೀಕಾರವನ್ನೋದಿ ವಾದಿಸಿದನಿನ್ನೊಬ್ಬ
ಇಬ್ಬರೂ ಮೂಲಗ್ರಂಥವನ್ನು ಓದದವರೇ !
ಕಿಂವದಂತಿಗಳನ್ನು ಕೇಳಿ ನಂಬಿದನೊಬ್ಬ,
ಕನಸಿನಲ್ಲಿ ಕಂಡು ನಂಬಿದನೊಬ್ಬ
ಇಬ್ಬರೂ ಪ್ರತ್ಯಕ್ಷ ಕಾಣದವರೇ, ಪ್ರಮಾಣಿಸಿ ನೋಡದವರೇ !
ಮಂದಿ ಮಾಡಿದರೆಂದು ಮಾಡಿದನೊಬ್ಬ,
ಹಿಂದಿನಿಂದ ಬಂದುದೆಂದು ಮಾಡಿದನಿನ್ನೊಬ್ಬ
ಇಬ್ಬರೂ ಸ್ವಂತ ವಿಚಾರಿಸಿ, ವಿಮರ್ಶಿಸಿ ಮಾಡದವರೇ !
ತಿಳಿದೂ ಮನಸ್ಸಿಲ್ಲದೆ ಮಾಡಿ ಕೆಟ್ಟನೊಬ್ಬ,
ತಿಳಿಯದೆಯೆ ಮನಸ್ಸಿಟ್ಟು ಮಾಡಿ ಕೆಟ್ಟನಿನ್ನೊಬ್ಬ
ಇಬ್ಬರೂ ಮಾಡಿ ಕೆಟ್ಟವರೇ !
ಸ್ವತಂತ್ರಧೀರ ಸಿದ್ಧೇಶ್ವರಾ,
ನಿನ್ನ ಸ್ವೀಕರಿಸಿ ನಿನ್ನ ಮಕ್ಕಳ ತಿರಸ್ಕರಿಸಿ ಕೆಟ್ಟನೊಬ್ಬ,
ನಿನ್ನ ಮಕ್ಕಳ ಸ್ವೀಕರಿಸಿ ನಿನ್ನ ನಿರಾಕರಿಸಿ ಕೆಟ್ಟನಿನ್ನೊಬ್ಬ
ಇಬ್ಬರೂ ವಿಫಲರೇ !

೪೧೯

ಪುರುಷತ್ವಹೀನನ ಬ್ರಹ್ಮಚರ್ಯ, ಪೌರುಷಶೂನ್ಯನ ಅಹಿಂಸೆ.
ಅಜೀರ್ಣರೋಗಿಯ ಮಿತಾಹಾರ,
ವೃದ್ಧ ವೇಶ್ಯೆಯ ಪಾತಿವ್ರತ್ಯ ಪ್ರತಿಪಾದನೆ,
ಮುದುಕನ ಸಂತಾನ ನಿರೋಧ ಪ್ರಚಾರ,
ದರಿದ್ರನ ಧನದಾಶೆಯ ಖಂಡನ,
ಹೇಡಿಯ ಕ್ಷಮಾಗುಣದ ಮಂಡನ,
ಅಕ್ಷರ ಶತ್ರುವಿನ ವೈದುಷ್ಯಾಹಂಕಾರ ನಿರಸನವಾದ,
ಅಂಧಕನ ನೇತ್ರಚಾಪಲ್ಯವರ್ಜನ ಬೋಧೆ
ಇವೆಲ್ಲ ಯಾವ ಲೆಕ್ಕಕ್ಕೆ ಬರುವುವಯ್ಯ?
ಇವುಗಳಿಂದ ಯಾರಿಗೆ ಲಾಭವಯ್ಯ ?
ಬರಲಿ ಬಲವಾನರ ಬ್ರಹ್ಮಚರ್ಯ ಅಹಿಂಸಾದಿಗಳು,
ಶಕ್ತಿಶಾಲಿಯ ಕ್ಷಮಾಗುಣವಾದಿಗಳು !
ಶಕ್ತಿಯಿದ್ದೂ ರಕ್ತಿಯನ್ನು ನಿಯಂತ್ರಿಸುವವನೇ
ಮುಕ್ತನೆಂದಾತ ನಮ್ಮ ಸ್ವತಂತ್ರಧೀರ ಸಿದ್ಧೇಶ್ವರಾ !



೪೨೦

ಸೆರೆ ಕುಡಿವುದನ್ನು ಮಿತಿಯಲ್ಲಿರಿಸಿಕೊಳ್ಳುವೆನೆನ್ನುವವನು ಮತಿಗೇಡಿ ;
ಮೈಗೆ ನೀರೆರೆದು ಮನದ ಬೆಂಕಿ ಆರಿಸಿಕೊಂಬೆನೆಂಬವನು ಹುಂಬ ;
ಶಠತೆಯನ್ನು ಸಾಮದಾನಗಳಿಂದ ಸಂತೈಸುವೆನೆಂಬವನು ಶುಂಭ ;
ಕಾಮಕ್ಕೆ ಒಳಗಾಗಿಯೂ ವಿವೇಕವನ್ನುಳಿಸಿಕೊಂಬೆನೆಂಬವನು ನಿಶ್ಶುಂಭ!
"ಹೃದಯ ತೃಣಕುಟೀರೇ
ದೀಪ್ಯಮಾನ ಸ್ಮರಾಗ್ನಿ
ಉಚಿತಮನುಚಿತಂ ವಾ
ವೇತ್ತಿನೋ ಪಂಡಿತೋಪಿ" ಎಂದುದಾಗಿ,
ಕಾಮದ ಕಳ್ಳ ಹುದುಲಿನಲ್ಲಿ ಸಿಕ್ಕವನು
ಕೈಕಾಲು ಬಡಿದಷ್ಟೂ
ಕೆಳೆಗಿಳಿಯನೇನಯ್ಯಾ,
ಸ್ವತಂತ್ರಧೀರ ಸಿದ್ಧೇಶ್ವರಾ?

೪೨೧

ಬದನಿಕೆಯು ಶೋಷಕ ಬೇರೆ ತರು ಮರಗಳಿಗೆ,
ಅದೇ ಪೋಷಕ ಗಂಧದ ಮರಕ್ಕೆ ;
ನೀರು ವೈರಿ ಮಣ್ಣ ಹೆಂಟೆಗೆ,
ಅದೇ ಸಹಕಾರಿ ಸಿಮೆಂಟಿಗೆ ;
ಲೆಪ್ಪ ವಿಕಾರಿ ಉಳಿದ ವಸ್ತುಗಳಿಗೆ,
ಅದೇ ಉಪಕಾರಿ ಕನ್ನಡಿಗೆ ;
ತೇಜಾಬು ಸಿಂಹಸ್ವಪ್ನ ಸೀಸಕ್ಕೆ,
ಅದೇ ಅಪೇಕ್ಷಣೀಯ ಸುವರ್ಣಕ್ಕೆ ;
ಸ್ವತಂತ್ರಧೀರ ಸಿದ್ಧೇಶ್ವರಾ,
ಸಂಸಾರ ಬಾಧಕ ಅಳಿಮನದವರಿಗೆ,
ಅದೇ ಸಾಧಕ ನಿನ್ನವರಿಗೆ !

೪೨೨

ಕೊಯ್ಯುವರೆಂದು ತೆನೆ ಬಿಡದೆ ಶಾಳಿ,
ಗೊನೆ ಬಿಡದೆ ಬಾಳೆ,

ನನೆ ಬಿಡದೆ ಬಳ್ಳಿ ?
ಒಯ್ಯುವರೆಂದು ಗಳಪದೆ ಗಿಳಿ,
ಕುಣಿಯದೆ ನವಿಲು,
ಜಿಗಿಯದೆ ಚಿಗರಿ ?
ಕಲ್ಲಿಡುವರೆಂದು ಫಲ ಬಿಡದೆ ಮರ,
ಗೂಡಿಡದೆ ಜೇನುಹುಳ,
ಬಚ್ಚು ಕಟ್ಟದೆ ಹಕ್ಕಿ ?
ಸ್ವತಂತ್ರಧೀರ ಸಿದ್ಧೇಶ್ವರಾ,
ಬೀಗಳೆವರೆಂದು ಬರೆಯನೆ ಕವಿ,
ಬೋಧಿಸನೆ ಪ್ರವಾದಿ,
ಹಿಂದೆಗೆವನೆ ಸತ್ಯವಾದಿ ?

೪೨೩

ಮುಟ್ಟಿದರೆ ಮೃತ್ಯುವನೆ ಬರಿಸುವ ವಿದ್ಯುತ್ತನೇ ಧರಿಸಿ
ಝುಗಝುಗಿಸಿ ನಗುವುವಯ್ಯ ತಾಮ್ರದ ತಂತಿಗಳು ;
ನೆಟ್ಟರೆ ನೆತ್ತರನೆ ಹರಿಸುವ ಸೂಜಿಗಳನೆ ಸಹಿಸಿ
ಸಿಹಿ ಸುರಿಸಿ ಹಾಡುವುವಯ್ಯ ಗಾನದೋಸೆಗಳು ;
ಟ್ರ್ಯಕ್ಟರಿನ, ಬುಲ್‌ಡೋಝರಿನ ಹಲ್ಲಿನ ಗಾಯ ತಳೆದೇ ಬೆಳೆದು
ನಳನಳಿಸಿ ನಲಿವುವಯ್ಯ ಹೊಲ ಗದ್ದೆಗಳು ;
ವಿಧಿಯ ಉಪಟಳ, ಕಾಲನ ಕಿರುಕುಳ, ಕುಜನ ನಿಂದೆ,
ಸ್ವಜನ ಪೀಡೆಗಳಿಗೆ ಈಡಾಗಿಯೂ ಕೇಡನೆಸಗದೆ
ಲೇಸನೇ ಮಾಡುವರಯ್ಯ ಸುಜನರು ;
ಸ್ವತಂತ್ರಧೀರ ಸಿದ್ಧೇಶ್ವರನು ಒಡ್ಡುವ
ಅಗ್ನಿಪರೀಕ್ಷೆಗಳಿಗೆ ಒಳಗಾಗಿಯೂ
ದೇಹಿಯೆನ್ನರಯ್ಯ, ಪಾಹಿಯೆನ್ನರಯ್ಯ, ತ್ರಾಹಿಯೆನ್ನರಯ್ಯ ಶರಣರು !

೪೨೪

ಮತ್ತ ವಾರಣ ಕೆಣಕಿದರೆ ಕನಲಿ ಮೇಲ್ವಾಯ್ವುದಲ್ಲದೆ
ನೊಣ ಕೆಣಕಿದರೆ ಮೇಲೆರಗುವುದೆ ಕೇಸರಿ ?
ಸರ್ಪವು ದರ್ಪ ತೋರಿದರೆ ಮೇಲೆ ಬೀಳ್ವುದಲ್ಲದೆ
ಮಳೆ ಹುಳು ಮೂದಲಿಸಿದರೆ ಮೇಲೆರಗುವುದೆ ಗರುಡ ?



ಹಡಗ ತಡವಿದರೆ ಹೊಡೆದುರುಳಿಸುವುದಲ್ಲದೆ
ಕಡ್ಡಿ ಕಚಕುಳಿಯಿಟ್ಟರೆ ಅಪ್ಪಳಿಸುವುದೆ ತಿಮಿಂಗಿಲು ?
ನಿನ್ನ ಶರಣರು ಮುನಿದರೆ ಮಾತ್ರ
ಗಡುಗುಟ್ಟಿ ನಡುಗುವನಲ್ಲದೆ
ಕುಜನರು ಕಿನಿಸಿದರೆಂದು
ಕಂಪಿಸುವನೆ ನಿನ್ನ ನಿಜಭಕ್ತ,
ಸ್ವತಂತ್ರಧೀರ ಸಿದ್ಧೇಶ್ವರಾ ?

೪೨೫

ಸೂರ್ಯ ಬರುವಾಗ ಸದ್ದಿಲ್ಲ, ಗದ್ದಲವಿಲ್ಲ,
ಸಿಡಿಲು ಬರುವಾಗ ಕಿವಿಗಡಚಿಕ್ಕುವುವಯ್ಯಾ ;
ಶಶಿ ಬರುವಾಗ ತುಸುವೂ ತೊಂದರೆಯಿಲ್ಲ
ಮಿಂಚು ಹೊಯ್ವಾಗ ಕಣ್ಣು ಕುಕ್ಕುವುದಯ್ಯಾ ;
ಸುಗ್ಗಿ ಬರುವಾಗ ಸ್ವಲ್ಪವೂ ಕೋಟಲೆಯಿಲ್ಲ,
ಮಾಗಿ ಬರುವಾಗ ತರಗೆಲೆ ಸರಿ, ಮರ್ಮರ ಸ್ವರವಯ್ಯಾ ;
ಸ್ವತಂತ್ರಧೀರ ಸಿದ್ಧೇಶ್ವರಾ,
ಬಲ್ಲವರು ಇರುವಲ್ಲಿ ಎಳ್ಳನಿತೂ ಸೊರಹಿಲ್ಲ,
ಗಾಂಪರಿರುವಲ್ಲಿ ರಂಪ ಬಹಳವಯ್ಯಾ !

೪೨೬

ಬುದ್ಧಿಯ ಬಳ್ಳಿ ಬಿಟ್ಟ ಸಂಶಯದ ಹೂವಿನಲ್ಲಿ
ಶಾಂತಿಯ ಸುಗಂಧ ದೊರಕುವುದೆ ಅಯ್ಯ ?
ಮನದ ಮರದ ಮರವೆಯ ಚಿಗುರಿನಲ್ಲಿ
ತಿಳಿವಿನ ತನಿರಸ ದೊರೆಯುವುದೆ ಅಯ್ಯ ?
ಕಾಯದ ಕತ್ತಲೆಗೆ ಕೊನರಿದ ಕುಡಿಗಳಲ್ಲಿ
ತೃಪ್ತಿಯ ಬೆಳಕು ಸಿಕ್ಕುವುದೆ, ಅಯ್ಯ ?

ವಾಚ್ಯದ ಬಿದಿರಿನ ಬೇರಿನ ರಸದಲ್ಲಿ
ಸೂಚ್ಯದ ಸವಿಯು ಸಿಕ್ಕುವುದೆ, ಅಯ್ಯ ?
ಸ್ವತಂತ್ರಧೀರ ಸಿದ್ಧೇಶ್ವರಾ,
ಅಲ್ಪರ ಜಲ್ಪದ ಹುಚ್ಚಾಪಟ್ಟೆಯಲ್ಲಿ
ಬಲ್ಲವರ ಸೊಲ್ಲುಗಳ ಬೆಲ್ಲ,
ಶರಣರ ಸೂಳ್ನುಡಿಗಳ ಸಕ್ಕರೆ ಸಿಕ್ಕುವುವೆ, ಅಯ್ಯ ?

೪೨೭

ಹೊಸರಾಜ್ಯಸ್ಥಾಪಕ
ಹಳ ನಾಣ್ಯಗಳನ್ನೇ ಕರಗಿಸಿ ತನ್ನ ಮುದ್ರೆಯೊತ್ತಿದ,
ಹೊಸ ನಾಣ್ಯಗಳೆಂದು ತೂರಿದ ;
ಹೊಸ ಧರ್ಮಸ್ಥಾಪಕ
ಹಳ ತತ್ತ್ವಗಳನ್ನೇ ತಿರಿಚಿ ತನ್ನ ಮುದ್ರೆಯೊತ್ತಿದ,
ಹೊಸ ಧರ್ಮವೆಂದು ಸಾರಿದ ;
ಹೊಸ ವಿಚಾರಪ್ರವರ್ತಕ
ಹಳ ವಿಚಾರಗಳನ್ನೇ ಹೊಸತುಗೊಳಿಸಿ ತನ್ನ ಮುದ್ರೆಯೊತ್ತಿದ,
ಹೊಸ ವಿಚಾರಗಳೆಂದು ಬೀರಿದ !
ಹೊಸತನದ ಹುಚ್ಚು ಮೆಚ್ಚತಕ್ಕುದೇ
ಆದರೆ ಹೊಸದಾವುದಿದೆಯಯ್ಯ ನಿನ್ನ ಮುಂದೆ ?
ಹೊಸದೇನನ್ನಾದರೂ ನೀಡಯ್ಯ ತಂದೆ
ಸ್ವತಂತ್ರಧೀರ ಸಿದ್ಧೇಶ್ವರಾ !

೪೨೮

ಹಳೆ ಮರದ ಚಿಗುರು, 'ನಾನು ನವ, ನಾನು ನವ' ಎಂದಿತು,
ಬೊಡ್ಡೆ ಕೇಳಿ ನಕ್ಕಿತು ;
ಹೊಳೆಯ ಹೊಸ ನೀರು 'ನಾನು ನವ, ನಾನು ನವ' ಎಂದಿತು,
ಕಡಲು ಕೇಳಿ ನಕ್ಕಿತು ;
ಕಾರ ಹೊಸ ಮೋಡ 'ನಾನು ನವ, ನಾನು ನವ' ಎಂದಿತು,
ಬಾನು ಕೇಳಿ ನಕ್ಕಿತು ;



ಕವಿಯ ಹೊಸ ಕವನ 'ನಾನು ನವ, ನಾನು ನವ' ಎಂದಿತು,
ಕಾಲ ಕೇಳಿ ನಕ್ಕಿತು ;
ತೊಟ್ಟಿಲದ ಹೊಸ ಕೂಸು 'ನಾನು ನವ, ನಾನು ನವ' ಎಂದಿತು,
ಸ್ವತಂತ್ರಧೀರ ಸಿದ್ಧೇಶ್ವರ ಕೇಳಿ ನಕ್ಕ !

೪೨೯

ಏನಿದೇನಿದೇನಯ್ಯ–
ಹಳತನದ ಹೂವಿನಲ್ಲಿಯೇ ಹುಟ್ಟಿದ ಹೊಸತನದ ಕಂಪು
ದೆಸೆದೆಸೆಗೆ ಪಸರಿಸಿದುದ ಕಂಡೆ ;
ಹಳೆಯ ಕಿನ್ನರಿಯಲ್ಲಿಯೇ ಹೊಮ್ಮಿದ ಹೊಸ ಗಾನ
ನಾಲ್ಕೂ ನಿಟ್ಟಿಗೆ ಹರಿದಾಡಿದುದ ಕಂಡೆ ;
ಹಳೆಯ ಶಬ್ದಗಳಲ್ಲಿಯೇ ಸೂಸಿದ ಹೊಸ ಅರ್ಥ
ಬುದ್ಧಿಭಾವಗಳಿಗೆ ಹೊಸ ಚೆಲುವು ಚೇತನಗಳನಿತ್ತುದ ಕಂಡೆ ;
ಸ್ವತಂತ್ರಧೀರ ಸಿದ್ಧೇಶ್ವರಾ,
ನಿನ್ನ ಹಳೆಯ ಜಗತ್ತು ಹೊಸ ಪ್ರವಾದಿಯೊಬ್ಬನಿಂದ
ಆಗಿನ ಮಟ್ಟಿಗಾದರೂ ಹೊಸದಾದುದ ಕಂಡೆ !

೪೩೦

ಇಂದು ಯುಗಾದಿಯೋ ಯುಗಾಂತವೋ ?
ಯುಗಾದಿಯಾದರೆ ಎಂಥ ಯುಗದ ಆದಿಯಯ್ಯಾ ?
ಯುಗಾಂತವಾದರೆ ಎಂಥ ಯುಗದ ಅಂತವಯ್ಯಾ ?
ಒಂದರ ಆದಿಯೇ ಇನ್ನೊಂದರ ಅಂತ,
ಒಂದರ ಮರಣದಲ್ಲಿ ಇನ್ನೊಂದರ ಜನನ !
ಅಸು ಬಿಟ್ಟುದರಿಂದಲೇ ಹುಟ್ಟಿದ

ಅಸು ತೊಟ್ಟುದು
ಹೊಸದೆನಿಸುವುದೇ ಚೋದ್ಯವಯ್ಯಾ
ಸ್ವತಂತ್ರಧೀರ ಸಿದ್ಧೇಶ್ವರಾ !

೪೩೧

ವಿಜ್ಞಾನಿಯೆ, ನೀನು ಮನಸ್ಸು ಮಾಡಿದರೆ
ಅನಾರೋಗ್ಯಕರ ಆವಿಗಳಿಂದಲೇ ರಸಗೊಬ್ಬರ ತಯಾರಿಸಬಲ್ಲೆ,
ಶೀಲೀಂಧ್ರಗಳಿಂದಲೇ ಪ್ರಾಣ ಪ್ರದ ಔಷಧ ಸಿದ್ಧಗೊಳಿಸಬಲ್ಲೆ,
ಅಭಾವವನ್ನೇ ಸಮೃದ್ಧಿಯನ್ನಾಗಿ ಮಾರ್ಪಡಿಸಬಲ್ಲೆ,
ಕಲ್ಲನ್ನೂ ರೊಟ್ಟಿಯನ್ನಾಗಿ ರೂಪಾಂತರಿಸಬಲ್ಲೆ !
ಹೀಗಿದ್ದೂ, ಮಾರಣಹೋಮಕ್ಕೆ ಆಜ್ಯವನ್ನೇಕೆ ಎರೆಯಬೇಕಯ್ಯ ನೀನು ?
ಬದುಕಿಸಬಲ್ಲ ವಿಜ್ಞಾನವನ್ನು ಕೊಲ್ಲಲೆಂದೇಕೆ,
ಬೆಳೆಸುತ್ತಿಹೆ, ಬಳಸುತ್ತಿಹೆಯಯ್ಯಾ ?
ಸ್ವತಂತ್ರಧೀರ ಸಿದ್ಧೇಶ್ವರ ಸಾಕ್ಷಿಯಾಗಿ ಹೇಳುವೆ
ನಿನ್ನ ಸನ್ಮತಿಯಲ್ಲಿ ಸಕಲರ ಸುಗತಿ,
ನಿನ್ನ ದುರ್ಮತಿಯಲ್ಲಿ ಸಕಲ ಸಂಹೃತಿಯಯ್ಯಾ !

೪೩೨

ಹೆಣ್ಣೆ, ನೀನು ಸಹನೆಯಲ್ಲಿ ಪೃಥ್ವಿ,
ಕ್ಷಮೆಯಲ್ಲಿ ಜಲ,
ಕರುಣೆಯಲ್ಲಿ ಆಕಾಶ,
ಆಶ್ರಯವೀಯುವಲ್ಲಿ ವಾಯು,
ಆದರೆ, ಹತ್ತಿರಿದ್ದಾಗ ತಂಪೆರಚಿ, ದೂರವಿದ್ದಾಗ ಸುಡುವ ಬೆಂಕಿ !
ಆ ಸುಡುವ ಬೆಂಕಿ ಅದೆಷ್ಟು ಸುಖಕರ !
ಮಿಲನದ ಮಾಧುರ್ಯಕ್ಕೆ ಪ್ರಚ್ಛನ್ನ ವರ !
ಸ್ವತಂತ್ರಧೀರ ಸಿದ್ಧೇಶ್ವರನ ಸೃಷ್ಟಿಯಲ್ಲಿ
ನಿನ್ನಿಂದ ಕಳೆ
ಗಂಡಿನ ಬಾಳಿಗೆ,
ನೀನೆ ಮಧುರದ ಮಳೆ



ಬದುಕಿನ ಬೆಳೆಗೆ !

೪೩೩

ಹೂವಿನ ಗಂಧ ಹಾರಿ ಹೋಗಬಹುದಾಗಲಿ
ಗಂಧದ ಮರದ ಗಂಧ ಹಾರಿ ಹೋಗುವುದೇನಯ್ಯಾ ?
ಎಣ್ಣೆಯ ದೀಪ ಆರಿ ಹೋಗಬಹುದಾಗಲಿ
ರತ್ನದ ದೀಪ ಆರಿಹೋಗುವುದೇನಯ್ಯಾ ?
ಬಳಿದ ಬಣ್ಣ ತೊಳೆದು ಹೋಗಬಹುದಾಗಲಿ
ಮೈ ತಳೆದ ಬಣ್ಣ ತೊಳೆದುಹೋಗುವುದೇನಯ್ಯಾ ?
ಸ್ವತಂತ್ರಧೀರ ಸಿದ್ಧೇಶ್ವರಾ,
ಶ್ರೇಷ್ಠ ಕೃತಿಕಾರನ ಜೀವನ ಮುಗಿದು ಹೋಗಬಹುದಾಗಲಿ
ಶ್ರೇಷ್ಠ ಕೃತಿಯ ಜೀವನ ಮುಗಿದು ಹೋಗುವುದೇನಯ್ಯಾ ?

೪೩೪

ಅರ್ಥ ಅಕ್ಷರಗಳ ಬೆಳಗುವಂತೆ,
ಆರ್ಥ ಸಂಸಾರವ ಬೆಳಗುವಂತೆ,
ಪ್ರೀತಿ ಬಾಳನ್ನೇ ಬೆಳಗುವಂತೆ,
ನೀತಿ ನರರ ಸಂಬಂಧಗಳ ಬೆಳಗುವಂತೆ,
ವಿಶ್ವಾಸ ವ್ಯವಹಾರಗಳ ಬೆಳಗುವಂತೆ,
ಧೈರ್ಯ ಶೌರ್ಯವನ್ನು ಬೆಳಗುವಂತೆ,
ವಿನಯ ವಿದ್ಯೆಯನ್ನು ಬೆಳಗುವಂತೆ,
ದಾನ ಧನಿಕರನ್ನು ಬೆಳಗುವಂತೆ,
ಕ್ಷಮೆ ವೀರರನ್ನು ಬೆಳಗುವಂತೆ
ಶಿಸ್ತು ಸೈನಿಕರನ್ನು ಬೆಳಗುವಂತೆ,

ದಕ್ಷತೆ ಪ್ರಾಮಾಣಿಕತೆ ಆಡಳಿತವನ್ನು ಬೆಳಗುವಂತೆ,
ಜನ ಸೇವೆ ಸರಕಾರವನ್ನು ಬೆಳಗುವಂತೆ,
ನಿನ್ನ ಕೃಪೆ ಜನರ ಕೃತಿಗಳನ್ನು ಬೆಳಗಲಯ್ಯಾ
ಸ್ವತಂತ್ರಧೀರ ಸಿದ್ಧೇಶ್ವರಾ !

೪೩೫

ಇತಿಹಾಸವೆ,
ನೀನು ಪುನರಾವರ್ತನಶೀಲೆಯಂತೆ,
ಪರಾಕ್ರಮಾನುಕೂಲೆಯಂತೆ,
ಮಹದ್ಘಟನೆಗಳ ಮಾಲೆಯಂತೆ,
ಅನುಭವದ ಪಾಠಶಾಲೆಯಂತೆ !
ಇರಬಹುದು !
ಆದರೆ ಇತಿಹಾಸವೆ,
ಹಿಂದೆ ಆಗದಿದ್ದುದು ಮುಂದೆ ಆಗದೆಂಬ
ಮಂದಮತಿಯ ಮಾಣು ;
ಸಾಮಾನ್ಯರ ಅಸಾಮಾನ್ಯ ಶಕ್ತಿ
ನಿನ್ನೆದೆಯಮೇಲೆಯೇ ನರ್ತಿಸುತ್ತಿಹುದ ಕಾಣು ;
ಆಗು ಸಾಮಾನ್ಯತಾ-ಗಿರಿಧರಗೋಪಾಲನ
ಕರದ ಮಧುರ ಸುಂದರ ವೇಣು ;
ಆಗದಿರು ಬಡಬಗ್ಗರ ಕೊರಳ ನೇಣು ;
ಸ್ವತಂತ್ರಧೀರ ಸಿದ್ಧೇಶ್ವರನಾಣೆ ನಿನಗೆ
ನೀನಾಗು ಹೊತ್ತಿನ ಹುಟ್ಟಿನಲ್ಲಿ
ಜನಜೀವನದ ಜೇನು !

೪೩೬



ತೂಗಿ ಕಟ್ಟುವುದೆ ಈಸುಗುಂಬಳದ ಬೆಲೆಯ ?
ಅಳೆದು ಕಟ್ಟುವುದೆ ವಜ್ರ ವೈಢೂರ್ಯಗಳ ಬೆಲೆಯ ?
ಎಣಿಸಿ ಕಟ್ಟುವುದೆ ಕಲಾಕೃತಿಗಳ ಬೆಲೆಯ ?
ವಸ್ತುವಿಗೆ ಸರಿಯಾದ ಒರೆಗಲ್ಲು ಬೇಡವೆ ?
ಪದಾರ್ಥಕ್ಕೆ ತಕ್ಕ ಪರೀಕ್ಷೆ ಬೇಡವೆ ?
ಸ್ವತಂತ್ರಧೀರ ಸಿದ್ಧೇಶ್ವರಾ,
ಜೇನಸುಗಳ ಬೆಲೆ ಕಟ್ಟದಂತೆ
ಜನರ ಬೆಲೆ ಕಟ್ಟದರೆ ಹೇಗಯ್ಯಾ ?

೪೩೭

ಪ್ರೀತಿಸುವವರನ್ನು ಪಡೆಯುವುದು ಕಠಿನ
ಅದಕ್ಕೂ ಕಠಿನ-ಕೆಡದಂತೆ ಪ್ರೀತಿಯ ಕಾಯ್ದುಕೊಂಡು ಹೋಗುವುದು;
ಅತ್ಯುನ್ನತಿಗೆ ಏರುವುದು ಕಠಿನ,
ಅದಕ್ಕೂ ಕಠಿನ-ಏರಿ ಅಲ್ಲಿಯೇ ಉಳಿಯುವುದು ;
ಆದರ್ಶವೊಂದ ಆಯ್ದುಕೊಳ್ಳುವುದು ಕಠಿನ,
ಅದಕ್ಕೂ ಕಠಿನ-ಅದರಂತೆ ಆಚರಿಸುವುದು ;
ಕವಿತೆಯ ಸಮರ್ಪಕ ವ್ಯಾಖ್ಯೆ ನೀಡುವುದು ಕಠಿನ,
ಅದಕ್ಕೂ ಕಠಿನ-ಅದರಂತೆ ಕವಿತೆ ಬರೆಯುವುದು ;
ಸತ್ಕೀರ್ತಿಯನ್ನು ಗಳಿಸುವುದು ಕಠಿನ,
ಅದಕ್ಕೂ ಕಠಿನ-ಗಳಿಸಿದುದನ್ನು ಉಳಿಸಿಕೊಳ್ಳುವುದು;
ಸ್ವತಂತ್ರಧೀರ ಸಿದ್ಧೇಶ್ವರಾ,
ನಿಜಮಾನವನಾಗುವುದು ಕಠಿನ,
ಅದಕ್ಕೂ ಕಠಿನ, ನಿಜಮಾನವನಾಗಿ ಕೊನೆಯವರೆಗೂ ಉಳಿಯುವುದು !

೪೩೮

ಮುಂದುವರಿವುದೆಂದರೇನಯ್ಯ?
ಪೂರ್ವಕ್ಕೆ ಮುಖವಾಗಿ ನಿಂತವರು ಪೂರ್ವದತ್ತ ಹೋಗುವುದೇ
ಮುಂದುವರಿವುದರ ಮರ್ಮವೆನ್ನುತ್ತಾರೆ;

ಪಶ್ಚಿಮಕ್ಕೆದುರಾಗಿ ನಿಂತವರು ಪಶ್ಚಿಮದತ್ತ ಸಾಗುವುದೇ
ಮುಂದುವರಿವುದರ ಲಕ್ಷಣವೆನ್ನುತ್ತಾರೆ !
ಯಾವ ದಿಕ್ಕಿಗೆ ಹೋದರೇನಯ್ಯ
ಒಳಗೆ ತುಕ್ಕು ಹಿಡಿದಿರುವನ್ನಕ್ಕ ?
ಇದ್ದಲ್ಲಿಯೇ ಪ್ರಬುದ್ಧಮತಿ ಶುದ್ಧಚೇತನವಾಗಬಲ್ಲವರಿಗೆ
ಆ ದಿಕ್ಕು ಈ ದಿಕ್ಕು ಎಲ್ಲ ದಿಕ್ಕು
ಒಂದೇ ಅಯ್ಯ, ಸ್ವತಂತ್ರಧೀರ ಸಿದ್ಧೇಶ್ವರಾ !

೪೩೯

ಋತುವ ತೋರುವ ಮತವು ಯಾವುದಾದರೇನು?
ಗುರಿಗೆ ಸೇರಿಸುವ ಪಥವು ಯಾವುದಾದರೇನು?
ಮೌಢ್ಯದ ಗ್ರಂಥಿಯನ್ನು ಬಿಚ್ಚುವ ಗ್ರಂಥ ಯಾವುದಾದರೇನು?
ಬಂಧುತ್ವವನ್ನು ಬೆಳೆಸುವ ಪಂಥ ಯಾವುದಾದರೇನು?
ಮನವ ಘನಗೊಳಿಸುವ ಮಂತ್ರ ಯಾವುದಾದರೇನು?
ಉದ್ಯೋಗಗಳ ಹೆಚ್ಚಿಸುವ ತಂತ್ರ ಯಾವುದಾದರೇನು?
ಮೈಗೆ ಒಪ್ಪುವ ವೇಷ ಯಾವುದಾದರೇನು?
ಜನಕ್ಕೆ ಒದಗುವ ಕೋಶ ಯಾವುದಾದರೇನು?



ಸ್ವತಂತ್ರಧೀರ ಸಿದ್ಧೇಶ್ವರಾ,
ಜೀವನಕ್ಕೆ ಸವಿ ಬೆಳಕುಗಳನ್ನು ಬರಿಸುವ
ಜೀವನ ದರ್ಶನ ಯಾವುದಾದರೇನು ?

೪೪೦

ಕರುಣೆಯೇ ಕಾಶಿ, ದಯೆಯೇ ಗಯೆ,
ಕನಿಕರವೇ ಕಾಂಚಿ ಕೇದಾರಗಳಯ್ಯಾ;
ಪ್ರೀತಿ ಜ್ಯೋತಿರ್ಲಿಂಗ, ಮಮತೆ ಮಕ್ಕಾ ಮದೀನಾ,
ಭ್ರಾತೃತ್ವವೇ ಬೆತ್ಲೆಹೇಮ್ ಕಂಡಯ್ಯಾ ;
ಕಲ್ಯಾಣವೇ ಕಲ್ಯಾಣ, ಔದಾರ್ಯವೇ ಉಡುಪಿ,
ಸದ್ಗುಣಗಳೇ ಶೃಂಗೇರಿ ಶ್ರವಣಬೆಳಗೊಳಗಳಯ್ಯಾ ;
ಶುದ್ಧಾಂತರಂಗವೇ ಗಂಗೆ, ಯಮುನೆ, ತುಂಗಭದ್ರೆ,
ಪಾವನತೆ ಕಾವೇರಿ, ನಿರ್ಮಲತೆ ನರ್ಮದೆ,
ಶುಭ್ರಶೀಲವೆ ಕೃಷ್ಣೆ ಗೋದಾವರಿಗಳಯ್ಯಾ;
ಸ್ವತಂತ್ರಧೀರ ಸಿದ್ಧೇಶ್ವರಾ,
ಜೀವಿಯಿದ್ದೆಡೆ ಕ್ಷೇತ್ರ, ಹೃದಯವಿದ್ದೆಡೆ ತೀರ್ಥ,
ಸದ್ಭಾವ, ಸತ್ಕರ್ಮಗಳಿದ್ದೆಡೆಯೊಳೇ ಸದ್ಧರ್ಮವಯ್ಯಾ !

೪೪೧

ಬಾಲ್ಯದ ನಿರ್ಮಾಲ್ಯ ಯೌವನಕ್ಕಿಲ್ಲ,
ಯೌವನದ ಉತ್ಸಾಹ ವಾರ್ಧಕ್ಯಕ್ಕಿಲ್ಲ,
ವಾರ್ಧಕ್ಯದ ಅನುಭವ ಯೌವನಕ್ಕಿಲ್ಲ,
ವೃದ್ಧಾಪ್ಯದ ವಿವೇಕ ವಾರ್ಧಕ್ಯಕ್ಕಿಲ್ಲ,
ಒಂದರ ವೈಶೇಷ್ಯ ಇನ್ನೊಂದಕ್ಕಿಲ್ಲ
ಒಂದೇ ಜೀವನದಲ್ಲಿ !
ಒಮ್ಮೆಯಾದರೂ ಬಾಲ್ಯದ ನಿರ್ಮಾಲ್ಯ
ಯೌವನದ ಉದಮದದೊಡನೆ ಬೆರೆಯಬಾರದೇನಯ್ಯಾ?
ಒಮ್ಮೆಯಾದರೂ ಯೌವನದ ಉತ್ಸಾಹ
ವಾರ್ಧಕ್ಯದ ಅನುಭವದೊಡನೆ ಬೆರೆಯಬಾರದೇನಯ್ಯಾ?

ಒಮ್ಮೆಯಾದರೂ ವೃದ್ಧಾಪ್ಯದ ವಿವೇಕ
ಯೌವನದ ಉತ್ಸಾಹದೊಡನೆ ಬೆರೆಯಬಾರದೇನಯ್ಯಾ?
ಬೆರೆದರೆ ಎಂಥ ಬೆರಗುಗೊಳಿಸುವ ಬಾಳದಾದೀತು !
ಇಂಥ ಜೀವನದ ಸೃಷ್ಟಿಯಾದರೆ ದೃಷ್ಟಿಯಾದೀತೆಂದು
ಈ ವಿಚಿತ್ರ ವ್ಯವಸ್ಥೆಯನ್ನು ಮಾಡಿರುವಿಯೇನಯ್ಯಾ;
ಸ್ವತಂತ್ರಧೀರ ಸಿದ್ಧೇಶ್ವರಾ ?

೪೪೨

ಜೇನಿನ ತಾಣವನ್ನು ಕಾಣುವಷ್ಟರಲ್ಲಿ
ಜೇನು ಮುಗಿದು ಹುಟ್ಟು ಮಾತ್ರ ಉಳಿದಿದ್ದುದಯ್ಯಾ ;
ಮುತ್ತಿನ ನೆಲೆಯ ಗೊತ್ತುಹಚ್ಚುವುದರೊಳಗಾಗಿ
ಮುತ್ತು ಮುಗಿದು ಸಿಂಪು ಮಾತ್ರ ಉಳಿದಿದ್ದುವಯ್ಯಾ;
ಹೊನ್ನಿನ ಗಣಿಯ ಗುರುತಿಸುವುದರೊಳಗಾಗಿ
ಹೊನ್ನು ಮುಗಿದು ಮಣ್ಣು ಮಾತ್ರ ಉಳಿದಿದ್ದುದಯ್ಯಾ;
ಸ್ವತಂತ್ರಧೀರ ಸಿದ್ಧೇಶ್ವರಾ,
ಜೀವನದ ಗೊತ್ತುಗುರಿ ಅರ್ಥವಾಗುವಷ್ಟರಲ್ಲಿ
ಜೀವನ ಮುಗಿದು ಮರಣ ಮುಂದಿದ್ದುದಯ್ಯಾ !

೪೪೩

ಓಟುಗಳ ಬೆಲೆ ಬೆಳೆಯುತ್ತಿದೆ,
ನೋಟುಗಳ ಬೆಲೆ ಇಳಿಯುತ್ತಿದೆಯಯ್ಯಾ ;
ಎಲ್ಲವೂ ತುಟ್ಟಿಯಾಗುತ್ತಿದೆ,
ಮನುಜ ಮಾತ್ರ ಅಗ್ಗವಾಗುತ್ತಲಿಹನಯ್ಯಾ;
ಭೂಮ್ಯಾಕಾಶಗಳ ನಡುವಣ ಅಂತರ
ಕಡಮೆಯಾಗುತ್ತಿವೆ.
ಮನುಜ ಮನುಜರ ನಡುವಣ ಅಂತರ
ಹೆಚ್ಚುತ್ತಿದೆಯಯ್ಯಾ ;
ಜ್ಞಾನ ವಿಜ್ಞಾನಗಳು ಹೆಚ್ಚುತ್ತಿವೆ,



ಪ್ರೀತಿ ವಿಶ್ವಾಸಗಳು ಕಡಮೆಯಾಗುತ್ತಿವೆಯಯ್ಯಾ ;
ಕಲೆ ಸಾಹಿತ್ಯಗಳ ವ್ಯಾಪ್ತಿ ಹೆಚ್ಚುತ್ತಿದೆ,
ಅವುಗಳ ಗುಣ ಘನತೆ
ಕಡಮೆಯಾಗುತ್ತಿವೆಯಯ್ಯಾ ;
ಉಣ್ಣುವ ಬಾಯಿಗಳು ಹೆಚ್ಚುತ್ತಿವೆ,
ದುಡಿಯುವ ಕೈಗಳು
ಕಡಮೆಯಾಗುತ್ತಿವೆಯಯ್ಯಾ ;
ನಗರ ವಿಸ್ತರಣೆಗಳು ಹೆಚ್ಚುತ್ತಿವೆ,
ಬಗೆಯ ವಿಸ್ತರಣೆಗಳು
ಕಡಮೆಯಾಗುತ್ತಿವೆಯಯ್ಯಾ ;
ಊರೂರಿಗೆ ಯೋಜನೆಗಳು ಹೆಚ್ಚುತ್ತಿವೆ,
ಮನಮನಗಳ ಸಂಯೋಜನೆಗಳು
ಕಡಮೆಯಾಗುತ್ತಿವೆಯಯ್ಯಾ ;
ಸ್ವತಂತ್ರಧೀರ ಸಿದ್ಧೇಶ್ವರಾ,
ಹೊರಗೆ ಸಿರಿ ಹೆಚ್ಚಿದಷ್ಟೂ
ಒಳಗೆ ಬಡತನ ಬೆಳೆಯುತ್ತಿವೆಯಯ್ಯಾ !

೪೪೪

ಕತ್ತಲೆಯನ್ನು ಕಡೆದರೆ
ಬೆಳಕಿನ ಬೆಣ್ಣೆ ಬರಬಹುದೆ ? ಬಾರದಯ್ಯಾ!
ತಾಮಸವನ್ನು ತಳಿಸಿದರೆ
ತಿಳಿವಿನ ತಂಡುಲ ಬರುವುದೆ ? ಬಾರದಯ್ಯಾ !
ಸ್ವತಂತ್ರಧೀರ ಸಿದ್ಧೇಶ್ವರಾ,
ನಿನ್ನೊಲುಮೆಯ ಗಳಿಸದೆ ಗೈದ ಸಾಧನೆಗೆ
ಸಿದ್ಧಿಶ್ರೀ ದೊರೆಯಬಹುದೆ ? ದೊರೆಯದಯ್ಯಾ !

೪೪೫

ತತ್ತ್ವರಹಿತ ರಾಜಕಾರಣ,

ಶ್ರಮರಹಿತ ಸಂಪತ್ತು,
ನೀತೀಹೀನ ವ್ಯಾಪಾರ,
ಶೀಲಶೂನ್ಯ ಶಿಕ್ಷಣ,
ಮನಸ್ಸಾಕ್ಷಿಯಿಲ್ಲದ ಭೋಗ,
ಮನುಷ್ಯತ್ವ ವಿರಹಿತ ವಿಜ್ಞಾನ,
ತ್ಯಾಗವೀಹೀನ ಪೂಜನ
ಏನೇನು ಈ ದೇಶದಲ್ಲಿ ಬರಬಾರದೆಂದು
ಹೆಣಗಿ ಹೆಣಗಿ ಬಲಿಯಾದೆಯೋ
ಆ ಅನಿಷ್ಟಗಳೆಲ್ಲ ಬಂದಿವೆಯಿಲ್ಲಿ ಬಾಪೂಜಿ !
ವಿಷಮತೆಯ ವಿಷವೃಕ್ಷ ಕಡಿದಷ್ಟೂ ಕೊನರುತ್ತಿದೆ,
ಅಸ್ಪೃಶ್ಯತೆಯ ನಂಜಿನ ಬೆಳೆ ಕತ್ತರಿಸಿದನಿತೂ ಚಿಗುರುತ್ತಿದೆ,
ಬಡತನದ ರಕ್ತಬೀಜ ತುಂಡರಿಸಿದಷ್ಟೂ ಉದ್ದಂಡನಾಗುತ್ತಿದ್ದಾನೆ !
ನೀ ತೋರಿದ ದಾರಿಯಿಂದ ದೂರವಾದಷ್ಟೂ
ಅಧೋಗತಿಗೆ ಹತ್ತಿರವಾಗುತ್ತಿದ್ದೇವೆ !
ಸ್ವತಂತ್ರಧೀರ ಸಿದ್ಧೇಶ್ವರಾ,
ಭಾರತ ಮತ್ತೆ ಬಾಪೂಜಿಯ ದಾರಿಗೆ
ಬರುವಂತೆ ಮಾಡಾ, ತಂದೆ !

೪೪೬

ಪ್ರೀತಿ ಮಾರ್ಗ, ನೀತಿ ಮಾರ್ಗ, ಸತ್ಯ ಮಾರ್ಗ, ಸ್ನೇಹ ಮಾರ್ಗ,
ವಿನಯ ಮಾರ್ಗ, ನ್ಯಾಯ ಮಾರ್ಗ, ಪಂಚಶೀಲ ಮಾರ್ಗ-
ಇಂದು ಎಲ್ಲ ಸದ್ಗುಣಗಳೂ ಮಾರ್ಗಫಲಕಗಳನ್ನು ಆಶ್ರಯಿಸಿವೆಯಯ್ಯಾ !
ಮನದಲ್ಲಿ, ಮನೆಯಲ್ಲಿ ಸ್ಥಳವಿಲ್ಲವೆಂದು
ಬೀದಿಪಾಲು ಮಾಡಿರುವೆವಯ್ಯಾ ಸುಗುಣ ಸಂತತಿಯನ್ನು !
ಮೊದಲು ನಿನ್ನ ತಲೆಗೆ ಕಟ್ಟಿ ಹಿಗ್ಗುತ್ತಿದ್ದೆವು, ಕಲ್ಯಾಣಗುಣಗಳನ್ನು
ಈಗ ಬೀದಿಗಳಿಗೆ ಅಟ್ಟಿ ಹರ್ಷಿಸುತ್ತಿಹೆವಯ್ಯಾ
ಸ್ವತಂತ್ರಧೀರ ಸಿದ್ಧೇಶ್ವರಾ !

೪೪೭



ಭ್ರಷ್ಟಾಚಾರವೇ ಶಿಷ್ಟಾಚಾರದ ವೇಷ ತೊಟ್ಟಿದೆ,
ಶೀಲಶೂನ್ಯತೆಯೇ ಸಭ್ಯತೆಯ ಉಡುಪು ಉಟ್ಟಿದೆ,
ಶೋಷಣೆಯೇ ಸಾಮ್ಯವಾದದ ಸೋಗು ಹಾಕಿದೆ,
ಮೋಸವೇ ಲೇಸಿನ ಆಭಾಸ ಹುಟ್ಟಿಸಿದೆ,
ಸಟೆಯೇ ದಿಟದ ಲಾಂಛನ ಧರಿಸಿದೆ,
ಹುಸಿ ಪ್ರಚಾರ ಕಸಕ್ಕೆ ಕಸವರದ ಸ್ಥಾನ ಕೊಟ್ಟಿದೆ,
ಜಾತೀಯತೆ ರ್‍ಾಷ್ಟ್ರೀಯತೆಗೆ ಸೆದಿಗೆ ಸಿದ್ಧಗೊಳಿಸುತ್ತಿದೆ,
ಸ್ವೈರವೃತ್ತಿ ಸ್ವಾತಂತ್ರ್ಯದ ಸಮಾಧಿ ಕಟ್ಟುತ್ತಿದೆ,
ಮಾಂಸವು ಮಾನಸವನ್ನು ಅದುಮಿಬಿಟ್ಟಿದೆ,
ವಿಕಾರ ವಿಚಾರದ ತಲೆಯನ್ನೇ ಕುಟ್ಟಿದೆ,
ದುರ್ನೀತಿ ನೀತಿ ಪ್ರೀತಿಗಳ ಎದೆಯನ್ನೇ ಮೆಟ್ಟಿದೆ !
ಇದು ಬಿಡುಗಡೆಯ ಹೊಲದ ಬೆಳಸು,
ಇದಾಗದಿರಲಿ ದೇಶವಾಸಿಗಳಿಗೆ ವಿಷದ ಉಣಿಸು !
ಸ್ವತಂತ್ರಧೀರ ಸಿದ್ಧೇಶ್ವರಾ,
ಇದು ಮಾರಕವಾಗುವ ಮುನ್ನ ಕಳೆ ಕಿತ್ತು ಬೆಳೆ ಉಳಿಸು ;
ಅವನತಿಯ ಗೊಬ್ಬರದಿಂದಲೇ ಉನ್ನತಿಯ ಸಿರಿಬೆಳೆಯ ಬೆಳೆಸು !

೪೪೮

ಭಾರತಕ್ಕೆ ಬಹಳಷ್ಟು 'ಬಾಬಾ'ಗಳನ್ನು ಕೊಟ್ಟಿರುವೆ,
ಈಗ ಸಾಕಷ್ಟು 'ಭಾಭಾ'ಗಳನ್ನು ಕೊಡಯ್ಯಾ ;
ಬಹಳಷ್ಟು ತಾತಾ ಎಂಬ 'ತಾತಾ'ಗಳನ್ನು ಕೊಟ್ಟಿರುವೆ,
ಈಗ ಸಾಕಷ್ಟು 'ಟಾಟಾ'ರನ್ನು ಕೊಡಯ್ಯಾ ;
ಬ್ರಹ್ಮ ಜ್ಞಾನಿಗಳ ಜೊತೆಗೆ ವಿಜ್ಞಾನಿಗಳನ್ನು,
ಮಂತ್ರ ದ್ರಷ್ಟಾರರ ಜೊತೆಗೆ ಯಂತ್ರ ತಂತ್ರ ಬ್ರಹ್ಮರನ್ನು ಸೃಷ್ಟಿಸಿಲ್ಲಿ !
ಇಲ್ಲಿಯ ನೆಲ, ಜಲ, ಅನಿಲ, ತೈಲ ಸೌರಶಕ್ತಿಗಳ, ಖನಿಜಗಳ ಬಳಸಿ
ಬಡತನದ ಅದಿರಿನಿಂದಲೇ ಸಿರಿಸೌಖ್ಯಗಳ ಸುವರ್ಣ ಸೃಜಿಪ
ರಸಸಿದ್ಧರ ಹುಟ್ಟಿಸಿಲ್ಲಿ ಸ್ವತಂತ್ರಧೀರ ಸಿದ್ಧೇಶ್ವರಾ !

೩೪೯

ಬುದ್ಧಿಜೀವಿಗಳು ನಿರಾಶಾನಿಬದ್ಧ ಜೀವಿಗಳಾಗಿದ್ದಾರೆ,
ಅಪ್ರಬುದ್ಧ ಜೀವಿಗಳು ಗುರಿಗಮ್ಯಗಳಿಲ್ಲದ ಕ್ರುದ್ಧ ಜೀವಿಗಳಾಗಿದ್ದಾರೆ,
ಶ್ರಮಜೀವಿಗಳು ಮುಷ್ಕರ ಮಾತ್ರಕ್ಕೆ ಸನ್ನದ್ಧ ಜೀವಿಗಳಾಗಿದ್ದಾರೆ.
ಕೃಷಿ ಜೀವಿಗಳು ಸಾಲ ಕಡಗಳಲ್ಲಿ ಮಾತ್ರ ಸಮೃದ್ಧ ಜೀವಿಗಳಾಗಿದ್ದಾರೆ,
ಸೇವಾ ಜೀವಿಗಳು ಲಂಚ ವಂಚನೆಗಳಲ್ಲಿ ಪ್ರಸಿದ್ಧ ಜೀವಿಗಳಾಗಿದ್ದಾರೆ.
ರಾಜಕೀಯ ಜೀವಿಗಳು ರಕ್ತಶೋಷಣೆಯಲ್ಲಿ ಸಿದ್ಧಜೀವಿಗಳಾಗಿದ್ದಾರೆ,
ವಾಣಿಜ್ಯಜೀವಿಗಳು ಕಾಳಸಂತೆಯಲ್ಲಿ ಪ್ರಬುದ್ಧ ಜೀವಿಗಳಾಗಿದ್ದಾರೆ !
ಇನ್ನುಳಿದವರು ಪರೋಪಜೀವಿಗಳು,
ಪಾದೋಪಜೀವಿಗಳು, ಪದಕೋಪಜೀವಿಗಳು,
ಘೋಷಣೋಪಜೀವಿಗಳು ಘರ್ಷಣೋಪಜೀವಿಗಳು !
ಎಂತಯ್ಯಾ ಭಾರತ ಬಲಾಢ್ಯವಾಗುವುದು ?
ಎಂತಯ್ಯಾ ಈ ದೇಶ ಸಮೃದ್ಧವಾಗುವುದು ?
ಎಚ್ಚರಿಸು ಎಲ್ಲರೆದೆಗಳಲ್ಲಿ ಉಚ್ಚ ಭಾವನೆಗಳನು,
ಉಚ್ಚರಿಸು ಎಲ್ಲರ ಕಿವಿಗಳಲ್ಲಿ ಕರ್ತವ್ಯ ಮಂತ್ರವನ್ನು,
ನೀಡು ಕೋಟಿ ಕೋಟಿ ಕರಗಳಿಗೆ ಕಾರ್ಯೋತ್ಸಾಹವನ್ನು !
ನೋಡಾಗ, ಕೇಡಿನಿಂದಲೇ ಕೋಡಿವರಿವ
ಒಳಿತಿನ ಮಹಾ ಪ್ರವಾಹವನ್ನು – ಸ್ವತಂತ್ರಧೀರ ಸಿದ್ಧೇಶ್ವರಾ!

೩೫೦

ಅಬಲೆಯರ ಅಶ್ರುಗಳಲ್ಲಿಯೇ ನೀನು ಬರೆದಿಹೆಯಯ್ಯ
ರಾಜ್ಯ ಸಾಮ್ರಾಜ್ಯಗಳ ವಿನಾಶ ಗಾಥೆಯನ್ನು ;
ಸಜ್ಜನರ ಬಾಷ್ಪಗಳಲ್ಲಿಯೇ ಬರೆದಿಹೆಯಯ್ಯಾ
ದುರ್ಜನರ ಹಂಸಗೀತೆಯನ್ನು ;
ಬಡವರ ಕಂಬನಿಗಳಲ್ಲಿಯೇ ಬರೆದಿಹೆಯಯ್ಯಾ
ಒಡೆಯರ ಪತನದ ಕಥೆಯನ್ನು ;
ದುಡಿವವರ ಬೆವರಿನ ಹನಿಗಳಲ್ಲಿಯೇ ಬರೆದಿಹೆಯಯ್ಯಾ
ಪಡೆವವರ ಪೀಡಾಸ್ಮೃತಿಯನ್ನು ;
ಸ್ವತಂತ್ರಧೀರ ಸಿದ್ಧೇಶ್ವರಾ,



ಇಂದೆನ್ನ ನೆತ್ತರಿನಲ್ಲಿಯೇ ಬರೆಯಯ್ಯಾ
ಭಾರತದ ಉತ್ಥಾನಚರಿತೆಯನ್ನು !

೩೫೧

ಭಾರತದ ಭವಿತವ್ಯವನ್ನು ಕುರಿತು ಚಿಂತಿಸುವವನೆ,
ಮೊದಲು ನಿನ್ನ ಕರ್ತವ್ಯದ ಬಗ್ಗೆ ಯೋಚಿಸು !
ಅವರಿವರು ಮಾಡಿದುದು ಸರಿಯಲ್ಲವೆಂದು ಸಾಧಿಸುವವನೆ,
ಸರಿಯಾದುದನ್ನೊಮ್ಮೆ ಮಾಡಿ ತೋರಿಸು !
ಕೆಟ್ಟುದಕ್ಕೆಲ್ಲ ಅವರಿವರು ಹೊಣೆಗಾರರೆಂದು ಹೇಳುವವನೆ,
ಒಳ್ಳೆಯದನ್ನು ಒಮ್ಮೆಯಾದರೂ ಮಾಡಿ ತೋರಿಸು !
ಸ್ವತಂತ್ರಧೀರ ಸಿದ್ಧೇಶ್ವರನ ಹೆಸರಿನಲ್ಲಿ ಸವಾಲು ನಿನಗೆ
ಹಳಬರ ಹಾಳು ಮಾಡಿದರೆಂದು ಹೇಳಿ ತೃಪ್ತನಾಗದೆ
ಹೊಸಬ ನೀನು ಏನಾದರೂ ಎದ್ದು ಕಾಣುವುದನ್ನು
ಮಾಡಿ ತೋರಿಸು !

೩೫೨

ಸ್ವಂತ ಚಿಂತನೆಗಂಜಿ, ಸ್ವನಿರ್ಣಯಕ್ಕೆ ಹಿಂಜರಿದು,
ಯಾರನಾದರೂ ನಂಬಿ ನಿಶ್ಚಿಂತರಾಗಿರುವ ನಿರ್ಮಾನುಷತೆ
ತೊಲಗಲಯ್ಯಾ ಈ ದೇಶದಿಂದ !
ಯಾರಮೇಲೆಯೋ ಭಾರ ಹಾಕಿ, ಹೊಣೆಗಾರಿಕೆಗೆ ನೇಣು ಹಾಕಿ,
ಹೆರವರೆಂಜಲಿನಿಂದ ಹೊಟ್ಟೆಹೊರೆವ
ಹೇಡಿತನ ಹೋಗಲಯ್ಯಾ ಈ ದೇಶದಿಂದ !
ಭಿಕ್ಷೆ ನೀಡಿದವರಿಗೇ ಬೋಧೆ ಮಾಡುವ,
ಕೊಟ್ಟ ದಾನದಲ್ಲಿಯೇ ಹುಳುಕು ಹುಡುಕುವ,
ನೀಡಿದ ಆತಿಥ್ಯದಲ್ಲಿಯೇ ದೋಷವರಸುವ,
ಮಾಡಿದವರಿಗೇ ಮೂದಲಿಸುವ,
ಎಲ್ಲದಕ್ಕೂ ಒಂದಿಲ್ಲೊಂದು ಹೆಸರಿಡುವ, ಹೀನತನ
ಮರೆಯಾಗಲಯ್ಯಾ ಈ ದೇಶದಿಂದ, ಸ್ವತಂತ್ರಧೀರ ಸಿದ್ಧೇಶ್ವರಾ !

೪೫೩

ಈ ದೇಶದಲ್ಲಿ ಪ್ರತಿಭಾ ಸಂಹಾರವಾಗುತ್ತಿರುವಷ್ಟು
ಇನ್ನಾವ ದೇಶದಲ್ಲಿ ಆಗುತ್ತಿದೆಯಯ್ಯಾ ?
ಗುರುಗಳಿಂದ ಶಿಷ್ಯರ ಪ್ರತಿಭಾಸಂಹಾರ,
ವರಿಷ್ಠ ಅಧಿಕಾರಿಗಳಿಂದ ಕನಿಷ್ಠ ಅಧಿಕಾರಿಗಳ ಪ್ರತಿಭಾಸಂಹಾರ,
ಮಾಲೀಕರಿಂದ ಕಾರ್ಮಿಕರ ಪ್ರತಿಭಾಸಂಹಾರ,
ಹಿರಿಯರಿಂದ ಕಿರಿಯರ, ಅತ್ತೆಯಿಂದ ಸೊಸೆಯ,
ಮೇಲಿನವರಿಂದ ಕೆಳಗಿನವರ ಪ್ರತಿಭಾಸಂಹಾರ !
ಧರ್ಮದ ಹೆಸರಿನಲ್ಲಿ, ದೇವರ ಹೆಸರಿನಲ್ಲಿ,
ವರ್ಣದ ಹೆಸರಿನಲ್ಲಿ, ವರ್ಗದ ಹೆಸರಿನಲ್ಲಿ
ಭಾಷೆಯ ಹೆಸರಿನಲ್ಲಿ, ಪ್ರದೇಶದ ಹೆಸರಿನಲ್ಲಿ,
ಲಿಂಗ ವಯಗಳ ಹೆಸರಿನಲ್ಲಿ, ಪಕ್ಷಪಂಥಗಳ ಹೆಸರಿನಲ್ಲಿ,
ನಡೆದಿದೆ ನಿರಂತರ ಪ್ರತಿಭಾಸಂಹಾರ !
ಈ ಪ್ರತಿಭಾಸಂಹಾರಕ್ಕೆ, ತಜ್ಜನ್ಯ ಪ್ರತಿಭಾ ಪಲಾಯನಕ್ಕೆ
ಅಡ್ಡಿ ಮಾಡಾ, ಅಡ್ಡಬಾರಾ ಸ್ವತಂತ್ರಧೀರ ಸಿದ್ಧೇಶ್ವರಾ !

೪೫೪

ಮಂತ್ರಿಗಳ ಮನೆಗೆ ಎಡತಾಕುವ ಸ್ವಾಮಿಗಳು ಕೆಲವರು,
ರಾಜಕಾರಣಿಗಳ ಬಾಲ ಹಿಡಿದು ತಿರುಗುವ ಬುದ್ಧಿಜೀವಿಗಳು ಹಲವರು,
ನಟನಟಿಯರ ಬೆಂಬತ್ತಿ ಅಲೆವ ನವಯುವಕರು ಅನೇಕರು,
ಶಾಸನಕಾರರಿಗೆ ಕೊಡೆಹಿಡಿದು ನಡೆವ ಸರಕಾರದ ಅಧಿಕಾರಿಗಳು
ಸಾಕಷ್ಟು ಜನರು !
ಇಂಥ ಅಧಃಪಾತವನ್ನು ಈ ಹಿಂದೆ
ನೋಡಿದ್ದೆಯೇನಯ್ಯಾ ನೀನಾದರೂ ?
ನಿನಗೂ ನಮ್ಮ ಅಧೋಗತಿಯಲ್ಲಿಯೇ ಆಸಕ್ತಿಯೇನು ಈಗ ?
ಈ ಅವನತಿಯ ಅಧ್ಯಾಯ ಮುಗಿಯಲಿ ಬೇಗ !
ನೆಲಕ್ಕೆ ಬಿದ್ದೇ ಮೇಲಕ್ಕೆ ಪುಟಿಯಬೇಕೇನು ಪ್ರಗತಿಯ ಚೆಂಡು ?
ತಳಕ್ಕೆ ಇಳಿದೇ ಎತ್ತುವವರ ಕಾಯಬೇಕೇನು ಗುರಿಯ ಗುಂಡು ?
ಕೆಳಗೆ ನೂಕಿರುವ ನೀನೇ ಮೇಲೆತ್ತು ತಂದೆ,



ಮೇಲೆತ್ತು ಇಂದೆ, ಶರಣು ಬಂದೆ, ಸ್ವತಂತ್ರಧೀರ ಸಿದ್ಧೇಶ್ವರಾ !

೪೫೫

ಇಳೆಯ ಕಾಳವೆಲ್ಲ ದಾಳಿಯಿಟ್ಟರೂ
ಒಂದು ಪುಟ್ಟ ದೀಪವ ಆರಿಸಲಾರದಯ್ಯಾ ;
ಖಳಚತುಷ್ಟಯ ಮತ್ತೆ ಮತ್ತೆ ಹುಟ್ಟಿಬಂದರೂ
ಸಕಲದಾಸ್ಯವನಿಲ್ಲಿ ಸ್ಥಾಪಿಸಲಾರದಯ್ಯಾ ;
ಸ್ವತಂತ್ರಧೀರ ಸಿದ್ಧೇಶ್ವರಾ,
ಕೈಕಾಲುಗಳಿಗೆ ಕೋಳ ತೊಡಿಸಿ
ಸ್ವಾತಂತ್ರ್ಯದ ದಮನವನ್ನಿಲ್ಲಿ ಸಾಧಿಸಲಾಗದಯ್ಯಾ !

೪೫೬

ಓ ಸ್ವಾತಂತ್ರ್ಯವೆ,
ಪರಮಾತ್ಮನಾತ್ಮವೆ,
ಬದುಕಿನ ಹೆಡೆಯ ರತ್ನವೆ
ಸೃಷ್ಟಿಗಿಹ ಅರ್ಥವೆ,
ನಿನ್ನ ಪ್ರಾಪ್ತಿ ಜೀವನ, ನಿನ್ನ ಲುಪ್ತಿ ಮರಣ ;
ನಿನ್ನ ಒಪ್ಪು ಒಳಿತು, ನಿನ್ನ ತಪ್ಪು ಕೆಡುಕು ;
ನಿನ್ನ ಹಾಸ ವಿಕಾಸ, ನಿನ್ನ ರೋಷ ವಿನಾಶ ;
ನಿನ್ನ ಮಿತಿಯಲ್ಲಿ ಹಿತ, ಅತಿಯಲ್ಲಿ ಅಹಿತ ;
ನಿನ್ನ ಸದುಪಯೋಗ ಸ್ವರ್ಗ, ನಿನ್ನ ದುರುಪಯೋಗ ನರಕ ;
ಎಚ್ಚರಿರುವವರಿಗೆ ನೀನು ವರದಾನ, ಗೊರಕೆ ಹೊಡೆವರಿಗೆ ಬರಿಶೂನ್ಯ !
ಉಪ್ಪವಡಿಸು ಅರುವತ್ತು ಕೋಟಿ ಭಾರತೀಯರ ಎದೆಗಳಲ್ಲಿ ;
ಸೃಜನಶೀಲತೆಗೆ, ಶ್ರಮನಿಷ್ಠೆಗೆ ಸಂವೇದನೆಯ ನೀಡು,
ಸಮೃದ್ಧ ಸುಸಂಸ್ಕೃತ ಜೀವನಕ್ಕೆ ಸುಪ್ರೇರಣೆಯನ್ನು ನೀಡು,
ಸ್ನೇಹ ಸಹಕಾರ ಸಹೋದರತೆ ಸಹೃದಯತೆಗಳಿಗೆ
ಪ್ರಬಲ ಪ್ರಚೋದನೆಯನ್ನು ನೀಡು !

ಮೃತಸಂಜೀವಿನಿಯಾಗು, ಸಹಜೀವನವಾಹಿನಿಯಾಗು,
ಸಾಹಸೋತ್ತೇಜಿನಿಯಾಗು, ಸ್ವರಾಜ್ಯಗೇಹಿನಿಯಾಗು,
ಮೇಲು ಮೇಲಿನ ಗತಿಗೆ ಮೆಟ್ಟಿಲಾಗು,
ಸಂಸ್ಕೃತಿಶಿಶುವಿನ ತೊಟ್ಟಿಲಾಗು,
ಅರಿವಿನ ಅಮೃತದ ಬಟ್ಟಲಾಗು,
ಸ್ವತಂತ್ರಧೀರ ಸಿದ್ಧೇಶ್ವರನ,
ಸಂಕಲ್ಪಗಳ ಸಂಪೂರ್ತಿಸಾಧನವಾಗು !

೪೫೭

ಲೋಕಸಭೆಯಿಂದ ಗ್ರಾಮಸಭೆಗಳವರೆಗೆ
ಹಿಂದೆಂದೂ ಇಲ್ಲದಷ್ಟು ಅಧಿಕಾರದ ವಿಕೇಂದ್ರೀಕರಣವಾಗುತ್ತಿದೆಯಯ್ಯ
ಭಾರತದಲ್ಲಿ ಇಂದು :
ಶಾಸನ ರಚಿಸುವ ಅಧಿಕಾರ, ಕರ ಹೇರುವ ಅಧಿಕಾರ,
ದಂಡ ವಿಧಿಸುವ ಅಧಿಕಾರ, ವಿಧಾನ ಬದಲಿಸುವ ಅಧಿಕಾರ,
ಆಯ್ಕೆಗೆ ನಿಲ್ಲುವ ಅಧಿಕಾರ, ಮತ ನೀಡುವ ಅಧಿಕಾರ,
ಅಭಿಪ್ರಾಯ ತಿಳಿಸುವ ಅಧಿಕಾರ, ಎಲ್ಲ ಟೀಕಿಸುವ ಅಧಿಕಾರ,
ಸಂಘಟಿಸುವ, ಸಂಘೋಷಿಸುವ, ಸಂಘರ್ಷಿಸುವ ಅಧಿಕಾರ,
ಘೇರಾಯಿಸುವ, ಗುಲ್ಲೆಬ್ಬಿಸುವ, ಕಲ್ಲೆಸೆವ, ಕೊಳ್ಳಿಯಿಡುವ,
ಕೆಸರು ತೂರುವ ಅಧಿಕಾರ
ಏನೇನೋ ಅಧಿಕಾರಗಳು ಎಲ್ಲರಿಗೆ ದೊರೆತರೂ
ನೈತಿಕ ಅಧಿಕಾರದ ಆಧಾರ ತಪ್ಪಿ
ಧೊಪ್ಪನೆ ಕೆಡೆದಿಹವಯ್ಯಾ ಈ ಎಲ್ಲ ಅಧಿಕಾರಗಳೂ !
ಸ್ವತಂತ್ರಧೀರ ಸಿದ್ಧೇಶ್ವರಾ, ನೈತಿಕ ಅಧಿಕಾರ ನೆಮ್ಮದ ಇತರ ಅಧಿಕಾರಗಳು
ಮರಳ ಮೇಲೆ ಕಟ್ಟಿದ ಬುರುಗಿನ ಮನೆಗಳಯ್ಯಾ !

೪೫೮

ಕೊಟ್ಟ ಹಣ ಕರಗಿತು, ಕಟ್ಟಿಕೊಟ್ಟ ಮನೆ ಬಿದ್ದಿತು,
ಇತ್ತ ಬಟ್ಟೆ ಹರಿಯಿತು, ಪಟ್ಟೆಯ ಮೇಲೆ ಕೊಟ್ಟ ಹೊಲ ಮಾರಿಹೋಯಿತು,
ಬಿಟ್ಟ ಕಾಯಿಲೆ ಮತ್ತೆ ಬಂದಿತು, ಕೆಟ್ಟ ಚಟಗಳು ಮತ್ತೆ ಮೈದೋರಿದುವು,



ಸುಖೀರಾಜ್ಯ ಸ್ವಪ್ನರಾಜ್ಯವಾಗಿಯೇ ಉಳಿಯಿತು ಭಾರತದಲ್ಲಿ !
ಗುಣದ ಮೇಲಲ್ಲ-ಋಣದ ಮೇಲೆ ಕಟ್ಟಿಹ,
ಸ್ವಾವಲಂಬನೆಯಲ್ಲಿ ಅಲ್ಲ-ಪರಾವಲಂಬನೆಯಲ್ಲಿ ಹುಟ್ಟಿಹ,
ಕಾಯಕದಲ್ಲಿ ಅಲ್ಲ-ಯಾಚನೆಯಲ್ಲಿ ಬೇರು ಬಿಟ್ಟಿಹ,
ಸಾಹಸದಲ್ಲಿ ಅಲ್ಲ-ಸೋಮಾರಿತನದಲ್ಲಿ ವಿಶ್ವಾಸವಿಟ್ಟಿಹ,
ಆಶ್ವಾಸನಗಳನ್ನೇ ಉಟ್ಟು, ಆಶ್ವಾಸನಗಳನ್ನೇ ತೊಟ್ಟಿಹ,
ರೊಟ್ಟಿ ಬೇಡಿದವರ ಕೈಗೆ ಕಲ್ಲು ಕೊಟ್ಟಿಹ
ಸುಖೀರಾಜ್ಯ ದುಃಖೀರಾಜ್ಯವಾಗಿ ಮಾರ್ಪಟ್ಟರೆ
ಆಶ್ಚರ್ಯವಾವುದಯ್ಯಾ-ಸ್ವತಂತ್ರಧೀರ ಸಿದ್ಧೇಶ್ವರಾ ?

೪೫೯

ಹಣದುಬ್ಬರದ ಅಬ್ಬರದಲ್ಲಿ ತಬ್ಬಿಬ್ಬಾಗಿಹರಯ್ಯಾ ತಬ್ಬಲಿ ಮಾನವರು !
ಬೆಲೆಯೇರಿಕೆಯ ಬಲೆಯಲ್ಲಿ ಸಿಲುಕಿ ವಿಲಿವಿಲಿ ಒದ್ದಾಡುತ್ತಿಹರಯ್ಯಾ,
ಬೇಡಿದುದೆಲ್ಲದರ ಕೊರೆವ ಕೊರೆತಕ್ಕೆ ಸಿಕ್ಕು ಅಕ್ಕಸಬಡುತ್ತಿಹರಯ್ಯಾ,
ಕೊಂಡುದೆಲ್ಲದರಲ್ಲಿ ಕಾಣುವ ಕಲಬೆರಕೆಯಿಂದ ಕಕ್ಕಾವಿಕ್ಕಿಯಾಗಿಹರಯ್ಯಾ,
ನಿರುದ್ಯೋಗದ ವಿತಂಡ ತಾಂಡವದಿಂದ ಕಂಗೆಟ್ಟಿಹರಯ್ಯಾ
ಈ ದೇಶದ ದುರ್ಬಲರು, ದಲಿತರು, ಬಡವರು !
ನಿರುದ್ಯೋಗ ಹಣದುಬ್ಬರಗಳು ಹಸೆಗೆ ನಿಂತರೆ ಹೇಗಯ್ಯಾ ?
ಕೊರತೆ ಕಲಬೆರಕೆಗಳು ಉಡುಕಿ ಮಾಡಿಕೊಂಡರೆ ಹೇಗಯ್ಯಾ ?
ಲಂಚ-ಕಾಳಸಂತೆಗಳು ಕೈಕುಲುಕಿದರೆ ಹೇಗಯ್ಯಾ ?
ಧರ್ಮಗುರು-ಅಧಿಕಾರಿಗಳು ದುರ್ವ್ಯವಹಾರಕ್ಕಿಳಿದರೆ ದಾರಿ ಯಾವುದಯ್ಯಾ?
ಸ್ವತಂತ್ರಧೀರ ಸಿದ್ಧೇಶ್ವರಾ,
ಕಂಬಿ ತಪ್ಪಿದ ಈ ಉಗಿ ಬಂಡಿಯನ್ನು,
ದೀಪಸ್ತಂಭ ದಿಕ್ಸೂಚಿ ಕಳೆದುಕೊಂಡ ಈ ಹಡಗನ್ನು,
ನಿಯಂತ್ರಕಯಂತ್ರ ನಷ್ಟವಾದ ಈ ಕ್ಷಿಪಣಿಯನ್ನು
ನೀನೆ ಕಾಯಿ, ನೀನೆ ಕಾಯಿ, ನೀನೆ ಕಾಯಿ !

೪೬೦

ಟಿಪ್ಪಣಿ ಪುಸ್ತಕ ಕಳೆದರೂ ಪಾಠ ಹೇಳಬಲ್ಲ ಪ್ರಾಧ್ಯಾಪಕರ,
ಪರೀಕ್ಷಾಪದ್ಧತಿ ರದ್ದಾದರೂ ಜಿದ್ದಿನಿಂದ ಓದುವ ವಿದ್ಯಾರ್ಥಿಗಳ,
ವಿರೋಧಿಪಕ್ಷದವರನ್ನಾರಿಸಿದ ಕ್ಷೇತ್ರಗಳಲ್ಲಿಯೂ ಆಸಕ್ತಿಯಿಂದ ದುಡಿವ ಮಂತ್ರಿಗಳ,
ಮೇಲಧಿಕಾರಿ ಪ್ರವಾಸದಲ್ಲಿದ್ದರೂ ದಕ್ಷತೆಯಿಂದ ಕೆಲಸಮಾಡುವ ಕರ್ಮಚಾರಿಗಳ,
ಕೊರತೆಯಿದ್ದಾಗಲೂ ಕಡಿಮೆ ಲಾಭಕ್ಕೆ ಮಾರುವ ವರ್ತಕರ,
ಸಕಾರಣವಿದ್ದಾಗಲೂ ಸಂಪು ಹೂಡದೆ ಸಂಧಾನ ಬಯಸುವ ಕಾರ್ಮಿಕರ,
ಕೇಳುವ ಮೊದಲೇ ಕಾರ್ಮಿಕರ ಪಾಲು ಸಲ್ಲಿಸುವ ಮಾಲೀಕರ,
ಹರಿಜನ ಗಿರಿಜನರು ಬಂದರೂ ಪರಮಾದರದಿಂದ ಪೂಜೆ ಮಾಡಿಸುವ ಅರ್ಚಕರ,
ಸಾಲ ಸಿಕ್ಕುತ್ತಿದ್ದರೂ ಸ್ವಾವಲಂಬನ ತ್ಯಜಿಸದ ಕೃಷಿಕರ,
ಮುಳ್ಳುಹಾಸಿಗೆಯೆನಿಸಿದರೂ ಬಿಡುಗಡೆಯನ್ನೇ ಆರಾಧಿಸುವ ನಾಡಿಗರ,
ಅಧಿಕಾರ ಪಡೆಯಲು ಮುಂದಾಗುವಂತೆ ಅಗತ್ಯಬಿದ್ದಾಗ
ಅಧಿಕಾರ ಬಿಡಲೂ ಮುಂದಾಗುವ ನಾಯಕರ
ಬಳಗವನ್ನೇ ಬೆಳೆಸುತ್ತ ಹೋಗಯ್ಯಾ ಭಾರತದಲ್ಲಿ–ಸ್ವತಂತ್ರಧೀರ ಸಿದ್ಧೇಶ್ವರಾ !

೪೬೧

ವೀತರಾಗತೆಯ ಬಾಹುಬಲಿಯ ಕೊರಳಿಗೆ
ರಣ ರಮಣಿ ಮಾಲೆ ಹಾಕಲಯ್ಯ
ವೈರದ ಮೇಲೆ ಕ್ಷಮೆಯ ವಿಜಯಕ್ಕಾಗಿ ;
ಅಧ್ಯಾತ್ಮದ ಅಲ್ಲಮನ ಕೈಗೆ
ವಿಜ್ಞಾನದ ಮೃದಂಗ ಬರಲಯ್ಯ
ಮನದ ಮುಂದಣ ಆಶೆ ಮಾಯೆಯ ಪರಾಭವಕ್ಕಾಗಿ ;
ಬಸವ ವಿದ್ಯಾರಣ್ಯರ ಪಾವನ ಪದಗಳಿಗೆ



ಮಂತ್ರಿಪದ ಮುತ್ತಿಡಲಯ್ಯ
ಸರ್ವಕಲ್ಯಾಣದ ಸಮಷ್ಟಿಯೋಗಕ್ಕಾಗಿ;
ಲೌಕಿಕದ ಸೀನಪ್ಪನಾಯಕನಿಗೆ
ಅಷ್ಟೈಶ್ವರ್ಯ ಒದಗಲಯ್ಯ
ಅಲೌಕಿಕದ ಪವಿತ್ರ ಯಾಗಕ್ಕಾಗಿ ;
ಸ್ವತಂತ್ರಧೀರ ಸಿದ್ಧೇಶ್ವರಾ,
ಭಾರತೀಯತೆಯ ಭರತೇಶನಿಗೆ ಸಾರ್ವಭೌಮಶಕ್ತಿ ದಕ್ಕಲಯ್ಯ
ಭೋಗ ಯೋಗ ಸಮನ್ವಯಕ್ಕಾಗಿ !

೪೬೨

ಭಾರತೀಯರು ಮನಸ್ಸು ಮಾಡಿದರೆ
ಭಾರತಕ್ಕೆ ಜಗದ್ಗುರು ಪಟ್ಟ ಕಟ್ಟಬಲ್ಲರಯ್ಯಾ ;
ಭಾರತೀಯರು ನಿಷ್ಠೆಯಿಂದ ದುಡಿದರೆ
ಪ್ರಗತಿಯ ಗೌರೀಶಂಕರವ ಮುಟ್ಟಬಲ್ಲರಯ್ಯಾ ;
ಭಾರತೀಯರು ಬಂಧು ಭಾವದಿಂದ ಒಂದಾಗಿದ್ದರೆ
ಎಂಥ ವೈರಿಯ ಎದೆಯನ್ನೂ ಮೆಟ್ಟಬಲ್ಲರಯ್ಯಾ ;
ಸ್ವತಂತ್ರಧೀರ ಸಿದ್ಧೇಶ್ವರಾ,
ಭಾರತೀಯರು ಭಾರತೀಯತೆಯ ಸಿತಚ್ಛತ್ರಛಾಯೆಯಲ್ಲಿ ಭಾರತೀಯರಾಗಿ ಬೆಳೆದು
ಸರ್ವಶುಭಂಕರರಾಗಿ, ಅರಿಭಯಂಕರರಾಗಿ ತೊಳಗಿ ಬೆಳಗುತ್ತಿರಲಯ್ಯಾ !

೪೬೩

ಶಿಕ್ಷಣದ ಸಾರ್ವತ್ರೀಕರಣವಾಗಲಿ, ಆದರೆ
ಅದರ ಸಾಧಾರಣೀಕರಣವಾಗದಿರಲಯ್ಯ ;
ಶಿಕ್ಷಣ ಸಂಸ್ಥೆಗಳು ಜನಜಂಗುಳಿಯಿಂದ ದೂರವಿರಲಿ, ಆದರೆ
ಶಿಕ್ಷಣ ಜನ ಜೀವನಕ್ಕೆ ಹತ್ತಿರ ಉಳಿಯಲಯ್ಯ ;
ಶಿಕ್ಷಣಕ್ಕೆ ಸಾಸಿರ ಸಾಸಿರ ಮೊಗಗಳು ಮೂಡಲಿ, ಆದರೆ
ಅದರ ಆತ್ಮ ಒಂದೇ ಆಗಿರಲಯ್ಯ ;
ಶಿಕ್ಷಣಕ್ಕೆ ಸಹಾಯ ಸೌಕರ್ಯಗಳು ಹೆಚ್ಚಲಿ, ಆದರೆ
ಶಿಕ್ಷಣಕ್ಕೆ ಸಂಕೋಲೆಗಳು ಹುಟ್ಟದಿರಲಯ್ಯ ;
ಶಿಕ್ಷಣ ಸರ್ವರ ಸೊತ್ತಾಗಿ ಬೆಳೆಯಲಿ, ಆದರೆ

ಸರ್ವಾಧಿಕಾರಿಯ ತೊತ್ತಾಗಿ ನರಳದಿರಲಯ್ಯ ;
ಶಿಕ್ಷಣ ಒತ್ತಾಯದ ಹೊರೆಯಾಗದಿರಲಿ, ಆದರೆ
ಸ್ವಾತಂತ್ರ್ಯದ ಸಿರಿಯಾಗಿ ಮೆರೆಯಲಯ್ಯ ;
ಶಿಕ್ಷಣ ಖಾರಭೂಮಿ, ಊಷರಭೂಮಿಯಾಗದಿರಲಿ,
ಮಡಿಹೊಲ, ಭರಖೋಲಿ ಭೂಮಿಯಾಗಲಯ್ಯ ;
ಸ್ವತಂತ್ರಧೀರ ಸಿದ್ಧೇಶ್ವರಾ,
ಶಿಕ್ಷಣ ನಮ್ಮ ಕಣ್ಣೂ ಆಗಲಿ, ಕಾಲೂ ಆಗಲಿ,
ಪ್ರಗತಿ ಪಥವೂ ಜೀವನ ರಥವೂ ಸೈಪಿನ ಶಪಥವೂ ಆಗಲಯ್ಯ !

೪೬೪

ಶಾಖೋಪಶಾಖೆಗಳಾಗಿ ಹಬ್ಬಿಹರಡುತ್ತಿವೆ ಜ್ಞಾನ ವಿಜ್ಞಾನಗಳು,
ಈ ಶಾಖೆಗಳಿಗೊಂದು ಬೊಡ್ಡೆ ಬೇಡವೆ ?
ಬೊಡ್ಡೆಯ ಬುಡಕ್ಕೆ ಬೇರುಗಳು ಬೇಡವೆ ?
'ನೇದಮಮೂಲಂ, ತಸ್ಯ ಕ್ವಮೂಲ?'
ಯಾರು ವಿಚಾರಿಸಬೇಕಿದನು
ವಿಶ್ವವಿದ್ಯಾಲಯಗಳೇ ಸುಸ್ತು ಹೊಡೆದರೆ,
ಪ್ರಾಧ್ಯಾಪಕರೇ ಪ್ರಚ್ಛನ್ನ ರಾಜಕಾರಣಿಗಳಾದರೆ,
ವಿದ್ಯಾರ್ಥಿಗಳು ಗೊಂದಲುಣಿಗಳಾದರೆ ?
ನನ್ನ ಮಟ್ಟಿಗೆ ಮಾತ್ರ
ನೀನೆ ಬೊಡ್ಡೆ, ನೀನೆ ಬೇರು
ಸ್ವತಂತ್ರಧೀರ ಸಿದ್ಧೇಶ್ವರಾ !

೪೬೫

ಕನ್ನಡನಾಡಿನ ಕೋಡುಗಲ್ಲುಗಳು
ಚಾವುಂಡರಾಯನ ಬರವ ಕಾಯುತ್ತಿವೆಯಯ್ಯಾ ;
ಕನ್ನಡ ನುಡಿಯ ಸಾಧ್ಯವಾಗಿರದ ಸಾಧ್ಯತೆಗಳು
ಬಸವಣ್ಣನ ಬರವ ಕಾಯುತ್ತಿವೆಯಯ್ಯಾ ;
ಕನ್ನಡ ನಾಡಿನ ತಾಳಗರಿಗಳು
ಕುಮಾರವ್ಯಾಸನ ಕಂಠಪತ್ರಕ್ಕಾಗಿ ಕಾದಿವೆಯಯ್ಯಾ ;
ಈ ನಾಡಿನ ನದಿ ನದ ಪ್ರಪಾತಗಳು
ವಿಶ್ವೇಶ್ವರಯ್ಯರ ದಾರಿ ಕಾಯುತ್ತಿವೆಯಯ್ಯಾ



ಸ್ವತಂತ್ರಧೀರ ಸಿದ್ಧೇಶ್ವರಾ,
ಈ ನಾಡಿನ ಬಿದಿರು ಕೊಳಲಾಗಲು, ಸೋರೆ ವೀಣೆಯಾಗಲು,
ಕಡ್ಡಿ ಕುಂಚವಾಗಲು, ಉಕ್ಕು ಉಳಿಯಾಗಲು,
ಮಣ್ಣು ಅನ್ನವಾಗಲು, ಹತ್ತಿ ವಸ್ತ್ರವಾಗಲು,
ಪ್ರಕೃತಿ ಸಂಸ್ಕೃತಿಯಾಗಲು ಕಾದಿವೆಯಯ್ಯಾ !

೪೬೬

ಕನ್ನಡಿಗರ ಕಂಡರೆ ಕನ್ನಡಿಗರಂತೆ,
ಮರಾಠಿಗರ ಕಂಡರೆ ಮರಾಠಿಗರಂತೆ,
ತಿಗುಳ ತೆಲುಗರ ಕಂಡರೆ ತಿಗುಳ ತೆಲುಗರಂತೆ,
ಅವರವರ ಕಂಡರೆ ಅವರವರಂತೆ !
ವೇಷವನು ಬದಲಿಸುವಂತೆ
ಭಾಷೆಯನು ಬದಲಿಸುವ
ಮೋಸಗಾರರ ಕಂಡು
ಹೇಸಿತ್ತಯ್ಯ ಎನ್ನ ಮನ
ಸ್ವತಂತ್ರಧೀರ ಸಿದ್ಧೇಶ್ವರಾ !

೪೬೭

ಶೇಷಣ್ಣನವರ ವೀಣಾ ವಿತಾನ,
ಚೌಡಯ್ಯನವರ ಪಿಟೀಲು ವಾದನ,
ಮಲ್ಲಿಕಾರ್ಜುನ ಗಂಗೂಬಾಯಿಯರ ಗಾಯನ,
ವೆಂಕಟಪ್ಪ ಹೆಬ್ಬಾರ ಮಿಣಜಗಿಯರ ಚಿತ್ರನಂದನ,
ವರದಾಚಾರ್ಯ ಪೀರ ವೀರಣ್ಣರ ಅಭಿನಯ ನಿಕೇತನ,
ಕುವೆಂಪು ಬೇಂದ್ರೆಯರ ಕವನೋದ್ಯಾನ,
ಹಿರಿಯಣ್ಣ ತಾರಾನಾಥ ಡಿವಿಜಿ ತತ್ತ್ವ ಚಿಂತನ,
ಬಿ.ಎಂ.ಶ್ರೀ. ಅನಕೃ ಮಂಜಪ್ಪ ಮಾಸ್ತಿಯರ ವ್ಯಾಖ್ಯಾನ ರಸಾಯನ,
ಕಾರಂತರ ಯಕ್ಷಗಾನ ನವೀಕರಣ,
ಕೈಲಾಸಂ ಸಂಸ ಶ್ರೀರಂಗರ ನಾಟಕಾಯತನ,
ನರಸಿಂಹಾಚಾರ್ಯ ಹಳಕಟ್ಟಿ ಗೋವಿಂದ ಪೈ ಸಂಶೋಧನ,

ವಿಶ್ವೇಶ್ವರಯ್ಯನವರ ರಾಷ್ಟ್ರನಿರ್ಮಾಣ
ಎಂಥ ಮುಂಬಲವಯ್ಯ ಕರುನಾಡ ಮರುಹುಟ್ಟಿಗೆ ?
ಎಂಥ ಬೆಂಬಲವಯ್ಯ ಕನ್ನಡದಿ ಹೊಸದೃಷ್ಟಿಗೆ ?
ಎಂಥ ಸಾಕ್ಷಿಯಿವಯ್ಯ ಕನ್ನಡರ ಹೊಸ ಸೃಷ್ಟಿಗೆ ?
ಕನ್ನಡವು ವಿಶ್ವಜ್ಞಾನ ವಿಜ್ಞಾನಕ್ಕೆ
ಕನ್ನಡಿಯಾಗುವಂತೆಸಗಯ್ಯಾ,
ಕನ್ನಡ ಜೊನ್ನದ ಜೇನುಹೊಳೆ ಹರಿಸಯ್ಯ
ಸ್ವತಂತ್ರಧೀರ ಸಿದ್ಧೇಶ್ವರಾ !

೪೬೮

ಯಾವ ವಿಶ್ವಾಸ ಹೋದರೂ ಆತ್ಮವಿಶ್ವಾಸ ಹೋಗದಿರಲಯ್ಯ ;
ಅಷ್ಟೈಶ್ವರ್ಯ ಹೋದರೆ ಹೋಗಲಿ, ಧೈರ್ಯ ಹೋಗದಿರಲಯ್ಯ ;
ಬಲ ಉಡುಗಿದರೆ ಉಡುಗಲಿ, ಛಲ ಉಡುಗದಿರಲಯ್ಯ ;
ಕೀರ್ತಿ ಮಸುಳಿಸಿದರೆ ಮಸುಳಿಸಲಿ, ಸ್ಫೂರ್ತಿ ಮಸುಳಿಸದಿರಲಯ್ಯ ;
ಮೈಯ ಶೃಂಗಾರ ಮರೆಯಾದರೆ ಆಗಲಿ, ಮನದ ಬಂಗಾರ
ಬಯಲಾಗದಿರಲಯ್ಯ ;
ಅಲಗು ಸೋತರೆ ಸೋಲಲಿ, ಗಲಗು ಸೋಲದಿರಲಯ್ಯ ;
ಕರ್ಣರಥ ಕುಸಿದರೆ ಕುಸಿಯಲಿ, ಮನೋರಥ ಕುಸಿಯದಿರಲಯ್ಯ ;
ಸ್ವತಂತ್ರಧೀರ ಸಿದ್ಧೇಶ್ವರಾ,
ನನ್ನ ಬೀಡು ಅಳಿದರೆ ಅಳಿಯಲಿ,
ನನ್ನ ನಾಡು ಎಂದೆಂದಿಗೂ ಉಳಿದಿರಲಯ್ಯಾ !

೪೬೯

ಹುಟ್ಟಿ ಬೆಳೆದ ಹಳ್ಳಿ ಮಲಪ್ರಭಾ ಜಲಾಶಯದಿ ಮುಳುಗಿತೆಂದು
ಮರುಗುತಿಹ ಮನುಜರಿರ, ಮರೆಯದಿರಿ
ಇದೆಲ್ಲ ನೋವ್ವಾ ಜಲಪ್ರಳಯ,
ಇದು ಸಮೃದ್ಧಿಯ ಶುಭೋದಯ !
ಹುಟ್ಟಿ ಬೆಳೆದ ಹಳ್ಳಿಯ ತೊರೆದು
ಹೊಸ ಹಳ್ಳಿಗೆ ಹೋಗಬೇಕಾಯಿತೆಂದು
ಕಸಿವಿಸಿಗೊಂಡು ಕೈಹೊಸೆವ ಬಂಧು,
ನಂಬು ಈ ಹೊಸ ಹಳ್ಳಿಯಿಂದಲೇ ನಿನ್ನ ಭಾಗ್ಯದ ಬಳ್ಳಿ
ಕುಡಿಯೊಡೆದು ಚೆಲ್ಲವರಿಯಲಿದೆಯೆಂದು !
ಹುಟ್ಟಿ ಬೆಳೆದ ಮನೆಯ ತ್ಯಜಿಸಿ



ಹೊಸಮನೆಯ ಸೃಜಿಸಬೇಕಾಯಿತೆಂದು
ಶೋಕಿಸುತ್ತಿಹ ಸ್ನೇಹಿತ, ಮರೆಯದಿರು,
ಇಲ್ಲಿ ಯಾವ ಮನೆಯೂ ಶಾಶ್ವತವಲ್ಲ !
ಹಿಂದೆನಿತು ಹಳ್ಳಿಗಳಲ್ಲಿ ಹುಟ್ಟಿದೆಯೊ,
ಎನಿತು ಮನೆಗಳನು ಕಟ್ಟಿಹೆಯೊ
ಎನಿತು ಮನೆಗಳನ್ನು ಬಿಟ್ಟಿಹೆಯೊ,
ಮುಂದೆ ಕಟ್ಟ ಬಿಡಲಿಹೆಯೊ !
ಸ್ವತಂತ್ರಧೀರ ಸಿದ್ಧೇಶ್ವರನ ಸೃಷ್ಟಿಯಲ್ಲಿ
ಎಲ್ಲ ಹಳ್ಳಿ ನಿನ್ನ ಹಳ್ಳಿ,
ಎಲ್ಲ ಮನೆ ನಿನ್ನ ಮನೆ,
ಎಲ್ಲ ಜನ ನಿನ್ನ ಜನ !
ನೀನೆಲ್ಲರಲ್ಲಿ, ಎಲ್ಲರೂ ನಿನ್ನಲ್ಲಿ !

೪೭೦

ಹೂವನೂ ಬಿಡದ, ಹಣ್ಣನೂ ಕೊಡದ ಗಿಡ
ನಿಷ್ಪ್ರಯೋಜಕವೆನ್ನುವವರುಂಟು, ನಾನೆನ್ನೆನಯ್ಯ ;
ಅದರ ಬೇರುಗಳಲ್ಲಿ ಘೋರವ್ಯಾಧಿಯೊಂದಕ್ಕೆ ಔಷಧವಿರಬಹುದು,
ಅದರ ಬೊಡ್ಡೆಗಳಲ್ಲಿ ಗಡ್ಡೆಗೆಣಸುಗಳಲ್ಲಿಲ್ಲದ ಆಹಾರಸತ್ವವಿರಬಹುದು,
ಅದರ ಎಲೆಗಳಲ್ಲಿ ಕಾರ್ಬೊನ್ನನ್ನು ಹೊನ್ನನ್ನಾಗಿ ಮಾರ್ಪಡಿಸುವ
ರಾಸಾಯನಿಕತೆ ಇರಬಹುದು ;
ನಿಷ್ಪ್ರಯೋಜಕವಾವುದಯ್ಯ ನಿನ್ನ ಸೃಷ್ಟಿಯಲ್ಲಿ ?
ಪ್ರತಿ ವಸ್ತುವಿನ ಪ್ರಯೋಜಕತೆಯನ್ನು
ಅರಿವುದರಲ್ಲಿಯೇ
ನರನ ಬಾಳಿನ ಪ್ರಯೋಜಕತೆ !
ಇಂತಿರಲು ಯಾರನ್ನು ದೂರವಿರಿಸುವುದು ?
"ಪರಿ ಪ್ರಭುಹಿ ಸಂಗ್ರಹೀ
ಸಕಲ ವಸ್ತುಲಾ ಠೇವಿತೀ ;
ಗುಣಾ ನ ಮ್ಹಣತಾ ಉಣಾ

ಅಧಿಕ ಆದರೇ ಸೇವೀತೀ'' ಎಂದುದಾಗಿ,
ಬಂದುದೆಲ್ಲ ನನ್ನ ಬಳಿಯಿರಲಿ,
ಬಂದವರೆಲ್ಲ ನನ್ನ ಬಳಿಯಿರಲಿ,
ನಾನೆಲ್ಲರ ಬಳಿ ಇರಲಿ
ಸ್ವತಂತ್ರಧೀರ ಸಿದ್ಧೇಶ್ವರಾ !

೪೭೧

ನನ್ನ ದೋಷ ದುರ್ಗಣಗಳನ್ನು ನಿನಗರ್ಪಿಸಿದರೆ
ನನಗೆ ನಿಜಪದವನ್ನು ನೀಡಲು ನೀನು
ಸಿದ್ಧನಾಗಿಯೇ ಇರುವಿಯಯ್ಯ ಸ್ವತಂತ್ರಧೀರ ಸಿದ್ಧೇಶ್ವರಾ !
ಆದರೆ ನನ್ನ ದೋಷ ದುರ್ಗುಣಗಳ ಬಗ್ಗೆ ನನಗೇ ಮೋಹ !
ಅವುಗಳನ್ನು ಸಮರ್ಥಿಸಿಕೊಳ್ಳುವಲ್ಲಿಯೇ ನನಗೆ ಸಂತೃಪ್ತಿ !
ಅನ್ಯರಲ್ಲಿ, ಮಾನ್ಯರಲ್ಲಿಯೂ ಅವು ಇವೆಯೆಂದು
ಸಿದ್ಧಗೊಳಿಸುವುದರಲ್ಲಿಯೇ ನನಗೆ ಆಸಕ್ತಿ !
ಮಾನವೀಯತೆ ದೃಢಪಡಲು ಒಂದೆರಡು ದೋಷ ದುರ್ಗುಣಗಳಾದರೂ
ಇರುವುದು ಅನಿವಾರ್ಯವೆಂಬುದೇ ನನ್ನ ವಾದ !
ನೀನು ಪಾಪಿಗಳ ಉದ್ಧಾರಕ್ಕಾಗಿಯೇ ಇರುವಿ,
ನಾನು ಎಳ್ಳಷ್ಟೂ ಪಾಪ ಮಾಡದಿದ್ದರೆ
ನಿನಗೆ ಕೆಲಸವಿಲ್ಲದಂತಾಗುವುದೆಂಬುದೇ ನನ್ನ ಅಂತರ್ಬೋಧ !
ಮಾಡಬಾರದುದೆಲ್ಲವ ಮಾಡಿ
ಕೊನೆಗೆ ನಿನಗೆ 'ಪಾಹಿ, ತ್ರಾಹಿ' ಎಂದರಾಯಿತು
ಮಾಡಿದುದೆಲ್ಲ ಮಾಫಿಯೆಂಬುದೇ ನನ್ನ ಮೀಮಾಂಸೆ !
ಅಂತೂ ನಿರಾತಂಕವಾಗಿ ನಡೆದಿದೆ
ಕತ್ತಲೆಯನ್ನೇ ಬೆಳಕೆಂದು ಭ್ರಮಿಸುವ ಬಾಳಿನ ಪಯಣ !
ಎಂದಿದಕ್ಕೆ ಹೊಸ ಹಸ ತಿರುವು ಬರುವುದೋ,
ಎಂದಿದರ ಮುಂದೆ ನಣ್ಬು ನಿಕ್ಕುವಗಳ ದಾರಿ ತೆರೆವುದೋ
ನೀನೆ ಬಲ್ಲೆ, ನೀನೆ ಬಲ್ಲೆ !
ನೀನು ಕರುಣಿಸಿದರೆ
ಎಲ್ಲಿ ಸಾಧ್ಯಾಸಾಧ್ಯತೆಗಳ ಎಲ್ಲೆ ?
ನೀನು ದಯೆ ತೋರಿದರೆ
ಮೂಡಬಹುದು ನಾಕ ಇದರಲ್ಲೆ !



೪೭೨

ಇನ್ನೇನ ಮಾಡದಿದ್ದರೂ
ಸಂಯಮಿಯನ್ನಾಗಿ ಮಾಡಯ್ಯ ಎನ್ನನ್ನು !
ಸಂಯಮವಿಲ್ಲದ ಪ್ರೇಮ ಕಾಮು,
ಸಂಯಮವಿಲ್ಲದ ಭೋಗ ರೋಗ,
ಸಂಯಮವಿಲ್ಲದ ದಾನ ದುಂದು,
ಸಂಯಮವಿಲ್ಲದ ಮಾತು ಮಾರಿ,
ಸಂಯಮವಿಲ್ಲದ ಸ್ವಾತಂತ್ರ್ಯ ಸ್ವೈರವೃತ್ತಿ,
ಸಂಯಮವಿಲ್ಲದ ಬರವಣಿಗೆ ಉರವಣಿಗೆ,
ಸಂಯಮವಿಲ್ಲದ ಸದ್ಗುಣವೂ ದುರ್ಗುಣ !
ಅಡಕವಿಲ್ಲದಲ್ಲಿ ಕೆಡುಕು, ತೊಡಕು !
"ಒರು ಮೈಯುಳಾ ಮೈ
ಪೋಲ್ಲೈನ್ಡಡಕ್ಕ ಲಾಟ್ರಿನ್
ಎರು ಮೈಮು ಮೇಮಾಪ್ಪುಡೈತ್ತು'' ಎಂದುದಾಗಿ
ಇನ್ನೇನ ಮಾಡದಿದ್ದರೂ
ಸಂಯಮಿಯನ್ನು ಮಾಡಯ್ಯ ನನ್ನನ್ನು
ಸ್ವತಂತ್ರಧೀರ ಸಿದ್ಧೇಶ್ವರಾ !

೪೭೩

ನೀರೆರೆದವನಿಗೂ ಕಡಿಯಬಂದವನಿಗೂ
ಭೇದವೆಣಿಸದೆ ಹಣ್ಣುನೆರಳು ನೀಡುವ ಮರದ ಬುದ್ಧಿ ಬರಲಯ್ಯ ನನಗೆ !
ನೀರುಣಿಸಿದವನಿಗೂ, ಕಡಿಯ ಬಂದವನಿಗೂ
ಮುಳ್ಳನೇ ಕೊಡುವ ಕಂಟಿಯ ಬುದ್ಧಿ ಬಾರದಿರಲಯ್ಯ ನನಗೆ !

ನೆರವು ನೀಡದವರಿಗೂ ನೆರವು ನೀಡುವುದಿರಲಿ,
ನೆರವು ನೀಡಿದವರಿಗೆ ನೆರವು ನೀಡುವುದಿರಲಿ
ನೆರವು ನೀಡಿದವರಿಗೇ ಕೆಡುಕು ಮಾಡುವ
ದುಷ್ಟಬುದ್ಧಿ ಬಾರದಿರಲಯ್ಯ ನನಗೆ !
ಸ್ವತಂತ್ರಧೀರ ಸಿದ್ಧೇಶ್ವರಾ,
ಸಹಾಯ ಮಾಡಲು ಸಾಧ್ಯವಾಗದಿದ್ದರೆ
ಸುಮ್ಮನಿರುವುದನ್ನಾದರೂ ಕಲಿಸಯ್ಯಾ ನನಗೆ !

೪೭೪

'ನಿನ್ನ ಹಕ್ಕು ಬಿಟ್ಟುಕೊಡು,' ಎಂದರೆ ಬಿಟ್ಟುಕೊಡಬಲ್ಲೆ
ಆದರೆ, ನನ್ನ ಕರ್ತವ್ಯವನ್ನು ಮಾತ್ರ ಬಿಟ್ಟುಕೊಡೆನಯ್ಯಾ ;
'ಕರ್ಮದ ಫಲವ ತ್ಯಜಿಸು,' ಎಂದರೆ ತ್ಯಜಿಸಬಲ್ಲೆ
ಆದರೆ, ಕರ್ಮವನ್ನೇ ತ್ಯಜಿಸಲಾರೆನಯ್ಯಾ ;
'ಸಂಸಾರದಲ್ಲಿ ಇರು,' ಎಂದರೆ ಇರಬಲ್ಲೆ
ಆದರೆ, ನನ್ನಲ್ಲಿ ಸಂಸಾರವ ಇರಿಸಿಕೊಳ್ಳಲಾರೆನಯ್ಯಾ;
ಸ್ವತಂತ್ರಧೀರ ಸಿದ್ಧೇಶ್ವರಾ,
'ಕೆಸರನ್ನು ತೊಳೆದುಕೊ,' ಎಂದರೆ ತೊಳೆದುಕೊಳ್ಳಬಲ್ಲೆ
ಆದರೆ, ಕೆಸರನ್ನೇ ತೊಳೆಯಲಾರೆನಯ್ಯಾ!

೪೭೫



ಉಪ್ಪಿನಕಾಯಿ ರುಚಿಯೆಂದು
ಅದನ್ನೇ ಉಣ್ಣಲಾಗುವುದೇನಯ್ಯಾ ?
ರತಿಸಮಯದ ವಿವಸ್ತ್ರತೆ ಮೋಹಕವೆಂದು
ಹಾಡು ಹಗಲೇ ನಗ್ನತೆ ಶ್ಲಾಘ್ಯವೇನಯ್ಯಾ ?
ಕಾಳಗದಲ್ಲಿ ಕೊಲೆ ಕ್ಷಮ್ಯವೆಂದು
ಬಾಳಿನುದ್ದಕ್ಕೂ ವಧೆ ವಿಧಿಯೇನಯ್ಯಾ ?
ಮಾತಿಗಿಂತ ಮೌನ ಮೇಲೆಂದು
ಜೀವನವೆಲ್ಲ ಮೌನವಾಗಬೇಕೇನಯ್ಯಾ ?
ಸ್ವತಂತ್ರಧೀರ ಸಿದ್ಧೇಶ್ವರಾ,
ಅಲ್ಲಿ ಅಮೃತ ದೊರೆಯಲಿದೆಯೆಂದು
ಇಲ್ಲಿಯ ಅಂಬಲಿಯ ತೊರೆಯಲಹುದೇನಯ್ಯಾ ?

೪೭೬

ದೊಡ್ಡ ದೊಡ್ಡ ಮಾತುಗಳನ್ನಾಡಿ ದೊಡ್ಡವನಾಗಬೇಕೆಂಬ
ದಡ್ಡತನ ಆವರಿಸದಿರಲಯ್ಯ ನನ್ನನ್ನು ;
ದೊಡ್ಡವರನ್ನು ಬೈದು ಬೈದು ದೊಡ್ಡವನೆನಿಸಿಕೊಳ್ಳಬೇಕೆಂಬ
ಮಡ್ಡತನ ಮುಸುಕದಿರಲಯ್ಯಾ ನನ್ನನ್ನು ;
ದುಡ್ಡಿನ ಬಲದಿಂದ, ದಿಡ್ಡಿ ಬಾಗಿಲಿನಿಂದ, ಅಡ್ಡದಾರಿಯಿಂದ,
ದೊಡ್ಡ ದೊಣ್ಣೆ ಹಿಡಿದು,ದೊಡ್ಡ ಜಿಗಣೆಯಾಗಿ ದೊಡ್ಡವನಾಗಬೇಕೆಂಬ
ಹೆಡ್ಡತನ ಹೊದ್ದದಿರಲಯ್ಯ ನನ್ನನ್ನು ;
ದೊಡ್ಡಮನದಿಂದ ದೊಡ್ಡತನ,
ದೊಡ್ಡಗುಣದಿಂದ ದೊಡ್ಡತನ,
ದೊಡ್ಡಕಾರ್ಯಗಳಿಂದ ದೊಡ್ಡತನವೆಂಬುದ ತಿಳಿಸಿ,
ಮರವೆಯಿಂದುಳಿಸಿ, ಮನವ ತಿಳಿಗೊಳಿಸಿ ಬೆಳೆಸಯ್ಯಾ
ಸ್ವತಂತ್ರಧೀರ ಸಿದ್ಧೇಶ್ವರಾ !

೪೭೭

ಐದು ಹೆಡೆಗಳ ಹಾವ ಹಿಡಿದಿಹುದಯ್ಯ
ಮನದ ಮುಂಗುಲಿ !
ಮುಂಗುಲಿಯ ಕಡಿತಕ್ಕೆ ಕೆರಳಿ, ಹೊಡಮರಳಿ
ಕಚ್ಚುತಿದೆ ಹಾವು ಮುಂಗುಲಿಯ !
ಹಾವಿನ ವಿಷ ಮುಂಗುಲಿಯ ಮೈಯಲ್ಲಿ,
ಮುಂಗುಲಿ ಗೈದ ಗಾಯದ ನೋವು ಹಾವಿನ ಮೈಯಲ್ಲಿ !
ಯಾವುದು ಉಳಿವುದೋ ಯಾವುದು ಅಳಿವುದೋ !
ಸಹಜೀವನ ಇಲ್ಲವೆ ಸಹಮರಣ
ಇದೇ ಗತಿಯೇನಯ್ಯಾ ಎರಡಕ್ಕೂ ?
ಇಲವೇನಯ್ಯ ಉಪಾಯ – ಇಳಿಸಲು ಎರಡರ ಸೊಕ್ಕೂ ?
ಎರಡರ ಹಲ್ಲುಗಳನೂ ಮುರಿದು
ಎರಡಕ್ಕೂ ಸಹಜೀವನ ಸುಖವ
ಕೊಡಲಾರೆಯೇನಯ್ಯಾ–
ಸ್ವತಂತ್ರಧೀರ ಸಿದ್ಧೇಶ್ವರಾ !

೪೭೮

ವಿಷಯವ ಬತ್ತಿ ನಿರ್ವಿಷಯವ ಬೆಳೆವ
ಬೇಸಾಯವ ಕಲಿಸಯ್ಯ ;
ಆಸಕ್ತಿಯ ಮಾರಿ ಅನಾಸಕ್ತಿಯ ಕೊಳ್ಳುವ
ವ್ಯಾಪಾರವ ಕಲಿಸಯ್ಯ ;
ಕರ್ಮದ ಕಬ್ಬು ನುರಿಸಿ ಧರ್ಮದ ಸಕ್ಕರೆ ಪಡೆವ
ಕೈಗಾರಿಕೆಯ ಕಲಿಸಯ್ಯ ;
ಅಲ್ಪವನು ಆಧರಿಸಿ ಭೂಮವನು ಕಟ್ಟುವ
ಉಪ್ಪಾರಿಕೆಯ ಕಲಿಸಯ್ಯ ;
ಮೃಣ್ಮಯವ ಬಡಿದು ಚಿನ್ಮಯವ ಹಡೆವ
ಕುಂಬಾರಿಕೆಯ ಕಲಿಸಯ್ಯ ;
ವ್ಯಕ್ತವನು ಬಳಸಿ ಅವ್ಯಕ್ತವನು ಅಭಿವ್ಯಕ್ತಗೊಳಿಪ
ಕಲೆಗಾರಿಕೆಯ ಕಲಿಸಯ್ಯ ;
ಸ್ವತಂತ್ರಧೀರ ಸಿದ್ಧೇಶ್ವರಾ,
ಮಾತಿನ ಮಗ್ಗದಲ್ಲಿ ಜ್ಯೋತಿಯ ಕಿರಣಗಳ ನೆಯ್ವ
ನೇಕಾರಿಕೆಯ ಕಲಿಸಯ್ಯ !



೪೭೯

ಹಕ್ಕಿಯ ಗೂಡೊಂದು ಕಲಾಕೃತಿ, ಹಾವಿನ ಬೀಡೊಂದು ಕಲಾಕೃತಿ,
ಜೇಡನ ಬಲೆಯೊಂದು ಕಲಾಕೃತಿ, ಜೇನಿನ ಹುಟ್ಟೊಂದು ಕಲಾಕೃತಿ,
ನಿನ್ನ ಪ್ರತಿಯೊಂದು ಕೃತಿಯೂ ಕಲಾಕೃತಿಯಯ್ಯಾ !
ನನ್ನ ಒಂದು ಕೃತಿಯಾದರೂ ಕಲಾಕೃತಿಯಾಗುವಂತೆ,
ಅದು ಕಲಾಕೃತಿಯಾಗಿ ಹೊಮ್ಮಿದಾಗ
ಹೆಮ್ಮೆ, ಹಮ್ಮು, ಬಿಮ್ಮುಗಳು ನನ್ನನ್ನು
ಆವರಿಸದಂತೆ ಅನುಗ್ರಹಿಸಯ್ಯಾ
ಸ್ವತಂತ್ರಧೀರ ಸಿದ್ಧೇಶ್ವರಾ !

೪೮೦

ಇದೆಂಥ ಮನೆಯಲ್ಲಿ ಇರಿಸಿಹೆಯಯ್ಯಾ ಎನ್ನನ್ನು ?
ಈ ಮನಸೋಲನಂಥ ಮನೆಯಲ್ಲಿರಿಸಿ
ಮೋಜು ನೋಡುತ್ತಿಹೆಯೇನಯ್ಯಾ ?
ಒಂದು ಕೋಣೆಯ ಕತ್ತಲೆ ನುಗ್ಗಿ
ಇನ್ನೊಂದು ಕೋಣೆಯ ಬೆಳಕನ್ನು
ಕತ್ತಲೆಯಾಗಿಸಿ ಬಿಡುತ್ತದೆ !
ಆ ಇನ್ನೊಂದರ ಕತ್ತಲೆ ನುಗ್ಗಿ
ಮತ್ತೊಂದು ಕೋಣೆಯ ಬೆಳಕನ್ನು
ಕತ್ತಲೆಯಾಗಿಸುತ್ತದೆ !
ಹೀಗೆ ಸಾಗುತ್ತಿದೆ ಕತ್ತಲೆಯ ಚೈತ್ರಯಾತ್ರೆ !
ಹೀಗೆಯೇ ಒಂದು ಕೋಣೆಯ ಬೆಳಕು ನುಗ್ಗಿ
ಇನ್ನೊಂದರ ಕತ್ತಲೆಯನ್ನು ಬೆಳಗಿಸುತ್ತ
ಬೆಳಕಿನ ವಿಜಯಯಾತ್ರೆ ಸಾಗದೇಕಯ್ಯ ?

ನೀನೇನಾದರೂ ನಿನ್ನ 'ಜ್ಯೋತಿಷಾಂ ಜ್ಯೋತಿ'ಯನ್ನು
ಹೊತ್ತಿಸಿದರೆ ಮಾತ್ರ
ಎಲ್ಲ ಕೋಣೆಗಳಿಗೂ ಒಮ್ಮೆಗೇ ಬೆಳಕು ಬರಬಹುದು,
ಎಲ್ಲ ಕೋಣೆಗಳ ಕತ್ತಲೆಯೂ ಬೆಳಕಾಗಬಹುದು !
ಪ್ರಣತಿ ಸಿದ್ಧವಿದೆ,
ಎಣ್ಣೆ ಎರೆದಾಗಿದೆ,
ಬತ್ತಿ ಎಳೆದಾಗಿದೆ
ನಿನ್ನ ದೀಪಶಿಖೆಯನ್ನೊಮ್ಮೆ,
ಒಮ್ಮೆಯೇ ಒಮ್ಮೆ
ಮುಟ್ಟಿಸಿ ಬೆಳಕಿನ ಬಳಗ ಹುಟ್ಟಿಸಾ
ಸ್ವತಂತ್ರಧೀರ ಸಿದ್ಧೇಶ್ವರಾ !

೪೪೧

ಗತಕಾಲವೆ, ನಿನ್ನನ್ನು ಪ್ರೀತಿಸಬಲ್ಲೆ   ಪೂಜಿಸಲಾರೆ ನಾನು ;
ವರ್ತಮಾನವೆ, ನಿನ್ನನ್ನು ಆದರಿಸಬಲ್ಲೆ   ಅರ್ಚಿಸಲಾರೆ ನಾನು ;
ಭವಿಷ್ಯತ್ತೆ, ನಿನ್ನನ್ನು ಸ್ವಾಗತಿಸಬಲ್ಲೆ   ಸಮಾರಾಧಿಸೆ ನಾನು ;
ಕಾಲವೆ ನಿನ್ನ ಕೆಳೆ ಬೇಕು, ಆಳಿಕೆ ಬೇಡ ನನಗೆ !
ನಿನ್ನ ಪ್ರವಾಹ ಕೊಂಡೊಯ್ದತ್ತ ತೇಲಲು
ಸತ್ತ ಮೀನೇನಲ್ಲ ನಾನು !
ನಿನಗೆ ಬೇಕಾದತ್ತ ನೀನೆಳೆ, ನನಗೆ ಬೇಕಾದತ್ತ ನಾನೀಸುವೆ !
ಪುರಂದರೋಪದೇಶಪ್ರಭಾವದಿಂದ ಈಸುವೆ, ಇದ್ದು ಜೈಸುವೆ !
'ಕಾಲೊ ಜಗದ್ಭಕ್ಷಕಃ' ಎಂದು ಎಚ್ಚರಿಸುವಿಯೇನು?
'ತಮಾರೋಹಂತಿ ಕವಯಃ' ಎಂದು ಉತ್ತರಿಸಲೆ ನಾನು ?
ಬೇಡ, ನೀನೂ ಸ್ವತಂತ್ರಧೀರ ಸಿದ್ಧೇಶ್ವರನ ಸ್ವಯಂಸೇವಕ,
ನಾನೂ ಅವನ ಪಾದಾರಾಧಕ,
ಏಕೆ ನಮ್ಮಿಬ್ಬರಲಿ ಸೆಣಸಿನ, ಕಿನಿಸಿನ ಕಂದಕ ?

೪೪೨

ನಿನ್ನೊಡನೆ ಮುನ್ನಡೆಯ ಬಲ್ಲೆ,
ನಿನ್ನ ಬಿಟ್ಟು ಹಿನ್ನಡೆಯಲೂ ಬಲ್ಲೆ, ಕಾಲ !



ನಾನು ಮನಸ್ಸು ಮಾಡಿದರೆ
ಅಜಾತ ಕಾಲದ ಅಜ್ಞಾತರೊಡನೆ ಮಾತಾಡಬಲ್ಲೆ,
ಇತಿಹಾಸಪೂರ್ವಕಾಲದ ಆದಿಮಾನವನೊಡನೆ ಆಟವಾಡಬಲ್ಲೆ,
ಅಮೀಬಾದ ಕನಸುಗಳೊಡನೆ ಕೇಳಿಯಾಡಲೂ ಬಲ್ಲೆ !
ನಿನಗಿದೆ ಬೇಡವಾದಾಗಲೂ ಮುನ್ನಡೆವ ಬಂಧನ,
ನನಗಿದೆ ಸ್ವೇಚ್ಛಾವಿಹಾರ ಸ್ವಾತಂತ್ರ್ಯ
ಸ್ವತಂತ್ರಧೀರ ಸಿದ್ಧೇಶ್ವರನ ಕರುಣದಿಂದ !

೪೪೩

ಆತ್ಮೌಪಮ್ಯವನ್ನು ಅನ್ವೇಷಿಸಿದ ಮಹರ್ಷಿ,
ಗುರುತ್ವಾಕರ್ಷಣವನ್ನು ಗುರುತಿಸಿದ ವಿಜ್ಞಾನಿ
ಇಬ್ಬರೂ ವಂದ್ಯರೆನಗೆ ;
ಅಹಿಂಸೆಯನ್ನು ಬೋಧಿಸಿದ ಪ್ರವಾದಿ,
ವಿದ್ಯುಚ್ಛಕ್ತಿಯನ್ನು ಶೋಧಿಸಿದ ವಿಜ್ಞಾನಿ
ಇಬ್ಬರೂನತಿಯೋಗ್ಯರೆನಗೆ;
ವಿಶ್ವದ ಏಕತ್ವವನ್ನು ಮಂಡಿಸಿದ ದಾರ್ಶನಿಕ,
ಶಕ್ತಿಯ ನಾನಾತ್ವವನ್ನು ನಿದರ್ಶಿಸಿದ ವಿಜ್ಞಾನಿ
ಇಬ್ಬರೂ ಮಾನ್ಯರೆನಗೆ ;
ಮನದ ನಿಗೂಢ ರಹಸ್ಯಗಳನ್ನು ಕಂಡ ಮನಶ್ಶಾಸ್ತ್ರಿ,
ತನುವಿನ ಕಣಕಣಗಳನ್ನು ಭೇದಿಸಿ ಶೋಧಿಸಿದ ವೈದ್ಯವಿದ್ಯಾಧರ
ಇಬ್ಬರೂ ಗಣ್ಯರೆನಗೆ ;
ಸ್ವತಂತ್ರಧೀರ ಸಿದ್ಧೇಶ್ವರಾ,
ಭೂಗೋಲ ಖಗೋಲಗಳ ರಹಸ್ಯಭಂಡಾರಗಳ
ಮುದ್ರೆಗಳನ್ನೊಡೆದವರೆಲ್ಲ ವರೇಣ್ಯರೆನಗೆ !

೪೪೪

ಇಂದು ಹುಟ್ಟಿಹ ಸಾಸಿರ ಸಾಸಿರ ಕೂಸುಗಳಿಗೆ ಸ್ವಾಗತ ;
ಇಂದು ಇಹಲೋಕ ಬಿಟ್ಟಿಹ ಸಾಸಿರ ಸಾಸಿರ ಜೀವಿಗಳಿಗೆ ಶ್ರದ್ಧಾಂಜಲಿ ;

ಇಂದು ಹಸೆಗೆ ನಿಂದ ಸಾಸಿರ ಸಾಸಿರ ವಧೂವರರಿಗೆ ಶುಭಾಶಯಗಳು ;
ಇಂದು ಆಸ್ಪತ್ರೆಗೆ ಸೇರಿದ ಸಾಸಿರ ಸಾಸಿರ ರೋಗಿಗಳಿಗೆ ಸಹಾನುಭೂತಿ ;
ಇಂದು ಸೆರೆಮನೆ ಸೇರಿದ ಸಾಸಿರ ಸಾಸಿರ ನಿರಪರಾಧಿಗಳಿಗಾಗಿ ಕಂಬನಿ ;
ಇಂದು ತಬ್ಬಲಿಗಳಾದ ಸಾಸಿರ ಸಾಸಿರ ಶಿಶುಬಾಲರಿಗಾಗಿ ನಿಟ್ಟುಸಿರು ;
ಇಂದಿನ ಒಡಲಿನಲ್ಲಿರುವ ಹಿಂದಿನ ಮುಂದಿನ
ನಗುವ ನರಳುವ ಜೀವಿಗಳಿಗೆಲ್ಲ
ಇಂದೆ ಶರಣೆಂಬೆನಯ್ಯಾ
ಸ್ವತಂತ್ರಧೀರ ಸಿದ್ಧೇಶ್ವರಾ !

೪೮೫

ಹೊಗಳಿದರು ಹಲವರೆಂದು ತೆಗಳಿದರು ಕೆಲವರೆನ್ನ ;
ಇದು ಕಾರಣ, ಹೊಗಳಿದವರೇ ಹೊಣೆಗಾರರೆನ್ನ ತೆಗಳಿಕೆಗೆ !
ದಯವಿಟ್ಟು ಹೊಗಳದಿರಿ, ದಮ್ಮಯ್ಯ !
ಹೊಗಳುವ ನೀವು ನನ್ನ ಗುಣಶೀಕರಗಳ ಮುಂದೆ
ಪಾರದರ್ಶಕವನ್ನಿರಿಸುವಿರಿ ;
ತೆಗಳುವವರು ನನ್ನ ದೋಷಗಳ ಮುಂದೆ
ಸೂಕ್ಷ್ಮದರ್ಶಕವನ್ನಿರಿಸುವರು.
ಎರಡರಲ್ಲಿಯೂ ವಿಶ್ವಾಸವಿಲ್ಲ ನನಗೆ ;
ಆದರೂ ಇಬ್ಬರಿಗೂ ನಮಸ್ಕಾರಗಳು !
ಸ್ವತಂತ್ರಧೀರ ಸಿದ್ಧೇಶ್ವರಾ,
ನೀನೊಮ್ಮೆ, ಒಮ್ಮೆಯೇ ಒಮ್ಮೆ ಅಹುದೆಂದರೆ ಸಾಕು ನನಗೆ!

೪೮೬

ಇದ್ದಲಿನ ಎದೆಯಲ್ಲಿ ನಿದ್ರಿಪ ವಜ್ರಕ್ಕೆ
ಉಜ್ಜುಗೊರಡಿನ ಅಂಜಿಕೆಯೆಲ್ಲಿಯದಯ್ಯ ?
ಕವಿಯ ಮನದಲ್ಲಿಯೇ ತೊನೆವ ಕವನಕ್ಕೆ
ವಿಮರ್ಶಕರ ಹೆದರಿಕೆಯೆಲ್ಲಿಯದಯ್ಯ ?
ಕಲ್ಲಿನಲ್ಲಿ ಅಡಗಿಹ ಕಟೆಯದ ಕೋಳಿಗೆ
ಕಟುಕನ ಚೂರಿಯ ಭಯವೆಲ್ಲಿಯದಯ್ಯ ?
ಬೀಜರೂಪದಲ್ಲಿರುವ ಗಿಡ ಮರ ಕಂಟಗಳಿಗೆ
ಕೊಡಲಿಯ ಬಾಯ ಭೀತಿಯೆಲ್ಲಿಯದಯ್ಯ ?
ಸ್ವತಂತ್ರಧೀರ ಸಿದ್ಧೇಶ್ವರಾ,
ನಿನ್ನನೇ ನಂಬಿ,
ನಿನ್ನ ನಂಬಿಕೆಯ ವಜ್ರರಕ್ಷೆಯಲ್ಲಿರುವ ನನಗೆ
ಅನ್ಯರ ಅವಿಶ್ವಾಸ ಹೊಗಳಿಕೆ ತೆಗಳಿಕೆಗಳ
ಬೆದರಿಕೆಯೆಲ್ಲಿಯದಯ್ಯಾ ?



೪೮೭

ಆಸ್ಥಾನದ ಆಸೆ ತಾನಸೇನನಿಗಲ್ಲದೆ
ಗುರು ಹರಿದಾಸರಿಗಲ್ಲವಯ್ಯ,
ಶ್ರೀನಾಥನಿಗಲ್ಲದೆ ಪೋತನನಿಗಲ್ಲವಯ್ಯ !
ಕೈಲಾಸದ ಆಸೆ ಕರಿಕಾಲಚೋಳನಿಗಲ್ಲದೆ
ಮಾದಾರ ಚೆನ್ನಯ್ಯನಿಗಲ್ಲವಯ್ಯ,
ಚೇರಮನಿಗಲ್ಲದೆ ಕಾರಿಕಾಲಮ್ಮೆಗಲ್ಲವಯ್ಯ !
ಹೆಸರಿನ ಆಸೆ ಹಸಿ ಬಿಸಿ ರಿಸಿಗಲ್ಲದೆ
ಸೇವಾತಪಸ್ವಿಗಲ್ಲವಯ್ಯ,
ಕೃಷಿಋಷಿಗಲ್ಲವಯ್ಯ !
ಫಲದ ಆಸೆ ರಾಜಕಾರಣಿಗಲ್ಲದೆ
ರಾಷ್ಟ್ರಭಕ್ತನಿಗಲ್ಲವಯ್ಯ,
ತ್ಯಾಗಯುಕ್ತನಿಗಲ್ಲವಯ್ಯ !
ಸ್ವತಂತ್ರಧೀರ ಸಿದ್ಧೇಶ್ವರಾ,

ಹೊಗಳಿಕೆಯ ಆಸೆ ನನ್ನಂಥ ಹುಸಿ ಭಕ್ತನಿಗಲ್ಲದೆ
ಬಸವಣ್ಣನಿಗಲ್ಲವಯ್ಯಾ !

೪೮೮

ಅರ್ಧ ರಾತ್ರಿಯಲ್ಲಿ ಎದ್ದು ಹೋಗುವರೆಲ್ಲ ಗೌತಮ
ಬುದ್ಧರಾಗುವರೇನಯ್ಯಾ ?
ಸಂನ್ಯಾಸವ ಸ್ವೀಕರಿಸಿದವರೆಲ್ಲ
ಶಂಕರಾಚಾರ್ಯರಾಗುವರೇನಯ್ಯಾ ?
ಉಪನಯನವ ನಿರಾಕರಿಸಿದವರೆಲ್ಲ
ಬಸವಣ್ಣನಾಗುವರೇನಯ್ಯಾ ?
ಶಾಸನಗಳ ಉಲ್ಲಂಘಿಸಿದವರೆಲ್ಲ
ಗಾಂಧೀಜಿ ಆಗುವರೇನಯ್ಯಾ ?
ಅಧಿಕಾರವ ನಿರಾಕರಿಸಿದವರೆಲ್ಲ ಅಥಣಿಯ ಶಿವಯೋಗಿಗಳು,
ಮಠಾಧಿಪತಿಗಳೆಲ್ಲ ಮೃತ್ಯುಂಜಯ ಶಿವಯೋಗಿಗಳಾಗುವರೇನಯ್ಯಾ ?
ಸ್ವತಂತ್ರಧೀರ ಸಿದ್ಧೇಶ್ವರಾ,
ನಿನ್ನ ಹೆಸರ ಬಳಸುವರೆಲ್ಲ
ನೀನಾಗುವರೇನಯ್ಯಾ ?

೪೮೯

ನಿಷ್ಠೆ ಪ್ರಬಲಿಸದೆ ಅನುಷ್ಠಾನಕ್ಕೆ ಬರದು ಮತತತ್ತ್ವವಾವುದೂ,
ನಿಷ್ಠೆ ಬಲಿಯೆ ಅಸಹಿಷ್ಣುತೆ ಅಂಕುರಿಸುವ ಭಯವಯ್ಯ ಅನ್ಯಮತಗಳ ಬಗ್ಗೆ ;
ನಿನ್ನ ನಾಮವೊಂದನು ನಂಬಿ ನಿತ್ಯ ನೆನೆಯದಿರೆ ನಾಮಜಪಫಲವಿಲ್ಲ,
ನಾಮವೊಂದನೆ ನಂಬೆ ಉಳಿದ ನಾಮಗಳ ಅನಾದರಿಪ ಭಯವಯ್ಯಾ ;
ನಿನ್ನ ರೂಪವೊಂದನೆ ನೆಚ್ಚಿ ನಿಚ್ಚ ಅರ್ಚಿಸದಿರೆ ಉಚ್ಚಗತಿಯಿಲ್ಲ,
ರೂಪವೊಂದನೆ ಮೆಚ್ಚೆ ಉಳಿದ ರೂಪಗಳ ತುಚ್ಛೀಕರಣದ ಭಯವಯ್ಯಾ ;
ಒಂದೆ ಮತವನು, ಒಂದೆ ನಾಮವನು, ಒಂದೆ ರೂಪವನು ನಂಬಿಯೂ
ಎಲ್ಲ ಮತಗಳು ನಿನ್ನ ಮತಗಳು, ಎಲ್ಲ ರೂಪಗಳು ನಿನ್ನ ರೂಪಗಳು,
ಎಲ್ಲ ನಾಮಗಳು ನಿನ್ನ ನಾಮಗಳು – ಎಂಬ ನಂಬಿಕೆಯ ಬೆಳೆಸಿ
ಸ್ವಮತನಿಷ್ಠೆ ಪರಮತಸಹಿಷ್ಣುತೆಯ,
ಏಕನಾಮ ರೂಪ ನಿಷ್ಠೆ ಸರ್ವನಾಮ ರೂಪ ಸಹಿಷ್ಣುತೆಯ
ಕಲಿಸಯ್ಯ ಸ್ವತಂತ್ರಧೀರ ಸಿದ್ಧೇಶ್ವರಾ !



೪೯೦

ಹಿಂದಿನ ಹಿರಿಯ ಕೃತಿಗಳನ್ನು ಓದಲಿಕ್ಕಾಗಲಿಲ್ಲ,
ಇಂದಿನ ಉದ್ಧ ಕೃತಿಗಳನ್ನೆಲ್ಲ ಓದುವುದಾಗಿಲ್ಲ,
ಮುಂಬರುವ ಮಹತ್ಕೃತಿಗಳನ್ನು ಓದುವ ಹಾಗಿಲ್ಲ !
ನಾನು ದುರ್ದೈವಿಯೋ ನೀನು ನಿರ್ದಯಿಯೋ ?
ಓದುವ ಅವಕಾಶವನ್ನೀಯಲು
ನಿನಗೆ ಮನಸ್ಸಿಲ್ಲದಿದ್ದರೆ
ಓದುವ ಆಸೆಯನ್ನಾದರೂ ಏಕೆ ಕೊಟ್ಟೆ ನನಗೆ ?
ಈ ಅತೃಪ್ತ ಅಭಿಲಾಷೆ,
ಅತುಷ್ಟ ಪಠನ ಪಿಪಾಸೆ,
ಅಸಫಲ ಪ್ರಕಾಶಾಪೇಕ್ಷೆಗಳೇ ನಿನಗೆ ಇಷ್ಟವೆ ?
ನಿನಗೆ ಇಷ್ಟವಿದ್ದರೆ
ನನಗೆ ನಷ್ಟವಾದರೂ ಸರಿಯೆ,
ನಿನ್ನ ಇಷ್ಟ ನೆರವೇರಲಯ್ಯ
ಸ್ವತಂತ್ರಧೀರ ಸಿದ್ಧೇಶ್ವರಾ !

೪೯೧

ಸುಖದೊಡನೆ ಸರಸವಾಡುವಾಗಿನ
ದುಃಖವನ್ನು ಅನುಭವಿಸಿದೆ ;
ದುಃಖದೊಡನೆ ಹೋರಾಡುವಾಗಿನ
ಸುಖವನ್ನು ಅನುಭವಿಸಿದೆ ;
ಸುಖದುಃಖಗಳ ಸುದ್ದಿಯನ್ನೇ ಮರೆತಾಗಿನ
ಆನಂದವನ್ನೂ ಅನುಭವಿಸಿದೆ ;
ಗೆಲವನ್ನು ದಕ್ಕಿಸಿಕೊಳ್ಳುವಾಗಿನ
ದುಕ್ಕವನ್ನು ಅನುಭವಿಸಿದೆ ;
ಸೋಲಿನೊಡನೆ ಸೆಣಸುವಾಗಿನ
ಸೊಗವನ್ನು ಅನುಭವಿಸಿದೆ ;
ಸೋಲು ಗೆಲವುಗಳನ್ನು ಮೀರಿದಾಗಿನ
ಮನಃಪ್ರಸಾದವನ್ನೂ ಅನುಭವಿಸಿದೆ ;

ಸಿರಿಯ ಸೆರೆಯಲ್ಲಿ ಸವೆದೆ,
ಬಡತನದ ಸೈಪನ್ನು ಸವಿದೆ,
ಸ್ತುತಿಯ ನಂಜನ್ನು ಗುಟುಕರಿಸಿದೆ,
ನಿಂದೆಯ ತನಿಯನ್ನು ಮುಕ್ಕಳಿಸಿದೆ,
ಸ್ವತಂತ್ರಧೀರ ಸಿದ್ಧೇಶ್ವರಾ,
ಸೇವಾಜೀವನದ
ಶಿಕ್ಷೆಯನ್ನೂ
ಮುಗಿಸಲಿಹೆನಯ್ಯ
ಅನತಿ ದೂರದಲ್ಲಿ !

೪೯೨

ಶೈಶವ ಬಾಲ್ಯಗಳ ಸುಸಿಲಾಟವನ್ನು ನೋಡಿದೆ,
ಬಾಲ್ಯ ತಾರುಣ್ಯಗಳ ಕಣ್ಣುಮುಚ್ಚಾಲೆಯನ್ನು ನೋಡಿದೆ,
ತಾರುಣ್ಯ ವಾರ್ಧಕ್ಯಗಳ ಕಬಡ್ಡಿಯನ್ನು ಕಂಡೆ,
ತೆರಳುವ ಮಾಗಿ ಮರಳುವ ಸುಗ್ಗಿಗಳ ಸರಿಗಮವನ್ನು ಕೇಳಿದೆ,
ಭೂತ ವರ್ತಮಾನಗಳ ಬೀಳ್ಕೊಡುಗೆಯನ್ನು ನೋಡಿದೆ,
ನೋವು ನಲಿವುಗಳ ನೆರಳುಬೆಳಕಿನಾಟವನ್ನು ಕಂಡೆ,
ವಾರ್ಧಕ್ಯ ವೃದ್ಧಾಪ್ಯಗಳ ಕಿವಿಮಾತುಗಳನ್ನು,
ಮುಪ್ಪು ಸಾವುಗಳನ್ನು ಪಿಸುಮಾತುಗಳನ್ನಷ್ಟು ಕೇಳುವುದುಳಿದಿದೆ !
ಅದಕ್ಕೆ ಮೊದಲು, ಇನ್ನೂ ನೋಡಬೇಕಾದುದನ್ನೆಲ್ಲ ನೋಡಿಸು,
ಕೇಳಬೇಕಾದುದನ್ನೆಲ್ಲ ಕೇಳಿಸು,
ತಿಳಿಯಬೇಕಾದುದನ್ನೆಲ್ಲ ತಿಳಿಸು,
ಮಾಡಬೇಕಾದುದನ್ನೆಲ್ಲ ಮಾಡಿಸು
ಸ್ವತಂತ್ರಧೀರ ಸಿದ್ಧೇಶ್ವರಾ !

೪೯೩

ಇಕಾರಸನ ಕನಸು ನನಸಾಗಲು
ರೈಟ್ ಬಂಧುಗಳು ಬರುವವರೆಗೆ ಕಾಯಬೇಕಾಯಿತಯ್ಯ ;
ಕಣಾದನ ಕನಸು ವಿಶ್ವಮಾನ್ಯವಾಗಲು
ಕೋಪರ್ನಿಕಸ್ ಬರುವವರೆಗೆ ಕಾಯಬೇಕಾಯಿತಯ್ಯ ;



ಉಪನಿಷದ್ರುಷಿಗಳ ಕಾಣ್ಕೆ ಒಪ್ಪಿತವಾಗಲು
ಜಗದೀಶಚಂದ್ರಬೋಸ್ ಬರುವವರೆಗೆ ಕಾಯಬೇಕಾಯಿತಯ್ಯ ;
ಮಹಾವೀರರ ಅಹಿಂಸೆಯ ಅದ್ಭುತ ಶಕ್ತಿ ಸಿದ್ಧವಾಗಲು
ಬಾಪೂಜಿ ಬರುವವರೆಗೆ ಕಾಯಬೇಕಾಯಿತಯ್ಯ ;
ಸ್ವತಂತ್ರಧೀರ ಸಿದ್ಧೇಶ್ವರಾ,
ನನ್ನಲ್ಲಿ ನೀನು ಪ್ರಕಟವಾಗಲು
ಆಯುಷ್ಯವೆಲ್ಲ ಪರಿತಪಿಸಿದರೂ ಸಾಲದಯ್ಯಾ !

೪೯೪

ನಿನಗೆ ಸೃಷ್ಟಿಕಾವ್ಯ ಬರೆವ ಬಯಕೆಯಾದಾಗ
ಲೆಕ್ಕಣಿಕೆ ಮಾಡಿಕೊಳ್ಳಯ್ಯಾ ನನ್ನನ್ನು ;
ನಿನಗೆ ನಾದಲೀಲೆ ಬೇಕೆನಿಸಿದಾಗ
ಕೊಳಲ ಮಾಡಿಕೊಳ್ಳಯ್ಯಾ ನನ್ನನ್ನು ;
ನೀನು ಚಿತ್ರ ಬರೆಯಲು ಬಗೆದಾಗ
ಕುಂಚ ಮಾಡಿಕೊಳ್ಳಯ್ಯಾ ನನ್ನನ್ನು ;
ನಿನಗೆ ಕುಣಿವ ಚಪಲವಾದಾಗ
ಕಾಲ್ಗೆಜ್ಜೆ ಮಾಡಿಕೊಳ್ಳಯ್ಯಾ ನನ್ನನ್ನು ;
**“O mon doux Seignuer,**
**Apprends moi a etro**
**Ton instrument d'amour”**
ಸ್ವತಂತ್ರಧೀರ ಸಿದ್ಧೇಶ್ವರಾ,
ನಿನ್ನಿಚ್ಛೆಗೆ ತಕ್ಕ ಉಪಕರಣ ಮಾಡಿಕೊಳ್ಳಯ್ಯಾ ನನ್ನನ್ನು !

೪೯೫

ನಿನ್ನ ಶರಣರ ಅಲಿಖಿತ ವಚನಗಳ ಧ್ವನೀವೀಚಿಗಳನ್ನು ಗ್ರಹಿಸುವ
ಗ್ರಾಹಕವಾಗಲಯ್ಯ ನನ್ನ ಕಿವಿ ;
ನಿನ್ನ ಶರಣರ ಅವ್ಯಕ್ತ ಆಕೃತಿಗಳನ್ನು ದರ್ಶಿಸುವ
ದೂರದರ್ಶನವಾಗಲಯ್ಯ ನನ್ನ ಕಣ್ಣು ;
ನಿನ್ನ ಶರಣರ ಅಪ್ರಕಟಿತ ವಿಚಾರಸುಮಗಳ
ಸೌರಭವನ್ನರಿವ ಗಂಧ ಗ್ರಾಹಿಯಾಗಲಯ್ಯ ನನ್ನ ನಾಸಿಕ ;
ನಿನ್ನ ಶರಣರ ಅನುಕ್ತ ಉಕ್ತಿಗಳ

ಧ್ವನಿಮುದ್ರಿಕೆಯಾಗಲಯ್ಯ ನನ್ನ ರಸನೆ ;
ಸ್ವತಂತ್ರಧೀರ ಸಿದ್ಧೇಶ್ವರಾ,
ಬಯಲ ಬೆರೆತ ನಿನ್ನ ಶರಣರ
ಉಸಿರ ಅಲೆಗಳನ್ನರಿವ
ಕುಶಲಿಯಾಗಲಯ್ಯ ನನ್ನ ತ್ವಚ !

೪೯೬

ಮಾತಿನ ಬಸಿರೆ ಭಾವಶಿಶುವಿನ ಭಾರದಿಂದ ಬಸವಳಿದಿದ್ದಾಳೆ !
ಬೇನೆ ಪ್ರಾರಂಭವಾಗಿ ಬಹಳ ದಿನಗಳುರುಳಿವೆ
ಹೆರಿಗೆಯೇಕೆ ಆಗದವ್ವಾ ಇನ್ನೂ ?
ಮದ್ದುಗಿದ್ದು ಕುಡಿಸೋಣವೆ ?
ಬೇಡ, ಹೆರಿಗೆಗೆ ಬದಲು ಹಲಿವುಳಿಕೆಯಾದೀತು !
ಶಸ್ತ್ರ ಶಲಾಕೆ ಬೇಡ, ಗಿಡಮೂಲಿಕೆ ಬೇಡ,
ಒಳಗೇ ತಿಣುಕುವ ಶಕ್ತಿ ವಿಕಸಿಸಲಿ ;
ಮಗುವಿನ ಮೊಗ ನೋಡಬೇಕೆಂಬ
ತಾಯ್ತನದ ತವಕ ಪ್ರಬಲಿಸಲಿ !
ಸ್ವತಂತ್ರಧೀರ ಸಿದ್ಧೇಶ್ವರನ ದಯದಿಂದ
ಸಹಜ ಸುಖಪ್ರಸವವೇ ಆದೀತು !

೪೯೭



ನಿನ್ನ ಪ್ರೇರಣೆಯ ಪುಂಗಿಯ ಸ್ವರಕ್ಕೆ
ನನ್ನ ನುಡಿಯ ಹೇಳಿಗೆಯಿಂದೆದ್ದು
ಹೆಡೆಯಾಡಲಯ್ಯ ಅರ್ಥನಾಗರ !
ಉಗುಳದಿರಲಿ ಅದು ಅನರ್ಥಗರಲವ !
ಆಗಲಯ್ಯ ಅದು ಸಮಾಜ ಶಿವನ ಆಭರಣ !
ದೋಷದ ಮೂಷಕನನ್ನು ನುಂಗಿ
ನೀಡಲಯ್ಯ ಲೇಸಿನ ಭಾಸುರ ರತ್ನವ!
ಪೌನಃಪುನ್ಯದ ಪರೆಯ ಕಳಚಿ
ತೋರಲಯ್ಯ ಹೊಸತಿನ ಹೊಗರನು !
ಒಮ್ಮೆಯಾದರೂ ಆಗಲಯ್ಯ
ಬೆನಕನ ಹೊಟ್ಟೆಯ ಕಟ್ಟಲು ಹುರಿ
ಸ್ವತಂತ್ರಧೀರ ಸಿದ್ಧೇಶ್ವರಾ !

೪೯೮

ಡಾಕ್ಟರರೇ ಅಸಾಧ್ಯವೆಂದ ವ್ಯಾಧಿಯನ್ನು
ಕಂಪೌಂಡರನು ವಾಸಿಗೊಳಿಸುವೆನೆಂಬಂತೆ,
ಪಾಣಿನಿಯೇ ಪರಿಹರಿಸದ ವ್ಯಾಕರಣ ಸಮಸ್ಯೆಗಳನ್ನು
ನಾಣಿಲಿಯ ಬಗೆಹರಿಸುವೆನೆಂದು ಗಳಹಿದಂತೆ,
ಆದಿಶಂಕರ, ಅಲ್ಲಮಪ್ರಭು, ಅರವಿಂದರು ಒರೆಯದ ಅಧ್ಯಾತ್ಮರಹಸ್ಯ
ಗಳನ್ನು
ಅರೆಮರುಳ ಒರೆವೆನೆಂದು ಪರದಾಡುವಂತೆ,
ನ್ಯೂಟನ್ ಐನ್‌ಸ್ಟನ್ನರೂ ಬಿಡಿಸದ ವಿಜ್ಞಾನದ ಸಿಕ್ಕುಗಳನ್ನು
ಷಾರ್ಲಟನ್ನರು ಬಿಡಿಸುವೆವೆಂದು ಬಡಿವಾರ ಕೊಚ್ಚುವಂತೆ,
ಕೌಟಿಲ್ಯ ಪ್ಲೇಟೋ ಅರಿಯದ ರಾಜ್ಯಶಾಸ್ತ್ರ ಸೂತ್ರಗಳನ್ನು
ಹಳದಿ ಪತ್ರಿಕೆಯ ವರದಿಗಾರ ಅರಿತಿಹೆನೆಂದ ಸೊರಹುವಂತೆ
ಏನೇನೋ ಗೀಚುತ್ತ ಪೇಚಾಡುತ್ತಲಿಹೆನಯ್ಯಾ !
ನಿನ್ನ ನಾಮ ರವಿಕಿರಣ ನನ್ನ
ಬರಹದೊಳಗಣ ಮರಹಿನ ಕತ್ತಲೆಗೆ !
ಇದೇ ಧೈರ್ಯದಿಂದಲೇ ಬರೆವುದ ತೊರೆದಿಲ್ಲವಯ್ಯಾ
ಸ್ವತಂತ್ರಧೀರ ಸಿದ್ಧೇಶ್ವರಾ !

೪೯೯

ಅಡಕಿಲ ಗಡಿಗೆಗಳ ಬುಡಕ್ಕೇ ಬಡಿಗೆ ಬೀಸಿದಂತಾಯಿತ್ತಯ್ಯ
ನಿನ್ನ ಅಳಿಯ ಅಲ್ಲಮನ ವಚನಗಳನ್ನು ಇನ್ನೊಮ್ಮೆ ಓದಿದಾಗ !
"ವಚನ ರಚನೆಯ ರಂಜನೆಯ ಲೀಲೆಯನಾಡುವರು
ಗುಹೇಶ್ವರನಿಪ್ಪ ಗುಪ್ತವೆಂತೆಂದರಿಯರು !"
ನಾ ಬರೆದುದೆಲ್ಲ ರಂಜನೆಯ ಲೀಲೆಯಾಯಿತ್ತಲ್ಲದೆ
ಎಲ್ಲಿಯೂ ಮಾತು ಜ್ಯೋತಿರ್ಲಿಂಗವಾಗಲಿಲ್ಲವಯ್ಯಾ !
ನಿಜ, "ಒತ್ತಿ ಹಣ್ಣ ಮಾಡಿದಡೆ ಅದೆತ್ತಣ ರುಚಿಯಪ್ಪುದೋ ?
ಕಾಮಿಸಿ, ಕಲ್ಪಿಸಿ, ಭಾವಿಸಿದಡೆ ಅದೇ ಭಂಗ !
ಭಾವಿಸುವ ಭಾವನೆಗಿಂತ ಸಾವುದೇ ಲೇಸು ಗುಹೇಶ್ವರ !"
ಇದನೋದಿ, "ಭಾವದ ಗುಸುಟು ಅದು ತಾನೆ ನಾಚಿ ನಿಂದಿತ್ತು !"
ಇನ್ನಾದರೂ, ಒಮ್ಮೆಯಾದರೂ "ನನ್ನ ನಾನರಿದು
ನುಡಿಯೆಲ್ಲ ಪರತತ್ವ" ವಾಗುವ ವರವ ಕರುಣಿಸಾ
ಸ್ವತಂತ್ರಧೀರ ಸಿದ್ಧೇಶ್ವರಾ !

೫೦೦

ಸಮವಸ್ತ್ರಗಳಲ್ಲೊಂದು ಸೊಗಸಿದ್ದರೆ
ಬಗೆಬಗೆಯ ಬಟ್ಟೆಗಳಲ್ಲೊಂದು ಸೊಬಗು ;
ಹಾಕಿ ಬೆಳೆಸಿದ ಉಪವನದಲ್ಲೊಂದು ಅಂದವಿದ್ದರೆ
ಸಿಕ್ಕಂತೆ ಬೆಳೆದ ಕಾಡಿನಲ್ಲೊಂದು ಚೆಂದ ;
ಸಾಕಿ ಬೆಳೆಸಿದ ಮನೆ ಗಿಳಿಯಲ್ಲೊಂದು ಮೋಡಿಯಿದ್ದರೆ
ಪಂಜರಕ್ಕೆ ಸಿಲುಕದ ವನ ಗಿಳಿಯಲ್ಲೊಂದು ಗಾಡಿ ;
ಏಕಾಂತದ ಪೂಜೆಯಲ್ಲೊಂದು ಮೋಡಿಯಿದ್ದರೆ
ಸಾಮೂಹಿಕ ನಮಾಜಿನಲ್ಲೊಂದು ಹಿರಿಮೆ ;
ಸ್ವತಂತ್ರಧೀರ ಸಿದ್ಧೇಶ್ವರಾ,
ಮಹಾಪುರುಷರ ವಾಗ್ವೈಭವದಲ್ಲೊಂದು ಪೆಂಪಿದ್ದರೆ
ನಿನ್ನ ಈ ಕಂದನ ಕಲಭಾಷೆಯಲ್ಲೊಂದು ಇಂಪಿರದೆ ?

೫೦೧

ತಾನು ಸುಟ್ಟುಕೊಟ್ಟ ರೊಟ್ಟಿಯ ತುಣುಕನ್ನೇ
ಮಗು ಮುರಿದು ತನ್ನ ಬಾಯೊಳಿಟ್ಟಾಗ
ತಾಯಿಗೆಷ್ಟು ಹಿಗ್ಗು !?
ತಾನೇ ಜಾತ್ರೆಗೆಂದಿತ್ತ ರೊಕ್ಕದಲ್ಲಿಯೇ
ಮಗ ಉಳಿತಾಯ ಮಾಡಿ ಮರಳಿಕೊಟ್ಟಾಗ
ತಂದೆಗೆಷ್ಟು ಹರುಷ !?
ತಾನು ಬಡಿದು ಕಲಿಸಿದುದನ್ನೇ
ಶಿಷ್ಯ ತನಗೊಪ್ಪಿಸಿದಾಗ
ಗುರುವಿಗೆನಿತು ಆನಂದ !?
ಸ್ವತಂತ್ರಧೀರ ಸಿದ್ಧೇಶ್ವರಾ,
ನೀ ಪ್ರೇರಿಸಿದುದನ್ನೇ ನಾನು ಬರೆದಾಗ
ನಿನಗೆ ಕುಗ್ಗೋ ಹಿಗ್ಗೋ?

೫೦೨

ಸ್ಫುರಿಸಿದಾಗ ಲಿಖಿಸಲಾಗದೆ
ವಿಸ್ಮರಿಸಿ ಹೋದ ವಚನಗಳೆ
ನನ್ನ ಉಪೇಕ್ಷೆಯನ್ನು ಲಕ್ಷಿಸದೆ
ಇನ್ನೊಮ್ಮೆ ಬನ್ನಿ, ದಯವಿಟ್ಟು ಬನ್ನಿ !
ನೀವು ಬರುವ ದಾರಿಯನ್ನು ತೋರಿದರೆ
ನನ್ನ ನೋಟಗಳ ಬಿತ್ತುವೆ ಅದರುದ್ದಕ್ಕೂ !
ಆ ಹಾದಿಯಲ್ಲಿ ನಿಮ್ಮ ಹೆಜ್ಜೆಗಳು ಮೂಡಿದರೆ
ಮಜ್ಜನ ಮಾಡಿಸುವೆನವಕೆ ನನ್ನ ಕಂಬನಿಗಳಿಂದ !
ನಿಮಗೆ ಗೊತ್ತಿಲ್ಲವೆ ನಾನು ಪರಾಧೀನನೆಂಬುದು,
ಸಮಯವಿಹೀನನೆಂಬುದು, ದೀನನೆಂಬುದು ?
ನನ್ನ ತಪ್ಪನ್ನು ಮರೆತು ಬನ್ನಿ,
ಜೀವಿ, ಜೀವನ, ಜಗ, ಜಗದೀಶ್ವರನ ಕುರಿತು ಬನ್ನಿ,
ಜೀವ ಜೀವಾಳದಲಿ ಬೆರೆತು ಬನ್ನಿ,
ಸ್ವತಂತ್ರಧೀರ ಸಿದ್ಧೇಶ್ವರ ವಚನಗಳೇ, ಮತ್ತೆ ಬನ್ನಿ !
ಸ್ವತ್ವ ಕೆರಳಿಸಿ ಬನ್ನಿ, ಸತ್ವ ಅರಳಿಸಿ ಬನ್ನಿ,
ಚಿತ್ತ ಅಲರಿಸಿ ಬನ್ನಿ, ಮುತ್ತು ಉರುಳಿಸಿ ಬನ್ನಿ,

ಬನ್ನಿ, ಬನ್ನಿ, ಬನ್ನಿ !

೫೦೩

ತಿಳಿವಿನ ಹೊಳಲಿನ
ಬೀದಿ ಬೀದಿಯ ಸಗಣಿಯ ಶೇಖರಿಸಿ
ನಿನ್ನ ಶರಣರ ಮನೆಗಳ ಗಂಜಳ ಬೆರೆಸಿ,
ಈ ಬೆರಣಿಗಳ ಬಡಿದಿಟ್ಟಿಹೆನಯ್ಯ !
ಇವು ನಿನ್ನವರ ಒಲೆಗಳಿಗೆ
ಉರುವಲವಾಗುವಂತೆ ಕರುಣಿಸಯ್ಯಾ
ಸ್ವತಂತ್ರಧೀರ ಸಿದ್ಧೇಶ್ವರಾ !

೫೦೪

ಇನ್ನೂ ಎರಡು ತುತ್ತು ಉಣ್ಣುವಂತಿರುವಾಗಲೇ
ಊಟ ಮುಗಿಸಬೇಕಯ್ಯ ;
ಇನ್ನೂ ಎರಡು ದಿನ ಇರಲಿ ಎನ್ನುವಾಗಲೇ
ಅತಿಥಿತನ ಮುಗಿಸಬೇಕಯ್ಯ ;
'ಇನ್ನೊಮ್ಮೆ ಆರಿಸಿ ಬರಲಿ' ಎಂಬಾಗಲೇ
ಚುನಾವಣೆಗೆ ಶರಣು ಹೊಡೆಯಬೇಕಯ್ಯ ;
'ಇನ್ನಷ್ಟು ದಿನ ಉಳಿದಿರಲಿ' ಎನ್ನುತ್ತಿರುವಾಗಲೇ
ಅಧಿಕಾರಕ್ಕೆ ಕೈಮುಗಿಯಬೇಕಯ್ಯ ;
'ಇನ್ನೂ ಎರಡು ಪುಸ್ತಕ ಬರೆಯಲಿ' ಎನ್ನವಾಗಲೇ
ಬರೆವಣಿಗೆಗೆ ಎಳ್ಳು ನೀರು ಬಿಡಬೇಕಯ್ಯ ;
ಇನ್ನೂ ಈ ದೇಹ ದುಡಿಯುತ್ತಿರುವಾಗಲೇ
ನಿನ್ನಡಿಗೆ ಮುಡಿಪಾಗಬೇಕಯ್ಯ ಸ್ವತಂತ್ರಧೀರ ಸಿದ್ಧೇಶ್ವರಾ !

೫೦೫

ಬದುಕಿಸಲಾರದುದು
ಬದುಕಿದೆಯೆಂದು
ಹೇಗೆ ಹೇಳುವುದಯ್ಯ ?



'ಬದುಕು, ಬದುಕಗೊಡು,'
ಎಂಬುದಲ್ಲ ಬದುಕಿನ ಸೂತ್ರ ;
'ಬದುಕಿಸು, ಬದುಕು,' ಎಂಬುದೇ
ಸುವರ್ಣಸೂತ್ರವಯ್ಯ ;
**"Because I live, ye shall live also,"**
ಎಂದೆನ್ನಿಸದಿರಯ್ಯ ;
**"Because you live, I shall also live,"**
ಎಂದೆನ್ನಿಸಯ್ಯ
ಸ್ವತಂತ್ರಧೀರ ಸಿದ್ಧೇಶ್ವರಾ !

೫೦೬

ಭಕ್ತಾಗ್ರೇಸರಾ, ಕವೀಶ್ವರಾ, ಹರೀಶ್ವರಾ
'ಪೋಗೆನೆ ಪೋಪ, ಬಾರೆನಲು ಬರ್ಪ....'
ಸೇವಾವೃತ್ತಿಯನ್ನು ಎಷ್ಟು ಬೇಗ ಕೊಡಹಿ
ಬಿಡುಗಡೆಯನ್ನು ಪಡೆದೆಯಯ್ಯಾ ನೀನು ?
ಮೂರು ದಶಕಗಳು ಮುಗಿದರೂ
ಮುಗಿಯದಿದೆಯೆನ್ನ ಸೇವಾವೃತ್ತಿ ;
ಹೋಯಿತದರಲ್ಲಿ ಇದ್ದ ಸತ್ವವೆಲ್ಲ ಬತ್ತಿ !
ಈಗುಳಿದಿಹುದು ಕಬ್ಬಲ್ಲ, ಹಿಪ್ಪೆ ;
ಗೊರಟ, ಕರಟ, ಚರಟ, ಸಿಪ್ಪೆ ;
ನಿನ್ನ ನೈತಿಕ ಧೈರ್ಯದ
ನೂರರಲ್ಲೊಂದು ಪಾಲು ನನ್ನೊಳಿದ್ದಿದ್ದರೆ...?
ಇದ್ದಿದ್ದರೆ...ದಿದ್ದರೆ....ದ್ದರೆ...ರೆ !
ಹೊಟ್ಟೆಗೆ ದಾಸರಾದವರಲ್ಲಿ ದಿಟ್ಟತನವಿರಬಹುದೆ ?
ಸಂಬಳಕ್ಕೆ ಮಾರಿಹೋದವರಲ್ಲಿ ಗಟ್ಟಿತನವಿರಬಲ್ಲುದೆ ?
ಒತ್ತೆಯಿಟ್ಟ ಒಡವೆ, ಅಡವಿಟ್ಟ ಸರಕು,
ಒಡನೆ ದೊರೆಯದ ಇಡುಗಂಟಾಗಿ
ಇನ್ನೆಷ್ಟು ದಿನ ದೇಕಲಯ್ಯಾ
ಹುಲುಬಾಳು ನೂಕಲಯ್ಯಾ,
ಸ್ವತಂತ್ರಧೀರ ಸಿದ್ಧೇಶ್ವರಾ?

೫೦೭

ಅರೆಮತ್ತಿನಲ್ಲಿಯೇ ಅರುವತ್ತು ವರುಷಗಳು ಕಳೆದುವಯ್ಯಾ !
ನಿನ್ನ ಅರುಳು ದೊರೆಯದೆ ಹುರುಳು ದೊರೆವುದೆಂತು ?
ಹುರುಳು ತಿರುಳಿಲ್ಲದ ಈ ಮರುಳು ಬಾಳಿನಲ್ಲಿ
ಹುಡುಕಿದರೂ ಸಿಕ್ಕವು ಹದ ಹದುಳಗಳು,
ಹೊಲಬು ಹೊನಹುಗಳು !
ನೀನಿಂದು ಒಲಿದೆಯೋ, ಇಂದಿನಿಂದಲೆ ಹೊಸ ಬಾಳು ನನಗೆ !
ಇಲ್ಲದಿರೆ ಇಲ್ಲಮೆಯೆ ಎಲ್ಲ ಕೊನೆಗೆ !
ಇಂದೆ ಒಲಿ, ಇಂದೆ, ಒಲಿ, ಈಗಲೇ ಒಲಿ
ಸ್ವತಂತ್ರಧೀರ ಸಿದ್ಧೇಶ್ವರಾ !

೫೦೮

ಆಯುಷ್ಯವೆಲ್ಲ ಅನಾರೋಗ್ಯವನ್ನು ಸಹಿಸಿದೆ,
ಬೆಂಕಿಯಲ್ಲದ ಬೆಂಕಿಯಲ್ಲಿ ದಹಿಸಿದೆ,
ಅನಾರೋಗ್ಯವೂ ನಿನ್ನ ದಾನವೆಂದು ಗ್ರಹಿಸಿದೆ,
ನೀನಿತ್ತ ಕಾಯಕವನ್ನು ಕೈಲಾದನಿತು ನಿರ್ವಹಿಸಿದೆ !
ಇನ್ನೇನ ಮಾಡಲಾಪೆನಯ್ಯಾ ನಾನು ?
ಓದುವ ಹುಚ್ಚನ್ನಿತ್ತು ಬಿಡುವಿಲ್ಲದಂತೆ ಮಾಡಿದೆ ;
ಬರೆವ ಹುಚ್ಚನ್ನಿತ್ತು ಹೊತ್ತು ಸಿಕ್ಕದಂತೆ ಮಾಡಿದೆ ;
ಸೇವೆಯ ಹುಚ್ಚನ್ನಿತ್ತು ಸ್ವಾಸ್ಥ್ಯವಿಲ್ಲದಂತೆ ಮಾಡಿದೆ !
ನಿನಗೇ ಇಷ್ಟವಿಲ್ಲದಿರೆ ನನಗಾವ ನಷ್ಟ ?
ಸಾಧನೆಗೆ ಸಾಧ್ಯತೆ ಇಲ್ಲವಾದುದೇ ಕರಕಷ್ಟ !
ಒಂದು ಮಾತ್ರ ಸ್ಪಷ್ಟ ;
ನೀನಿತ್ತುದರಲ್ಲಿಯೇ ನಾನು ತುಷ್ಟ,
ಸ್ವತಂತ್ರಧೀರ ಸಿದ್ಧೇಶ್ವರಾ !

೫೦೯

ಈ ಬಗೆಯ ಬಾನುಲಿಯಲ್ಲಿ ಸುಮಧುರ ಸಂಗೀತ ಒಮ್ಮೊಮ್ಮೆ ;



ಜಾಹೀರಾತು, ನಿರರ್ಥಕ ಮಾತು, ತೀತೀ ತೂತೂ ಇನ್ನೊಮ್ಮೆ !
ಗ್ರಾಹಕದ ಯಾವ ಬಿರಡೆಯನ್ನು ತಿರುಗಿಸಿದರೂ ಇಂಚರದ ಸಂಚಾರ ಒಮ್ಮೊಮ್ಮೆ,
ಎಲ್ಲ ಬಿರಡೆಗಳನ್ನು ತಿರುಗಿಸಿಯೂ ಸವಿಗೆ ಸಂಚಕಾರ ಇನ್ನೊಮ್ಮೆ !
ಅದನು ತಿರುಗಿಸಿ, ಇದನು ತಿರುಗಿಸಿ
ಗರ ಗರ ಗರ ಸ್ವರ ಕೇಳಿ ತಲೆ ಗಿರ ಗಿರ ಗಿರ ತಿರುಗಿದಾಗ
ಸ್ವತಂತಧೀರ ಸಿದ್ಧೇಶ್ವರ,
'ಸ್ವತಂತ್ರಧೀರ ಸಿದ್ಧೇಶ್ವರ' ಎಂಬ ಸ್ವರ
ಕಿವಿಗೆ ಬಿದ್ದು ಶಾಂತನಾಗುವೆನಯ್ಯಾ,
ನಿಶ್ಚಿಂತನಾಗುವೆನಯ್ಯಾ,
ಜೀವಂತನಾಗುವೆನಯ್ಯಾ !

೫೧೦

ಲೇಸೆನಿಸಿಕೊಂಡು ಒಂದು ದಿನ ಬದುಕಿದರೂ ಸಾಕೆಂದೆ,
ಓ ತಂದೆ, ಬಡವರ ಬಂಧು ಬಸವೇಶ್ವರಾ !
ಲೇಸಿನ ಲವಲೇಶವೂ ಇಲ್ಲದೆ ಬದುಕಿದ್ದೇನೆ,
ಲೇಸಿನ ವಾಸನೆ ಕೂಡ ಬಡಿಯದಂತೆ ಬದುಕಿದ್ದೇನೆ,
ಲೇಸಿಗೆ ಹೇಸಿಗೆಯೆನಿಸುವಂತೆ ಬದುಕಿದ್ದೇನೆ
ಅರ್ಧ ಶತಮಾನಕ್ಕೂ ಮಿಕ್ಕಿ,
ಲೇಸು ಅಳುತಿದೆ ಬಿಕ್ಕಿ ಬಿಕ್ಕಿ !
ನಿನ್ನ ವಚನಗಳನ್ನು ಓದಿದಾಗೊಮ್ಮೆ
ನನಗೆ ನಾನೇ ಅಸಹ್ಯವೆನಿಸುತ್ತೇನೆ,
ಲೇಸಿಗೆ ಬಾಗಿ ಬಾಳಲು ಸಂಕಲ್ಪಿಸುತ್ತೇನೆ,
ಪಣ ತೊಡುತ್ತೇನೆ,
ಆಣೆಯಿಟ್ಟುಕೊಳ್ಳುತ್ತೇನೆ,
ಮತ್ತೆ ನಾಯಬಾಲವಾಗುತ್ತೇನೆ!
ಈಶನ ಮೀಸಲಪ್ಪ ಭಕ್ತ ಬಸವಣ್ಣ,
ಸ್ವತಂತ್ರಧೀರ ಸಿದ್ಧೇಶ್ವರ ಮೆಚ್ಚುವಂತೆ
ಲೇಸನೇ ಹಾಸಿ, ಲೇಸನೇ ಹೊದೆದು,
ಲೇಸನೆ ಉಂಡು, ಲೇಸನೇ ಉಸಿರಾಡಿಸಿ
ಲೇಸಾಗಿ ಬಿಡುವ ಬಗೆಯ ಕಲಿಸಯ್ಯ,

ಕಲಿಸಿ ಬಾಳಿಸಿ ಬೆಳಗಿಸಯ್ಯಾ !

೫೧೧

ನನಗೆ ಬಯಸದೆ ಬಂದ ಪದವಿಗಳಿಲ್ಲ
ನಿನ್ನ ಕರುಣೆಯ ಕುರುಹಲ್ಲದೆ
ನನ್ನ ಘನತೆಯ ಗುರುತಲ್ಲ ತಂದೆ !
ಹಿಡಿ ಮಣ್ಣಿನಲ್ಲಿ ಕಿಡಿಯೊಂದನಿರಿಸಿ ಕಳಿಸಿದೆ
ಕಿಡಿ ಪುಟಗೊಂಡು ಅಗ್ನಿಯಾಗಿ,
ಈಗ ಬೆಳಕಾಗಲು ಹಾರೈಸುತ್ತಿದೆಯಯ್ಯಾ!
ಬೆಳಕಿಗೆ ಬೆಳಕಾದ ನೀನೇ
ಬೆಳಕಾಗಿಸಯ್ಯ ಇದನು–ಸ್ವತಂತ್ರಧೀರ ಸಿದ್ಧೇಶ್ವರಾ!

೫೧೨

ಮೂರೇ ಮೂರು ದುಸ್ಸಹ ದೃಶ್ಯಗಳನ್ನು ನೋಡಿ
ಅರಮನೆ, ರೂಪವತಿ ಸತಿ, ಸಿರಿಮೊಗದ ಮಗ
ಎಲ್ಲರನ್ನೂ, ಎಲ್ಲವನ್ನೂ ತೊರೆದು ಹೊರಬಿದ್ದೆ ಬುದ್ಧದೇವ!
ಸಾವಿರ ಸಾವಿರ ಕರಾಳ ದೃಶ್ಯಗಳನ್ನು ನೋಡಿಯೂ
ಹಿಡಿ ಸಂಬಳದ ಕೆಲಸವೊಂದ ಬಿಡಲಾಗದ ಹೇಡಿ ನಾನು !
ಒಳಗಿದ್ದು ಹೋರಾಡುವ ಧೈರ್ಯವಿಲ್ಲ,
ಹೊರಬಿದ್ದು ಶುದ್ಧವಾಗುವ ಸ್ಥೈರ್ಯವಿಲ್ಲ,
ಅತ್ತೂ ಇಲ್ಲ, ಇತ್ತೂ ಇಲ್ಲ,
ಎತ್ತೋ ಹೊರಟಿಹೆನಯ್ಯ
ಗೊತ್ತು ಗುರಿಯಿಲ್ಲದೆ !
'ಸಂಘಂ ಶರಣಂ ಗಚ್ಛಾಮಿ,' ಎಂಬೆನೆ?
ಸಂಘವೇ ಉಳಿದಿಲ್ಲ !
'ಧರ್ಮಂ ಶರಣಂ ಗಚ್ಛಾಮಿ,' ಎಂಬೆನೆಯ್ಯಾ!
ಧರ್ಮವೆಂಬುದೇ ತಿಳಿದಿಲ್ಲ !
'ಬುದ್ಧಂ ಶರಣಂ ಗಚ್ಛಾಮಿ,' ಎಂಬೆನಯ್ಯಾ !
ಸ್ವತಂತ್ರಧೀರ ಸಿದ್ಧೇಶ್ವರನೆ
ಗೊತ್ತುಗುರಿ ಗುರು ದಾರಿಯೆಂದು
ನಂಬಿ ನಡೆವೆನಯ್ಯಾ !



೫೧೩

ಉರಿವ ಜಲಜನಕ, ಉರಿಸುವ ಆಮ್ಲಜನಕ
ಎರಡೂ ಸೇರೆ ನಂದಿಸುವ ನೀರಾಯಿತ್ತು ;
ಉರಿವ ಕರ್ಮ, ಉರಿಸುವ ಜ್ಞಾನ
ಎರಡೂ ಸೇರೆ ಬದುಕಿಸುವ ಭಕ್ತಿಯಾಯಿತ್ತಯ್ಯ !
ಕುರುಡು ಭಕ್ತಿಯಲ್ಲ,
ಕುರುಡುಗೊಳಿಸುವ ಭಕ್ತಿಯಲ್ಲ
ಬದುಕಿನ ಬರಡನಳಿಸುವ ಭಕ್ತಿ,
ಪಶ್ಯಂತಿ ಭಕ್ತಿ!
ಇಂಥ ಭಕ್ತಿಯನೆ ನೀಡಿ
ಮುಕ್ತಿಯ ಬಿಸಾಡಾಚೆಗೆ
ಸ್ವತಂತ್ರಧೀರ ಸಿದ್ಧೇಶ್ವರಾ!

೫೧೪

ಪದವೀದಾನ ಸಮಾರಂಭಕ್ಕೆ ಕರೆದಿರುವರಯ್ಯ
ಮತ್ತೊಂದು ಪದವಿಯ ಕೊಡುವರಂತೆ!
ನಿನ್ನ ಪದಭಕ್ತನಾಗಿಹುದೆ ಪರಮಪದವಿ ನನಗೆ
ಮತ್ತೇತಕಯ್ಯ ಮತ್ತೊಂದು ಪದವಿ ?
ಮಾದಾರ ಚೆನ್ನಯ್ಯನ ಮನೆಯ ಮಗನ
ಊಳಿಗದವನೆಂಬ ಪದವಿ ಸಾಲದೆ ?
ಡೋಹರ ಕಕ್ಕಯ್ಯನ ಕಿಂಕರರ ಕಿಂಕರರ
ಕಿಂಕರನೆಂಬ ಪದವಿ ಸಾಲದೆ ?
ಶರಣ ಹರಳಯ್ಯನ ಲೆಂಕರ ಲೆಂಕರ
ಲೆಂಕನೆಂಬ ಪದವಿ ಸಾಲದೆ ?
ಶಿವನಾಗಮಯ್ಯ ಶ್ವಪಚಯ್ಯರ ದಾಸರ ದಾಸರ
ದಾಸನೆಂಬ ಪದವಿ ಸಾಲದೆ ?
ಮತ್ತೇಕೆ ಕೊಡುವರೋ ಮತ್ತೊಂದು ಪದವಿಯನು,
ಹೊಸದೊಂದು ಉಪಾಧಿಯನು !
ಬಯಸದೆ ಬಂದ ಲಿಂಗಭೋಗವಿದ
ಬಿಡುವಂತೆಯೂ ಇಲ್ಲ, ಹಿಡಿಯುವಂತೆಯೂ ಇಲ್ಲ !

ನನ್ನ ಮೂಲಕ ನಿನ್ನವರಿಗೆ ಸಲ್ಲಿಸಿದನು
ಸ್ವತಂತ್ರಧೀರ ಸಿದ್ಧೇಶ್ವರಾ !

೫೧೫

ನೀರಿನಲ್ಲಿ ಈಸುವುದು ಮೇಲೋ,
ಹರಿಗೋಲಿನಲ್ಲಿ ತೇಲುವುದು ಮೇಲೋ ?
ಗಿಡದಲ್ಲಿ ಗೂಡು ಕಟ್ಟುವುದು ಮೇಲೋ,
ಗಗನದಲ್ಲಿ ಹಾರಾಡುವುದು ಮೇಲೋ ?
ಚೆಲುವಿನೊಡನೆ ಚೆಲ್ಲಾಟ ಮೇಲೋ
ಕರ್ತವ್ಯದೊಡನೆ ಕುಸ್ತಿ ಮೇಲೋ ?
ಅರಿತು ಮರೆಯುವುದು ಮೇಲೋ
ಮರೆತು ಅರಿಯುವುದು ಮೇಲೋ ?
ಸ್ವತಂತ್ರಧೀರ ಸಿದ್ಧೇಶ್ವರಾ,
ನಾನು ಮಾಡುವ ಭಕ್ತಿ ಮೇಲೋ
ನೀನು ನೀಡುವ ಮುಕ್ತಿ ಮೇಲೋ ?

೫೧೬

ಬಂದು ಬಾಗಿಲ ತೆರೆಯುವುದರೊಳಗಾಗಿ
ಹೋಗಿ ಬಿಡುವ ನೀನು
ಬಂದು ಬಾಗಿಲ ತಟ್ಟುವಿಯಾದರೂ ಏಕೆ ?
ನಿದ್ರೆ ತಿಳಿವ ಮುನ್ನವೇ ಎದ್ದು
ಕದ್ದು ಹೋಗುವ ನೀನು
ಸದ್ದು ಕೇಳುವ ಹಾಗೆ ನಡೆವೆಯಾದರೂ ಏಕೆ ?
ಏನ ಮಾತನಾಡುವುದೆಂದು ಜಾನಿಸುವಷ್ಟರಲ್ಲಿ
ಮಾಯವಾಗಿ ಬಿಡುವ ನೀನು
ಮುಸುಕಿನಾಚೆ ನಿಂತು ಪಿಸುಗುಟ್ಟುವಿಯೇಕೆ ?
ಕಾಣುವ ತವಕದಿಂದ ಕಣ್ತೊರೆಸಿಕೊಳ್ಳುವಷ್ಟರಲ್ಲಿ
ಕಾಣೆಯಾಗಿಬಿಡುವ ನೀನು
ಕನಸಿನಲ್ಲಿ ಅಲೆದ ಹಾಗೆ ಸುಳಿದುಹೋಗುವಿಯೇಕೆ ?
ಏನಾದರೂ ಬೇಡಬಹುದೆಂಬ
ಭಯವೆ ನಿನಗೆ ?
ಏನಾದರೂ ತೋಡಿಕೊಳ್ಳಬಹುದೆಂಬ



ಭೀತಿಯೆ ನಿನಗೆ ?
ಭಯ ಬೇಡ, ಭೀತಿ ಬೇಡ,
ಏನನೂ ಬೇಡೆ, ಯಾತಕ್ಕೂ ಕಾಡೆ,
ಯಾವುದನ್ನೂ ತೋಡಿಕೊಳ್ಳೆನಯ್ಯಾ !
ನೋಡಿ, ನಲಿವೆ ! ಅಷ್ಟೆ !
ಒಂದೇ ಸಲ, ಒಂದೇ ಕ್ಷಣ
ಕಾಣಿಸಿಕೊಳ್ಳಾ,
ಸ್ವತಂತ್ರಧೀರ ಸಿದ್ಧೇಶ್ವರಾ !

೫೧೭

ಸ್ವತಂತ್ರಧೀರ ಸಿದ್ಧೇಶ್ವರ, ಪ್ರಿಯಕರ,
ನೀನೂ ಹಲವು ದಾರಿಯಿಂದ ಬಂದೆ,
ನಾನೂ ಹಲವು ದಾರಿಯಿಂದ ಬಂದೆ,
ಆದರೆ, ಸಂಕೇತ ಸ್ಥಾನದಲ್ಲಿ
ಒಮ್ಮೆ ನೀನಿರಲಿಲ್ಲ
ಒಮ್ಮೆ ನಾನಿರಲಿಲ್ಲ !
ನಿನಗೂ ಮಿಲನದ ಬಯಕೆ,
ನನಗೂ ಮಿಲನದ ಬಯಕೆ,
ಆದರೆ, ನನ್ನ ಬಯಕೆ ನಿನ್ನ ಬಯಕೆ
ಒಮ್ಮೆಯೂ ಒಂದಾಗಲಿಲ್ಲ,
ಮದುವೆಯ ಬದುಕು ಚೆಂದಾಗಲಿಲ್ಲ !
ಹೀಗೆಯೇ ಸಮಾನಾಂತರ ರೇಖೆಗಳಂತೆ
ಸಾಗಲೇನಯ್ಯ ಸತಿಪತಿ ಸಂಬಂಧ ?
ಸಾಕಾಯ್ತು ಬರಿ ಬ್ರಹ್ಮಗಂಟಿನ ಬಂಧ,
ಬೇಕಿನ್ನು ಬಾಹು ಬಂಧ !

೫೧೮

ನನ್ನ ನಯನಗಳು ನೀರಡಿಸಿವೆ ನಲ್ಲ
ನಿನ್ನ ಅಮೃತ ಹಾಸವ ಬೀರಿ, ತೋರಿ ತಣಿಸು ;
ನನ್ನ ಅಂಗಾಂಗಗಳು ಹಸಿದಿವೆ ನೀರ
ಸರ್ವಾಂಗಾಲಿಂಗನ ನೀಡಿ ಸಂತೃಪ್ತಗೊಳಿಸು ;

ನನ್ನ ಅಧರಗಳು ಅರತು ಬರತಿವೆ ಚೆನ್ನ
ನಿನ್ನ ಸವಿಮುತ್ತಿನ ಜೇನನೆರೆದು ಸಾಂತ್ವನಗೊಳಿಸು :
ನನ್ನ ಕರ್ಣಗಳು ಕಾತರಿಸಿವೆ ಮನದನ್ನ
ನಿನ್ನ ಸುಸಿಲ ಪಿಸುನುಡಿಗಳಿಂದ ಸಂತವಿಡು ;
ಎನ್ನ ಸರ್ವಾಂಗಗಳು ನಿನ್ನ ಸವಿ ಸೋಂಕಿಗಾಗಿ ಕಾದು ಕಾದಿವೆ
ನನ್ನ ರನ್ನ ಸ್ವತಂತ್ರಧೀರ ಸಿದ್ಧೇಶ್ವರಾ,
ಸುಧಾವರ್ಷವಾಗಿ ಸುರಿ, ಸಂಜೀವೀನೀಸ್ಪರ್ಶವಾಗಿ ಇಳಿ
ಅವುಗಳ ಮೇಲೆ !

೫೧೯

ಸಿಂಗರಿಸಿಕೊಂಡುದೇನೋ ಸರಿ, ಮದವಳಿಗೆ
ದೂರವಿಲ್ಲ ಮಾಂಗಲ್ಯಧಾರಣೆಯ ಗಳಿಗೆ !
ಆದರೆ, ಬರುವನೇ ಮದವಳಿಗ ಅಷ್ಟರೊಳಗೆ,
ಧಾವಿಸುವನೇ ನಿನ್ನ ಬಳಿಗೆ ?
ದಾರಿಯುದ್ದಕ್ಕೂ ಮರಮಳೆಯಂತೆ,
ಕೆರೆಕಟ್ಟೆಗಳೆಲ್ಲ ಒಡೆದು ದಾರಿಯೆಲ್ಲ ನೀರೇ ನೀರಂತೆ,
ಸೇತುವೆಗಳು ಕುಸಿದು ವಾಹನ ಸಂಚಾರ ಸ್ಥಗಿತವಂತೆ,
ವಿಮಾನ ಸಹ ಹಾರುವುದೂ ಇಳಿವುದೂ ಅಸಾಧ್ಯವಂತೆ !
ಸಿಂಗರಿಸಿಕೊಂಡೇನೋ ನಿಂತೆ,
ನಿಂತಂತೆ 'ಬರುವನೋ ಬಾರನೋ' ಎಂಬ ಚಿಂತೆ !
ಚಿಂತಿಸದಿರು ಮದವಳಿಗೆ
ಮೊದಲು ನಿನ್ನ ಸೊಬಗು ಸಿಂಗರದ ಮದವಳಿಗೆ !
ಮರೆ ಉಡುಪು ಒಡವೆಗಳ,
ಬಿಡು ಪಸದನದ ಗೊಡವೆಗಳ !
ಮದವಳಿಗನಲ್ಲಿಯೇ ಮನ ನೆಟ್ಟು ಹೋಗಲಿ,
ನಾನೆಂಬ ಭಾವನೆ ಬಿಟ್ಟು ಹೋಗಲಿ,
ರೂಪ ಶೃಂಗಾರಗಳ ಹಮ್ಮು ಸುಟ್ಟು ಹೋಗಲಿ !
ಆಗ ಬಂದೇ ಬರುವನು ಮದವಳಿಗ
ಅಡ್ಡ ನಿಂತರೂ ಅಡ್ಡಿಗಳ ಬಳಗ !
ಸ್ವತಂತ್ರಧೀರ ಸಿದ್ಧೇಶ್ವರನ ದಯದಿಂದ
ನೂರು ವಿಘ್ನಗಳ ಮೀರಿ,
ಹಾರಿ, ತೂರಿ, ಸಾರಿ ಬರುವನವ ಮದವಳಿಗೆ
ಮೊದಲು ನಿನ್ನ ಸೊಬಗು ಸಿಂಗರಗಳ ಮದವಳಿಗೆ !



೫೨೦

ನಲ್ಲನ ನಲ್ಮೆಯನ್ನೆಂತು ಗಳಿಸುವುದೆಂದು
ಕಿಂಕುರ್ವಾಣತೆಗೀಡಾಗಿರುವೆಯಾ, ಕೆಳದಿ ?
ಕೇಳು, ಕಿವಿಗೊಟ್ಟು ಕೇಳು
ಅನಂಗ ಸಂಗದಿಂದಲ್ಲ, ಆಲಿಂಗನ ಚುಂಬನಗಳಿಂದಲ್ಲ,
ಸೊಬಗು ಸಿಂಗಾರಗಳಿಂದಲ್ಲ, ಸರಸಸಲ್ಲಾಪಗಳಿಂದಲ್ಲ,
ಒನಪು ಒಯ್ಯಾರಗಳಿಂದಲ್ಲ, ಬಿಂಕ ಬಿನ್ನಾಣಗಳಿಂದಲ್ಲ
ಇವೆಲ್ಲ ಸೋತು ಶರಣಾಗತವಾದಾಗ
ಕಂಗಳ ಸಿಂಪಿನಿಂದೊಗೆವ ಕಂಬನಿಯ ಮುತ್ತುಗಳನ್ನರ್ಪಿಸು,
ಸೆರೆ ಬಿಗಿದ ಕೊರಳಿನಿಂದುದಿಸುವ ಗದಗದಿಕೆಗಳನ್ನು ಸಮರ್ಪಿಸು,
ನಿದ್ರಾವಿಹೀನ ಮಧ್ಯರಾತ್ರಿಯ
ನಿಟ್ಟುಸಿರುಗಳ ನೈವೇದ್ಯವನ್ನರ್ಪಿಸು !
ಆಗ ಸ್ವತಂತ್ರಧೀರ ಸಿದ್ಧೇಶ್ವರನೊಲಿಯದಿರಲಾರ !

೫೨೧

ನಿನಗೆ ವಿಧುರನಾಗುವ ಭಯವಿದ್ದರೂ ಇರಬಹುದು,
ನನಗೆ ಮಾತ್ರ ವಿಧವೆಯಾಗುವ ಭಯವಿಲ್ಲ ನಲ್ಲ !
ನನಗೆ ಮುತ್ತೈದೆಯ ಮರಣ ನಿಶ್ಚಿತ !
ನಿನಗೋ, ನಿಮಿಷ ನಿಮಿಷಕೂ ನೂರು ಸಲ ವಿಧುರತ್ವ,
ನಿಮಿಷ ನಿಮಿಷಕೂ ನೂರು ಸಲ ಮರುಮದುವೆ!
ಹುಟ್ಟಿದ, ಹುಟ್ಟುವ ಹೆಣ್ಣು ಗಂಡುಗಳ ಗಂಡನಾಗಿಯೂ
ಅವಿಚ್ಛಿನ್ನ ದಾಂಪತ್ಯಸುಖದಿಂದ
ವಂಚಿತನಾದ ನಿನಗೆ

ನನ್ನ ಕನಿಕರದ ಕಾಣಿಕೆ
ಸ್ವತಂತ್ರಧೀರ ಸಿದ್ಧೇಶ್ವರಾ !

೫೨೨

ಇದುವರೆಗೆ ಯಾಂತ್ರಿಕವಾಗಿ
ನಿನ್ನ ಪೂಜೆ ಮಾಡಿದೆ :
ನಲ್ಲಿಯ ನೀರು, ಪೇಟೆಯ ಹೂವು,
ಅಂಗಡಿಯ ಅಗರುಬತ್ತಿ,
ಕಾಳಸಂತೆಯ ಕಾಳಿನ ನೈವೇದ್ಯಗಳಿಂದ !
ಇಂದೆನ್ನ ಕಲಮಲದ ಕಂಬನಿಗಳಿಂದಲೇ
ನಿನಗೆ ಅಭಿಷೇಕ,
ಅನಿಮಿಷ ನಯನಗಳೇ ಕುಸುಮಗಳು,
ಬಿಸಿಯುಸಿರೇ ಧೂಪ ಧೂಮ್ರ,
ಗದಗದಿಕೆಗಳೇ ಮಂತ್ರಗಳು,
ಸಂಪೂರ್ಣ ಶರಣಾಗತಿಯೇ ನೈವೇದ್ಯವಯ್ಯ !
ಇದುವರೆಗೆ ಪೂಜೆ ಮಾಡಿದೆ,
ಇಂದು ಪೂಜೆ ನಾನಾದೆ,
ಸ್ವತಂತ್ರಧೀರ ಸಿದ್ಧೇಶ್ವರಾ !

೫೨೩

'ಯಾರು ಬಂದವರು ?'
ಎಂದು ಕೇಳಿದರೇನಣ್ಣ?
ಭೇಟಿಯ ಚೀಟಿಯ ಅಚ್ಚು ಹಾಕಿಸಿಲ್ಲ,
ದೊಡ್ಡವರ ಶಿಫಾರಸುಪತ್ರ ತಂದಿಲ್ಲ,
ಹುಂಡಿಯಲ್ಲಿ ಹಾಕಲು ಹಣದ ಚೀಲ ತಂದಿಲ್ಲ,
ನನ್ನ ಹೆಸರಿಗಂತೂ ಬೆಲೆಯಿಲ್ಲ!
ಹೋಗಿ ಹೇಳು,
ಮಾದಾರ ಚೆನ್ನಯ್ಯನ ಮನೆಯ ಮಗ
ಬಂದಿಹನೆಂದು ಹೇಳು ;
ಡೋಹರ ಕಕ್ಕಯ್ಯನ ಡಿಂಗರಿಗ
ಬಂದಿಹನೆಂದು ಹೇಳು ;



ಹರಳಯ್ಯನ ಕರುಣದ ಕಂದ
ಬಂದಿಹನೆಂದು ಹೇಳು ;
ಅಲ್ಲಮ ಅಕ್ಕಮಹಾದೇವಿಯರ
ಅಡಿಯಾಳು ಬಂದಿಹನೆಂದು ಹೇಳು !
'ಸರ್ವರೂ ಸಂಗಸ್ವರೂಪರು,
ನಾನೊಬ್ಬನೇ ಭಕ್ತ'ನೆಂದ
ಬಸವನ ಭಕ್ತ ಬಂದಿಹನೆಂದು ಹೇಳು !
ಬರಹೇಳಬಹುದು ಒಳಗೆ,
ಬರಗೊಡಬಹುದು ಬಳಿಗೆ !

೫೨೪

ಎಲ್ಲ ತನುಗಳ ಮನೆಗಳ ಒಳಗಡೆಗೆ
ನಿನ್ನ ಕರುಣೆಯ ಕಿರಣ ಪ್ರವೇಶಿಸಲಿ ;
ಎಲ್ಲ ಮನಗಳ ಕಟ್ಟೆ ಕೆರೆಗಳಿಗೆ
ನಿನ್ನ ಒಲವಿನ ಹೊನಲು ಪ್ರವಹಿಸಲಿ ;
ಎಲ್ಲ ಮಸ್ತಕಗಳ ಮಡಿಹೊಲಗಳಲ್ಲಿ
ನಿನ್ನ ಭಕ್ತಿಯ ಬೀಜಾರೋಪಣವಾಗಲಿ ;
ಎಲ್ಲ ಹಸ್ತಗಳ ಕೆಲಸ ಕಾರ್ಯಗಳಲ್ಲಿ
ನಿನ್ನ ಪೂಜೆಯ ಪುಣ್ಯ ಪ್ರಕರ್ಷಿಸಲಿ ;
ಎಲ್ಲ ನಾಸಿಕಗಳಲ್ಲಿ
ನಿನ್ನ ನೆನಹು ಉಸಿರಾಗಲಿ ;
ಎಲ್ಲ ಕರ್ಣಗಳಲ್ಲಿ
ನಿನ್ನ ಕರೆ ಕೇಳುವ ಶಕ್ತಿ ಬರಲಿ ;
ಎಲ್ಲ ಅಕ್ಷಿಗಳಲ್ಲಿ
ನಿನ್ನ ವೀಕ್ಷಣಾಕಾಂಕ್ಷೆ ಬೆಳಕಾಗಲಿ ;
ಎಲ್ಲೆಡೆಯೊಳಿರುವ ನೀನು

ಎಲ್ಲರೊಳು ದಿವ್ಯ ಪ್ರೇರಣೆಯಾಗಿ
ನನ್ನಿ, ನಲ್ಮೆ, ಚೆಲುವು, ನಲವುಗಳ
ಸುಗ್ಗಿಯನೆ ಬರಿಸಯ್ಯ
ಸ್ವತಂತ್ರಧೀರ ಸಿದ್ಧೇಶ್ವರಾ !

೫೨೫

ಈ ವನವನ್ನು ಹೊಕ್ಕ ಈ ಪವನ
ಯಾವ ಯಾವ ತರುಗಳ ಕೈಕುಲಕಿ, ಯಾವ ಯಾವ ಲತೆಗಳ ಮೈದಡವಿ,
ಯಾವ ಯಾವ ಹೂಗಳಿಗೆ ಮುತ್ತಿಟ್ಟು, ಯಾವ ಯಾವ ಸರಸಿಗಳಲ್ಲಿ
ತೆರೆಯೆಬ್ಬಿಸಿ,
ಕೊನೆಗೆ ಎಲ್ಲಿಗೆ ಹೋಯಿತೋ ಕಾಣೆ !
ಈ ಪರ್ವತವನ್ನು ಪ್ರವೇಶಿಸಿದ ಈ ಧ್ವನಿ
ಯಾವ ಯಾವ ಗುಹೆಗಳಲ್ಲಿ ಪ್ರತಿಧ್ವನಿಸಿ,
ಯಾವ ಯಾವ ದರಿಕಂದರಗಳಲ್ಲಿ ಸಂಚರಿಸಿ,
ಯಾವ ಯಾವ ಕುಂಜಗಳಲ್ಲಿ ಗುಂಜಿಸಿ
ಕೊನೆಗೆ ಎಲ್ಲಿ ಲೀನವಾಯಿತೋ ಕಾಣೆ !
ಅಂತರಂಗದ ಅಂಚೆಮನೆಯಿಂದ ಹಂಚಿಕೆಯಾಗುತ್ತಿರುವ
ಈ ವಿಳಾಸವಿಲ್ಲದ ಓಲೆಗಳು
ಕೊನೆಗೆ ಯಾರಿಗೆ ತಲುಪುವುವೋ ನಾನರಿಯೆ !
ಹೃದಯ ಮಂದಿರದ ಅಂತರಾಳದಲ್ಲಿ
ನಡೆದ ಈ ತೀರ್ಥವಿತರಣೆ
ಕೊನೆಗೆ ಯಾರಾರ ಕರಗಳ ಸೇರುವುದೋ ನಾನರಿಯೆ !
ಸ್ವತಂತ್ರಧೀರ ಸಿದ್ಧೇಶ್ವರಾ,
ಈ ಮತಿಯನ್ನು ಹೊಕ್ಕ ಈ ಜಿಜ್ಞಾಸೆ
ಆರಾರ ಬಾಳನ್ನು ತಾಕಿ,
ಆರಾರ ಜೀವನದಲ್ಲಿ ಜೀಕಿ
ಆರಾರನ್ನು ಸಂಶಯಕ್ಕೆ ನೂಕಿ



ಕೊನೆಗೆಲ್ಲಿ ಪರ್ಯವಸಾನ ಹೊಂದುವುದೋ ಕಾಣೆ !

# ಅನುಬಂಧ

## ಹೊಸ ವಚನಗಳು

೧

ನಕ್ಷತ್ರ ಮಂಡಲವೇ ತೊಂಡಿಲ ಬಾಸಿಗ ನನ್ನ ನಲ್ಲನಿಗೆ:
ಆಕಾಶ ಕೇಶ, ರವಿ ಶಶಿಗಳು ಲೋಚನ,
ಮೇಘ, ಅಂಬರ, ದಿಶೆಗಳು ಬಾಹುಗಳು,
ಪರ್ವತ ಪಾದಗಳು, ಪೃಥ್ವಿ ಪೀಠ,
ಸಮುದ್ರ ಪಾದೋದಕ, ಪ್ರಪಂಚ ಪ್ರಸಾದ
ಎಂಥ ಅದ್ಭುತ ಇನಿಯ ನಿನಗೆ;
ಈ ಮಹತೋಮಹಿಮ
ಅಣೋರಣೀಯನೆನ್ನ ಮನದ ಕೊನೆಯಲ್ಲಿ!
ಸ್ವತಂತ್ರಧೀರ ಸಿದ್ಧೇಶ್ವರ ಅನ್ವೇಷಿಯಲ್ಲಿ!

೨

ಬಾನಿನಲ್ಲಿ ಮೂಡುವ ಚಿತ್ರಗಳಿಗೆ
ಬಾನೇ ಭಿತ್ತಿ;
ಭೂಮಿಯಲ್ಲಿ ಮೂಡುವ ಚಿತ್ರಗಳಿಗೆ
ಭೂಮಿಯೇ ಭಿತ್ತಿ;
ಮನದಲ್ಲಿ ಮೂಡುವ ಚಿತ್ರಗಳಿಗೆ
ಮನವೇ ಭಿತ್ತಿ;
ಕನಸಿನಲ್ಲಿ ಮೂಡುವ ಚಿತ್ರಗಳಿಗೆ
ಸುಪ್ತಿಯೇ ಭಿತ್ತಿ;
ಅನಂತಕೋಟಿ ಬ್ರಹ್ಮಾಂಡಗಳಿಗೆ
ಸ್ವತಂತ್ರಧೀರ ಸಿದ್ಧೇಶ್ವರನೇ ಭಿತ್ತಿ.

೩

ಮಳೆಗಾಲವೂ ಮಿಲನವಿಲ್ಲದೆಯೆ ಮುಗಿಯಿತು
ಚಳಿಗಾಲವನ್ನೆಂತು ಕಳೆಯಲಿ?
ನಲ್ಲನೊಲ್ಲದ ನಲ್ಲೆ ನಾನು,
ಗೆಳತಿಯರ ಮುಂದೆಂತು ಸುಳಿಯಲಿ?
ಈ ಪ್ರೇಮ ಸಂಬಂಧಕ್ಕೆ
ಯಾವ ಬಣ್ಣ ಬಳಿಯಲಿ?
ಸ್ವತಂತ್ರಧೀರ ಸಿದ್ಧೇಶ್ವರ ಬೇಡಾದ ಮೇಲೆ
ಯಾಕಾದರೂ ಉಳಿಯಲಿ?

೪

ಮಾಡದಲ್ಲಿ ಮಿಣುಕಿ ಮಿಣುಕಿ ಹಣತೆ ಕೇಳುತ್ತಿದೆ-
'ನಿನ್ನ ನಲ್ಲ ಬಂದನೆ, ಬಂದನೆ?' ಎಂದು;
ಗೂಡಿನಿಂದ ಇಣುಕಿ ಇಣುಕಿ ಗುಬ್ಬಿ ಕೇಳುತ್ತಿದೆ-
'ನಿನ್ನ ನಲ್ಲ ಬಂದನೆ ಬಂದನೆ?' ಎಂದು;
ಪೊಟರೆಯಿಂದ ಹಣಿಕಿ ಹಣಿಕಿ ಗಿಳಿ ಕೇಳುತ್ತಿದೆ,
'ನಿನ್ನ ನಲ್ಲ ಬಂದನೆ, ಬಂದನೆ?' ಎಂದು;
ದೂರದ ತಾರೆಗೆ ಮಿನುಗಿ ಮಿನುಗಿ ಕೇಳುತ್ತಿದೆ-
'ನಿನ್ನ ನಲ್ಲ ಬಂದನೆ, ಬಂದನೆ?' ಎಂದು;
ಏನುತ್ತರ ಕೊಡಲಿ ಇವರಿಗೆ ಪ್ರಿಯಕರ-
ಸ್ವತಂತ್ರಧೀರ ಸಿದ್ಧೇಶ್ವರ?

೫

ಬೇಸಿಗೆ ಕಾಲ ಬಂದಿತು,
ವಿರಹದುರಿಗೆ ಬಿಸಿಲಿನುರಿ ಬೆರೆಸಿ
ಬೆವರು ಹರಿಸಿ ಹೋಯಿತು-
ಇಲ್ಲ, ನಲ್ಲ ಬರಲಿಲ್ಲ!

ಮಳೆಗಾಲ ಬಂದಿತು,
ಮಿಲನದಾಸೆಗೆ ಪುಟವಿಟ್ಟು
ಮೈಯೆಲ್ಲ ಮುತ್ತಿಟ್ಟು ಹೋಯಿತು-
ಇಲ್ಲ, ನಲ್ಲ ಬರಲಿಲ್ಲ!

ಚಳಿಗಾಲ ಬಂದಿತು,
ಪ್ರಣಯಕ್ಕೆ ಪ್ರಚೋದನೆಯಿತ್ತು
ಮೈಮನಗಳಿಗೆ ಕಚಗುಳಿಯಿತ್ತು ಹೋಯಿತು
ಇಲ್ಲ, ನಲ್ಲ ಬರಲಿಲ್ಲ!

ಬರುವನೆಂಬ ಭರವಸೆಯಿಲ್ಲ,
ಬರನೆಂಬ ಶಂಕೆಯೂ ಇಲ್ಲ,
ಬರುವನೋ ಬಾರನೋ-
ಸ್ವತಂತ್ರ ಧೀರ ಸಿದ್ಧೇಶ್ವರ ಬಲ್ಲ!

೬

ಬರಲಿಲ್ಲ ಬರಲಿಲ್ಲವೆಂದು
ಒರಲುತ್ತಿಹೆಯೇಕೆ?
ಬರಲು ನಾನು ಹೊರಗಿನ ಗಂಡನೆ?
ಇರುವೆ ನಿನ್ನೊಳಗೇ,
ಅರಸು ಅಲ್ಲಿಯೇ,
ಬೆರೆ ಅಲ್ಲಿಯೇ ಎಂದ
ಸ್ವತಂತ್ರಧೀರ ಸಿದ್ಧೇಶ್ವರ

೭

ನೆನೆಪುಗಳು ಕಾಡುತ್ತಿವೆ ನಲ್ಲ,
ನೀನಿಲ್ಲದಾಗ ನಿನ್ನ ನೆನಪುಗಳು ಕಾಡುತ್ತಿವೆ ನಲ್ಲ!
ಮೊದಲ ಸಲ ನಿನ್ನ ಬಯಸಿದ ನೆನಪು
ನಿನ್ನ ನೋಡ ಬಯಸಿದ,
ನಿನ್ನೊಡನೆ ಮಾತಾಡ ಬಯಸಿದ,
ನಿನ್ನ ಆಲಂಗಿಸ ಬಯಸಿದ, ಚುಂಬಿಸ

ಬಯಸಿದ ನೆನಪು,
ಮೊದಲ ಕನಸಿನ ನೆನಪು,
ಚಿರ ವಿರಹದ ನೆನಪು.

ಓ, ಎಷ್ಟು ಸಾವಿರ ನೆನಪುಗಳು–
ಬಾಳ ಹಣತೆಗೆ ಎಣ್ಣೆಯಾದ ನೆನಪುಗಳು,
ಬಗೆಯ ಬನಕೆ ಬಸಂತವಾದ ನೆನಪುಗಳು,
ಬುದ್ಧಿವಾಹಿನಿಗೆ ಬುಗ್ಗೆಗಳಾದ ನೆನಪುಗಳು,
ಸ್ವತಂತ್ರಧೀರ ಸಿದ್ಧೇಶ್ವರನನ್ನು
ಚಿತ್ತದಲ್ಲಿ ಚಿತ್ರಿಸಿದ ನೆನಪುಗಳು!

೮

ಬೆಳಗಾಗುತ್ತಲೆ ಜಗವಿದು ಚಿತ್ರಶಾಲೆ;
ಹಕ್ಕಿಗಳು ಹಾಡ ತೊಡಗಲು ಸಂಗೀತಶಾಲೆ;
ಮಕ್ಕಳು ಕುಣಿಯ ತೊಡಗಲು ನೃತ್ಯಶಾಲೆ;
ಹಗಲು ಮುಗಿವವರೆಗೆ ಕರ್ತವ್ಯಶಾಲೆ;
ಇರುಳೆಲ್ಲ ಒಲವಿನಲೀಲೆ,
ಸ್ವತಂತ್ರಧೀರ ಸಿದ್ಧೇಶ್ವರನೊಡನೆ ಕಣ್ಣುಮುಚ್ಚಾಲೆ!

೯

ಬುದ್ಧಿಯ ಅಂಗಳದಲ್ಲಿ ದಿನದಿನವೂ
ಭಾವದ ತಳಿ ಹಾಕುತ್ತಲೇ ಹೊರಟದ್ದೇನೆ,
ಕಲೆಯ ರಂಗದಲ್ಲಿ ಹಾರುತ್ತಲೇ ಹೊರಟದ್ದೇನೆ;
ಬೇಸತ್ತರೆ ಹೇಗವ್ವಾ!
ಬೇಸರ ಕಳೆಯಲೆಂದೇ ಬೇಕು ನನಗಿವು!
ಇವುಗಳಿಂದ ಸಂತೋಷ ಹುಟ್ಟಿಸಬೇಕು,
ಸಂತೋಷ ಹಂಚಬೇಕು
ಇದರಿಂದ ಸ್ವತಂತ್ರಧೀರ ಸಿದ್ಧೇಶ್ವರನಿಗೂ ಸಂತೋಷ.

೧೦



ತನು ತನುಗಳ ಅಪ್ಪುಗೆಯ ನಿಜ ಸುಖಕ್ಕೆ
ಮನ ಮನಗಳ ಒಪ್ಪಿಗೆಯೇ ಮೂಲ;
ಕಾವ್ಯ, ಕಲೆಗಳ ಸವಿ ಬೆಳಕಿಗೆ
ಎದೆ ಮಿದುಳುಗಳ ತಳುಕೇ ಮೂಲ,
ಮನುಜ ಶರೀರದ ಸಫಲತೆಗೆ
ಕರಣಗಳು ದಿವ್ಯಜೀವನದ ಉಪಕರಣಗಳಾಗುವುದೇ ಮೂಲ
ಸ್ವತಂತ್ರಧೀರ ಸಿದ್ಧೇಶ್ವರನೊಲಿಯಲು
ಸರ್ವಭೂತಹಿತ ರತಿಯೇ ಮೂಲ.

೧೧

ಒಳಗಿನ ಒಳಗೆ, ಬೆಳಗೆನ್ನನು;
ಅರ್ಥದ ಅರ್ಥವೆ, ಸಾರ್ಥಕಗೊಳಿಸೆನ್ನನು
ನಿಜದ ನಿಜವೆ, ನಿಜಸುಖ ನೀಡೆನಗೆ;
ರಹಸ್ಯಗಳ ರಹಸ್ಯವೆ, ಸಾಮರಸ್ಯ ಕೊಡು ನನಗೆ;
ಆದಿಗಳ ಆದಿಯೆ, ಹಾದಿ ತೋರೆನಗೆ;
ಸ್ವತಂತ್ರಧೀರ ಸಿದ್ಧೇಶ್ವರನೆ,
ಸ್ವತಂತ್ರತ್ವ ಧೀರತ್ವ ನೀಡೆನಗೆ!

೧೨

ಹೊಲಬಿಗಾಗಿ ಹಲುಬುತ್ತಲೇ ಇದ್ದೇನೆ;
ಹದುಳಿಗಾಗಿ ಬೆದಕುತ್ತಲೇ ಇದ್ದೇನೆ;
ಸೈಪಿಗಾಗಿ ಆಲ್ಪರಿಯುತ್ತಲೇ ಇದ್ದೇನೆ;
ಎದುರಾಗುವುವು
ಹೊಲಬಲ್ಲ, ಕಿಲುಬು;
ಹದುಳವಲ್ಲ ಬಗದಳ;
ಸೈಪಲ್ಲ, ಅಂಧ ಕೂಪ!
ಸ್ವತಂತ್ರಧೀರ ಸಿದ್ಧೇಶ್ವರಾ,
ನೀನು ಕರುಣಿಸಿದರೆ ಇವೆಲ್ಲ ಏನು ಮಹಾ?

೧೩

ಪ್ರೀತಿಯ ಸೋಂಕಿಗೂ ಕರಗದೆದೆಯೇ ಕಲ್ಲೆದೆ;
ಕಂದನ ಕ್ರಂದನವನ್ನು ಕೇಳದ ಕಿವಿಯೆ ಮರಗಿವಿ;
ಹಸಿದವರ ಕೊರಗನ್ನು ಕಾಣದ ಕಣ್ಣೇ ಕೀವುಗಣ್ಣು;
ಅನ್ಯಾಯ ಅತ್ಯಾಚಾರಗಳ ಸಹಿಸುವ ಮನವೇ ಪ್ರೇತವನ;
ಸ್ವತಂತ್ರಧೀರ ಸಿದ್ಧೇಶ್ವರನ
ಮಕ್ಕಳ ಧಿಕ್ಕರಿಸುವ ಚಿತ್ತವೇ ಹಾವಿನ ಹುತ್ತ!

೧೪

ನಿನ್ನ ಅಪ್ರೀತಿಯ ತಾಳಿಕೊಳ್ಳಬಲ್ಲೆ,
ನಿನ್ನ ಅವಜ್ಞೆಯ ತಾಳಲಾರೆ, ನಲ್ಲ!
ನಿನ್ನ ವಿಯೋಗವ ಸಹಿಸಬಲ್ಲೆ,
ನಿನ್ನ ನಿರಾಸಕ್ತ ಸಾಮೀಪ್ಯವ
ಸಹಿಸಲಾರೆ, ನಲ್ಲ!
ನಿನ್ನ ಸೆಡವು ಸಿಟ್ಟು ಸೈರಿಸಬಲ್ಲೆ,
ನಿನ್ನ ನಿರ್ಮಮತೆಯ ತಾಳಲಾರೆ, ನಲ್ಲ!
ಸ್ವತಂತ್ರಧೀರ ಸಿದ್ಧೇಶ್ವರಾ,
ನಿನ್ನ ಕಣ್ಣುಮುಚ್ಚಾಲೆ ತಾಳಬಲ್ಲೆ,
ನಿನ್ನ ಕಣ್-ಕಟ್ಟು ತಾಳಲಾರೆ ನಲ್ಲ!

೧೫

ನಿನ್ನ ನೆನಪಿನ ನಾವೆ ಸಾಗರದತ್ತ ಸೆಳೆದರೆ
ನಿನ್ನ ಕನಸಿನ ವಿಮಾನ ಬಾನಿನತ್ತ ಎಳೆಯುತ್ತಿದೆ!
ನಾನಾದರೋ,
ಭೂಮಿತಾಯಿಯನ್ನು ಬಿಟ್ಟಿರಲಾರೆ!
ವಿನೋದಕ್ಕೆ ಮಾತ್ರ ಕಡಲ ಕರೆ, ಬಾನ ತಾರೆ-
ಸ್ವತಂತ್ರಧೀರ ಸಿದ್ಧೇಶ್ವರಾ!



೧೬

ಬಿಸಿಲುಗುದುರೆಗಳಲ್ಲ ಬಯಕೆಗಳು;
ನೀರ ಬುದ್ಬುದಗಳಲ್ಲ ಬಯಕೆಗಳು;
ತಿರುಕನ ಕನಸುಗಳಲ್ಲ ಬಯಕೆಗಳು-
ಬದುಕಿನ ಮರದ ಬೇರುಗಳಿವು
ಬದುಕುವ ಬಯಕೆ ತಾಯಿ ಬೇರು
ಸುಖದ ಬಯಕೆ ತೊಡಬೇಕು
ಬಯಕೆ ಈಡೇರಿದರೆ ಸುಖ,
ಬಯಕೆ ಈಡೇರದಿರೆ ದುಃಖ
ನಿನ್ನನ್ನೇ ಬಯಸಿ ಬಿಟ್ಟರೆ
ಸುಖವಾವುದು, ದುಃಖವಾವುದು-
ಸ್ವತಂತ್ರಧೀರ ಸಿದ್ಧೇಶ್ವರಾ?

೧೭

ಸಾವಿರ ರೆಕ್ಕೆಗಳ ಸೇರಿಸಿದಾಕ್ಷಣ
ಹಕ್ಕಿಯೊಂದು ಹುಟ್ಟುವುದೇನಯ್ಯ?
ಸಾವಿರ ಸ್ವರಗಳ ಸೇರಿಸಿಬಿಟ್ಟರೆ
ವೃಂದಗಾನ ಉದಿಸುವುದೇನಯ್ಯ?
ಸಾವಿರ ಶಬ್ದಗಳ ಸಾಲಾಗಿರಿಸಿದರೆ
ಕಬ್ಬ ಕೊನರುವುದೇನಯ್ಯ?
ಸಾವಿರ ಮಣಿಗಳ ಏಣಿಸಿದರಾಯಿತು
ನೀನು ಒಲಿವೆಯೇನಯ್ಯ-
ಸ್ವತಂತ್ರಧೀರ ಸಿದ್ಧೇಶ್ವರಾ.

೧೮

ಮಗಳ ಚೆಲುವಿಕೆಯನ್ನು ಅಳಿಯ ಒಪ್ಪಬೇಕು;
ಮಗನ ಗಾಡಿಯನ್ನು ಸೊಸೆ ಒಪ್ಪಬೇಕು;
ಗುರುವಿನ ಅರಿವನ್ನು ಶಿಷ್ಯ ಒಪ್ಪಬೇಕು;

ಯೋಧನ ಶೌರ್ಯವನ್ನು ವೈರಿ ಒಪ್ಪಬೇಕು;
ಭಕ್ತನ ಭಕ್ತಿಯನ್ನು
ಸ್ವತಂತ್ರಧೀರ ಸಿದ್ಧೇಶ್ವರ ಒಪ್ಪಬೇಕು.

೧೯

ಕತ್ತಲೆಯನ್ನು ಓಡಿಸಲು ಬಂದೂಕ ಏಕಣ್ಣ
ಒಂದು ದೀಪ ಸಾಕಣ್ಣ;
ಚಳಿಯನ್ನು ಓಡಿಸಲು ಸಿಡಿಬಾಂಬು ಏಕಣ್ಣ
ಅಗ್ಗಿಷ್ಟಿಗೆ ಸಾಕಣ್ಣ;
ವೈರಿಗಳನ್ನು ಗೆಲ್ಲಲು ಶಸ್ತ್ರಾಸ್ತ್ರಗಳೇಕಣ್ಣ–
ನಿರ್ವೈರ ಸಾಕಣ್ಣ;
ಸ್ವತಂತ್ರಧೀರ ಸಿದ್ಧೇಶ್ವರನನೊಲಿಸಲು ಜಾತಿಮತಗಳೇಕಣ್ಣ–
ಮಾನವ ಪ್ರೀತಿ ಸಾಕಣ್ಣ.

೨೦

ಜ್ಞಾನವನ್ನು ಪ್ರೀತಿಸುತ್ತೇನೆ, ಪಾಂಡಿತ್ಯಕ್ಕೆ ಅಂಜುತ್ತೇನೆ;
ಆಧ್ಯಾತ್ಮವನ್ನು ಪ್ರೀತಿಸುತ್ತೇನೆ, ಮತಕ್ಕೆ ಅಂಜುತ್ತೇನೆ;
ಪರಂಪರೆಯನ್ನು ಪ್ರೀತಿಸುತ್ತೇನೆ, ಸಂಪ್ರದಾಯಕ್ಕೆ ಅಂಜುತ್ತೇನೆ;
ಮಾನವರನ್ನು ಪ್ರೀತಿಸುತ್ತೇನೆ, ಅಮಾನುಷರಿಗೆ ಅಂಜುತ್ತೇನೆ;
ಮಡದಿ ಮಕ್ಕಳ ಪ್ರೀತಿಸುತ್ತೇನೆ, ಮೋಹಕ್ಕೆ ಅಂಜುತ್ತೇನೆ;
ಸ್ವತಂತ್ರಧೀರ ಸಿದ್ಧೇಶ್ವರಾ,
ನಿನ್ನನ್ನು ಪ್ರೀತಿಸುತ್ತೇನೆ,
ನಿನ್ನ ದಳ್ಳಾಳಿಗಳಿಗೆ ಅಂಜುತ್ತೇನೆ.

೨೧

ಮನುಜ ಮಾನವನಾಗದಿರೆ
ಮನುಷ್ಯಜನ್ಮ ವ್ಯರ್ಥ ಕಾಣಿರೋ,
ಒಡಲೇ ಗುಡಿಯಾಗದಿರೆ
ಗುಡಿ ಗುಂಡಾರಗಳು ವ್ಯರ್ಥ ಕಾಣಿರೋ;



ಹಿತವೇ ವ್ರತವಾಗದಿರೆ
ಮತಗಳು ವ್ಯರ್ಥ ಕಾಣಿರೋ,
ಸ್ವತಂತ್ರಧೀರ ಸಿದ್ಧೇಶ್ವರ ಸಾಕ್ಷಿಯಾಗಿ ಸಾರುವೆ
ಬದುಕಿನ ಬೆಳಗೆ ಹಾಯಿಸು ನೀಡರಿಕೆ
ಜ್ಞಾನ–ವಿಜ್ಞಾನಗಳೆಲ್ಲ ವ್ಯರ್ಥ ಕಾಣಿರೋ.

೨೨

ಮಲ್ಲಿಗೆಯ ನಲ್ಲುಸಿರಿಗೂ
ಸುಗಂಧ ಚೂರ್ಣದ ಸಹಾಯ ಬೇಕೆ,
ಮಾವಿನ ಹೂ ಗೊಂಚಲಿಗೂ
ಇಕೆ ಬಾನಾದ ನೆರವು ಬೇಕೆ,
ಕುಸುಮ ಖಚಿತ ತೃಣಾಂಬರಕ್ಕೂ
ಕಸೀದೆಯ ಕುಸುರು ಬೇಕೆ,
ಸ್ವತಂತ್ರಧೀರ ಸಿದ್ಧೇಶ್ವರಾ,
ಶುದ್ಧ ಭಕ್ತಿಯ ನೊರೆವಾಲಿಗೂ
ಬೂಟಾಟಿಕೆಯ ಬೂಸ್ಟ್ ಬೇಕೆ?

೨೩

ಮಕ್ಕಳ ಪ್ರೀತಿಯ ಪರೀಕ್ಷೆ
ತಂದೆ ತಾಯಿಗಳು ಮುದುಕರಾದಾಗ;
ಸತಿ ಪತಿಗಳ ಪ್ರೀತಿಯ ಪರೀಕ್ಷೆ
ಮುಪ್ಪು ಸುತ್ತಿಕೊಂಡಾಗ;
ಜೀವನ ಪ್ರೀತಿಯ ಪರೀಕ್ಷೆ,
ಮುಪ್ಪು ಅಪ್ಪಿದಾಗ;
ಎಲ್ಲ ಪ್ರೀತಿಗಳ ಒರೆಗಲ್ಲೆ,
ಎಲ್ಲ ಬನ್ನಗಳ ಸಾಣೆಕಲ್ಲೆ,
ಸೊಕ್ಕನ್ನಿಳಿಸಿ ಸುಕ್ಕುಗಳ ಸರ ಹಾಕುವ ಮುಪ್ಪೆ,
ಸ್ವತಂತ್ರಧೀರ ಸಿದ್ಧೇಶ್ವರ ಸಾಕ್ಷಿಯಾಗಿ

ಸ್ವಾಗತ ನಿನಗೆ!

೨೪

ಪ್ರಶ್ನೆ ಪತ್ರಿಕೆಯನ್ನು ಸಿದ್ಧಪಡಿಸುವಲ್ಲಿಯೇ
ಕಾಲವೆಲ್ಲ ಕಳೆದರೆ
ಉತ್ತರ ಬರೆವುದು ಯಾವಾಗ?
ಉತ್ತರಿಸಲು ಹೊತ್ತೆಲ್ಲಿದೆ-
ಪುರಸೊತ್ತೆಲ್ಲಿದೆ?
ನಿಜ ಪ್ರಶ್ನೆಗಳು ತಿಳಿದ ಕಣವೇ ಸಾಕು-
ಸ್ವತಂತ್ರಧೀರ ಸಿದ್ಧೇಶ್ವರಾ.

೨೫

ಸೊಬಗೆಲ್ಲಿಯೊ
ಸೊಗವಲ್ಲಿಯೆ;
ಕವಿ ಎಲ್ಲಿಯೊ
ಸವಿ ಅಲ್ಲಿಯೆ;
ಶಿಶುವೆಲ್ಲಿಯೊ
ಋಷಿ ಅಲ್ಲಿಯೆ;
ಒಲವೆಲ್ಲಿಯೊ
ಗೆಲವಲ್ಲಿಯೆ;
ಶುದ್ಧ ಹೃದಯವೆಲ್ಲಿಯೊ
ಸ್ವತಂತ್ರಧೀರ ಸಿದ್ಧೇಶ್ವರನಲ್ಲಿಯೆ!

೨೬

ನಿನ್ನ ವಾಯುಮಂಡಲದಲ್ಲಿ
ಸಾವಿರ ಪ್ರಸರಣ ಕೇಂದ್ರಗಳ
ಧ್ವನಿತರಂಗಗಳು
ರಿಸೀವ್ವರ್ ಇಲ್ಲದಿರೆ ಏನು ಫಲ?
ನಿನ್ನ ವ್ಯೋಮಾತೀತದಲ್ಲಿ ಕೋಟಿ ಕೋಟಿ ಆಕಾಶಕಾಯಗಳು-
ಪ್ರಬಲ ದೂರದರ್ಶಕವಿರದಿರೆ ಏನು ಫಲ?
ನಿನ್ನ ಸೃಷ್ಟಿಯಲ್ಲಿ ನಿನ್ನ ಅನೇಕ ಅಶ್ರುತ ಸಂದೇಹಗಳು,
ಅಪರೋಕ್ಷ ಜ್ಞಾನವಿಲ್ಲದಿರೆ ಏನು ಫಲ?



೨೭

ಅಂಬಾರಿಯಲ್ಲಿ ಕುಳಿತವ
ಆನೆಯನ್ನು ರೇಗಿಸಬಾರದು;
ಅಂದಣದಲ್ಲಿ ಕುಳಿತವ
ಬೋವಿಗಳ ರೇಗಿಸಬಾರದು;
ಸ್ವತಂತ್ರಧೀರ ಸಿದ್ಧೇಶ್ವರಾ,
ನಿನ್ನ ಕರುಣೆಯನ್ನು ಬಯಸುವವರು
ನಿನ್ನ ಶರಣರನ್ನು ರೇಗಿಸಬಾರದು.

೨೮

ರಕ್ತ ಕೆಂಪಾಗಿದ್ದೂ ಕಪ್ಪು ಮೈಗಳು ಕೋಟಿ ಕೋಟಿ;
ತನು ಬೆಳ್ಳಗಿದ್ದೂ ಕಪ್ಪು ಮನಗಳು ಕೋಟಿ ಕೋಟಿ;
ಉಚ್ಚಕುಲದಲ್ಲಿ ಹುಟ್ಟಿಯೂ ತುಚ್ಛ ಹೃದಯಿಗಳು ಕೋಟಿ ಕೋಟಿ;
ದಲಿತ ಕುಲದಲ್ಲಿ ಜನಿಸಿಯೂ
ಸಾಚಾ ಮಾನವರು ಕೋಟಿ ಕೋಟಿ;
ಸ್ವತಂತ್ರಧೀರ ಸಿದ್ಧೇಶ್ವರನ ನಂಬದೆಯೂ
ನಿಜ ಮಾನವರಾದವರು ಕೋಟಿ ಕೋಟಿ.

೨೯

ವ್ಯರ್ಥವಾಯಿತು ಜೀವನ-
ಅರ್ಥವಾಗದ ಜೀವನ!
ಸಾರ್ಥಕವಾದುದೊಂದೇ-
ಸ್ವತಂತ್ರಧೀರ ಸಿದ್ಧೇಶ್ವರನ ಸ್ಮರಣ.

೩೦

ಬುದ್ಧ ಪೂರ್ಣಿಮೆಯ ದಿನ ಮಾತ್ರವಲ್ಲ–
ಉದ್ವಿಗ್ನನಾದಾಗಲೆಲ್ಲ ನೆನೆವೆ ಬುದ್ಧದೇವನನ್ನು !
ಮೈತ್ರಿ, ಕರುಣೆ, ಮುದಿತ, ಉಪೇಕ್ಷೆಗಳನ್ನು
ನೆನಪಿಸಿಕೊಳ್ಳುತ್ತೇನೆ;
ಆಚರಿಸಲಾಗದಿದ್ದರೂ
ವಿಚಾರಿಸಿ ಹಿಗ್ಗುತ್ತೇನೆ,
ಬಾಳನ್ನು ಹಿಗ್ಗಿಸುತ್ತೇನೆ.
ತಳಮಳವನ್ನು ತಗ್ಗಿಸುತ್ತೇನೆ,
ಕಳವಳವನ್ನು ಜಗ್ಗಿಸುತ್ತೇನೆ.
ಬನ್ನವನ್ನು ಬಗ್ಗಿಸುತ್ತೇನೆ;
ಸ್ವತಂತ್ರಧೀರ ಸಿದ್ಧೇಶ್ವರನ ಸ್ಮರಿಸಿ
ವೀತರಾಗನಾಗಲು ಹೆಣಗುತ್ತೇನೆ !

೩೧

ಸುಲಭವಾಗಿ ಬದುಕಲು
ಢೋಂಗಿ ಸ್ವಾಮಿಯಾಗು;
ಸುಲಭವಾಗಿ ಸಂಪಾದಿಸಲು
ಕುಟಿಲ ರಾಜಕಾರಣಿಯಾಗು;
ಸುಲಭವಾಗಿ ಮೋಸಗೊಳಿಸಲು
ಬೂದಿ ಕೊಡುವ ಬಾಬಾ ಆಗು;
ಸುಲಭವಾಗಿ ದೋಚಲು
ಕಾಳಸಂತೆಯ ಕದೀಮನಾಗು;
ಸುಲಭವಾಗಿ ಹೆಸರು ಪಡೆಯಲು
ಸ್ವತಂತ್ರಧೀರ ಸಿದ್ಧೇಶ್ವರನ
ನಕಲಿ ಭಕ್ತನಾಗು !

೩೨



ಮನಕ್ಕೆ ದೂರಾದವರು ಮನೆಯೊಳಗಿದ್ದರೆ
ಆ ಮನೆ ಕೆಮ್ಮನೆ
ಅಲ್ಲಿ ಬದುಕುವುದು ಸುಮ್ಮನೆ !

ಮನಸ್ಸಿಲ್ಲದ ಪೂಜೆ ನಡೆಯುತ್ತಿದ್ದರೆ
ಆ ಗುಡಿ ಹಾಳು ಗುಡಿ
ಆ ಪೂಜೆ ಬರಿ ಗಡಿಬಿಡಿ

ಮನಸ್ಸಿಲ್ಲದ ಕಲಿಕೆ ನಡೆಯುತ್ತಿದ್ದರೆ
ಆ ಶಾಲೆ ಪಡಪೋಸಿ ಶಾಲೆ,
ಆ ಕಲಿಕೆ ತಲೆಶೂಲೆ;
ಸ್ವತಂತ್ರಧೀರ ಸಿದ್ಧೇಶ್ವರಾ.

೩೩

ನನ್ನೊಡನೆ ನಾನು ದಶಕಗಳನ್ನೇ ಕಳೆದೆ–
ಆದರೆ ನನ್ನ ಬಗ್ಗೆ ನಾನೆಷ್ಟು ತಿಳಿದೆ ?
ತಿಳಿದಷ್ಟಾದರೂ ತಿಳಿಯಾಗಿದೆಯೆ ?
ಇನ್ನು ಅನ್ಯರೆಂತು ತಿಳಿದಾರು ?
ತಿಳಿದುದಕ್ಕೆ ತಮ್ಮ ಬಣ್ಣ ಬಳಿದಾರು !
ಸ್ವತಂತ್ರಧೀರ ಸಿದ್ಧೇಶ್ವರ ಕರುಣಿಸಿದರೆ ತಿಳಿವಳಿಕೆ,
ಇಲ್ಲದಿರೆ ಕಳವಳಿಕೆ !

೩೪

ಪಾಪದ ದೀಪಕ್ಕೆ
ಎಣ್ಣೆ ಎರೆಯುವವರೇ
ಅದನ್ನು ನಿಂದಿಸಿದರೆ ನಗೆಗೇಡು
ಲಂಚದ ಸೂಳೆಗೆ
ಮಂಚ ಹಾಕುವವರೇ

ಅದನ್ನು ಹಳಿದರೆ ನಾಚಿಕೆಗೇಡು;
ಸ್ವತಂತ್ರಧೀರ ಸಿದ್ಧೇಶ್ವರಾ,
ಶೋಷಣೆಯ ಬಲೆಯ
ಬೀಸುವವರೇ
ಅದನ್ನು ಖಂಡಿಸಿದರೆ ಮಾನಗೇಡು!

೩೫

ಈ ತನು ನಿನ್ನದೆಂದಾಕ್ಷಣ
ಅದು ರೋಗ ದೂರವಾಗುವುದೇನಯ್ಯ?
ಈ ಮನ ನಿನ್ನದೆಂದಾಕ್ಷಣ
ಅದು ವಿಕಾರದೂರವಾಗುವುದೇನಯ್ಯ?
ಈ ಜೀವನ ನಿನ್ನದೆಂದಾಕ್ಷಣ
ಅದು ಮರಣದೂರವಾಗುವುದೇನಯ್ಯ?
ಸ್ವತಂತ್ರಧೀರ ಸಿದ್ಧೇಶ್ವರಾ,
ನೀನೆ ಗತಿಯೆಂದರೆ ಸಾಲದು
ನೀನೆ ಮತಿಯಾಗುವಂತೆ ಕರುಣಿಸಯ್ಯ.

೩೬

ಸುಳಿಗಾಳಿಯ ಹಾಳೆಯಲ್ಲಿ
ಕಂಪಿನ ಕರ ಬರೆಯುತ್ತಿದೆ
ನಿಃಸ್ವರ ಕವನವನ್ನು
ಬಿಳಿ ಜೋಳದ ಹಾಲ್ದೆನೆಯಲ್ಲಿ
ಹಕ್ಕಿಯ ಕೊಕ್ಕು ಬರೆಯುತ್ತಿದೆ
ನಿರ್ವರ್ಣ ಚಿತ್ರವನ್ನು,



ಕಾಳ್ಪುರದ ತರಳ ತೆರೆಗಳು
ನೊರೆ ನೂಪುರ ಕಟ್ಟಿ ಯಾಡುತ್ತಿವೆ
ನಿರ್ನೇಮ ನೃತ್ಯವನ್ನು;
ಸ್ವತಂತ್ರಧೀರ ಸಿದ್ಧೇಶ್ವರನ ಮುಂದೆ
ಸಿದ್ಧಯ್ಯ ಪುರಾಣಿಕ ನಡೆಸಿದ್ದಾನೆ
ದಂದಣ ದತ್ತಣವನ್ನು.

೩೭

ವೃತ್ತಿಯಂತೆ ವಿತ್ತ,
ವಿತ್ತದಂತೆ ಚಿತ್ತ,
ಚಿತ್ತದಂತೆ ಕೃತ್ಯ,
ಕೃತ್ಯದಂತೆ ಪ್ರಾಪ್ತಿ.
ವೃತ್ತಿ ಪವಿತ್ರವಾಗಲಿ,
ವಿತ್ತ ಪವಿತ್ರವಾಗಲಿ,
ಚಿತ್ತ ಪವಿತ್ರವಾಗಲಿ,
ಕೃತ್ಯ ಪವಿತ್ರವಾಗಲಿ,
ಪ್ರಾಪ್ತಿ ನಾನೇ ಎಂದ–
ಸ್ವತಂತ್ರಧೀರ ಸಿದ್ಧೇಶ್ವರ.

೩೮

ಆದಿ ಮಾನವನಿಗೆ
ಹೊಟ್ಟೆ ಹೊರೆವ ಹೋರೆಯೊಂದೇ ಇದ್ದಿತು;
ಆಧುನಿಕ ಮಾನವನಿಗೆ
ಎಷ್ಟು ಹೋರೆಗಳು,
ಎಷ್ಟು ಹೊರೆಗಳು,
ಎಷ್ಟು ಬಿರಿಗಳು!
ಆದಿ ಮಾನವನಿಗೆ

ಎಲೆ ತೊಗಟೆ ತೊವಲುಗಳ ಒಂದೇ ಉಡುಪಿತ್ತು;
ಆಧುನಿಕ ಮಾನವನಿಗೆ
ಉಡಿಗೆಗಳೆಷ್ಟು,
ತೊಡಿಗೆಗಳೆಷ್ಟು
ತೊಡಹುಗಳೆಷ್ಟು?
ಇವರಿಬ್ಬರಲ್ಲಿ ಯಾರು ಸುಖಿ?
ನೀನೇ ಹೇಳು, ಸ್ವತಂತ್ರಧೀರ ಸಿದ್ಧೇಶ್ವರಾ!

೩೯

ನನ್ನನ್ನು ಎಚ್ಚರಿಸುವುದು ಅದಂತಿರಲಿ,
ನನ್ನೊಳಗಿನ ನಿನ್ನನ್ನು ಎಬ್ಬಿಸು, ತಂದೆ;
ತನುವಿನ ನಿದ್ದೆಯಿಂದ ನಾನೇ ಎದ್ದೇಳುವೆ,
ಮನದ ನಿದ್ದೆಯಿಂದ ಎಚ್ಚರಿಸು ತಂದೆ
ಸ್ವತಂತ್ರಧೀರ ಸಿದ್ಧೇಶ್ವರಾ!

೪೦

ಕಮಲದಲ್ಲಿ ಮಧುವಾಗಿ ಸಿಗುವುದಾದರೆ
ಭ್ರಮರವಾಗಿಸಯ್ಯ ನನ್ನನ್ನು;
ಮಾಮರದಲ್ಲಿ ಚಿಗುರಾಗಿ ಸಿಗುವುದಾದರೆ
ಕೋಗಿಲೆಯಾಗಿಸಯ್ಯ ನನ್ನನ್ನು;
ಹಾದಿ ಬದಿಯ ಹುಲ್ಲಾಗಿ ಸಿಗುವುದಾದರೆ
ಹಸುವನ್ನಾಗಿಸಯ್ಯ ನನ್ನನ್ನು;
ಸ್ವತಂತ್ರಧೀರ ಸಿದ್ಧೇಶ್ವರಾ,
ಲಿಂಗ ಪತಿಯಾಗಿ ಸಿಗುವುದಾದರೆ
ಶರಣಸತಿಯನ್ನಾಗಿಸಯ್ಯ ನನ್ನನ್ನು!

೪೧



ನನ್ನ ನಾಡಿನ ಶರಣರೆ, ದಾಸರೆ, ಕಲೆಗಳೆ, ಕವಿ ಕಲಾವಿದರೆ
ನಿಜವಾಗಿ ಬದುಕಿದವರು ನೀವು–
ನಿಮ್ಮ ಹೆಸರು ಹೇಳಿಕೊಂಡು ಬದುಕುತ್ತಿರುವವರು ನಾವು;
ಬಾನೆ ಗುರಿಯಾಗಿ ಬೆಳೆದವರು ನೀವು–
ಕುಬ್ಜರಾಗಿ ಬೆಳೆಯುತ್ತಿರುವವರು ನಾವು;
ಸಾವಿರ ಸಾವಿರ ಜನರಿಗೆ ಸಹಾಯಕರಾದವರು ನೀವು–
ನಮ್ಮನ್ನೇ ಹೊರೆದುಕೊಳ್ಳಲಾಗದ ಹೇಡಿಗಳು ನಾವು;
ಸ್ವತಂತ್ರಧೀರ ಸಿದ್ಧೇಶ್ವರನಿಗೇ ಸವಾಲು ಹಾಕಿದವರು ನೀವು
ನಮಗೆ ನಾವೇ ಸವಾಗಲಾಗಿರುವವರು ನಾವು.

೪೨

ರೆಪ್ಪೆ ಭಾರವಾಗಲು ನಿದ್ದೆ ಕಾರಣ,
ಮನ ಭಾರವಾಗಲು?
ಮೈ ಭಾರವಾಗಲು ಕೊಬ್ಬು ಕಾರಣ,
ಬದುಕು ಭಾರವಾಗಲು?
ಹೊತ್ತು ಭಾರವಾಗಲು ಚಿಂತೆ ಕಾರಣ,
ಹತ್ತುಗಡೆ ಭಾರವಾಗಲು
ಸ್ವತಂತ್ರಧೀರ ಸಿದ್ಧೇಶ್ವರಾ,
ನಿನ್ನ ದೂರವಿರಿಸಿದರೆ ಎಲ್ಲ ಭಾರ ನೋಡಾ!

೪೩

ನನ್ನ ದುಃಖವನ್ನು ಸಹಿಸುವುದಿರಲಿ,
ಇನ್ನೊಬ್ಬರ ದುಃಖವನ್ನೂ ಸಹಿಸುವ ಶಕ್ತಿ
ಉಳಿದಿಲ್ಲವಯ್ಯ!
ಇನ್ನೊಬ್ಬರನ್ನೂ ನಿಯಂತ್ರಿಸುವುದಿರಲಿ,
ನನ್ನನ್ನೇ ನಾನು ನಿಯಂತ್ರಿಸಲಾರೆನಯ್ಯ!
ಸ್ವತಂತ್ರಧೀರ ಸಿದ್ಧೇಶ್ವರಾ,
ನಾನೇ ಮುಳುಗುತ್ತಲಿರುವಾಗ

ಬೇರೆಯವರನ್ನೆಂತು ತೇಲಿಸಲಯ್ಯ!

೪೪

ಹಣಕ್ಕೆ ಮಣಿಯೆನಯ್ಯ;
ನೆಣಕ್ಕೆ ಮಣಿಯೆನಯ್ಯ;
ಅಧಿಕಾರದ ಅಕ್ಟೋಪಸ್ಸಿಗೆ ಮಣಿಯೆನಯ್ಯ;
ದರ್ಪ ಸರ್ಪಕ್ಕೆ ಮಣಿಯೆನಯ್ಯ-
ನಿನಗೆ ಮಣಿವೆ- ಸ್ವತಂತ್ರಧೀರ ಸಿದ್ಧೇಶ್ವರಾ!

೪೫

'ಇನ್ನೂ ಬರೆಯುತ್ತಲೇ ಇರುವಿಯಾ?'
ಎಂದು ಕೇಳುವರಯ್ಯ ಕರುಳಿನವರು ಕೆಲರು
ಅವರಿಗೇನ ಹೇಳಲಿ? ನಿನಗೆ ಹೇಳುವೆ:
ಬರೆಯುತ್ತಲೇ ಎಣ್ಣೆತೀರಿ ದೀಪವಿದು ಆರಿಹೋಗಲಯ್ಯ!
ಯಾರಿಗೇ ಸರಿಬರಲಿ, ಬರದಿರಲಿ,
ಬರವಣಿಗೆ ನನ್ನ ನಿನ್ನ
ಮುಖಾಮುಖಿ ಮಾಡಿದೆಯಯ್ಯ,
ಕೆಥಾರ್ಸಿಸ್ ನೀಡಿದೆಯಯ್ಯ-
ಸ್ವತಂತ್ರಧೀರ ಸಿದ್ಧೇಶ್ವರಾ!

೪೬

ಹಕ್ಕಿ ತೊರೆದ ಗೂಡಿನಂತಾಗಿಹೆನಯ್ಯ;
ಸಂತಾನಶೂನ್ಯ ಬೀಡಿನಂತಾಗಿಹೆನಯ್ಯ;
ಬಳ್ಳಿ ಒಣಗಿದ ಬಳ್ಳಿಮಾಡದಂತಾಗಿಹೆನಯ್ಯ
ಅರ್ಥ-ನಾದಗಳಿಗೆ ಸಿಲುಕದ ಹಾಡಿನಂತಾಗಿಹೆನಯ್ಯ;
ಪರಭಾಷಾ ಯೋಗಿಗಳೇ ತುಂಬಿದ ನಾಡಿನಂತಾಗಿಹೆನಯ್ಯ;
ಸ್ವತಂತ್ರಧೀರ ಸಿದ್ಧೇಶ್ವರಾ,
ಏನೇನನ್ನೋ ಆಡಿತು, ನಿನ್ನನ್ನೇ ಮರೆತು



ಒಕ್ಕಿದ ಹೊಲದ ಬೆದರಿನಂತಾಗಿಹೆನಯ್ಯ.

೪೭

ಹೂವು ಯಾವ ಬಣ್ಣದ್ದಾದರೇನು,
ಹಿನ್ನೆಲೆ ಮಾತ್ರ ಹಸುರಿನದೆ
ಮೋಡ ಯಾವ ಬಣ್ಣದ್ದಾದರೇನು,
ಹಿನ್ನೆಲೆ ಮಾತ್ರ ಹಸುರಿನದೆ;
ಸ್ವತಂತ್ರಧೀರ ಸಿದ್ಧೇಶ್ವರ ಮಕ್ಕಳು ಯಾವ ಮತದವರಾದರೇನು,
ಹಿನ್ನೆಲೆ ಮಾತ್ರ ಮನುಕುಲದ್ದೇ.

೪೮

ದುರ್ಗುಣಗಳ ಉಗ್ರಾಣವಾಗಿದ್ದರೂ
ಅಧಿಕಾರ ಐಶ್ವರ್ಯಗಳಿದ್ದವನಿಗೆಷ್ಟು ಸನ್ಮಾನ!
ಸದ್ಗುಣಗಳ ಸದನವಾಗಿದ್ದರೂ
ಇಲ್ಲದವರಿಗೆಷ್ಟು ಅವಮಾನ!
ಗಿಳಿ ಕೋಗಿಲೆಗಳ ವನವೀಗ
ಗಿಡಗ ರಣಹದ್ದುಗಳ ಕಾನನ!
ಎಲ್ಲಿಗೆ ಬಂದಿತಪ್ಪ ಈ ದೇಶ!
ಶ್ರೇಷ್ಠರ ದೇಶವಿಂದು ಭ್ರಷ್ಟರ ಆವಾಸ!
ಮತದಾರರೇ ತಪ್ಪಿಸಬಲ್ಲರು ಸರ್ವನಾಶ!
ಅವರಿಗೆ ಸನ್ಮತಿಯ ನೀಡು ತಂದೆ
ಸ್ವತಂತ್ರಧೀರ ಸಿದ್ಧೇಶ್ವರಾ!

೪೯

ಅಧಿಕಾರಧಾಮ ದೊರೆತ ಮೇಲೆ
ಸೇವಾಗ್ರಾಮವನ್ನು ಯಾರು ಕೇಳುವರಯ್ಯ?
ಮುತ್ತು ಕೊಡುವವಳು ಸಿಕ್ಕ ಮೇಲೆ

ತುತ್ತು ಕೊಟ್ಟವಳನ್ನಾರು ಕೇಳುವರಯ್ಯ?
ಹೊಳೆಯನ್ನು ದಾಟಿದ ಮೇಲೆ
ಅಂಬಿಗನನ್ನಾರು ಕೇಳುವರಯ್ಯ?
ಸಿರಿ ಪದವಿಗಳಲ್ಲಿ ಮೆರೆಯುವಾಗ
ಸ್ವತಂತ್ರಧೀರ ಸಿದ್ಧೇಶ್ವರನನ್ನು
ಯಾರು ಕೇಳುವರಯ್ಯ?

೫೧೦

ಕೀವು ತುಂಬಿದ ಹುಣ್ಣು ಒಡೆಯಲೇಬೇಕು
ಒಮ್ಮಿಲ್ಲೊಮ್ಮೆ;
ಗರ್ವ ತುಂಬಿದಶಿರ ಸಿಡಿಯಲೇಬೇಕು
ಒಮ್ಮಿಲ್ಲೊಮ್ಮೆ;
ಹುಳು ತಿಂದ ಮರ ಕೆಡೆಯಲೇಬೇಕು
ಒಮ್ಮಿಲ್ಲೊಮ್ಮೆ;
ಸೊಕ್ಕಿ ಮೆರೆದವನೂ ಮಡಿಯಲೇಬೇಕು
ಒಮ್ಮಿಲ್ಲೊಮ್ಮೆ;
ಸ್ವತಂತ್ರಧೀರ ಸಿದ್ಧೇಶ್ವರನ ಹಾದಿ ಹಿಡಿಯಲೇಬೇಕು
ಒಮ್ಮಿಲ್ಲೊಮ್ಮೆ!

೫೧೧

ಹಾಲು ಹೆಪ್ಪುಗಟ್ಟಿದಾಗ ಕಡೆಯಲೇಬೇಕು
ಬೆಣ್ಣೆ ಬೇಕಾದರೆ;
ಎಳ್ಳನ್ನು ಗಾಣದಲ್ಲಿ ಹಿಳಿಯಲೇಬೇಕು
ಎಣ್ಣೆ ಬೇಕಾದರೆ;
ಕಪ್ಪೆಚಿಪ್ಪನ್ನು ಸುಡಲೇಬೇಕು
ಸುಣ್ಣ ಬೇಕಾದರೆ
ಗೋರಂಟಿಯನ್ನು ಜಜ್ಜಲೇಬೇಕು
ಬಣ್ಣ ಬೇಕಾದರೆ
ವಿಷಯ ನಿರ್ವಿಷಯವಾಗಲೇಬೇಕು



ಸ್ವತಂತ್ರಧೀರ ಸಿದ್ಧೇಶ್ವರ ಬೇಕಾದರೆ.

೫೧೨

ಗೆದ್ದ ಯುದ್ಧಗಳ ಸಂಖ್ಯೆಯಿಂದ ಅಳೆಯದಿರು
ಅರಸರ ಹಿರಿಮೆಯನ್ನು;
ಅಮಾಯಕ ಶಿಷ್ಯರ ಸಂಖ್ಯೆಯಿಂದ ಅಳೆಯದಿರು
ಗುರುಗಳ ಗರಿಮೆಯನ್ನು;
ಶಾಸಕರ ಸಂಖ್ಯೆಯಿಂದ ಅಳೆಯದಿರು
ಪ್ರಜಾ ಸರಕಾರಗಳ ಸಾರ್ಥಕತೆಯನ್ನು;
ಗಿಟ್ಟಿಸಿದ ಪದವಿ ಪುರಸ್ಕಾರಗಳಿಂದ ಅಳೆಯದಿರು
ಸಾಹಿತಿ ಕಲಾವಿದರ ಶ್ರೇಷ್ಠತೆಯನ್ನು;
ಕೈಲಾಸ ವೈಕುಂಠಗಳ ವರ್ಣನೆಗಳಿಂದ ಅಳೆಯದಿರು
ಸ್ವತಂತ್ರಧೀರ ಸಿದ್ಧೇಶ್ವರನ ಘನತೆಯನ್ನು!

೫೧೩

ಉಳಿದ ಮೌಲ್ಯಗಳು ಇರಲಿ, ಇರದಿರಲಿ,
ಒಂದು ಮೌಲ್ಯವಿದ್ದರೆ, ಸಾಕಯ್ಯ;
ಅದೇ ಮಾರುಕಟ್ಟೆಯ ಮೌಲ್ಯ
ಪದವಿ, ಪ್ರಚಾರ, ಪಕ್ಷಪಾತ ಒಳಸಂಚುಗಳ ಸೃಷ್ಟಿಸುವ ಮಹಾಮೌಲ್ಯ;
ಇದೊಂದಿದ್ದರೆ
ಎಲ್ಲ ಮೌಲ್ಯಗಳೂ ಇದ್ದಂತೆ,
ಇದಿಲ್ಲದಿರೆ
ಎಲ್ಲ ಮೌಲ್ಯಗಲೂ ಸತ್ತಂತೆ;
ನೀನಾದರೂ ಇದಕ್ಕೆ ಮರುಳಾಗದಿರಯ್ಯ-
ಸ್ವತಂತ್ರಧೀರ ಸಿದ್ಧೇಶ್ವರಾ!

೫೪

ಕೂಸುಗಳು ಕಂಡ ಕನಸುಗಳನ್ನು
ಬರೆದಿಟ್ಟವರಾರಯ್ಯ?
ಮೂಕರ ಮನಗಳಲ್ಲಿ ಇಂಗಿಹೋದ ಅನಿಸಿಕೆಗಳನ್ನು
ದಾಖಲಿಸಿದವರಾರಯ್ಯ?
ಬಡವರು ನುಂಗಿಕೊಂಡ ಸಿಟ್ಟುಗಳ
ಲೆಕ್ಕವಿಟ್ಟವರಾರಯ್ಯ?
ಪ್ರಸಿದ್ಧಿಗೆ ಬರದ ಪ್ರತಿಭೆಗಳ ಗುರುತಿಸಿ
ಗೌರವಿಸಿದವರಾರಯ್ಯ?
ಸ್ವತಂತ್ರಧೀರ ಸಿದ್ಧೇಶ್ವರನ
ಗುಪ್ತ ಭಕ್ತರ ಅರಸಿ ಆದರಿಸಿದವರಾರಯ್ಯ?

೫೫

ಒಳನೋಟ, ಒಳನೋಟವೆಂದು
ಪ್ರಲಾಪಿಸುತ್ತಿಹಿರೇಕೆ?
ಒಳನೋಟವೇನು, ಹೋರನೋಟವೇನು,
ಒಳ್ನೋಟ ಮುಖ್ಯ.
ನಲ್ನೋಟ ಮುಖ್ಯ,
ಸರ್ವತ್ರ ಸ್ವತಂತ್ರಧೀರ ಸಿದ್ಧೇಶ್ವರನನ್ನೆ ಕಾಣುವ
ಸಿವ ನೋಟ ಮುಖ್ಯ.

೫೬



ತನುವಿನ ಒಳಗನ್ನು ಶಿಖರವಾಗಿ ತೋರುವ ಯಂತ್ರಗಳಿವೆ,
ಮನದ ಒಳಗನ್ನು ಕರಾರುವಾಕ್ಕಾಗಿ ತೋರಲು ಏನಿದೆ?
ಕಡಲುಗಳ ಆಳವನ್ನು ಸರಿಯಾಗಿ ತೋರುವ ಸಾಧನಗಳಿವೆ,
ಮನದ ಆಳವನ್ನು ತಪ್ಪಿಲ್ಲದೆ ತೋರಲು ಏನಿದೆ?
ಪ್ರಕಾಶದ ವೇಗ, ಧ್ವನಿ ವೇಗಗಳ ಗುರುತಿಸಲಾಗಿದೆ,
ಮನೋವೇಗವನ್ನು ಅರಿಯಲಾಗಿದೆಯೆ?
ಸ್ವತಂತ್ರಧೀರ ಸಿದ್ಧೇಶ್ವರಾ,
ನೀನೆ ಕೊಟ್ಟ ಮನ ನಿನಗೂ ಮೀರಿ ನಿಂತಿದೆ ನೋಡಾ!

೫೭

ಪ್ರಜಾತಂತ್ರ ತನ್ನ ವಿಶ್ವಸನೀಯತೆಯನ್ನು
ಕಳೆದುಕೊಂಡಿದೆ;
ಶಾಸನಾಂಗ, ನ್ಯಾಯಾಂಗ, ಕಾರ್ಯಾಂಗಗಳು
ತಮ್ಮ ವಿಶ್ವಸನೀಯತೆಯನ್ನು ಕಳೆದುಕೊಂಡಿವೆ;
ಸರಕಾರ, ಸಹಕಾರ, ಶಿಕ್ಷಣ, ಚುನಾವಣೆ, ಆಡಳಿತ–
ಎಲ್ಲವೂ ವಿಶ್ವಸನೀಯತೆಯನ್ನು ಕಳೆದುಕೊಂಡಿವೆ!
ನೀನೂ ಕಳೆದುಕೊಂಡರೆ ಹೇಗಯ್ಯ
ಸ್ವತಂತ್ರಧೀರ ಸಿದ್ಧೇಶ್ವರಾ?

೫೮

ವೈರ ಸಾಧಿಸಲು ಬೇಕು ಸೇನೆ, ಶಸ್ತ್ರಾಸ್ತ್ರಗಳು
ಪ್ರೀತಿಸಲು ಯಾವ ಸಾಧನವೂ ಬೇಕಿಲ್ಲ
ಸ್ವತಂತ್ರಧೀರ ಸಿದ್ಧೇಶ್ವರಾ.

೫೯

ಶೈಶವ ಮಾಯವಾಯಿತೆಂದು

ಅಳುತ್ತ ಕೂಡ್ರುವೆವೆ?
ಬಾಲ್ಯ ಹೋಯಿತೆಂದು ಅಳುತ್ತ ಕೂಡ್ರುವೆವೆ?
ತಾರುಣ್ಯ ತೆರಳಿತೆಂದು ಅಳುತ್ತ ಕೂಡ್ರುವೆವೆ?
ವಾರ್ಧಕ್ಯ ಉರುಳಿತೆಂದು ಅಳುತ್ತ ಕೂಡ್ರುವೆವೆ?
ವೃದ್ಧಾಪ್ಯ ಕರಗಿ ಸಾವು ಸಮನಿಸಿತೆಂದು
ಅಳುವುದೇಕೆಂದ, ಸ್ವತಂತ್ರಧೀರ ಸಿದ್ಧೇಶ್ವರ.

೬೦

ಉಳ್ಳವರ ಸ್ವಾತಂತ್ರ್ಯ
ಇಲ್ಲದವರ ಪಾರತಂತ್ರ್ಯ;
ಉಳ್ಳವರ ಸಮಾನತೆ
ಇಲ್ಲದವರ ಅಸಮಾನತೆ;
ಉಳ್ಳವರ ಸಂಸ್ಕೃತಿ
ಇಲ್ಲದವರ ಅಸಂಸ್ಕೃತಿ;
ಉಳ್ಳವರ ದೇವಾಲಯ
ಇಲ್ಲದವರ ಅವಮಾನಾಲಯ
ಎಲ್ಲರಿಗೂ ಸಲ್ಲದುದೇನೇ ಇರಲಿ
ಇಲ್ಲದವರಿಗೆ ಅದೇ ಅಭಿಶಾಪವೆಂದಾತ
ಸ್ವತಂತ್ರಧೀರ ಸಿದ್ಧೇಶ್ವರ.

೬೧

ತಾಯಿ ಮಗುವಿನ ಬಾಯಿಗೆ ಮೊಲೆಯಿಕ್ಕುವಾಗ,
ಹಸು ತನ್ನ ಕರುವಿನ ಮೈ ನೆಕ್ಕುವಾಗ
ನಾಯಿ ಒಡೆಯನ ಮುಂಗಾಲಿಗೆ ಮೈ ತಿಕ್ಕುವಾಗ,
ಹಕ್ಕಿ ಬಿಳಿ ಜೋಳದ ತೆನೆ ಮುಕ್ಕುವಾಗ
ಅನುಭವಿಸುವ ಆನಂದವೇ
ನಿನ್ನ ನೆನಹಿನಲ್ಲಿ ನನಗೆ ಸಿಕ್ಕುತ್ತಿರಲಿ–



ಸ್ವತಂತ್ರಧೀರ ಸಿದ್ಧೇಶ್ವರಾ!

೬೨

ಇತಿಹಾಸದ ಪುನರಾವೃತ್ತಿ ಆಗುತ್ತಲೇ ಬಂದಿದೆ;
ಆಗುತ್ತಲೇ ಹೋಗಬೇಕೆ?
ನಾವು ಮೂಕ ಪ್ರೇಕ್ಷಕರಾಗಬೇಕೆ?
ಇತಿಹಾಸದ ಅಧ್ಯಯನ ಮಾತ್ರ ಬೇಕೆ?
ಇದ್ದಂತೆಯೇ ಇದು ಮುಂದುವರೆದರೆ ಸಾಕೆ?
ಇತಿಹಾಸದ ಸ್ಥಾವರೀಕರಣ ಬೇಡವೆಂದಾತ,
ಜಂಗಮಲಿಂಗ ಸ್ವತಂತ್ರಧೀರ ಸಿದ್ಧೇಶ್ವರ.

೬೩

ದುಷ್ಟ ಶಿಕ್ಷಕ ಶಿಷ್ಟ ರಕ್ಷಕರ ಕಾಲವೆ ಇದು?
ದುಷ್ಟ ರಕ್ಷಕ ಶಿಷ್ಟ ಶಿಕ್ಷಕರ ಕಾಲ!
ಶಿಷ್ಟರೆಲ್ಲ ಸಂಘಟಿತರಾಗದೆ
ದುಷ್ಟರಿಂದ ರಕ್ಷಣೆಯಿಲ್ಲವೆಂದ–
ಸ್ವತಂತ್ರಧೀರ ಸಿದ್ಧೇಶ್ವರ!

೬೪

ಅತ್ತ ಹೂವಿನ ಗೊಂಚಲು
ಇತ್ತ ಕಾಯಿಯ ಗೊಂಚಲು,
ಅಲ್ಲಿ ಹಣ್ಣಿನ ಗೊಂಚಲು
ಮೇಲೆ ಮಿಂಚಿನ ಗೊಂಚಲು!
ಸ್ವತಂತ್ರಧೀರ ಸಿದ್ಧೇಶ್ವರಾ,
ನನ್ನ ಮೈ ರೋಮಾಂಚನಗಳ ಗೊಂಚಲು!

೬೫

ಹಸಿವೆ ಜೋರಾಗಿದ್ದರೆ
ಅಶನ ಸುಮಾರಾಗಿದ್ದರೂ ನಡೆಯುತ್ತದೆ;
ವೇಷ ಜೋರಾಗಿದ್ದರೆ
ವಿದ್ಯೆ ಸುಮಾರಾಗಿದ್ದರೂ ನಡೆಯುತ್ತದೆ.
ವರದಕ್ಷಿಣೆ ಜೋರಾಗಿದ್ದರೆ
ವಧು ಸುಮಾರಾಗಿದ್ದರೂ ನಡೆಯುತ್ತದೆ;
ಸ್ವತಂತ್ರಧೀರ ಸಿದ್ಧೇಶ್ವರಾ,
ಗುರುದಕ್ಷಿಣೆ ಜೋರಾಗಿದ್ದರೆ
ಶಿಷ್ಯ ಸುಮಾರಾಗಿದ್ದರೂ ನಡೆಯುತ್ತದೆ!

೬೬

ಸ್ವತಂತ್ರಧೀರ ಸಿದ್ಧೇಶ್ವರಾ,
ಮುಕ್ತಿಯ ನೀಡು ಬಿಡು–
ಮುಕ್ತ ಮನವ ನೀಡಯ್ಯ!
ರಾಗದ್ವೇಷ, ಕೀಳರಿಮೆ ಮೇಲರಿಮೆ,
ಸೋಲರಿಮೆ ಗೆಲ್ಲರಿಮೆಗಳಿಂದ
ಮುಕ್ತ ಮನವ ನೀಡಯ್ಯ!

೬೭

ದುಡಿವ ಅಡುವ ಕೈಗಳಿಗಿಂತ
ತಿನ್ನುವ ಬಾಯಿಗಳೇ ಹೆಚ್ಚಾದರೆ ಹೇಗಯ್ಯ?
ಮಾಡುವವರಿಗಿಂತ ಆಡುವವರು,
ಕೇಳುವವರಿಗಿಂತ ಹೇಳುವವರು
ಮನುಷ್ಯರಿಗಿಂತ ದೇವತೆಗಳು,
ಹಿಂಬಾಲಕರಿಗಿಂತ ನಾಯಕರು ಹೆಚ್ಚಿದರೆ ಹೇಗಯ್ಯ?
ಸ್ವತಂತ್ರಧೀರ ಸಿದ್ಧೇಶ್ವರಾ,



ಶಿಷ್ಯರಿಗಿಂತ ಗುರುಗಳೇ ಹೆಚ್ಚಾದರೆ ಹೇಗಯ್ಯ!

೬೮

ಮಿತವ್ಯಯವನ್ನು ಕಡೆಗಣಿಸಿ
ಅಭ್ಯುದಯ ಸಾಧನೆ ಅಸಾಧ್ಯ;
ವೇತನದಾತರನ್ನು ದುರ್ಬಲಗೊಳಿಸಿ
ವೇತನ ಪಡೆವವರ ಬಲವರ್ಧನೆ ಅಸಾಧ್ಯ;
ಕಡ ತಂದ ಹಣದಿಂದ
ರಾಷ್ಟ್ರ ರಕ್ಷಣೆ ಅಸಾಧ್ಯ;
ಮಾನವನ ಸ್ವಾತಂತ್ರ್ಯವನ್ನು ಅಪಹರಿಸಿ
ಅವನ ಶೀಲ ಧೈರ್ಯ ಸಂವರ್ಧನೆ ಅಸಾಧ್ಯ;
ಅವರೇ ಮಾಡಿಕೊಳ್ಳಬಹುದಾದ,
ಮಾಡಿಕೊಳ್ಳಬೇಕಾದ ಕೆಲಸಗಳ ಮಾಡಿಕೊಟ್ಟು
ಅವರಿಗೆ ಶಾಶ್ವತ ಸಹಾಯ ನೀಡುವುದು ಅಸಾಧ್ಯ–
ಅಧ್ಯಕ್ಷ ಅಬ್ರಹಮ್ ಲಿಂಕನ್ನರ ಈ ಮಾತುಗಳು
ಇಂದಿಗೂ ಮನನೀಯ ಸ್ವತಂತ್ರಧೀರ ಸಿದ್ಧೇಶ್ವರಾ!

೬೯

ಇದುವರೆಗೆ ನಿನ್ನ ಕರೆಗೆ ಕಿವುಡಾದೆನೆಂದು
ಈಗ ನನ್ನ ಮೊರೆಯನ್ನು ಕೇಳದಿರಬೇಡ–
ಸ್ವತಂತ್ರಧೀರ ಸಿದ್ಧೇಶ್ವರಾ!

೭೦

ಇದು ಧರ್ಮಾಧಿಕಾರಿಗಳ ಪರಿಷತ್ತಲ್ಲ,
ಜಾತಿ ವ್ಯವಸ್ಥೆಯ ಕಾವಲು ಸಮಿತಿ,
ಅಸ್ಪೃಶ್ಯತೆಯ ಆರಕ್ಷಣ ಸಮಿತಿ,
ಮಹಿಳಾ ದಾಸ್ಯದ ದೃಢೀಕರಣ ಸಮಿತಿ!

ಇಂಥ ಧರ್ಮಾಧಿಕಾರಿಗಳಿಂದ
ಧರ್ಮವನ್ನು ರಕ್ಷಿಸಾ
ಸ್ವತಂತ್ರಧೀರ ಸಿದ್ಧೇಶ್ವರ!

೭೧

ಹೂವು ಚೆಲ್ಲಿದ ಹಾದಿಯಲ್ಲಿಯೇ
ಮುಳ್ಳು ಹಾಸುವವರ ಕಂಡೆ;
ಹಾಲು ತುಂಬಿದ ಹರವಿಯಲ್ಲಿಯೇ
ನಂಜು ಬೆರೆಸುವವರ ಕಂಡೆ;
ಊರಿಗೆ ನೀರು ಕೊಡುವ ಕೆರೆಗೇ
ಹೊಲಸು ಹರಿಸುವವರ ಕಂಡೆ;
ಸ್ವತಂತ್ರಧೀರ ಸಿದ್ಧೇಶ್ವರಾ,
ಕೆಡಿಸುವವರನ್ನು ಬಿಡಿಸುವವರೇ ಇಲ್ಲವೆ?
ನೀನೂ ಇಲ್ಲವೆ?

೭೨

ಸ್ವಾರ್ಥವನ್ನು ಸಮರ್ಥಿಸುವ ಸಿದ್ಧಾಂತಗಳಿಗೆ ಧಿಕ್ಕಾರ,
ಮೇಲು ಕೀಳುಗಳನ್ನು ಎತ್ತಿ ಹಿಡಿವ ಹಸ್ತಗಳಿಗೆ ಧಿಕ್ಕಾರ,
ಶೋಷಣೆಯನ್ನು ಸ್ಥಿರೀಕರಿಸುವ ವ್ಯವಸ್ಥೆಗಳಿಗೆ ಧಿಕ್ಕಾರ,
ಸುಲಿಗೆಯೇ ಉಸಿರಾಗುವ ಸರಕಾರಗಳಿಗೆ ಧಿಕ್ಕಾರ,
ಜಾತಿ ವ್ಯವಸ್ಥೆಯನ್ನು ಬೆಂಬಲಿಸುವ ಧರ್ಮಗುರುಗಳಿಗೆ ಧಿಕ್ಕಾರ,
ಸ್ವತಂತ್ರಧೀರ ಸಿದ್ಧೇಶ್ವರಾ,
ನಿನ್ನ ಹೆಸರಿನಲ್ಲಿ ಅನ್ಯಾಯಗಳ ಗೈವ ಆಸ್ತಿಕರಿಗೆ ಧಿಕ್ಕಾರ!

೭೩



ಅನುಭವಿಸಿದ್ದನ್ನೆಲ್ಲ ಅರ್ಥವಿಸಲಾಗುವುದೆ, ಅಯ್ಯ?
ಅರ್ಥವಿಸಿದ್ದನ್ನೆಲ್ಲ ಅಭಿವ್ಯಕ್ತಿಸಲಾಗುವುದೆ, ಅಯ್ಯ?
ಅಭಿವ್ಯಕ್ತಿಸಿದ್ದನ್ನೆಲ್ಲ ಆಚರಿಸಲಾಗುವುದೆ, ಅಯ್ಯ?
ಸ್ವತಂತ್ರಧೀರ ಸಿದ್ಧೇಶ್ವರಾ,
ಅನುಭವಗಮ್ಯನೆನ್ನುತ್ತಾರೆ ನಿನ್ನನ್ನು
ನಿನ್ನ ಅನುಭವಕ್ಕೆ ನನ್ನ ಆಚಾರಕ್ಕೆ ಎಷ್ಟುದೂರ!

೭೪

ಜೀವನವ ಗೌರವಿಸು, ಜೀವಿಗಳ ಪ್ರೀತಿಸು,
ಕಾಯಕವನಾಚರಿಸು, ದಾಸೋಹವನು ನಡೆಸು,
ಒಳ್ಳೆಯದನೇ ಆಡು, ಒಳ್ಳೆಯದನೇ ಮಾಡು,
ದುಃಖಿಗಳ ಸಂತೈಸು, ರೋಗಿಗಳ ಉಪಚರಿಸು
ನಾಡನ್ನು ಸೇವಿಸು, ನುಡಿಯನ್ನು ವರ್ಧಿಸು,
ದುಡಿವವರ ಮನ್ನಿಸು, ಬಡವರನು ಆಧರಿಸು,
ಸತ್ಯವನು ಎತ್ತಿಹಿಡಿ, ಸಕಲಹಿತ ಪಥವ ಹಿಡಿ-
ಜೀವನವ ಸಾಗಿಸೈ ನೀನೀ ತೆರ
ಮೆಚ್ಚುವಂತೆ ಸ್ವತಂತ್ರಧೀರ ಸಿದ್ಧೇಶ್ವರ!

೭೫

ನಿನಗೆ ನಾಮ ರೂಪಗಳು ಬೇಡವಾಗಿರಬಹುದು-
ನಮಗೆ ಬೇಕಲ್ಲ ತಂದೆ.
ನೋಡಲೊಂದು ರೂಪಬೇಕು,
ನೆನೆಯಲೊಂದು ನಾಮಬೇಕು!
ಆದರೆ ನಾ ಮುಂದೆ ನೀ ಮುಂದೆಯೆಂದು
ಕೊಟ್ಟುಬಿಟ್ಟೆವು ನಿನಗೆ ಸಾವಿರನಾಮಗಳು
ಸಾವಿರ ರೂಪಗಳನ್ನು!
ನಾವು ಕೊಟ್ಟ ನಾಮರೂಪಗಳೇ ಸರಿ
ಎಂದು ನಾವು ಕಚ್ಚಾಡುತ್ತಿರುವುದನ್ನು ಕಂಡು
ಗಹಗಹಿಸಿ ನಗುತ್ತಿಹೆಯೇನಯ್ಯ
ಸ್ವತಂತ್ರಧೀರ ಸಿದ್ಧೇಶ್ವರಾ?

೭೬

ವಿಚಾರ ಜಡ್ಡುಗಟ್ಟಿ ರೂಢಿಯಾಗುತ್ತದೆ;
ಧರ್ಮ ಜಡ್ಡುಗಟ್ಟಿ ಅಂಧವಿಶ್ವಾಸವಾಗುತ್ತದೆ;
ಸಾಕ್ಷರತೆ ಹದ ತಪ್ಪಿ ರಾಕ್ಷಸತೆಯಾಗುತ್ತದೆ;
ಸಮಾಜ ಹಳಿ ತಪ್ಪಿ ಸಮಜವಾಗುತ್ತದೆ;
ಸರಕಾರ ಕೆಟ್ಟರೆ ದನುಜವಾಗುತ್ತದೆ;
ಸ್ವತಂತ್ರಧೀರ ಸಿದ್ಧೇಶ್ವರಾ,
ಆಧ್ಯಾತ್ಮ ಹಾದಿ ತಪ್ಪಿ ದುರುಳ ವೇದಾಂತವಾಗುತ್ತದೆ.

೭೭

ಕಣ್ಣೀರು ಬರಿಸುವವರೇ
ಕಣ್ಣೊರೆಸುವ ನಾಟಕವಾಡುತ್ತಾರೆ;
ಬೆನ್ನಿಗೆ ಚೂರಿ ಹಾಕುವವರೇ
ಬೆನ್ನು ತಟ್ಟುವ ನಾಟಕವಾಡುತ್ತಾರೆ.
ಎಷ್ಟೊಂದು ಕಪಟ ನಾಟಕಗಳು ನಿನ್ನ ಸೃಷ್ಟಿಯಲ್ಲಿ?
ಈ ಕಪಟ ನಾಟಕಗಳ ನಡುವೆಯೂ
ನಿಜ ನಾಟಕ ಬದುಕಿರುವುದೇ ಚೋದ್ಯ
ಸ್ವತಂತ್ರಧೀರ ಸಿದ್ಧೇಶ್ವರಾ!

೭೮

ತೆಂಬೆಲರಾಗಿ ಬಂದು ಚುಂಬಿಸಿದರೆ ಸಾಕೆ?
ತೊರೆಯಲೆಯಾಗಿ ಬಂದು ಆಲಂಗಿಸಿದರೆ ಸಾಕೆ?
ಆಲಿಂಗನ ಚುಂಬನಗಳ ಗುರಿ ಅನಂಗಸಂಗ
ನನ್ನ ಭಕ್ತಿಯ ಗುರಿ ಲಿಂಗಸಂಗ, ನಿನ್ನ ಸಂಗ
ಸ್ವತಂತ್ರಧೀರ ಸಿದ್ಧೇಶ್ವರಾ.



೭೯

ಕುಂದಣವ ಕೊಂಡವ ಉಂಗುರ ಮಾಡಿಸಲೇಬೇಕು
ಅದನ್ನು ಬಳಸಲು;
ಕಂದನನ್ನು ಪಡೆದವ ತೊಟ್ಟಿಲ ಕಟ್ಟಲೇಬೇಕು
ಅದನ್ನು ಬೆಳೆಸಲು;
ಮನುಷ್ಯ ಜನ್ಮವನ್ನು ಪಡೆದವ ಸುಖ ದುಃಖಗಳ ಅನುಭವಿಸಲೇಬೇಕು
ಅದನ್ನು ಕಳೆಸಲು;
ಸ್ವತಂತ್ರಧೀರ ಸಿದ್ಧೇಶ್ವರನ ಸ್ವೀಕರಿಸಿದವ ಸರ್ವಜೀವ–
ದಯಾಪಾರಿಯಾಗಿರಬೇಕು
ಅವನನ್ನು ಒಲಿಸಲು

೮೦

ಬಾಲರವಿಯ ಬಂಗಾರ ಕಿರಣಗಳು
ಹಿಮಶೃಂಗಗಳ ಆಲಿಂಗಿಸುವಲ್ಲಿ ನಿನ್ನ ಕಂಡೆ;
ತಪ್ಪಲಿನ ದೇವದಾರು ದ್ರುಮಗಳ
ಮೋಡಗಳು ಮುತ್ತಿಡುವಲ್ಲಿ ನಿನ್ನ ಕಂಡೆ;
ಎಳೆ ಹುಲ್ಲಿನ ಉಯ್ಯಾಲೆಯಲ್ಲಿ ಇಬ್ಬನಿಗಳನ್ನು
ಸುಳಿಗಾಳಿ ತೂಗುವಲ್ಲಿ ನಿನ್ನ ಕಂಡೆ;
ಕಿಟಕಿಯಿಂದ ನುಸುಳಿ ಬೆಳ್ದಿಂಗಳು
ಹಸುಗೂಸಿನ ಹಾಲಗೆನ್ನೆ ಸವರುವಲ್ಲಿ ನಿನ್ನ ಕಂಡೆ;
ಸ್ವತಂತ್ರಧೀರ ಸಿದ್ಧೇಶ್ವರಾ,
ನಿನ್ನ ನೋಡಲಿಲ್ಲವೆಂಬ ವ್ಯಥೆ ಕಾಡುತ್ತಿಲ್ಲ ಈಗ!

೮೧

ಹೊಲಸು ಸ್ವೀಕರಿಸುವ ಕಕ್ಕಸ
ಸ್ವಚ್ಛವಿದ್ದಷ್ಟೂ ಲೇಸು;
ಅನ್ನ ಅಡಗು ಸ್ವೀಕರಿಸುವ ಉದರ

ಸ್ವಚ್ಛವಿದ್ದಷ್ಟೂ ಲೇಸು;
ಭ್ರೂಣ ಸ್ವೀಕರಿಸುವ ಗರ್ಭಕೋಶ
ಸ್ವಚ್ಛವಿದ್ದಷ್ಟೂ ಲೇಸು;
ವಿದ್ಯೆ ಸ್ವೀಕರಿಸುವ ವಿದ್ಯಾರ್ಥಿ
ಸ್ವಚ್ಛವಿದ್ದಷ್ಟೂ ಲೇಸು;
ಸ್ವತಂತ್ರಧೀರ ಸಿದ್ಧೇಶ್ವರನ ಮಕ್ಕಳನ್ನಾಳುವ ಸರಕಾರ
ಸ್ವಚ್ಛವಿದ್ದಷ್ಟೂ ಲೇಸು !

೮೨

ನಾನು ನಿನ್ನ ಮಮತೆಯ ಬಾಳ
ಜೀತದಾಳು ಅಲ್ಲವಯ್ಯ
ನಿನ್ನ ವಿಶ್ವಯೋಜನೆಯ ಅಂಗ
ಬತ್ತಿದ ಕೆರೆಯ ತರಂಗವಲ್ಲವಯ್ಯ.
ನನ್ನ ನೀ ಕಡೆಗಣಿಸಿದರೆ
ನಿನ್ನ ನೀ ಕಡೆಗಣಿಸಿಕೊಂಡಂತೆ
ಸ್ವತಂತ್ರಧೀರ ಸಿದ್ಧೇಶ್ವರ !

೮೩

ಪಶು ಪಕ್ಷಿಗಳೆ,
ನೀವೆಷ್ಟು ಭಾಗ್ಯವಂತರು;
ನಿಮಗೆ ಬಾಲಸಂಗೋಪನ ಸಮಸ್ಯೆಯಿಲ್ಲ;
ಮಕ್ಕಳಿಗೆ ಶಾಲೆ ಕಾಲೇಜುಗಳಲ್ಲಿ ಪ್ರವೇಶ ಪಡೆವ ಸಂಕಷ್ಟವಿಲ್ಲ;
ಅವರಿಗಾಗಿ ವಧೂವರರನ್ನು ಶೋಧಿಸುವ ಸಂಭ್ರಾಂತಿಯಿಲ್ಲ;
ಬರ ಕೊರತೆಗಳ, ಮೇಲು ಕೀಳುಗಳ,
ಯುದ್ಧ ಶಾಂತಿಗಳ ಸಂತಾಪವಿಲ್ಲ.
ಇವೆಲ್ಲ, ಮಾನವಜನ್ಮವೇ ಶ್ರೇಷ್ಠವೆಂದು ಕೊಚ್ಚಿಕೊಳ್ಳುವ
ಮನುಷ್ಯರಿಗೆ ಮಾತ್ರ ಮೀಸಲೇನಯ್ಯ–
ಸ್ವತಂತ್ರಧೀರ ಸಿದ್ಧೇಶ್ವರಾ !



೮೪

ಕಡಲು ತನ್ನ ಉಪ್ಪನ್ನು ಕಳೆದುಕೊಂಡರೆ
ಅದನ್ನು ಉಪ್ಪಿಸುವವರಾರಯ್ಯ?
ಭೂಮಿ ತನ್ನ ಮಣ್ಣನ್ನು ಕಳೆದುಕೊಂಡರೆ
ಅದನ್ನು ಮಣ್ಣಿಸುವವರಾರಯ್ಯ?
ಬಯಲು ತನ್ನ ಗಾಳಿಯನ್ನು ಕಳೆದುಕೊಂಡರೆ
ಅದನ್ನು ಗಾಳಿಸುವವರಾರಯ್ಯ!
ಸ್ವತಂತ್ರಧೀರ ಸಿದ್ಧೇಶ್ವರಾ,
ಮನುಕುಲವೇ ಮಾನವತ್ವವ ಕಳೆದುಕೊಂಡರೆ
ಅವರ ಮಾನವೀಕರಣ ಮಾಡುವವರಾರಯ್ಯ?

೮೫

ಯಾರಾದರೂ ಕೊರಕಲು ಕೊರೆದುಕೊಡಲೆಂದು
ದಾರಿ ಕಾಯುವುದೆ ಹೊನಲು?
ಯಾರಾದರೂ ಮೆಟ್ಟಿಲ ಕಟ್ಟಿಕೊಡಲೆಂದು
ದಾರಿ ಕಾಯುವುದೇ ಆವಿಯ ಸುಯಿಲು?
ಸ್ವತಂತ್ರಧೀರ ಸಿದ್ಧೇಶ್ವರಾ,
ಯಾರಾದರೂ ಸಾಧನೆಯ ಸನದು ನೀಡಲೆಂದು
ದಾರಿ ಕಾಯುವನೆ ಸಾಧಕ?

೮೬

ಅನ್ಯರನ್ನು ಬಾಧಿಸದ ಬಾಳಿಗೆ ಬೆಲೆಯೆಲ್ಲಿ?
ಪರಸ್ಪರ ಪ್ರೀತಿಸದ ದಾಂಪತ್ಯಕ್ಕೆ ಬೆಲೆಯೆಲ್ಲಿ?
ಸೇವೆಯಾಗಿ ಪ್ರಕಟವಾಗದ ಪ್ರೀತಿಗೆ ಬೆಲೆಯೆಲ್ಲಿ?
ಅರ್ತಿನಾಶನ ಮಾಡದ ಅರ್ಥಕ್ಕೆ ಬೆಲೆಯೆಲ್ಲಿ?
ದಯವಿಲ್ಲದ ಧರ್ಮಕ್ಕೆ ಬೆಲೆಯೆಲ್ಲಿ?
ಸ್ವತಂತ್ರಧೀರ ಸಿದ್ಧೇಶ್ವರಾ,

ಇಲ್ಲಿ ಗೆಲ್ಲಿಸದ ದರ್ಶನಗಳಿಗೆ ಬೆಲೆಯೆಲ್ಲಿ?

೮೭

ಹೆಣ್ಣಿನ ಹೆಣ ಕೊಯ್ದ ವೈದ್ಯನ ಕಣ್ಣನ್ನೂ
ಹೆಣ್ಣಿನ ರೂಪ ಸೆಳೆಯುತ್ತದೆ
ಕಂದಮೂಲ ಜೀವಿ ಜಿತೇಂದ್ರಿಯನ ಜಿಹ್ವೆಯನ್ನೂ
ರಾಜಾನ್ನದ ರುಚಿ ಸೆಳೆಯುತ್ತದೆ;
ಹಾಲುಂಡು ವಿಷವೀವ ಹಾವಿನ ಕಿವಿಯನ್ನೂ
ಸಂಗೀತ ಮಾಧುರ್ಯ ಸೆಳೆಯುತ್ತದೆ;
ವನವಾಸಿ ದ್ರೌಪದಿಯ ನಾಸಿಕವನ್ನೂ
ಸೌಗಂಧಿಕಾ ಸುಗಂಧ ಸೆಳೆಯುತ್ತದೆ;
ಸ್ವತಂತ್ರಧೀರ ಸಿದ್ಧೇಶ್ವರಾ,
ನನ್ನ ಪಂಚೇಂದ್ರಿಯಗಳನ್ನು ನಿನ್ನ ಧ್ಯಾನ ಸೆಳೆದು ನಿಲ್ಲಿಸಲಯ್ಯ!

೮೮

ಹಸುಗೂಸುಗಳ ತೊದಲ್ನುಡಿಯ ಮುಂದೆ ಸುಧೆಯೆ?
ಮಕ್ಕಳ ಮಂದಹಾಸನದ ಮುಂದೆ ಮಧುವೆ?
ಮಕ್ಕಳ ಆಟಿಕೆಗಳ ಮುಂದೆ ನಿಧಿಯೆ?
ಸ್ವತಂತ್ರಧೀರ ಸಿದ್ಧೇಶ್ವರಾ,
ಮಕ್ಕಳಿಗೆ ಮಿಗಿಲಾದ ಮಾಣಿಕ್ಯವೆಲ್ಲಿ?

೮೯

ಮೂರ್ತೀಕರಣವೊಂದು ದೊಡ್ಡಕಲೆ,
ಆದರೆ ಅದಕ್ಕೂ ದೊಡ್ಡಕಲೆ ಅಮೂರ್ತದ ಮೂರ್ತೀಕರಣ.
ಕಂಡುದ ಚಿತ್ರಿಸುವುದೊಂದು ಗಣ್ಯಕಲೆ,



ಆದರೆ ಅದಕ್ಕೂ ಗಣ್ಯಕಲೆ ಕಾಣದುದ ಚಿತ್ರೀಕರಿಸುವುದು.
ಕಿವಿಗೆ ಇಂಪಾಗುವಂತೆ ಹಾಡುವುದು ಹೃದ್ಯಕಲೆ,
ಆದರೆ ಅದಕ್ಕೂ ಹೃದ್ಯಕಲೆ ಆತ್ಮಕ್ಕೆ ಇಂಪಾಗುವಂತೆ ಹಾಡುವುದು.
ರಂಗದ ಮೇಲೆ ನರ್ತಿಸುವುದು ರಮ್ಯಕಲೆ,
ಆದರೆ ಅಂತರಂಗದ ಮೇಲೆ ನರ್ತಿಸುವುದು ಅದಕ್ಕೂ ರಮ್ಯಕಲೆ.
ಸ್ವತಂತ್ರಧೀರ ಸಿದ್ಧೇಶ್ವರಾ,
ಮೂರ್ತವನ್ನು ಅಮೂರ್ತೀಕರಿಸುವುದು,
ಅಮೂರ್ತವನ್ನು ಮೂರ್ತೀಕರಿಸುವುದು ಕಲೆಗಳಲ್ಲಿ ಕಲೆ.

೯೦

ಒಮ್ಮೊಮ್ಮೆ
ಪ್ರಶ್ನೆಯೊಂದಕ್ಕೆ
ಇನ್ನೊಂದು ಪ್ರಶ್ನೆ ಉತ್ತರವಾಗಬಹುದು;
ಮಗುದೊಮ್ಮೆ
ಉತ್ತರವೇ
ಮತ್ತೊಂದು ಪ್ರಶ್ನೆಯಾಗಿ ಪರಿಣಮಿಸಬಹುದು;
ಒಮ್ಮೊಮ್ಮೆ
ಸಂಶಯವೇ
ಸುನಿಶ್ಚಿತತೆಯೇ ದಾರಿ ತೋರಬಹುದು;
ಮಗುದೊಮ್ಮೆ
ಸುನಿಶ್ಚಿತತೆಯೇ
ಸಂಶಯವಾಗಿ ಸುಳಿದೆಗೆಯಬಹುದು.
ಸ್ವತಂತ್ರಧೀರ ಸಿದ್ಧೇಶ್ವರಾ
ಹಲವರ ಸ್ವೀಕರಣ ನಿನ್ನ ನಿರಾಕರಣವಾಗಿ ಹೊಮ್ಮಬಹುದು
ಕೆಲವರ ನಿರಾಕರಣ ನಿನ್ನ ಸ್ವೀಕರಣವಾಗಿ
ಚಿಮ್ಮಬಹುದು.

೯೧

ವ್ಯಭಿಚಾರಗಳಲ್ಲಿ ಬೌದ್ಧಿಕ ವ್ಯಭಿಚಾರ ಹೇಯವಾದುದು;

ಗೊಂದಲಗಳಲ್ಲಿ ವೈಚಾರಿಕ ಗೊಂದಲ ಅಪಾಯಕಾರಿ,
ಮುಖವಾಡಗಳಲ್ಲಿ ಪವಾಡದ ಮುಖವಾಡ ಭಯಕಾರಿ ನೋಡಾ
ಸ್ವತಂತ್ರಧೀರ ಸಿದ್ಧೇಶ್ವರಾ!

೯೨

ಸುವರ್ಣವೃಷ್ಟಿಯ ಕತೆ ಕೇಳಿದ್ದೆವು
ಈಗ ಆಮ್ಲವೃಷ್ಟಿಯ ಸುದ್ದಿ ಓದುತ್ತಿಹೆವಯ್ಯ;
ಗಂಗಾವತರಣದ ಕತೆ ಕೇಳಿದ್ದೆವು,
ಈಗ ಆಧ್ಯಾತ್ಮೀಕರಣದ ಸುದ್ದಿ ಓದುತ್ತಲಿಹೆನಯ್ಯ;
ಸ್ವತಂತ್ರಧೀರ ಸಿದ್ಧೇಶ್ವರಾ,
ಒಬ್ಬ ಕುಂಭಕರ್ಣನ ನಿದ್ರೆಯ ಕತೆ ಕೇಳಿದ್ದೆವು
ಈಗ ಸಮಗ್ರ ಸಮೂಹಗಳ ನಿದ್ದೆಯನ್ನು ನೋಡುತ್ತಿಹೆನಯ್ಯ!

೯೩

ನಾನಾರೆಂದು ನನಗೆ ನಾನೇ ಕೇಳಿಕೊಂಡೆ
ಆ ಕೇಳಿಕೆಯ ಮಧ್ಯದಿಂದಲೇ ಎದ್ದು ನಿಂತೆ
ಕಂಡೂ ಕಾಣದಂತೆ,
ಕಾಣದೆಯೂ ಕಂಡಂತೆ!
ಅಂದಿನಿಂದ ಇಂದಿನವರೆಗೆ
ಅದೇ ಕಣ್ಣುಮುಚ್ಚಾಲೆ,
ನೆಳಲು ಬೆಳಕುಗಳ ಉಯ್ಯಾಲೆ!
ಸ್ವತಂತ್ರಧೀರ ಸಿದ್ಧೇಶ್ವರಾ,
ಸಿಕ್ಕ ಸಿಕ್ಕೆನೆಂದು ದಿಕ್ಕುಗೆಡಿಸದಿರಯ್ಯ
ಒಳ ಹೊರಗನ್ನು ವ್ಯಾಪಿಸಯ್ಯ!

೯೪



ಈ ಬೆಳ್ಳಿತೆರೆಯ ಮೇಲೆ
ತೋರುವುವೆಲ್ಲ ಬರಿ ನೆರಳುಗಳು
ಆದರೆ ಅವುಗಳನ್ನು ಕೊಟ್ಟವರು ನಿಜವಾದವರು!
ತಿರೆಯೆಲ್ಲ ಬರಿ ನೆರಳೆನ್ನುವವನೆ,
ಈ ನೆರಳ ಹಿಂದಿನ ನಿಜವನ್ನರಿ!
ನಿಜವಿಲ್ಲದೆ ನೆರಳಿಲ್ಲವೆಂದಾತ
ಸ್ವತಂತ್ರಧೀರ ಸಿದ್ಧೇಶ್ವರ.

೯೫

ಯಾರನ್ನೂ ಪ್ರೀತಿಸಿದವನೂ
ತನ್ನನ್ನಂತೂ ಖಂಡಿತ ಪ್ರೀತಿಸುತ್ತಾನೆ;
ಅನ್ಯರ ಸ್ವಾತಂತ್ರ್ಯಹರಣ ಬಯಸದವನೂ
ತನ್ನ ಸ್ವಾತಂತ್ರ್ಯವನ್ನಂತೂ ಖಂಡಿತ ಬಯಸುತ್ತಾನೆ;
ಪರಸ್ತ್ರೀ ಪರಧನಗಳ ಆಶಿಸುವವನೂ
ಸ್ವಸ್ತ್ರೀ ಸ್ವಶ್ರೀಗಳ ರಕ್ಷಿಸಿಕೊಳ್ಳುತ್ತಾನೆ;
ತನ್ನಂತೆ ಪರರ ಬಗೆಯುವವರೆಷ್ಟು ಜನ
ಸ್ವತಂತ್ರಧೀರ ಸಿದ್ಧೇಶ್ವರ?

೯೬

ಆಕಾಶದ ಅದ್ಭುತಗಳೂ ಅದ್ಭುತಗಳೇ,
ವಿಜ್ಞಾನ ತಂತ್ರಜ್ಞಾನಗಳ ಅದ್ಭುತಗಳೂ ಅದ್ಭುತಗಳೆ.
ಆದರೆ ನಮ್ಮ ಹಳ್ಳಿಗಳಲ್ಲಿ ಏನೇನೂ ಇಲ್ಲದವರು
ಬದುಕಿರುವುದು ಮಾತ್ರ
ಅದ್ಭುತಗಳಲ್ಲಿ ಅದ್ಭುತವಯ್ಯ
ಸ್ವತಂತ್ರಧೀರ ಸಿದ್ಧೇಶ್ವರಾ!

೯೭

ಯಾವುದರಲ್ಲೂ ವಿಶ್ವಾಸವಿಲ್ಲದವನ
    ಆತ್ಮವಿಶ್ವಾಸಕ್ಕೆ ಆವ ಅರ್ಥವಯ್ಯ?
ಏನನ್ನೂ ಮಾಡದ ಪಂಡಿತನ ಪಾಂಡಿತ್ಯಕ್ಕೆ
    ಅದಾವ ಸಾರ್ಥಕತೆಯಯ್ಯ?
ಮನೆಯವರನ್ನೇ ಪ್ರೀತಿಸದವನ
    ವಿಶ್ವಕುಟುಂಬಿತ್ವಕ್ಕೆ ಯಾವ ಬೆಲೆಯಯ್ಯ?
ಸ್ವತಂತ್ರಧೀರ ಸಿದ್ಧೇಶ್ವರಾ,
    ಆರಿಸಿ ಬರುತ್ತಲೇ ರಾಜಧಾನಿಯಲ್ಲಿ ಮನೆ ಕಟ್ಟುವ
ಶಾಸಕನ ಗ್ರಾಮಪ್ರೇಮಕ್ಕೆ ಅದಾವ ಮೌಲ್ಯವಯ್ಯ?

೯೮

ಎಲ್ಲ ದ್ರೋಹಗಳಲ್ಲಿ ದೇಶದ್ರೋಹ ಘೋರವಾದುದು;
ಎಲ್ಲ ವಂಚನೆಗಳಲ್ಲಿ ಆತ್ಮವಂಚನೆ ಅಪಾಯಕಾರಿಯಾದುದು
ಸಹಕಾರಗಳಲ್ಲಿ ಶೋಷಣೆಗೆ ಸಹಕಾರ ನಿಂದ್ಯ
ಸ್ಪೈರಣೆಗಳಲ್ಲಿ ಅಸ್ಪೃಶ್ಯತೆಯ ಸ್ಪೈರಣೆ ಹೇಯ;
    ಸ್ವತಂತ್ರಧೀರ ಸಿದ್ಧೇಶ್ವರಾ,
ಸಹನೆಗಳಲ್ಲಿ ಅನ್ಯಾಯದ ಸಹನೆ ಅಸಹ್ಯ!

೯೯

ಉಳ್ಳವರ ಇಲ್ಲದವರ ನಡುವಣ ಅಂತರ
    ಇಲ್ಲವಾಗದಿದ್ದರೂ ತೆಳ್ಳಗಾಗಲಯ್ಯ;
ಸಂಸ್ಕೃತಿಯು ಉಳ್ಳವರ ಸರಕಾಗದೆ
    ಶ್ರೀಸಾಮಾನ್ಯರ ಸುರುಕಾಗಲಯ್ಯ;
ಉಳ್ಳವರಿಗೆ ಎಲ್ಲ ಕಾಲವೂ ವಿರಾಮಕಾಲ,
    ಇಲ್ಲದವರಿಗೆ ಸಾಯಂಕಾಲವಾದರೂ ವಿಶ್ರಾಮಕಾಲವಾಗಲಯ್ಯಾ;
ಸ್ವತಂತ್ರಧೀರ ಸಿದ್ಧೇಶ್ವರಾ,
    ಉಳ್ಳವರಿಗೆ ಗರಿಷ್ಠ ಸೌಕರ್ಯಗಳು,



ಇಲ್ಲದವರಿಗೆ ಕನಿಷ್ಠ ಸೌಕರ್ಯಗಳಾದರೂ
    ದೊರೆಯಲಯ್ಯ!

೧೦೦

ನಿನ್ನ ವಚನಗಳನ್ನು ಓದುವಾಗ
ಅಣ್ಣನಂತೆ ಎದುರಿಗೆ ಕುಳಿತು
ನೀನೇ ಮಾತಾಡಿದಂತೆನಿಸುತ್ತದೆ, ಬಸವಣ್ಣ!
ಏನನ್ನೂ ಮುಚ್ಚಿಟ್ಟುಕೊಳ್ಳದೆ, ಬಚ್ಚಿಟ್ಟುಕೊಳ್ಳದೆ,
ಬಿಚ್ಚಿಡುತ್ತ ಹೋಗುವ ನಿನ್ನ ಬಗ್ಗೆ
ವಿಸ್ಮಯ, ಅಭಿಮಾನ, ಆದರ, ಭಕ್ತಿಗಳು ಉಕ್ಕುತ್ತವೆ
ಬಗೆಯ ಭೂಮಿಯ ಬುಗ್ಗೆಗಳಾಗಿ,
ಕತ್ತಲೆಗೆ ಬೆಳಕಿನ ಲಗ್ಗೆಗಳಾಗಿ!
ಎಂಥ ಸ್ಫಟಿಕ ಸನ್ನಿಭ ಪಾರದರ್ಶಕತೆ ನಿನ್ನದು
ನನಗೆ ನೀನು ಬೇರಲ್ಲ ಸ್ವತಂತ್ರಧೀರ ಸಿದ್ಧೇಶ್ವರ ಬೇರಲ್ಲ!

೧೦೧

ಅಮೇರಿಕಾ ಹುಡುಕಿದವನಿಗೇ ಸಿಕ್ಕಿತೆ?
ಕೋಹಿನೂರು ಹುಡುಕಿದವನಿಗೇ ದಕ್ಕಿತೆ?
    ಹುಡುಕುವವನೊಬ್ಬ
    ಪಡೆದುಕೊಳ್ಳುವವನು ಬೇರೊಬ್ಬ!
ಏನಿದರ ಗುಟ್ಟು, ಸ್ವತಂತ್ರಧೀರ ಸಿದ್ಧೇಶ್ವರ?

೧೦೨

ನಿಜವಾದ ಮುತ್ತು ಥಳಥಳಿಸುವುದಿಲ್ಲ;
ನಿಜವಾದ ಸುಂದರ ಮುಖ ಫಳಫಳಿಸುವುದಿಲ್ಲ;
ನಿಜವಾದ ನೀಲಮಣಿ ಝುಗಝುಗಿಸುವುದಿಲ್ಲ
ಸ್ವತಂತ್ರಧೀರ ಸಿದ್ಧೇಶ್ವರನ ನಿಜಭಕ್ತ ಧಗಧಗಿಸುವುದಿಲ್ಲ.

೧೦೩

ವಿಜ್ಞಾನಕ್ಕೆ ಶಾಖೆಗಳು, ತತ್ತ್ವಜ್ಞಾನಕ್ಕೆ ಶಾಖೆಗಳು.
ಧರ್ಮಕ್ಕೆ ಶಾಖೆಗಳು, ದರ್ಶನ ಶಾಖೆಗಳು!
ಈ ಶಾಖೆಗಳನ್ನಾಶ್ರಯಿಸಿದವ
ಬೊಡ್ಡೆಯನ್ನೇ ಮರೆತ – ಸ್ವತಂತ್ರಧೀರ ಸಿದ್ಧೇಶ್ವರಾ.

೧೦೪

ನಿನ್ನ ಅಂತರಂಗದಲ್ಲಿಯೂ
ಅಜಂತೆಯ ಚಿತ್ರಗಳಿವೆ–
ಹುಡುಕಿಕೋ;
ನಿನ್ನ ಮಾನಸದಲ್ಲಿಯೂ
ಉರೇ ಗುಹೆಯ ವಿಚಿತ್ರಗಳಿವೆ–
ಶೋಧಿಸಿಕೋ;
ನಿನ್ನ ಸುಪ್ತ ಚೇತನದಲ್ಲಿ
ಅಮೃತಪುತ್ರರ ಪತ್ರಗಳಿವೆ–
ಆರಿಸಿಕೋ;
ನಿನ್ನ ಮನದ ಕೊನೆಯಲ್ಲಿಯೇ
ಸ್ವತಂತ್ರಧೀರ ಸಿದ್ಧೇಶ್ವರನಿದ್ದಾನೆ–
ಆರಿಸಿಕೋ!

೧೦೫

ಸಮೀಪದ ನೆನಪುಗಳಿಗಿಂತ
ದೂರದ ನೆನಪುಗಳು
ಕಡಿಮೆ ರೋಚಕವೇನಲ್ಲ;
ಈಚಿನ ರಚನೆಗಳಿಗಿಂತ
ಪ್ರಾಚೀನ ರಚನೆಗಳು
ಕಡಿಮೆ ಉದ್ಬೋಧಕವೇನಲ್ಲ;



ನೂತನ ಶರಣರಿಗಿಂತ
ಪ್ರಾಕ್ತನ ಶರಣರು
ಕಡಿಮೆ ಪ್ರಸ್ತುತರೇನಲ್ಲ;
ಸ್ವತಂತ್ರಧೀರ ಸಿದ್ಧೇಶ್ವರಾ,
ವರ್ತಮಾನದ ಉಪಲಬ್ಧಿಗಳಿಗಿಂತ
ಭೂತದ ಸಾಧನೆ ಸಿದ್ಧಿ
ಕಡಿಮೆ ಪ್ರಯೋಜಕವೇನಲ್ಲ.

೧೦೬

**'Cognito ergo sum'**
'ಯೂರೇಕಾ ಯುರೇಕಾ' ಎಂದು ಒಮ್ಮೆಯೂ ಉದ್ಗರಿಸದಾದೆ;
'ಕಾಗ್ನಿಟೋ ಎರ್ಗೋಸಂ' ಎಂದು ಒಮ್ಮೆಯೂ ಉದ್ಘೋಷಿಸದಾದೆ;
'ಸರ್ವಭೂತಾನಿಜಾತ್ಮನಿ' ಎಂದು ಒಮ್ಮೆಯೂ ಸಾರದಾದೆ;
ಸ್ವತಂತ್ರಧೀರ ಸಿದ್ಧೇಶ್ವರನ ನಿಜಭಕ್ತನೆಂದು
ಒಮ್ಮೆಯೂ ತೋರದಾದೆ!

೧೦೭

ನನ್ನ ತಾಯಿ ಭೂಮಾತೆಯೆ,
ನನ್ನ ತಂದೆ ಸೂರ್ಯದೇವನೆ,
ನೀವಿಬ್ಬರೂ ಅಂಗಸಂಗ ಮಾಡದೆ,
ಹುಟ್ಟಿಸಿದಿರಿ ನನ್ನನ್ನು!
ಕಿರಣಸಂಗದಿಂದಾದ ಈ ಅಂಗ
ಸ್ವತಂತ್ರಧೀರ ಸಿದ್ಧೇಶ್ವರನ ಕರುಣೆಯಿಂದ ಲಿಂಗವಾಗಲೆಂಬೆ!

೧೦೮

ಕಾಯಕ ಮಾಡದೆ ತಿನ್ನುವವರೂ ಕಳ್ಳರು;
ಸತ್ಯ ನುಡಿಯಲು ಹಿಂಜರಿಯುವವರೂ ಸುಳ್ಳರು;
ಕೊಡುವ ಶಕ್ತಿಯದ್ದೂ ಬೇಡುವವರು ಕುಳ್ಳರು;

ತಿಳಿದೂ ತಿಳಿದೂ ತಪ್ಪು ಮಾಡುವವರು ಮಳ್ಳರು;
ಒಳ್ಳೆಯದ ಮಾಡಬಲ್ಲವರಾಗಿದ್ದೂ ಕೆಟ್ಟದನ್ನು ಮಾಡುವವರು ಖುಲ್ಲರು;
ಅನ್ಯರ ತುತ್ತನ್ನು ಕಸಿದು ತಿನ್ನುವವರು ಹೊಲ್ಲರು;
ಸ್ವತಂತ್ರಧೀರ ಸಿದ್ಧೇಶ್ವರಾ!

೧೦೯

ಯಾವುದರಲ್ಲಿಯೂ ವಿಶ್ವಾಸವಿಲ್ಲದವನ
ಆತ್ಮವಿಶ್ವಾಸಕ್ಕೆ ಅದಾವ ಅರ್ಥವಯ್ಯ?
ಏನನ್ನೂ ಮಾಡದ ಪಂಡಿತನ ಪಾಂಡಿತ್ಯಕ್ಕೆ
ಅದಾವ ಸಾರ್ಥಕತೆಯಯ್ಯ?
ಮನೆಯವರನ್ನೇ ಪ್ರೀತಿಸದವನ
ವಿಶ್ವ ಕುಟುಂಬ ಘೋಷಣೆಗೆ ಅದಾವ ಬೆಲೆಯಯ್ಯ?
ಸ್ವತಂತ್ರಧೀರ ಸಿದ್ಧೇಶ್ವರಾ,
ಆರಿಸಿ ಬರುತ್ತಲೇ ರಾಜಧಾನಿಯಲ್ಲಿ ಮನೆಕಟ್ಟುವ
ಶಾಸಕನ ಗ್ರಾಮಪ್ರೇಮಕ್ಕೆ ಅದಾವ ಮೌಲ್ಯವಯ್ಯ?

೧೧೦

ಬುಲೆಟ್ ರಾಕೆಟ್ಟುಗಳು ಮಾತ್ರ ಬೇಕೆ?
ಲೇಖನಿ, ಕುಂಚ, ಗೆಜ್ಜೆ, ಉಳಿಗಳು ಬೇಡವೆ?
ದೈತ್ಯ ಯಂತ್ರಗಳು ಮಾತ್ರ ಬೇಕೆ?
ರಂಟೆ, ರಾಟೆ, ಮಗ್ಗ, ಗಾಣಗಳು ಬೇಡವೆ?
ಪಂಚತಾರಾ ಹೋಟೆಲುಗಳು ಮಾತ್ರ ಬೇಕೆ?
ಊರೂರಿಗೆ ದಾಸೋಹ ಮನೆಗಳು ಬೇಡವೆ?
ಸ್ವತಂತ್ರಧೀರ ಸಿದ್ಧೇಶ್ವರಾ,
ನಿನಗೆ ಗುಡಿ ಕಟ್ಟಿಸುವವರು ಮಾತ್ರ ಬೇಕೆ?
ಗುಡಿಸಲಿಗೂ ಗತಿಯಿಲ್ಲದವರು ಬೇಡವೆ?

೧೧೧

ಅಮವಾಸ್ಯೆಯ ಉದರದಲ್ಲಿ ಬಿದಿಗೆ ಚಂದ್ರನ ಪೋಷಣೆ;



ನಿಶೆಯ ಬಸಿರಿನಲ್ಲಿ ಉಷೆಯ ಲಾಲನೆ ಪಾಲನೆ;
ಮಾಗಿಯ ಹೊಟ್ಟೆಯಲ್ಲಿ ಸುಗ್ಗಿಯ ಸಂಗೋಪನೆ;
ಶೂನ್ಯದ ಗರ್ಭದಲ್ಲಿ ಸೃಷ್ಟಿಯ ಸಂಯೋಜನೆ;
ಸ್ವತಂತ್ರಧೀರ ಸಿದ್ಧೇಶ್ವರನ ಕುಕ್ಷಿಯಲ್ಲಿ
ಲಕ್ಷ ಲಕ್ಷ ಲಕ್ಷ ಜ್ಯೋತಿರ್ಲೋಕಗಳ ಸಂಭ್ರಮವೊ.

೧೧೨

ಬೇಡುವುದು ಬೆಳಕನ್ನು,
ಬೆಂಬತ್ತಿರುವುದು ಕತ್ತಲೆಯನ್ನು,
ಬಯಸುವುದು ಒಲವನ್ನು,
ಅವಲಂಬಿಸಿರುವುದು ಕೊಲೆಯನ್ನು
ಗುರಿ ಸರ್ವೋದಯದ್ದು,
ದಾರಿ ಗರ್ವೋದಯದ್ದು;
ಸ್ವತಂತ್ರಧೀರ ಸಿದ್ಧೇಶ್ವರ,
ಕೈ ನಿನ್ನ ಅರ್ಚನೆಯಲ್ಲಿ
ಮನ ಸ್ವಾರ್ಥ ಚಿಂತನೆಯಲ್ಲಿ!

೧೧೩

ಹೂವಿನ ಕೋಮಲತೆ
ಇಬ್ಬನಿಯ ನಿರ್ಮಲತೆ
ಜೇನಿನ ಮಧುರತೆ
ನಿಸರ್ಗದ ಸುಂದರತೆ
ಹಿಮಗಿರಿಯ ಬಂಧುರತೆ
ಇವೆಲ್ಲ ಸೇರಿ
ಸ್ವತಂತ್ರಧೀರ ಸಿದ್ಧೇಶ್ವರನ
ನಿಜಭಕ್ತರ ನಡತೆ.

೧೧೪

ಕೃಷ್ಣ ಬಲರಾಮರ ಕೈಗಳಲ್ಲಿದ್ದಾಗಲೂ
ಚಕ್ರ ಹಲಗಳು ಸಹಕರಿಸಲಿಲ್ಲ;

ಈಗ ಉದ್ಯಮಿ ಕೃಷಿಕರ ಕೈಗಳಲ್ಲಿದ್ದು
ಸಹಕರಿಸಿಯಾವೇನಯ್ಯ?
ಸಹಕರಿಸಿದ್ದರೆ
ಆಗ ಹದಿನೆಂಟು ಅಕ್ಷೋಹಿಣೀ ಸೈನ್ಯ ಸಂಹಾರ
ಈಗ ಶೋಷಣೆಯ ರಕ್ಕಸ ವ್ಯವಹಾರ
ತಪ್ಪುತ್ತಿರಲಿಲ್ಲವೆ, ಸ್ವತಂತ್ರಧೀರ ಸಿದ್ಧೇಶ್ವರಾ?

೧೧೫

ಇಲ್ಲದ ಚೆಲುವ ಹುಟ್ಟಿಸಬಲ್ಲುದೆ ಪ್ರಸಾಧನ?
ಇಲ್ಲದುದನ್ನು ಪ್ರಕಟಿಸಬಲ್ಲುದೆ ಸಂಶೋಧನ?
ಇಲ್ಲದುದನ್ನು ಬಿಂಬಿಸಬಲ್ಲುದೆ ಛಾಯಾಗ್ರಹಣ?
ಇಲ್ಲವಾಗಿ ಎಲ್ಲವಾಗಬಲ್ಲನೆ ಸ್ವತಂತ್ರಧೀರ ಸಿದ್ಧೇಶ್ವರ?

೧೧೬

ಒಳಗಿನ ಬಾನಿನಲ್ಲಿ
ಬೆಳಕಿನ ಹಂಸ ಹಾರಿದಂತೆನಿಸಿತಲ್ಲ?
ಹೊರಗಿನ ಜೊನ್ನಕ್ಕೆ
ಒಳಗಿನ ಚಕೋರ ಹಾತೊರೆದಂತೆನಿಸಿತಲ್ಲ?
ಬಗೆಯ ಬನದಲ್ಲಿ
ಮಲೆನಾಡಿನ ನವಿಲು ನರ್ತಿಸಿದಂತೆನಿಸಿತಲ್ಲ?
ಸ್ವತಂತ್ರಧೀರ ಸಿದ್ಧೇಶ್ವರಾ,
ಬಹಿರಂಗದ ರಂಗದಲ್ಲಿ
ಅಂತರಂಗ ಅಭಿನಯಿಸಿದಂತೆನಿಸಿತಲ್ಲ?

೧೧೭

ಬಡವನೆಂದು ಬೇಯುತ್ತಿಹೆಯಾ?



ನಿನಗಿಂತ ಬಡವರು ಎಷ್ಟಿಲ್ಲ?
ಸಿರಿವಂತನೆಂದು ಬೀಗುತ್ತಿಹೆಯಾ?
ನಿನಗಿಂತ ಸಿರಿವಂತರು ಎಷ್ಟಿಲ್ಲ?
ಬೇನೆಯೆಂದು ಬಿಕ್ಕುತ್ತಿಹೆಯಾ
ನಿನಗಿಂತ ಬೇನಿಗರು ಎಷ್ಟಿಲ್ಲ?
ಬಲವಂತನೆಂದು ಸೊಕ್ಕುತ್ತಿಹೆಯಾ?
ನಿನಗಿಂತ ಬಲವಂತರು ಎಷ್ಟಿಲ್ಲ
ಸ್ವತಂತ್ರಧೀರ ಸಿದ್ಧೇಶ್ವರನ ಸೃಷ್ಟಿಯಲ್ಲಿ?

೧೧೮

ವಿಶ್ವವಲ್ಲಕಿಯ ಸ್ವರ ನಾನು
ಯಾರೋ ನುಡಿಸಿದರು ಬಂದು
ಅವಧಿ ತೀರಲು ಹೊರಟೆ
ಎಲ್ಲಿಗೆ?
ವಿಶ್ವಭಿತ್ತಿಯ ಚಿತ್ತ ನಾನು
ಯಾರೋ ಬರೆದರು ಮೂಡಿದೆ,
ಸಾವು ಒರೆಸಲು ಹೊರಟೆ!
ಎಲ್ಲಿಗೆ?

ವಿಶ್ವವನಧಿಯ ಬಿಂದು ನಾನು
ಯಾರೋ ಸಿಡಿಸಲು ಬಂದೆ;
ಸಾವು ಆದಿಯಾಗಿಸಲು ಹೊರಟೆ!
ಎಲ್ಲಿಗೆ!

ಎಲ್ಲಿಂದ, ಎಲ್ಲಿಗೆ ಎಂಬುದ ನೀನೇ ಬಲ್ಲೆ
ಸ್ವತಂತ್ರಧೀರ ಸಿದ್ಧೇಶ್ವರಾ!

೧೧೯

ಹಗಲು ಧಗೆಯಾದರೂ ಸರಿಯೆ
ರಾತ್ರಿ ಶಿವರಾತ್ರಿಯಾಗಿರಲಿ.

ಪ್ರೇಮ ಪೀಯೂಷ ಪಾತ್ರೆಯಾಗಿರಲಿ,
ಸವಿಗನಸುಗಳ ಯಾತ್ರೆಯಾಗಿರಲಿ,
ಶುಭ ಮಂಗಲ ಗಾತ್ರೆಯಾಗಿರಲಿ,
ಸ್ವತಂತ್ರಧೀರ ಸಿದ್ಧೇಶ್ವರ ಶಶಾಂಕ ನೇತ್ರೆಯಾಗಿರಲಿ!

೧೨೦

ಬೀಡಿನಲ್ಲಿ ತೊಟ್ಟಿಲ ಕಟ್ಟುವರೆಂದು
ಗೂಡಿನಲ್ಲಿ ಕಟ್ಟಲಾದೀತೆ, ಅಯ್ಯ?
ಹಗ್ಗದಿಂದ ಪಶುವ ಕಟ್ಟುವರೆಂದು
ಗಾಳಿಯಿಂದ ಕಟ್ಟಲಾದೀತೆ, ಅಯ್ಯ?
ಸ್ವತಂತ್ರಧೀರ ಸಿದ್ಧೇಶ್ವರಾ,
ನಿನ್ನ ಕುರುಹ ಕೊರಳಲ್ಲಿ ಕಟ್ಟುವರೆಂದು
ನಿನ್ನ ಅರುಹ ಕಟ್ಟಲಾದೀತೆ, ಅಯ್ಯ?

೧೨೧

ಹೃದಯ ಕೊಟ್ಟವನೂ ನೀನೇ,
ಹೊಟ್ಟೆ ಕೊಟ್ಟವನೂ ನೀನೇ;
ಹೊಟ್ಟೆಯ ಹೋರಾಟದಲ್ಲಿ
ಹೃದಯ ಹಾಳಾಗದಂತೆ ಕರುಣಿಸಯ್ಯ.
ಬುದ್ಧಿ ಕೊಟ್ಟವನೂ ನೀನೇ,
ಶ್ರದ್ಧೆ ಕೊಟ್ಟವನೂ ನೀನೇ;
ಶ್ರದ್ಧೆಯ ನೆರೆ ಬಂದು
ಬುದ್ಧಿಯ ಹೊಲ ಹಾಳಾಗದಂತೆ ಕರುಣಿಸಯ್ಯ
ಸ್ವತಂತ್ರಧೀರ ಸಿದ್ಧೇಶ್ವರಾ!

೧೨೨

ನಿಲುಗಡೆಯಿಲ್ಲದ, ಸಂಗತಗೊಳ್ಳದ ಸ್ವಾನುಭವ,



ಒಂದೇ ತೆಕ್ಕೆಗೊಗ್ಗದ ಲೋಕಾನುಭವ,
ಪೂರ್ಣ ಅರ್ಥವಾಗದ ಪೂರ್ವಜರ ಅನುಭವ
ಎಲ್ಲ ಚೌ ಚೌ ಬೆಳಕು!
ಈ ಬೆಳಕಿನಲ್ಲಿಯೇ
ಹೊಸ ಅನುಭವ!
ಪುನರ್ಭವವಲ್ಲ, ಪುನರ್ನವ!
ಇದರಿಂದಲೇ ಬದುಕು ನವೋನವ!
ಸ್ವತಂತ್ರಧೀರ ಸಿದ್ಧೇಶ್ವರಗ್ರೀವೆಗೆ
ಇವೇ ಅನುಭವಗಳ ಮಾಲಾರ್ಪಣ!

೧೨೩

ಅಳಿಸುವವರು ಹೇರಳ,
ನಗಿಸುವವರೇ ವಿರಳ;
ಅಲಕ್ಷಿಸುವವರು ಹೇರಳ,
ಲಕ್ಷಿಸುವವರೇ ವಿರಳ;
ಹಂಗಿಸುವವರೇ ಹೇರಳ,
ಉಪಕಾರ ಸ್ಮರಿಸುವವರೇ ವಿರಳ;
ಸ್ವತಂತ್ರಧೀರ ಸಿದ್ಧೇಶ್ವರಾ,
ನಾನು ನನ್ನದೆನ್ನುವವರು ಹೇರಳ,
ನೀನು, ನಿನ್ನವೆನ್ನುವವರು ವಿರಳ!

೧೨೪

ಬಿದಿರ ಮೆಳೆಗಳನ್ನು ಅಳಿದು
ಕಳಲೆ ಉಪ್ಪಿನಕಾಯಿ ಬಯಸುತ್ತಿಹೆಯಾ ಬಂಧು?
ಕೆರೆ ಹೂಳಿ ಕಾಲೊನಿ ಕಟ್ಟಿ
ನೌಕಾವಿಹಾರ ಬಯಸುತ್ತಿಹೆಯಾ, ಬಂಧು?
ಮಡಿ ಹೊಲವ ಸವುಳುಗೊಳಿಸಿ
ಉಮ್ಮಿಗೆ ಬಯಸುತ್ತಿಹೆಯಾ, ಬಂಧು?
ಸ್ವತಂತ್ರಧೀರ ಸಿದ್ಧೇಶ್ವರನೇ ಸುಳ್ಳೆಂದು ಸಾಧಿಸಿ

ಅವನ ಕೃಪೆ ಬಯಸುತ್ತಿಹೆಯಾ, ಬಂಧು?

೧೨೫

ಹೊರಗಿನ ಮೃಗಜಲಗಳ ಲೆಕ್ಕವಿರಿಸಬಲ್ಲೆ,
ಒಳಗಿನ ಮೃಗಜಲಗಳ ಲೆಕ್ಕಮಾಡಬಲ್ಲೆಯಾ ಜೀವಿ?
ಹೊರಗಿನ ತಿರುಗಣಿಗಳ ಯಾದಿ ಮಾಡಬಲ್ಲೆ,
ಒಳಗಿನ ಸುಳಿಗಳ ಪಟ್ಟಿ ಮಾಡಬಲ್ಲೆಯಾ, ಜೀವಿ?
ಕೆರೆಯ ತೆರೆಗಳನ್ನು ಎಣಿಸಬಲ್ಲೆ,
ಮನದ ಅಲೆಗಳನ್ನು ಎಣಿಸಬಲ್ಲೆಯಾ, ಜೀವಿ?
ಸ್ವತಂತ್ರಧೀರ ಸಿದ್ಧೇಶ್ವರನ ಅಕೃಪೆಗಳ ಗುಣಿಸಬಲ್ಲೆ,
ಅವನ ಕೃಪೆಗಳ ಎಣಿಸಬಲ್ಲೆಯಾ, ಜೀವಿ?

೧೨೬

ಒಂದೆ ಬಳ್ಳಿಯಿಂದ ಉಪವನವಾಗುವುದೆ, ಅಯ್ಯ?
ಒಂದೆ ಇಟ್ಟಿಗೆಯಿಂದ ಕಟ್ಟಡವಾಗುವುದೆ, ಅಯ್ಯ?
ಒಂದೆ ತೆನೆಯಿಂದ ರಾಶಿಯಾಗುವುದೆ, ಅಯ್ಯ?
ಸ್ವತಂತ್ರಧೀರ ಸಿದ್ಧೇಶ್ವರಾ,
ಒಂದೆ ಜಪದಿಂದ ತಪವಾಗುವುದೆ, ಅಯ್ಯ?

೧೨೭

ಹೊರಗೆ ಸಾವಿರ ಸಾವಿರ ಮುಖಗಳನ್ನು ನೋಡಿದರೇನು,
ಒಲಿದ ಮುಖ ನೋಡಲು ಕಣ್ಣು ಹಾತೊರೆಯುತ್ತವೆ;
ಹೊರಗೆ ಸಾವಿರ ಸಾವಿರ ಸ್ವರಗಳನ್ನು ಕೇಳಿದರೇನು,
ಒಲಿದ ಸ್ವರ ಕೇಳಲು ಕಿವಿಗಳು ಹಂಬಲಿಸುತ್ತವೆ;
ಹೊರಗೆ ಸಾವಿರ ಸಾವಿರ ತೀರ್ಥ ಪ್ರಸಾದಗಳ ಸೇವಿಸಿದರೇನು,



ಸ್ವತಂತ್ರಧೀರ ಸಿದ್ಧೇಶ್ವರನ ಕರುಣಪ್ರಸಾದಕ್ಕಾಗಿ
ಹೃದಯ ಹಸಿದಿರುತ್ತದೆ!

೧೨೮

'ಎಂಜಲು, ಎಂಜಲು' ಎಂದು
ವಟಗುಟ್ಟುವ ಮಹಾರಾಯಾ,
ಎಂಜಲಿಸಬಲ್ಲೆಯಾ ಹೊಳೆಯ ನೀರನ್ನು?
'ಮಡಿ, ಮಡಿ' ಎಂದು
ಬಡಬಡಿಸುವ ಮಹಾರಾಯಾ,
ತಂದು ತೋರಿಸುವಿಯಾ
ಕಪ್ಪೆ ಮೀನು ಕುಡಿಯದ ನೀರನ್ನು?
'ಹೊಲೆ, ಹೊಲೆ' ಎಂದು
ಹಲುಬುವ ಮಹಾರಾಯಾ,
ತಂದು ತೋರುವಿಯಾ ಮಲರಹಿತ ಮೈಯನ್ನು?
ಎಲ್ಲ ಹುಟ್ಟಿಸಿದ ಸ್ವತಂತ್ರಧೀರ ಸಿದ್ಧೇಶ್ವರನೊಬ್ಬನೇ ಇರುವಾಗ
ಹೊಲ್ಲ ಈ ಸೊಲ್ಲುಗಳೆಲ್ಲ! ಅಲ್ಲವೆ?

೧೨೯

'ಆಶೆಯನ್ನು ತೊರೆ, ಆಶೆಯನ್ನು ತೊರೆ'
ಎಂದು ಬೋಧಿಸುತ್ತಿದ್ದರು ಹಿರಿಯರು;
'ನಿರಾಶೆಯನ್ನು ತೊರೆ, ನಿರಾಶೆಯನ್ನು ತೊರೆ'
ಎನ್ನುತ್ತಿದ್ದಾನೆ ಸ್ವತಂತ್ರಧೀರ ಸಿದ್ಧೇಶ್ವರ!

೧೩೦

ಅಗಲಲೆಂದೆ ಕೂಡಿದೆವು
ಕೂಡಲೆಂದೆ ಅಗಲಿದೆವು
ಸ್ವತಂತ್ರಧೀರ ಸಿದ್ಧೇಶ್ವರನೂ ನಾನೂ!

೧೩೧

ಸುಖದ ಸಾಧನಗಳು ಹೆಚ್ಚಿದಂತೆ
ದುಃಖದ ಸಂದರ್ಭಗಳೂ ಹೆಚ್ಚಲೇಬೇಕೆ?
ಜೀವನದಾಯಿನೀ ಔಷಧಗಳು ಹೆಚ್ಚಿದಂತೆ
ಜೀವಹಾರಕ ರೋಗಗಳೂ ಹೆಚ್ಚಲೇಬೇಕೆ?
ಶಿಕ್ಷಣವು ಹೆಚ್ಚಿದಂತೆ
ರಾಕ್ಷಸತೆಯೂ ಹೆಚ್ಚಲೇಬೇಕೆ?
ಸ್ವತಂತ್ರಧೀರ ಸಿದ್ಧೇಶ್ವರಾ,
ಸಚಿವರ ಸಂಖ್ಯೆ ಹೆಚ್ಚಿದಂತೆ
ಅವರ ಸಂಬಳ ಭತ್ಯಗಳೂ ಹೆಚ್ಚಲೇಬೇಕೆ?

೧೩೨

ನಕ್ಷತ್ರಗಳ ಈ ಲಕ್ಷ ಲಕ್ಷ ಅಕ್ಷೋಹಿಣೀ ಸೇನೆ
ಯಾವ ಸಮರಕ್ಕಾಗಿ?
ಬಾನ ಬಳ್ಳಿಯ ಈ ಕೋಟಿ ಕುಸುಮಗಳು
ಯಾವ ಭ್ರಮರಕ್ಕಾಗಿ?
ಸ್ವತಂತ್ರಧೀರ ಸಿದ್ಧೇಶ್ವರಾ,
ಸಂಖ್ಯಾ ಶಾಸ್ತ್ರಕ್ಕೆ ಮೂರ್ಛೆ ಬರಿಸುವ ಈ ಅಸಂಖ್ಯಾತ ಸೋಹೆಗಳು
ಯಾವ ಅಕ್ಷಯಾಂಬರಕ್ಕಾಗಿ?

೧೩೩

ಏನೊಂದೂ ಸರಿಯಾಗಿ ಗೊತ್ತಿಲ್ಲದೆ
ಎಷ್ಟೊಂದು ಬರೆದುಬಿಟ್ಟೆ?
ಇವನ್ನೆಲ್ಲ ನಾನೇ ಬರೆದೆನೆ?
ಏಕೆ ಬರೆದೆ?



ಯಾವುದೋ ಶಕ್ತಿ ಬರೆಸಿತೆ?
ಏಕೆ ಬರೆಸಿತು?
ಇಂಥ ಪ್ರಶ್ನೆಗಳಿಗೆ
ನನ್ನ ಹತ್ತಿರ ಉತ್ತರವಿಲ್ಲ;
ಸ್ವತಂತ್ರಧೀರ ಸಿದ್ಧೇಶ್ವರನೇ ಬಲ್ಲ!

೧೩೪

ಬದುಕಿಗೆ ಬದಲಿಯಿಲ್ಲ
ಸಾವಿಗೆ ವಿನಾಯತಿಯಿಲ್ಲ
ದುಃಖ ಸ್ಥಿರವಲ್ಲ
ಸುಖವೂ ಸ್ಥಿರವಲ್ಲ,
ನೆನಪುಗಳು ಕಹಿಯಲ್ಲ,
ಸ್ವತಂತ್ರಧೀರ ಸಿದ್ಧೇಶ್ವರ ಕರುಣಿಸಿದರೆ
ಸಿಹಿಯೇ ಎಲ್ಲ!

೧೩೫

ಈ ಹಗಲಿರುಳುಗಳ ಹಾದಿಯಲ್ಲಿ
ಎಂದಿನಿಂದ ನಡೆಯುತ್ತಲಿದ್ದೇನೆ!
ಆದರೂ ಇದ್ದಲ್ಲಿಯೇ ಇದ್ದೇನೆ-
ಗಾಣ ಸುತ್ತಿದ ಕೋಣನಂತೆ!
ಎಣ್ಣೆ ತೆಗೆದ ಧನ್ಯತೆಯಾದರೂ ಇದೆ ಕೋಣಕ್ಕೆ
ನನಗಾವ ಧನ್ಯತೆ ಸ್ವತಂತ್ರಧೀರ ಸಿದ್ಧೇಶ್ವರಾ?

೧೩೬

ಮಗನಿಗೆ ಧೈರ್ಯ ಬರಲೆಂದು
ಕತ್ತಲೆ ರಾತ್ರಿಯಲ್ಲಿ ಒಬ್ಬನನ್ನೇ ಕಳಿಸಿ
ಬೆನ್ನ ಹಿಂದೆಯೇ ಬರುವ ತಂದೆಯಂತೆ
ಸ್ವತಂತ್ರಧೀರ ಸಿದ್ಧೇಶ್ವರ.

೧೩೭

ಊಟಕ್ಕೆ ಕರೆವ ಮಾತೃಸ್ವರ;
ಕೂಟಕ್ಕೆ ಕರೆವ ಕಳತ್ರಸ್ವರ;
ಆಟಕ್ಕೆ ಕರೆವ ಭ್ರಾತೃಸ್ವರ;
ನೋಟಕ್ಕೆ ಕರೆವ ಮಿತ್ರಸ್ವರ–
ಎಂಥ ಸಂತಸಕರ ಸ್ವರಸಂಗಮ ಈ ಜೀವನ!

ಹಸಿದ ನಂದನ ಕ್ರಂದನಸ್ವರ,
ಪತಿಯಳಿದ ಸತಿಯ ರೋದನಸ್ವರ,
ಮರಣೋನ್ಮುಖ ರೋಗಿಯ ನರಳುವಸ್ವರ,
ಒರಲುವ, ಕೆರಳುವ, ಕನಲುವ ಸ್ವರ–
ಎಂಥ ದಾರುಣ ಸ್ವರಗಳ ಸಂದಣಿ ಈ ಜೀವನ–
ಸ್ವತಂತ್ರಧೀರ ಸಿದ್ಧೇಶ್ವರಾ!

೧೩೮

ಕತ್ತಲೆ ಮೆತ್ತಗೆ ಬೆಳಕಾಗುವುದನ್ನು
ಬೆಳಕು ಮೆಲ್ಲನೆ ಕತ್ತಲೆಯಾಗುವುದನ್ನು
ಯಾರು ಕಂಡಿಲ್ಲ?
ನೀರು ಆವಿಯಾಗಿ, ಆವಿ ಮೋಡವಾಗಿ,
ಮೋಡ ಮಳೆಯಾಗಿ ಸುರಿಯುವುದನ್ನು
ಯಾರು ಕಂಡಿಲ್ಲ?
ಮಣ್ಣು ಬೆಳೆದು ಅನ್ನವಾಗುವುದನ್ನು
ಅನ್ನ ಅರಗಿ ಮಣ್ಣಾಗುವುದನ್ನು
ಯಾರು ಕಂಡಿಲ್ಲ?
ಸ್ವತಂತ್ರಧೀರ ಸಿದ್ಧೇಶ್ವರ
ಕನಲಿ ರುದ್ರನಾಗುವುದನ್ನು,
ಒಲಿದು ಶಿವನಾಗುವುದನ್ನು
ಕಂಡಿಹರೆ ಎಲ್ಲ?



೧೩೯

ನನ್ನೆದೆಯ ಛಾಯಾಗ್ರಾಹಕ ಯಂತ್ರ
ಎಂದಿನಿಂದ ಕ್ಲಿಕ್ಕಿಸುತ್ತಲಿದೆ–
ನಿನ್ನ ಚಿತ್ರವೇ ಮೊದಲಿಲ್ಲವಲ್ಲ!
ಕೊರತೆ ಯಾವುದನಿರಿಸಿ ಕಳಿಸಿಹೆ ಇದನ್ನು?
ಈಗಲಾದರೂ ತಿಳಿಸುವೆಯಾ?
ಸಾಧ್ಯವಿದ್ದರೆ ಸರಿಪಡಿಸಿಕೊಳ್ಳುವೆ
ಸ್ವತಂತ್ರಧೀರ ಸಿದ್ಧೇಶ್ವರಾ!

೧೪೦

ಈಗಲೇ ಹೋಗದಿರು ನಲ್ಲ–
ನನ್ನ ಬಯಕೆಯ ಏಕ ಅಲ್ಪಾಂಶವೂ ತೀರಿಲ್ಲ!
ನಯನಗಳ ನೀರಡಿಕೆ ಇನ್ನಷ್ಟು ಹೆಚ್ಚಿದೆ;
ಅಧರಗಳ ಮುದ್ದಿನಾಶೆ ಇನ್ನಷ್ಟು ವರ್ಧಿಸಿದೆ;
ಕರ್ಣಗಳ ಕೇಳುವಾಸೆ ಇನ್ನೆಷ್ಟೋ ಬೆಳೆದಿದೆ;
ಅಂಗದ ಆಲಿಂಗನದಾಸೆ ಏನಿತೆನಿತೋ ಘನವಾಗಿದೆ
ಹೋಗದಿರು, ಹೋಗದಿರು
ನಿನ್ನ ಶರಣರಾಣೆ ನಿನಗೆ
ಹೋಗದಿರು, ಹೋಗದಿರು
ಸ್ವತಂತ್ರಧೀರ ಸಿದ್ಧೇಶ್ವರಾ!

೧೪೧

ಯಾರೋ ಸೋಲುವರೆಂದೇ
ಯಾರೋ ಗೆಲ್ಲುತ್ತಾರೆ

ಯಾರೋ ಬೆಳೆಯುವರೆಂದೇ
ಯಾರೋ ಮೆಲ್ಲುತ್ತಾರೆ
ಸ್ವತಂತ್ರಧೀರ ಸಿದ್ಧೇಶ್ವರ ಕೊಡುವನೆಂದೇ
ಎಲ್ಲರೂ ಪಡೆಯುತ್ತಾರೆ.

೧೪೨

ಅರಿಯುವಾಗಿನ ಆನಂದಕ್ಕಿಂತ
ಮರೆಯುವಾಗಿನ ಆನಂದವೇ ಮಿಗಿಲೆ?
ಓದಿದ್ದನ್ನೂ, ನೋಡಿದ್ದನ್ನು
ಕೇಳಿದ್ದನ್ನು, ಹೇಳಿದ್ದನ್ನು ಮರೆತು
ನಿನ್ನ ಹೊರತು
ಬೇರೇನೂ ಬೇಡವೆನ್ನುತ್ತಿಹೆನಯ್ಯ ಸ್ವತಂತ್ರಧೀರ ಸಿದ್ಧೇಶ್ವರ.

೧೪೩

ಚೆನ್ನಾಗಿ ಬೆಳೆದು ತೆನೆ ಬಿಟ್ಟಾಗಲೂ ಕುಯ್ಯುವನು
ಮಳೆ ಕಡಿಮೆಯಾಗಿ, ಅರ್ಧಕ್ಕೆ ಬೆಳೆದರೂ ಕುಯ್ಯುವನು
ಬಿತ್ತಿದ ಬೇಸಾಯಗಾರ!
ಮತ್ತೆ ಬಿತ್ತಲು ಕುಯ್ಯಲೇಬೇಕಲ್ಲವೆ!
ಆ ಬೇಸಾಯಗಾರನಂತೆ ಸ್ವತಂತ್ರಧೀರ ಸಿದ್ಧೇಶ್ವರ!

೧೪೪

ಈ ಮುನ್ನ ಹೋದವರ ಲೆಕ್ಕವಿಡಬಲ್ಲೆಯಾ?
ಇನ್ನು ಮೇಲೆ ಬರುವವರ ಲೆಕ್ಕ ಮಾಡಬಲ್ಲೆಯಾ?
ಎರಡೂ ಅನೂಹ್ಯ, ಎರಡೂ ಅಗಮ್ಯ.
ಈಗಿರುವವರ ಪ್ರೀತಿಸುವುದೇ ಗುರಿ, ಗಮ್ಯ!
ಸ್ವತಂತ್ರಧೀರ ಸಿದ್ಧೇಶ್ವರನ ಮಕ್ಕಳ
ಪ್ರೀತಿಸಲು ಬೇಕಿಲ್ಲ ಸಿರಿಸಂಪದಗಳ ಸ್ವಾಮ್ಯ!



೧೪೫

ಒಲ್ಲದ ಗಂಡನ ವಲ್ಲಭೆಯೆಂದು
ಗೇಲಿ ಮಾಡುತ್ತಿದ್ದಾರೆ ಗೆಳತಿಯರು.
ಒಲ್ಲದ ಸತಿಯ ಸರಿಯೆಂದು
ಲೇವಡಿ ಮಾಡಲೇನು ನಾನು!
ನಾನಿಲ್ಲದೆ ನಿನ್ನೆದೆ ಭಣಭಣ
ನೀನಿಲ್ಲದೆ ನನ್ನೆದೆ ರಣರಂಗ!
ಇಬ್ಬರೂ ಕೂಡಿದರೆ
ಚಿನ್ಮಯ ಕಣಕಣ
ಅಮೃತಮಯ ಚಣಚಣ
ಕೂಡಿಸಿಕೋ ಸ್ವತಂತ್ರಧೀರ ಸಿದ್ಧೇಶ್ವರಾ
ಪುಚ್ಚಸ್ತ ಚಕೋರ ಸುಧಾಕರಾ!

೧೪೬

ಕರುಣೆಯ ಒಂದು ಕಂಬನಿ ಕಡಲಿಗೆ ಸಮ;
ಕಕ್ಕುಲತೆಯ ಕಿರು ಕಾಣಿಕೆ ಪೊಡವಿಗೆ ಸಮ;
ಬಡವನ ಶ್ರಮದಾನ ಕಡವರಕ್ಕೆ ಸಮ;
ಸ್ವತಂತ್ರಧೀರ ಸಿದ್ಧೇಶ್ವರಾ,
ನಿನ್ನ ನಿಜಭಕ್ತನ ನೀರವ ಪ್ರಾರ್ಥನೆ
ಸಾವಿರ ಬ್ರಹ್ಮೋತ್ಸವಗಳಿಗೆ ಸಮ!

೧೪೭

ಸಾವಿರ ಸಾವಿರ ವಿಚಾರ ವಿಹಂಗಗಳು
ಗೂಡುಕಟ್ಟುವ ವನ ನನ್ನ ಮನ.
ಸಾವಿರ ಸಾವಿರವಾದ ವಾಹಿನಿಗಳ
ಒಳಗೊಳ್ಳುವ ಕಡಲು ನನ್ನ ಬುದ್ಧಿ.
ಸಾವಿರ ಸಾವಿರ ಹಮ್ಮುಗಳ ನಿರ್ಜಲ ನೀರವಗಳ

ಹುಟ್ಟು ಹಾಕುವ ಮುಗಿಲು ನನ್ನ ಅಹಂಕಾರ.

ಸಾವಿರ ಸಾವಿರ ನಿರ್ಜನ ಶೃಂಗಗಳ
ಅನಂತ ಪರ್ವತ ನನ್ನ ಚಿತ್ತ!
ಇವುಗಳಲ್ಲಿ ನೀನಿರಲಾರೆಯೆಂಬುದ ಬಲ್ಲೆ
ನನ್ನ ಹೃದಯಕಮಲದಲ್ಲಾದರೂ ಇರು–
ಸ್ವತಂತ್ರಧೀರ ಸಿದ್ಧೇಶ್ವರಾ!

೧೪೮

ಧ್ವಂಸನಾದ ಆಕಾಶಕಾಯಗಳಿಗೂ ಅಂಟಿತೆ?
ಪ್ರೀತಿ ಸ್ಪಂದನ ಸಾಕಾಗಿ ಮೃತ್ಯುಚುಂಬನ ಬೇಕೆನಿಸಿತೆ!
ನಂದನ ಕೊನೆಗೆ ಮಸಣವಾಗಲೇ ಬೇಕೆ?
ಶಿವಶರಣನಾದ ಸ್ವತಂತ್ರಧೀರ ಸಿದ್ಧೇಶ್ವರ
ಪ್ರಳಯಂಕರನಾಗುತ್ತಲಿಹನೆ?

೧೪೯

ಯಾವುದಕ್ಕೆ ಮೇರೆಯಿದ್ದರೂ
ಪ್ರೀತಿಗೆ ಮೇರೆಯಿರದಿರಲಿ
ಯಾವುದಕ್ಕೆ ಕೊರತೆ ಬಂದರೂ
ಪ್ರೀತಿಗೆ ಕೊರತೆ ಬರದಿರಲಿ
ಏನೇ ಅಪಮೌಲ್ಯಗೊಂಡರೂ
ಪ್ರೀತಿ ಮಾತ್ರ ಅಪಮೌಲ್ಯಗೊಳ್ಳದಿರಲಿ.
ಸ್ವತಂತ್ರಧೀರ ಸಿದ್ಧೇಶ್ವರನ
ಪ್ರೀತಿಯಲ್ಲಿ ಜಾತನಾದ ಜೀವಕೋಟಿಗೆ
ಪ್ರೀತಿಯೇ ಧಾರಣ, ತಾರಕಶಕ್ತಿ ಕೇಳಿ ಭೋ.

೧೫೦



ನೀನೇ ಬಂದೆಯೆಂದು ಬಾಗಿಲ ತೆರೆದರೆ
ಸವತಿಯ ಗಂಟುಮೋರೆ ಎದುರಾಗಬೇಕೆ?
ಅದೂ ಸಹನೆಯಿಲ್ಲದ ಸವತಿಯ ಮುಖ!
ಹಂಗಿಸುವ, ಭಂಗಿಸುವ, ಮಂಗಿಸುವ ಮುಖ!
ನೀನು ಬರದಿದ್ದರೆ ಹೋಗಲಿ,
ಇಂಥ ಸವತಿಯ ಮೂಲಕ ಅಭಯಗೇಡು ಮಾಡದಿರು
ಸ್ವತಂತ್ರಧೀರ ಸಿದ್ಧೇಶ್ವರಾ!

೧೫೧

ನದಿಗಳ ನಿರ್ಮಲೀಕರಣ ನಡೆದಿದೆ
ಎದೆಗಳ ನಿರ್ಮಲೀಕರಣ ನಡೆದೀತೆ?
ಆರ್ಥಿಕ ಉದಾರೀಕರಣ ನಡೆದಿದೆ
ಚಿತ್ತದ ಉದಾರೀಕರಣ ನಡೆದೀತೆ?
ಸಂತಾನ ನಿಯಂತ್ರಣ ನಡೆದಿದೆ
ಮನದ ನಿಯಂತ್ರಣ ನಡೆದೀತೆ?
ಸ್ವತಂತ್ರಧೀರ ಸಿದ್ಧೇಶ್ವರಾ,
ಉಗ್ರವಾದದ ದಮನ ನಡೆದಿದೆ–
ಅಹಂಕಾರದ ದಮನ ನಡೆದೀತೆ?

೧೫೨

ನಾನು ಮೊಟ್ಟಮೊದಲು ನೋಡಿದುದು
ಹಡೆದ ತಾಯಿಯ ಮುಖವನ್ನು;
ಕಟ್ಟ ಕಡೆಗೆ ನೋಡಬಯಸಿದ್ದೇನೆ
ನಿನ್ನ ಮುಖವನ್ನಯ್ಯಾ
ಸ್ವತಂತ್ರಧೀರ ಸಿದ್ಧೇಶ್ವರಾ!

೧೫೩

ಆಳದಲ್ಲಿ ಕಡಲನ್ನು ಮೀರಬಲ್ಲೆ–
ಮೀರು ಮನವೆ!
ಅಗಲದಲ್ಲಿ ಮುಗಿಲನ್ನು ಮೀರಬಲ್ಲೆ–
ಮೀರು ಮನವೆ!
ಎತ್ತರದಲ್ಲಿ ಮೇರುವನ್ನು ಮೀರಬಲ್ಲೆ–
ಮೀರು ಮನವೆ!
ಮೀರುತ್ತ, ಮೀರುತ್ತ, ಮೀರುತ್ತ
ಸ್ವತಂತ್ರಧೀರ ಸಿದ್ಧೇಶ್ವರನೇ ನೀನಾಗು
ಮನವೆ!

೧೫೪

ಕಲ್ಲು ಕರಗಬಹುದು,
ಕಲ್ಲೆದೆ ಕರಗುವುದು ಕಠಿಣವಯ್ಯ.
ಅಣ್ವಾಗ್ನಿ ಆರಬಹುದು,
ದ್ವೇಷಾಗ್ನಿ ಆರುವುದು ದುಷ್ಕರವಯ್ಯ.
ಅಂಬುಧಿಯು ಬತ್ತಬಹುದು
ಅದಾನದಿ ಬತ್ತುವುದು ದುಸ್ಸಾಧ್ಯವಯ್ಯ
ಸ್ವತಂತ್ರಧೀರ ಸಿದ್ಧೇಶ್ವರಾ–ನಿನ್ನ ನೆಮ್ಮದ ನದಿಗೆ!

೧೫೫

ದೇಶದಲ್ಲೆಲ್ಲ ನಮ್ಮ ಮೂರ್ತಿಗಳೆ ನಿಲ್ಲಲಿ
ಪ್ರತಿಯೊಂದಕ್ಕೂ ನಮ್ಮ ಹೆಸರನ್ನಿಡಲಿ
ಸಮೂಹ ಮಾಧ್ಯಮಗಳಲ್ಲೆಲ್ಲ ನಮ್ಮ ಗುಣಗಾನ ನಡೆಯಲಿ
ಎಂದು ಹಪಹಪಿಸುತ್ತಿರುವ ನಮ್ಮ ನಿರ್ಲಜ್ಜ ನಾಯಕರು
ನನ್ನ ಮೂರ್ತಿಯನ್ನು ನಿಲ್ಲಿಸದಿರಿ,
ನನ್ನ ಚಿತ್ರವನ್ನು ಪ್ರಕಟಿಸದಿರಿ,
ಎಂದ ಪ್ರವಾದಿ ವರ ಮಹಮ್ಮದ ಪೈಗಂಬರರ
ಸಿರಿನುಡಿಗೆ ಕಿವಿಗೊಡುವರೇನಯ್ಯ–
ಸ್ವತಂತ್ರಧೀರ ಸಿದ್ಧೇಶ್ವರಾ?



೧೫೬

ಮಹಾವೀರರ ಅಹಿಂಸೆ
ಬುದ್ಧನ ನೀತಿ
ಕೃಷ್ಣನ ಗೀತೆ
ಬಸವನ ಕಾಯಕ
ಬಾಪು–ಬಾಬಾ ಸಾಹೇಬರ ಅಂತ್ಯೋದಯ
ಭಾರತೀಯರ ಪಂಚಪ್ರಾಣಗಳಾಗಲಯ್ಯಾ
ಸ್ವತಂತ್ರಧೀರ ಸಿದ್ಧೇಶ್ವರಾ!

೧೫೭

ಆಕೃತಿಯಲ್ಲಿ ಸೂಕ್ಷ್ಮಾತಿಸೂಕ್ಷ್ಮ
ಶಕ್ತಿಯಲ್ಲಿ ಭೂಮಾತಿಭೂಮ
ನಿನ್ನ ಪರಮಾಣು!
ಈ ಎಂಟು ಗೇಣಿನ ದೇಹದಲ್ಲಿ
ಈ ಅದ್ಭುತಶಕ್ತಿ ಸುತ್ತವೇಕೆ
ಸ್ವತಂತ್ರಧೀರ ಸಿದ್ಧೇಶ್ವರಾ!

೧೫೮

ಪ್ರತಿಬಿಂಬ ಹುಸಿಯೆಂದು
ಮೂಲ ಬಿಂಬವೇ ಹುಸಿಯೆನ್ನಬಹುದೇನಯ್ಯ?
ಪ್ರತಿಧ್ವನಿ ಹುಸಿಯೆಂದು
ಮೂಲಧ್ವನಿಯೇ ಹುಸಿಯೆನ್ನಬಹುದೇನಯ್ಯ?

ಬಿಸಿಲುಗುದುರೆ ಹುಸಿಯೆಂದು
ಬಿಸಿಲೇ ಹುಸಿಯೆನ್ನಬಹುದೇನಯ್ಯ?
ಕನಸುಗಳು ಹುಸಿಯೆಂದು
ಕನಸು ಕಂಡವನೇ ಹುಸಿಯೆನ್ನಬಹುದೇನಯ್ಯ?
ಸ್ವತಂತ್ರಧೀರ ಸಿದ್ಧೇಶ್ವರಾ,
ನಿನ್ನ ಕಪಟ ಭಕ್ತರ ಭಕ್ತಿ ಹುಸಿಯೆಂದು
ನೀನೇ ಹುಸಿಯೆನ್ನಬಹುದೇನಯ್ಯ?

# ವಚನಾನುಕ್ರಮಣಿಕೆ


ಅ

ಅಕ್ಷರಗಳಿಗೆ ಅರ್ಥ ಬರುವುದು ೨೬೯
ಅಚ್ಚುಕಟ್ಟನ್ನು ಉಳುವವರು ೧೩೬
ಅಜೀರ್ಣಕ್ಕೆ ಕಾರಣ ೩೭೧
ಅಜ್ಞಯುಗ ಹೋಯ್ತು ೧೩೨
ಅಡಕಿಲ ಗಡಿಗೆಗಳ ಬುಡಕ್ಕೇ ೪೯೯
ಅದಿರಿನಲ್ಲಿ ಚಿನ್ನದೊಡನೆ ೧೦೭
ಅಧಿಕಾರದ ಅಂತಸ್ತು ೩೫೧
ಅನ್ಯಾಯವು ಸಿಂಹಾಸನವೇರಿರುವಲ್ಲಿ ೩೫೮
ಅಪರಾಧೀ ಅಂತಃಸಾಕ್ಷಿಯಿರೆ ೯೬
ಅಪ್ರಮಾಣಿಕ ವಿಶ್ವಾಸಕ್ಕಿಂತ ೧೭೫
ಅಬಲೆಯರ ಆಶ್ರುಗಳಲ್ಲಿಯೇ ೪೫೦
ಅರ್ಧ ರಾತ್ರಿಯಲ್ಲಿ ಎದ್ದು ೪೮೮
ಅರ್ಥ ಅಕ್ಷರಗಳ ಬೆಳಗುವಂತೆ ೪೩೪
ಅರಬ್ಬೀ ಸಮುದ್ರದಿಂದ ೨೯೫
ಅರಮನೆಯಲ್ಲಿದ್ದೊಡೇನು ೩೫೬
ಅರಿಯದೆ ಮಾಡಿದ ೩೮೦
ಅರಿವು ಮರೆವುಗಳ ೨೫೦
ಅರೆಮುತ್ತಿನಲ್ಲಿಯೇ ಅರುವತ್ತು ೫೦೭
ಅಲ್ಲಿ ಬರ, ಇಲ್ಲಿ ಬರ ೨೮೫
ಅಲೆಮಾರಿ ಮನಕ್ಕೆ ೧೯೪
ಅವರಿವರು ಪ್ರೀತರಾಗಲೆಂದು ೧೫೨
ಅಸ್ತಿತ್ವದ ಅಭ್ರಕಕ್ಕೆ ೧೨೮
ಅಂಗುಲಿಮಾಲಾನಲ್ಲಿ ಮೃತವಾಗಿರದಿದ್ದ ೩೯೫
ಅಂತರಿಕ್ಷದ ಇಂಕ್ಯುಬೇಟರಿನಲ್ಲಿ ೨೮
ಅಂದವು ಇನ್ನೂ ಅಂದವಾಗಲಿ ೧೫೬

ಆ

ಆಗ, 'ಅಹಿಂಸಾ ಪರಮೋಧರ್ಮಃ' ೩೦೩
ಆಗಬೇಕು, ಆಗಬೇಕು ೫೧
ಆತ್ಮೌಪಮ್ಯವನ್ನು ಅನ್ವೇಷಿಸಿದ ೪೮೩
ಆದಮ್-ಈವ್ವರಿಗೆ ೩೬೦
ಆ ದಾರಿ ಈ ದಾರಿಯಲ್ಲಿ ೬೯
ಆದಿಯಿದ್ದರೆ ತಾನೆ ೧೮೯
ಆಯುಷ್ಯವೆಲ್ಲ ಅನಾರೋಗ್ಯವನ್ನು ೫೦೮
ಆರೋಗ್ಯ ಬೇಕು ೧೨೪
ಆಲದ ಮರದಂತೆ ೨೮೭
ಆಶೆಯ ನೆರಳು ನಿರಾಶೆ ೧೯೨
ಆಸ್ವಾದನದ ಆಸೆ ೪೮೭
ಆ ಹಾದಿ ಈ ಹಾದಿಯೆಂದು ೯೮

ಇ

ಇಕಾರಸನ ಕನಸು ೪೯೩
ಇಟ್ಟಿಗೆ ಕಟ್ಟಿಗೆಗಳನ್ನು ೩೮೨
ಇತಿಹಾಸವೆ ೪೩೫

ಇದ್ದಲಿನ ಎದೆಯಲ್ಲಿ ೪೮೬
ಇದಿರು ಕಾಣುವವರಿಗೆ ೯೪
ಇದುವರೆಗಿನ ಬಾಳು ೨೨೯
ಇದುವರೆಗೆ ಯಾಂತ್ರಿಕವಾಗಿ ೫೨೨
‘ಇದೆ, ಇದೆ’ ೪೪
ಇದೆಂಥ ಮನೆಯಲ್ಲಿ ೪೮೦
ಇನ್ನೂ ಎರಡು ತುತ್ತು ೫೦೪
ಇನ್ನೇನ ಮಾಡದಿದ್ದರೂ ೪೭೨
ಇನ್ನೇನೋ ಇಲ್ಲದೆ ೨೫೨
ಇನ್ನೊಬ್ಬರ ಕೈಯ ತುತ್ತ ೨೯೨
ಇಪ್ಪುದರ ಕಪ್ಪೆಚಿಪ್ಪಿನಲ್ಲಿ ೨೬
ಇಲ್ಲಿ ಗುಡಿಗೆ ಬರುವವರೆಲ್ಲ ೪೧೩
ಇಳೆಯ ಕಾಳವೆಲ್ಲ ೪೫೫
ಇಂದು ಬಂದು ಮುಂದೆ ೨೩೪
ಇಂದು ಯುಗಾದಿಯೋ ೪೩೦
ಇಂದು ಹುಟ್ಟಿಹ ೪೮೪

ಈ

ಈ ಕಾಯಿ ನೆಟ್ಟಗಿದೆಯೋ ೨೬೨
ಈ ದೇಶದಲ್ಲಿ ೪೫೩
ಈ ಬಗೆಯ ಬಾನುಲಿಯಲ್ಲಿ ೫೦೯
ಈ ಮಣ್ಣಿನ ೩೧
ಈ ವನವನ್ನು ೫೨೫
ಈ ವಿಶಾಲ ವಿಶ್ವದಲ್ಲಿ ೨೯೩
ಈ ಶರೀರದಲ್ಲಿ ೨೨೨
ಈ ಹೊತ್ತಗೆ ೨೬೫

ಉ

ಉಣಿಸಿ ತಿನಿಸಿ ೨೭೫
ಉಪ್ಪಿನಕಾಯಿ ರುಚಿಯೆಂದು ೪೭೫
ಉರಿವ ಜಲಜನಕ ೫೧೩
ಉಸುಕಿನ ಹಳುಕುಗಳನ್ನು ೧೪೦
ಉಂಡುದಕ್ಕಿಂತ ಉಳಿಸಿದ ೩೧೮

ಊ

ಊರಮುಂದೆ ೨೯೯

ಋ

ಋತವ ತೋರುವ ೪೨೯
ಋಷಿ ಪ್ರತಿಭೆ ೩೯೩

ಎ

ಎಗ್ಗ ಉರುಲು ೨೦೪
ಎಣ್ಣೆಯಿಲ್ಲದೆ ದೀಪ ೨೩
ಎತ್ತರಕ್ಕೆ ಏರಿದಂತೆ ೧೩೯
ಎದೆಯ ಹಿಗ್ಗು ೨೮೬
ಎನಗಾರೂ ಇಲ್ಲವೆಂದಾಗ ೧೫೩
ಎನಿತು ಸುಂದರ ೩೨
ಎಲುವಿನ ಗೂಡುಗಳಲ್ಲಿ ೩೪೪
ಎಲ್ಲ ತನುಗಳ ೫೨೪
ಎಲ್ಲ ತೋರ್ಕೆಗಳ ೫
ಎಲ್ಲ ನಿನ್ನ ದಾನ ೨೦೯
ಎಲ್ಲ ನಿನ್ನನ್ನು ೨೩೧
ಎಲ್ಲ ಪ್ರಾಣಿಗಳಿಗೂ ೨೭೨
ಎಲ್ಲರೂ ಎಲ್ಲರ ಮೇಲೆ ೩೪೯
ಎಲ್ಲವೂ ಸರಿಯೆಂದು ೪೧೦
ಎಲ್ಲಲ್ಲಿ, ಎಲ್ಲೆಲ್ಲೂ ೧೬
ಎವರೆಷ್ಟನು ಏರುವ ೨೦೨
ಎಷ್ಟೆಂದರೂ ನೀನು ೨೪೦
ಎಂಥ ಶ್ರೇಷ್ಠ ೩೧೩

ಏ





ಏನಿದೇನಿದೇನಿದಯ್ಯ ೩೭೯, ೪೨೯
ಏನು ಪಡೆದೆವೆಂಬುದು ೨೩೮
ಏನೋ ಅನುಭವವಾಗುತ್ತದೆ ೯೨
ಏಸು ಕಾಲ ಕಳೆದರೇನು ೪೦೦

ಐ

ಐದು ಹೆಡೆಗಳ ಹಾವ ೪೭೭

ಒ

ಒಲವೇ ಬೆಳಕು ೫೫೪
ಒಳಿತನ್ನು ಮಾಡಿದವರಿಗೆ ೩೬೪
ಒಳಿತನೆಸಗುವ ಒಬ್ಬನಿಗೆದುರಾಗಿ ೧೩೮
ಒಳ್ಳೆಯ ಜೀವನಕ್ಕಿಂತ ೨೩೬
ಒಳ್ಳೆಯ ಹೊಲದಲ್ಲಿ ೩೭೫
ಒಂದು ಕೋಹಿನೂರಿಗಾಗಿ ೭೩
ಒಂದೆ ದಾರಿಯಲಿ ೭೧
ಒಂಬತ್ತು ಬಾಗಿಲುಗಳಿಗೂ ೧೭೨

ಓ

ಓಟುಗಳ ಬೆಲೆ ೪೪೩
ಓ ಸ್ವಾತಂತ್ರ್ಯವೆ ೪೫೬

ಕ

ಕಡು ಹಸಿದು ೧೧೫
ಕಡೆದರೆ ಬೆಣ್ಣೆ ೩೬೩
ಕಣ್ಣು ಕಾಣಬಲ್ಲುದಲ್ಲದೆ ೧೮೦
ಕಣ್ಣು ತೆರೆಯೆ ೧೪
ಕತ್ತಲೆ ಗಾಢವಾದಷ್ಟೂ ೧೦೮
ಕತ್ತಲೆಯನ್ನು ಕಡೆದರೆ ೪೪೪
ಕದ್ದು ಹೂಗಳ ತಂದು ೩೬೧
ಕನಸಿನ ವೈರಿಯೊಡನೆ ೪೦೯
ಕನ್ನಡನಾಡಿನ ಕೋಡುಗಲ್ಲುಗಳು ೪೬೫
ಕನ್ನಡಿಗರ ಕಂಡರೆ ೪೬೬
ಕರವೀರ, ಮುತ್ತಲ ೩೬೬
ಕರುಣೆಯೇ ಕಾಶಿ ೨೬೭
ಕರೆದರೆ ಬರುವುದೇನಯ್ಯಾ ೨೬೭
ಕಲ್ಲು ದೋಣಿಯಲ್ಲಿ ೩೫೨
ಕವನಕ್ಕೆ ಕಾರಣ ೧೦೪
ಕಳಚಲಯ್ಯ ಹಾವಿನ ಪರೆಯಂತೆ ೧೪೧
ಕಳೆದುಕೊಂಡಿರುವುದು ೩೯೭
ಕಾಯಕದಲ್ಲಿ ಕೈಗಳು ೨೪೨
ಕಾಲದ ಕಡಲಿನ ಮೇಲೆ ೭೨
ಕಾಶ್ಮೀರದಿಂದ ಕನ್ಯಾಕುಮಾರಿಯವರೆಗಿನ ೩೯
ಕಿರಿಯ ನದಿ ೧೦೫
ಕುಕ್ಕದಿರೆ ಕಡಿಯದಿರೆ ೨೩೯
ಕುಗ್ಗೆನ್ನ ಹೃದಯವ ೨೫೩
ಕುಳಿತವರಿಂದ ಕುರ್ಚಿಗೆ ೪೦೮
ಕೆರದ ಖರ್ಚು ಉಳಿಸಲು ೧೨೧
ಕೆಲವರು ಸ್ವತಂತ್ರರಾಗಿರಲೆಂದು ೩೧೭
ಕೈಮುಚ್ಚಿ ಒಳಗೇನಿದೆಯೆಂದು ೧೫೦
ಕೊಟ್ಟ ಹಣ ಕರಗಿತು ೪೫೮
ಕೊಬ್ಬರಿಯನ್ನು ಕಳೆದುಕೊಂಡು ೩೩೦
ಕೊಯ್ಯುವರೆಂದು ತೆನೆ ಬಿಡದೆ ೪೨೨
ಕೊಲೆ ತಪ್ಪಿಸಲು ೩೭೮
ಕಂಪ್ಯೂಟರ್ ಮಾನವನೊಂದು ೩೭೭
ಕಂಬನಿಯ ಕಂಡು ೩೫೫
ಕ್ರೀಡೆಯಿಲ್ಲದ ಜೀವನ ೧೧೮

ಖ

ಖಂಡಾಂತರ ಯಾತ್ರೆ ೧೮೨

ಗ

ಗತಕಾಲವೆ, ನಿನ್ನನ್ನು ಪ್ರೀತಿಸಬಲ್ಲೆ ೪೮೧
ಗರಿ ನನಗೆ ಹೊರೆಯೆಂದರೆ ೨೧೪
ಗಾಳಿ ಬೀಸಿದತ್ತ ೭೦
ಗುಡ್ಡದಷ್ಟು ಪುಸ್ತಕಗಳನ್ನು ೩೫೬
ಗುರಿಯ ಹಕ್ಕಿಯ ೧೭೯
ಗುರುತ್ವಾಕರ್ಷಣ ಶಕ್ತಿ ೧೭೭
ಗೋಲ ಗುಮ್ಮಟವೂ ಅಲ್ಲ ೧೬೬
ಗಂಡ ಬಯಸಿದುದನ್ನೇ ೧೧೦
ಗಾಂಪರೂ ಮಾರಿಕೊಳ್ಳುವುದಿಲ್ಲ ೨೭೯
ಗುಂಪು ಗುಂಪಾಗಿ ೩೮೮
ಗ್ರಹ ಗೋಲಗಳಿಂದಾಚೆ ೧೦

ಚ

ಚಂದನದ ಅಂದಣದಲ್ಲಿ ೨೨೮
ಚಂದನವಾದರೆ ತೆಯ್ಯಿಸಿಕೊಂಬ ೩೪೭
ಚಂದ್ರನ ಮೇಲೆ ಕಾಲು ೨೭೬
ಚಂದ್ರನೊಲು ನನ್ನ ೨೪೬

ಜ

ಜಗಜ್ಜನನಿಯ ಉಜ್ವಲ ತನಯೆ ೩೮
ಜಗತ್ತಿನಲ್ಲಿ ಜಾತಿಗಳು ೩೦೬
ಜಡವು ಅಜಡತೆಯನ್ನು ೧೦೬
ಜಲದಲ್ಲಿ ಮೀನು ೨೦೫
ಜೀವನ ಮರಣಗಳ ೯
ಜೀವನದ ವನದಲ್ಲಿ ೨೧೫
ಜೇನಿನ ತಾಣವನ್ನು ೪೪೨
ಜೋಳಿಗೆಯ ಹಿಡಿದುಕೊಂಡೇ ೨೧೯
ಜ್ವರದಿಂದ ನಾಲಗೆ ೩೮೪

ಟ

ಟಿಪ್ಪಣಿ ಪುಸ್ತಕ ೪೬೦

ಡ

ಡಾಕ್ಟರರೇ ಅಸಾಧ್ಯವೆಂದ ೪೯೮

ತ

ತಜ್ಞತೆಯ ಬೆಳೆಯುತ್ತಿರುವಂತೆಯೇ ೩೦೯
ತತ್ವರಹಿತ ರಾಜಕಾರಣ ೪೪೫
ತಮ್ಮ ವಿಲಾಸಕ್ಕಾಗಿ ೩೯೬
ತಲೆಯಲ್ಲಿರುವಾಗ ಸುಗಂಧದೆಣ್ಣೆ ೮೮
ತಾನಿದ್ದರೆ ತಾನೆ ೫೦
ತಾಪವನ್ನು ತಾಳಿಕೊಳ್ಳುವುದೇ ೩೯೧
ತಾನು ಮಧು ಹೀರಿದ ೨೨೭
ತಾನು ಸುಟ್ಟುಕೊಟ್ಟ ೫೦೧
ತಾಯಿಯಾಗಿ ಕಂಡೆ ೨೨
ತಿಳಿವಿನ ಹೊಳಲಿನ ೫೦೩
ತುಕ್ಕು ಹಿಡಿದು ೨೩೩
ತೂಗಿ ಕಟ್ಟುವುದೆ ೪೩೬
ತೆರೆಯೊಂದರಿಂದ ತೊರೆಯಾಗದು ೯೮
ತೊಟ್ಟಿಲಲ್ಲಿರುವ ಹಸುಗೂಸಿಗೂ ೧೩೫
ತೋಳ ನಿರ್ಧರಿಸಿದ ನೀತಿ ೩೪೧
ತಂತಿಗಳಲ್ಲಿ ಸುನಾದವಿದೆ ೭೬
ತಂದೆ ೧೮
ತೆಂಗಿನ ಜುಬ್ಬರದಂಥ ೨೯೮

ದ

ದಿನ ದಿನ ಗುಡಿಸಿಯೂ ೧೬೧
ದಿನದಿನವೂ ಹಲವು ೨೩೨





ದುರಾಚಾರಿಯಾದ ಪಂಡಿತನಿಗಿಂತ ೩೨೧
ದುಷ್ಟರ ಭ್ರಷ್ಟರ ೩೪೮
ದೇಶವನ್ನು ಛಿದ್ರಿಸುವ ೩೩೩
ದೊಡ್ಡದನ್ನು ಮಾಡಲು ೩೨೯
ದೊಡ್ಡ ದೊಡ್ಡ ಮಾತುಗಳನ್ನಾಡಿ ೪೭೬

ನ

ನಗೆಯ ಉಗಮದ ೩೦೦
ನಟನಟಿಯರ ದಾಂಪತ್ಯ ೩೯೯
ನಡೆಯದ ಹಾದಿಯಲ್ಲಿ ೨೦
ನದಿಯೆ ಬತ್ತಿರುವಾಗ ೪೦೭
ನನಗಾಗಿ ಏನನೂ ೨೯೦
ನನಗಿಷ್ಟು ದುಃಖವಿತ್ತೆಯೆಂದು ೨೫೫
ನನಗೆ ಬೇಕಾದುದ ೬೨
ನನಗೆ ಬಯಸದೆ ೫೧೧
ನನ್ನ ಅಸ್ತಿತ್ವದ ೧೪೬
ನನ್ನ ನನಸಿನ ನೌಕೆಗೆ ೫೭
ನನ್ನ ತಪ್ಪುಗಳ ತೊರೆ ೬೪
ನನ್ನ ತಾಯಿ ಭೂಮಿ ೧೧
ನನ್ನ ತಂತಿಗಳ ೧೪೨
ನನ್ನ ದೋಷ ದುರ್ಗುಣಗಳನ್ನು ೪೭೧
ನನ್ನ ನಯನಗಳು ೫೧೮
ನನ್ನ ನಿನ್ನ ನಡುವೆ ೧೮೩
ನನ್ನ ನುಡಿ ನನ್ನಿಗೆ ೨೮೭
ನನ್ನ ನೋವಿನ ಕೆನೆಯನ್ನು ೨೪೯
ನನ್ನ ಬಾಳಿನ ೯೧, ೧೪೩
ನಭದ ನೀಲಿಯಲ್ಲಿ ೩೪
ನರರಿಗೆ ಶರಣು ೮೭
ನರೆಗೂದಲಿಗೆ ಕಪ್ಪು ೪೧೨
ನಲ್ಲನ ನಲ್ಮೆಯನ್ನೆಂತು ೫೨೦
ನವಿಲುತೀರ್ಥದ ೧೭೧
'ನವೀಕರಣ, ನವೀಕರಣ' ೨೦೩
ನಾಟಕದ ಸೀತೆಯೇ ೨೧೭
ನಾಟ್ಯವಿಲ್ಲದೆ ಮಾನ್ಯರಾದವರಿರಬಹುದು ೨೫೭
ನಾನಿರುವ ತನಕ ೫೫
ನಾನು ಆಡುವುದೇ ೨೫೮
ನಾನು ಎಚ್ಚರಿದ್ದಾಗ ೬೧
ನಾನು ಕಳೆದ ೧೪೭
ನಾನು ನಿನ್ನಲ್ಲಿ ೪೨
ನಾನು ನೆಯ್ದು ೧೧೭
ನಾನು ನೀನಾಗುವುದು ೧೫
ನಾನು ಹುಟ್ಟುವ ಮುನ್ನ ೩
ನಾಮಪದದ ವೈರಿ ೧೭೦
ನಾ ಮಾಡುವ ಕೆಲಸದಲ್ಲಿ ೭೭
ನಾಲ್ಕು ನೂರು ಕೋಟಿ ೧೪೫
ನಿಜದ ಗುಡಿಯಲ್ಲಿ ೩೦೭
ನಿತ್ಯ ಹಲವು ೧೪೮
ನಿನಗೆ ನಾನು ೨೫೯
ನಿನಗೆ ನಾಮವಿಲ್ಲ ೬
ನಿನಗೆ ವಿಧುರನಾಗುವ ೫೨೧
ನಿನಗೆ ಸೃಷ್ಟಿಕಾವ್ಯ ೪೯೪
ನಿನ್ನ ಅನುಗ್ರಹಕ್ಕೆ ೬೩
ನಿನ್ನ ಉದ್ದರಿ ಖಾತೆಯಲ್ಲಿ ೨೬೧
ನಿನ್ನ ಕರೆ ನನಗೆ ೫೩
ನಿನ್ನ ಜ್ಞಾನ ೧೯೧
ನಿನ್ನ ತಿಗರಿಗೆ ಮಣ್ಣು ೧೭೯
ನಿನ್ನದು ಅಗಮ್ಯಶಕ್ತಿ ೫೯

ನಿನ್ನನರಿಯುವುದಿರಲಿ ೪೯
ನಿನ್ನ ನಾಮಕರಣೋತ್ಸವಕ್ಕೆ ೨
ನಿನ್ನ ನೆರಳಿನಲ್ಲಿಯೇ ೨೪೫
ನಿನ್ನ ನಂಬದಿರೆ ೪೬
ನಿನ್ನ ಪ್ರೇರಣೆಯ ೪೯೭
ನಿನ್ನ ಬರವಿನ ೧೮೧
ನಿನ್ನ ಮಗ್ಗದ ೧೬೦
ನಿನ್ನನರಿವುದೇ ಸ್ವರ್ಗ ೮೫
ನಿನ್ನ ವಿಶ್ವ ಚಿತ್ರವನ್ನು ೩೩
ನಿನ್ನ ಶಕ್ತಿ ಹಿರಿದೋ ೬೦
ನಿನ್ನ ಶರಣರ ೪೯೫
'ನಿನ್ನ ಹಕ್ಕು ಬಿಟ್ಟುಕೊಡು' ೪೭೪
ನಿನ್ನೆ ಮೊನ್ನೆಯವರೆಗೆ ೧೮೮
ನಿನ್ನೊಡನೆ ಮುನ್ನಡೆಯಬಲ್ಲೆ ೪೮೨
ನಿಮಿಷ ನಿಮಿಷವೂ ೨೨೪
ನಿಯಮಗಳಂತೆ ಆಡದ ೧೭೮
ನಿಷ್ಠೆ ಪ್ರಬಲಿಸದೆ ೪೮೯
ನೀತಿಯಲ್ಲಿ ಕಾತ ೧೨೯
ನೀನಿಲ್ಲದ ಮುನ್ನ ೧
ನೀನು ಕರುಣಿಸಿದರೆ ೪೮
ನೀನು ಕೊಡಲಿಚ್ಛಿಸಿದಾಗ ೧೧೧
ನೀನು ಬಡವರ ೩೧೯
ನೀನು ಹರಿ ನೀನು ಹರ: ೮
ನೀನೆನ್ನ ಕರೆಯಿಲಿಲ್ಲವೆನ್ನಲೆ ೫೪
ನೀನೇನೋ ಹಿರಿದಪ್ಪ ೨೬೦
ನೀರಿನಲ್ಲಿ ಈಸುವುದು ೫೧೫
ನೀರಿಲ್ಲದ ಮೋಡ ೨೬೮
ನೀರೆರೆದವನಿಗೂ ೪೭೩
ನುಡಿಸಲು ಬಾರದ ೧೬೪
ನೆಟ್ಟು ಕಡಿದಂತೆ ೧೬೫
ನೆನಪಿನ ನೆಲದಲ್ಲಿ ೯೩
ನೆನೆವವರಿಗೆ ನೀನು ೨೧
ನೆಲದಲ್ಲಿ ಹೋಗದ ೭೫
ನಂಬಲಾರೆ, ನಂಬದಿರಲಾರೆ ೪೫

ಪ

ಪದವೀದಾನ ಸಮಾರಂಭಕ್ಕೆ ೫೧೪
ಪರಿಪೂರ್ಣ ನಾನಾಗಬಲ್ಲೆನೆ? ೨೩೦
ಪರಿವರ್ತನೆ, ಪರಿವರ್ತನೆ ೩೩೯
ಪಾಪಿ ನಡೆದನೆಂದು ೨೦೬
ಪಾರ್ಥೇನಿಯಂ ಪಾಥೇಯವಾಗಬಲ್ಲುದೆ ೨೬೯
ಪುರುಷತ್ವಹೀನನ ಬ್ರಹ್ಮಚರ್ಯ ೪೧೯
ಪುಷ್ಪ ಸುಂದರವೋ ೩೧೨
ಪಂಜರದಲ್ಲಿರುವ ೨೭೭
ಪಂಜರದಲ್ಲಿದ್ದೇ ಹತ್ತೂನಿಟ್ಟಿಗೆ ೨೮೮
ಪ್ರಕಾಶದ ಗಂಡನಿಗೆ ೧೩೦
ಪ್ರಕೃತಿಮಾತ, ಪರಾಶಕ್ತಿ ರೂಪೆ, ೩೦
ಪ್ರಪಂಚದ ಆಹಾರವನ್ನೆಲ್ಲ ೧೧೩
ಪ್ರವೀಣನ ಕೈಯಲ್ಲಿ ೧೨೭
ಪ್ರೀತಿಮಾರ್ಗ, ನೀತಿಮಾರ್ಗ ೪೪೬
ಪ್ರೀತಿಸುವವರನ್ನು ಪಡೆಯುವುದು ೪೩೭
ಪ್ರೀತಿಸುವ ಹೃದಯವೊಂದಿದ್ದರೆ ೨೯೭

ಬ

ಬಣ್ಣ ಒಂದೇ ಇದ್ದರೆ ೩೭೪
ಬಗೆ ನಗರಿಯ ೮೦
ಬದನಿಕೆಯು ಶೋಷಕ ೪೨೧



ಬದುಕಿನ ಬೆಲೆಯನ್ನು ೧೭೦
ಬದುಕಿಸಲಾರದುದು ೫೦೫
ಬದುಕು, ಜೀವಿ, ಬದುಕು! ೨೭೫
ಬದುಕುವಾಸೆಯನಿತೇ ಘನ ೯೫
ಬದುಕುವುದು ಬಹು ಸುಲಭ ೨೬೬
ಬಯಸುವುದು ಜೀವಗುಣ ೨೮೯
ಬರ್ಲಿನ್-ಗೋಡೆಯನ್ನು ೧೯೭
ಬಲೆ ಚೆಲುವಾದುದೆಂದು ೧೨೦
ಬಲೆಯಲ್ಲಿ ಸಿಲುಕಿದ ೯೦
ಬಹುಪಾಲು ಸಭೆ ೩೯೪
ಬಾ ದುಃಖವೆ ೨೫೪
ಬಾನವರನ್ನಾಗಿ ಮಾಡಿ ೩೧೧
ಬಾಲ್ಯದ ನಿರ್ಮಾಲ್ಯ ೪೪೧
ಬಾಳ ಬಂಡಿಗೆ ೧೯೭
ಬಿಡಿಯು ಇಡಿಯ ೨೯೧
ಬಿತ್ತುವಾಗೊಂದು ಹಿಗ್ಗು ೧೬೮
ಬಿದ್ದುದು ತಪ್ಪಲ್ಲ ೩೪೦
ಬಿರುಗಾಳಿ ಬಿಟ್ಟಾಗ ೧೨೨
ಬಿಳಿ ಬಣ್ಣ ಭಯಕಾರಿ ೧೯
ಬಟ್ಟೆಗೇ ಕಪ್ಪು ಕಲೆಯ ೩೭೪
ಬೀಜದ ಬಸಿರಿನ ೪
ಬೀಜವನ್ನೊಡೆದು ೨೫
ಬುದ್ಧಿಜೀವಿಗಳು ನಿರಾಶಾ ನಿಬದ್ಧ ೪೮೯
ಬುದ್ಧಿಯ ಬಳ್ಳಿ ೪೨೬
ಬುದ್ಧಿಯ ಬದರಿಯ ೬೬
ಬೆಟ್ಟಕ್ಕೆ ಬೇಗೆ ೨೮೪
ಬೆಟ್ಟದ ಮುಡಿಯ ಮೇಲೆ ೩೨೦
ಬೆಳಕಿನ ಸಾಸಿರ ಸಾಸಿರ ವರುಷ ೧೨
ಬೆಳೆ ಒಕ್ಕಾಲು ೧೪೯
ಬೆಳೆದಂತೆ ಕೂದಲುಗಳ ೪೦೩
ಬೇರುಳಿಸಿ ಕಡಿದ ೩೦೧
ಬೇಲಿ ಮುಳ್ಳಿನ ೩೬೮
ಬಂದು ಬಾಗಿಲ ೫೧೬

ಭ

ಭಕ್ತಹಿತಾರ್ಥವಾಗಿ ೩೪೫
ಭಕ್ತಾಗ್ರೇಸರಾ, ಕವೀಶ್ವರಾ ೫೦೬
ಭಸ್ಮ ಬಳಿದೊಡಿಲ್ಲ ೨೮೦
'ಭಾರತ-ಕರ್ಣಾಟಕ' ೪೨
ಭಾರತಕ್ಕೆ ಬಹಳಷ್ಟು ೪೪೮
ಭಾರತದ ಭವಿತವ್ಯವನ್ನು ೪೫೧
ಭಾರತವು ಸಂಕ್ಷಿಪ್ತ ಬ್ರಹ್ಮಾಂಡ ೪೦
ಭಾರತೀಯರು ಮನಸ್ಸು ಮಾಡಿದರೆ ೪೬೨
ಭುವಿಯ ಸಪ್ತ ಸೋಜಿಗ ೪೩
ಭೂಮಿ ಬೇಕಾದಷ್ಟು ೩೧೪
ಭ್ರಷ್ಟಾಚಾರವೇ ಶಿಷ್ಟಾಚಾರದ ೪೪೭

ಮ

ಮಗು ಮಗುವಾಗಿಯೇ ೨೨೩
ಮಗು ಮೈ ಮಣ್ಣು ೧೦೯
ಮಣ್ಣಿನ ವಾಸನೆ ೧೨೫
ಮತ್ತವಾರಣ ಕೆಣಕಿದರೆ ೪೨೪
ಮತ್ತೇರಿಸುವ ಮದವೂ ೩೬೭
ಮದ್ದಿನ ಮನೆಯನ್ನು ೩೨೫
ಮಧುವಾತದಲ್ಲಿ ನೀನೇ ೧೩
ಮನದ ಮಗುವನ್ನು ೨೮೨
ಮನದಲಿ ಹುಟ್ಟುವ ೨೭೩

ಮನದ ಸರಸಿಯ ೨೭೪
ಮನುಜನ ಕಣ್ಣಿಗೆ ೩೧೦
ಮನೆ ಕಾಯುವ ನಾಯಿಯನ್ನು ೩೪೬
ಮನೆ ತುಂಬ ಮುಸುರೆ ಚೆಲ್ಲಿ ೩೯೮
ಮನೆಯ ಸಿರಿವಂತಿಕೆ ೩೯೦
ಮರ ಮೇಲಕ್ಕೆ ೨೩೮
ಮರುಹುಟ್ಟನಳಿಪ ಮೋಕ್ಷ ೨೪೮
ಮಹಾನಗರದಲ್ಲಿ ನೋಡಲು ೩೭೩
ಮಹಿಮೆ ಮಹಿಮೆಗೆ ೩೫೭
ಮಾಡುವವರಿಂದ ಕೆಲಸಕ್ಕೆ ೩೮೩
ಮಾತಿನ ಬಸಿರೆ ೪೯೬
ಮಾತುಮಾತಿಗೆ ನಿನ್ನ ೨೬೩
ಮಾತು ಸೋತಾಗ ಮೌನ ೪೧೪
ಮಾನವರ ಹೊಟ್ಟೆ ೩೨೨
ಮಾನವೇತಿಹಾಸದಲ್ಲಿ ೧೫೪

ಮು

ಮುಖಂಡರೆ ಶಿಖಂಡಿಗಳಾದರೆ ೩೫೦
ಮುಗಿದ ಮೊಗ್ಗೆ ೫೬
ಮೂಗು ಚುಚ್ಚಿಸಿಕೊಳ್ಳಲು ೩೦೫
ಮುಟ್ಟಿದರೆ ಮೃತ್ಯುವನೆ ೪೨೩
ಮುತ್ತು ಅರಸಿಯ ಕೊರಳ ೩೨೬
ಮುನಿವವನು ಮುನಿಯಾಗಬಲ್ಲನೇ? ೧೨೩
ಮುನ್ನುಡಿ ಓದಿ ೪೧೮
ಮೂರು ಮೂರು ತಾಸು ೩೩೪
ಮೂರೇ ಮೂರು ೫೧೨
ಮೃಗಜಲದಲ್ಲಿ ಮೀನು ೨೫೬
ಮೇಣದ ಹುಟ್ಟು
೩೩೭

ಮೇಲೆ ಕುಳಿತವರನ್ನು ೪೧೭
ಮೈದಾಸನ ಹಸ್ತದಿಂದ ೨೪೭
ಮೈಯ ರಾಟಿಯ ತಿರುಹಿ ೮೪
ಮೈಲಿಗಲ್ಲು ಮಾರ್ಗದರ್ಶನ ೨೦೦
ಮೋಹದ ದಾಹ ೧೨೬
ಮೌನದ ವೀಣೆಗೆ ೧೬೫
ಮಂತ್ರಿಗಳ ಮನೆಗೆ ೪೫೪
ಮುಂದುವರಿವುದೆಂದರೇನಯ್ಯ? ೪೨೮

ಯ

ಯಾರಿಗೆ ಬೇಕಾಗಿ ೫೮
'ಯಾರು ಬಂದವರು?' ೫೨೩
ಯಾರು ನನ್ನಿಂದ ೫೨
ಯಾರು ನಿನ್ನ ನಾಯಕ ೧೬೩
ಯಾವ ಕಲ್ಲನು ೨೩೭
ಯಾವ ಕಲ್ಲಾದರೂ ೩೩೬
ಯಾವ ವಿಶ್ವಾಸ ೪೬೮
ಯಾವುದರಿಂದ ಬೇಸತ್ತರೂ ೩೭

ರ

ರಸನಿಮಿಷ ವಿಷನಿಮಿಷ ೧೫೧
ರಾಗ-ದ್ವೇಷಗಳ ನಡುವೆ ೧೯೦

ಲ

ಲಾಭದ ಲೋಭಿಗಳಿಂದ ೧೭೩
ಲೇಸೆನಿಸಿಕೊಂಡು ಒಂದು ದಿನ ೫೧೦
ಲೋಕದಲ್ಲಿ ಜ್ಞಾನ ೨೧೨
ಲೋಕ ನನ್ನನ್ನು ೮೩
ಲೋಕಸಭೆಯಿಂದ ೪೫೭

ವ

ವಸ್ತುಗಳ ಸೊಟ್ಟು ಡೊಂಕು ೪೦೫



ವಾರಾಂಗನೆಯ ಕೊರಳ ೧೭೪
ವಿಕೃತಿಗೆ ಕಲೆಯ ಆಕೃತಿಯಿತ್ತರೆ ೨೪೪
ವಿಜಯಗಳಲ್ಲಿ ವಿಜಯ ೩೦೪
ವಿಜ್ಞಾನವನ್ನೇ ಅಧರಾರಣಿ ಮಾಡಿ ೨೧೩
ವಿಜ್ಞಾನಿಯ ಬುದ್ಧಿ ೧೫೭
ವಿಜ್ಞಾನಿಯೆ, ನೀನು ೪೩೧
ವಿದ್ಯೆ ಬಂತು ೧೦೦
ವಿದ್ಯೆಯನ್ನು ಮುಚ್ಚಿಟ್ಟು ೩೩೧
ವಿಭಕ್ತದಲ್ಲಿಯೂ ಅವಿಭಕ್ತವನ್ನು ೨೨೧
ವಿಲಾಯಿತಿಯ ಎಮ್ಮೆಯಾದೊಡೇನು
೨೭೧
ವಿಷಯವ ಬಿತ್ತಿ ೪೭೮
ವೀತರಾಗತೆಯ ಬಾಹುಬಲಿಯ ೪೬೧
ವೃಕ್ಷ ಫಲಭರಿತವಾಗಿದ್ದರೆ ೧೩೪
ವೈದುಷ್ಯ ವಣಿಕ ೧೯೯
ವ್ಯಾಧಿ ಪ್ರಬಲವಿದ್ದಷ್ಟೂ ೧೩೭
ವ್ಯಾಸಂಗಕ್ಕೆ ಸಮಯವಿಲ್ಲ ೨೧೯

ಶ

ಶಬ್ದ ಪಡೆದುದು ಸ್ವಲ್ಪ ೮೬
ಶಾಖೋಪಶಾಖೆಗಳಾಗಿ ಹಬ್ಬಿ ೪೬೪
ಸಂಸ್ಕರಿಸಿದಂತೆ ಬುದ್ಧಿ ೯೭
ಶಿಕ್ಷಣದ ಸಾರ್ವತ್ರೀಕರಣವಾಗಲಿ ೪೬೩
ಶಿಖರಗಳ ಸಾಲುಗಳನ್ನೊಮ್ಮೆ ೧೬೨
ಶೇಷಣ್ಣನವರ ವೀಣಾ ವಿತಾನ ೪೬೭
ಶೈಶವ ಬಾಲ್ಯಗಳ ೪೯೨

ಷ

ಷಡ್ರಸಗಳ ರುಚಿಭೇದ ೭೯

ಸ

ಸತ್ತ ಸಿಂಹಕ್ಕಿಂತ
೩೫೩
ಸತ್ಯಾನ್ವೇಷಣೆಯ ಹಾದಿಯಲ್ಲಿ ೬೭
ಸತ್ಕಾರ್ಯಕ್ಕೆ ಪ್ರೇರಣೆ ೩೯೨
ಸದ್ಯಸ್ತೃಪ್ತಿಯೇ ಗುರಿಯಾದರೆ ೨೨೬
ಸಭೆ, ಸಮಿತಿ, ಸಂಘ ೨೨೦
ಸಮವಸ್ತ್ರಗಳಲ್ಲೊಂದು ಸೊಗಸಿದ್ದರೆ ೫೦೦
ಸಮಯವಿದ್ದಾಗ ಸಾಧನ ೧೩೮
ಸಮಯ ಸಾಧಕರಿಗೆ ೪೦೧
ಸಮುದ್ರವೇ ನೀರಡಿಕೆ ೪೧೫
ಸರಕಾರ ದರೋಡೆಕಾನಾದರೆ ೩೩೨
ಸರಪಳಿಯ ಬಲ ೩೨೩
ಸರ್ವೋದ್ಧಾರದ ವಿಚಾರಗಳ ೩೨೮
ಸವೆದುಹೋದ ನಾಣ್ಯ ೭೪
ಸಹನಶೀಲತೆಗೊಮ್ಮೆ, ಸೃಜನಶೀಲತೆಗೊಮ್ಮೆ
೮೨
ಸಾಯುವವರೆಗೂ ಶಾಸ್ತ್ರ ೨೬೪
ಸಾವಿರ ಸಾವಿರ ಸಿಹಿ ನೀರಿನ ೧೧೪
ಸಾಹಿತ್ಯದಲ್ಲಿ ಶಾಸ್ತ್ರವಿರಬಹುದು ೪೦೪
ಸಿರಿಯ ಸರಿಹಸುಗೆ ೩೦೨
ಸುಖದೊಡನೆ ಸರಸವಾಡುವಾಗಿನ ೪೯೧
ಸುರಿವ ಮಳೆ ೧೯೮
ಸುಳ್ಳಿನಿಂದ ದೊರೆವುದು ೪೦೨
ಸೂರ್ಯ ಬರುವಾಗ ಸದ್ದಿಲ್ಲ ೪೨೫
ಸೃಷ್ಟಿ ಸೌಂದರ್ಯಕ್ಕೆ ೩೫
ಸೆರೆ ಕುಡಿವುದನ್ನು ೪೨೦
ಸೋಲನ್ನೇ ಗೆಲವನ್ನಾಗಿ ೩೭೨
ಸೌರವ್ಯೂಹದಲ್ಲಿ ಗ್ರಹ ೨೯
ಸಂಗ್ರಹಿಸಿದೆ, ಸಂಗ್ರಹಿಸಿದೆ ೩೨೪
ಸಂಶಯಗಳ ಸಂತೆಯಲ್ಲಿ ೧೩೧

ಸಂಶಯದ ಹೊಲದಿ ೧೩೩
ಸಂಶಯ ಸಮುದ್ರದಲ್ಲಿ ೩೭೦
ಸಿಂಗರಿಸಿಕೊಂಡುದೇನೋ ಸರಿ ೫೧೯
ಸಿಂಹಾಸನದ ಮೇಲಿನ ೩೩೫
ಸ್ಥಲದ ತೊಟ್ಟಿಲಲ್ಲಿ ೨೪
ಸ್ಥಲದ ಧಾರಾಪಾತ್ರೆಯಿಂದ ೨೭
ಸ್ಥಿತಪ್ರಜ್ಞನಾಗಲು ಶತಪಥವನ್ನೇನೂ ೮೧
ಸ್ವತಂತ್ರಧೀರ ಸಿದ್ಧೇಶ್ವರಾ ೫
೨೪೩, ೨೮೧, ೩೨೭, ೫೧೭
ಸ್ವಂತ ಚಿಂತನೆಗಳಿಂದ ೪೫೨
ಸ್ಫುರಿಸಿದಾಗ ಲಿಖಿಸಲಾಗದೆ ೫೦೨

ಹ

ಹಕ್ಕಿಯ ಹಾರಾಟ ೨೧೧
ಹಕ್ಕಿಯ ಗೂಡೊಂದು ೪೨೯
ಹಣಕೊಳ್ಳಲಾಗದುದೂ ೧೯೩
ಹಣಕೊಂಡ ಅನರ್ಹ ಕೀರ್ತಿಗಿಂತ ೪೧೬
ಹಣದುಬ್ಬರದ ಅಬ್ಬರದಲ್ಲಿ ೪೫೯
ಹಣ ಹರಟುತ್ತಿರುವಾಗ ೩೮೫
ಹಣ್ಣು ಸಿಹಿಯಾಗಿದ್ದರೆ ೩೮೬
ಹಲವು ಗೆಳೆಯರನ್ನು ೪೧೧
ಹಲವು ಕಸಿಗಳ ಹೊಂದಿ ೧೧೬
ಹಲವು ಮಸಿಗಳ ಹೀರಿ ೧೦೨
ಹಸಿ ಬಿಸಿಯ ಗಣಿಸುವುದೆ ೧೭೬
ಹಸಿರಿಲ್ಲದಲ್ಲಿ ಹಸಿರು ೩೬೨
ಹಸಿವೆಯೆತ್ತ, ಅಶನವೆತ್ತ ೧೭
ಹಸುಗೂಸುಗಳ ನಸು ನಗೆ ೧೧೯
ಹಸುವಿಗೆ ಹತ್ತಿಯ ಕಾಳು
೨೦೭
ಹಳ ರೆಕ್ಕೆ ಕಳಚಿದುವು ೨೦೧
ಹಳೆಮರದ ಚಿಗುರು ೪೨೮
ಹಾಜರಿ ಹಾಕುತ್ತಲೆ ೨೫೧
ಹಾವಿಗೂ ದೇವತ್ವವನಿತ್ತ ೩೬೫
ಹಿಂದಿನ ಹಿರಿಯ ೪೯೦
ಹಿಂದೆ ಪ್ರಾಯದ ಪೆಂಪೆ ೨೧೮
ಹೆಂಡದ ಹರವಿಯನ್ನು ೩೪೫
ಹಿತ್ತಾಳೆ ಕಿಲುಬು ಬಿಡುವುದೆಂದು ೩೧೬
ಹುಟ್ಟಿ ಬೆಳೆದ ಹಳ್ಳಿ ೪೬೯
ಹುಲಿಯ ಚರ್ಮದ ಮೇಲೆ ೩೩೮
ಹೂಗಳ ಹಾಸವನ್ನು ೨೨೫
ಹೂತ ಕಾಫಿಯ ತೋಟ ೩೬
ಹೂವನೂ ಬಿಡದ ೪೭೦
ಹೂವಿಗೆ ಬಣ್ಣವಲ್ಲದೆ ೯
ಹೂವಿನ ಗಂಧ ೪೩೩
ಹೂವಿನಲ್ಲಿ ಮಧುವಾಗುವ ೧೪೪
ಹೂವು ತಮ್ಮೆದೆಯ ೧೫೮
ಹೂ ಹೆತ್ತ ಬಳ್ಳಿಯ ೨೯೪
ಹೃದಯದ ಹೆದ್ದಾರಿಯಲ್ಲಿ ೬೫
ಹೃದಯರಸ ಬತ್ತಿದರೆ ೨೯೬
ಹೆಣವಾದಮೇಲೆ ೧೦೧
ಹೆಣೆದ ಹೂವುಗಳು ೮೯
ಹೆಣ್ಣೆ ನೀನಂ ೪೩೨
ಹೆಪ್ಪಿನ ಮಜ್ಜಿಗೆಗೆ ೧೯೬
ಹೆಸರಿಲ್ಲದ ನೀನು ೭
ಹೊಗಳಿದವರು ಹಲವರೆಂದು ೪೮೫
ಹೊತ್ತಿನ ಹುತ್ತದ ೧೫೯
ಹೊಯ್ದ ಕೈ ೨೦೮





ಹೊರಗಿನ ಕತ್ತಲೆ ೨೧೦
ಹೊರಗು ಪದೇ ಪದೇ ೧೫೫
ಹೊರಲಾಗದ ಕಲ್ಲನಿಳಿಸಿ ೩೪೨
ಹೊರುವವರು ಗಟ್ಟಿಯಿದ್ದರೆ
೩೪೯
ಹೊಸ ಮಾವಿನ
೨೮೩
ಹೊಸರಾಜ್ಯಸ್ಥಾಪಕ
೪೨೭
ಹೊಳೆಗಟ್ಟು ಮುಟ್ಟುವವರೆಗೆ ೩೦೮
ಹೋಳಿಯ ಹಾಡುಗಳಲ್ಲಿ ೩೧೫


## ಹೊಸ ವಚನಗಳ ವಚನಾನುಕ್ರಮಣಿಕೆ


ಅ

ಅಂಬಾರಿಯಲ್ಲಿ ಕುಳಿತವ ೨೭
ಅಗಲಲೆಂದೆ ಕೂಡಿದೆವು ೧೩೦
ಅತ್ತ ಹೂವಿನ ಗೊಂಚಲು ೬೪
ಅಧಿಕಾರಧಾಮ ದೊರೆತ ಮೇಲೆ ೪೯
ಅನ್ಯರನ್ನು ಬಾಧಿಸದ ಬಾಳಿಗೆ ೮೬
ಅನುಭವಿಸಿದ್ದನ್ನೆಲ್ಲ ೭೩
ಅಮಾವಾಸ್ಯೆಯ ಉದರದಲ್ಲಿ ೧೧೧
ಅಮೆರಿಕಾ ಹುಡುಕಿದವನಿಗೇ ೧೦೧
ಅರಿಯುವಾಗಿನ ಆನಂದಕ್ಕಿಂತ ೧೪೨
ಅಳಿಸುವವರು ಹೇರಳ ೧೨೩

ಆ

ಆಕೃತಿಯಲ್ಲಿ ಸೂಕ್ಷ್ಮಾತಿಸೂಕ್ಷ್ಮ ೧೫೭
ಆಕಾಶದ ಅದ್ಭುತಗಳೂ ೯೬
ಆದಿಮಾನವನಿಗೆ ೩೮
ಆಶೆಯನ್ನು ತೊರೆ ೧೨೯
ಆಳದಲ್ಲಿ ಕಡಲನ್ನು ಮೀರಬಲ್ಲೆ ೧೫೩

ಇ

ಇತಿಹಾಸದ ಪುನರಾವೃತ್ತಿ ೬೨
ಇದು ಧರ್ಮಾಧಿಕಾರಿಗಳ ಪರಿಷತ್ತಲ್ಲ ೭೦
ಇದುವರೆಗೆ ನಿನ್ನ ಕರೆಗೆ ೬೯
ಇನ್ನೂ ಬರೆಯುತ್ತಲೇ ಇರುವಿಯಾ? ೪೫
ಇಲ್ಲದ ಚಲುವ ಹುಟ್ಟಿಸಬಲ್ಲುದೆ ೧೧೫

ಈ

ಈಗಲೇ ಹೋಗದಿರು ನಲ್ಲ ೧೪೦
ಈ ತನು ನಿನ್ನದೆಂದಾಕ್ಷಣ ೩೫
ಈ ಮುನ್ನ ಹೋದವರ ಲೆಕ್ಕ ೧೪೪
ಈ ಬೆಳ್ಳಿತೆರೆಯ ಮೇಲೆ ೯೪
ಈ ಹಗಲಿರುಳುಗಳ ೧೩೫

ಉ

ಉಳ್ಳವರ ಇಲ್ಲದವರ ೯೯
ಉಳ್ಳವರ ಸ್ವಾತಂತ್ರ್ಯ ೬೦
ಉಳಿದ ಮೌಲ್ಯಗಳು ಇರಲಿ ೫೩
ಊಟಕ್ಕೆ ಕರೆವ ಮಾತೃಸ್ವರ ೧೩೭

ಎ

ಎಂಜಲು ಎಂಜಲು ಎಂದು ೧೨೮
ಎಲ್ಲ ದ್ರೋಹಗಳಲ್ಲಿ ದೇಶದ್ರೋಹ ೯೮

ಏ

ಏನೊಂದೂ ಸರಿಯಾಗಿ ೧೩೩

ಒ

ಒಂದೆ ಬಳ್ಳಿಯಿಂದ ಉಪವನವಾಗುವುದೆ ೧೨೬
ಒಮ್ಮೊಮ್ಮೆ ಪ್ರಶ್ನೆಯೊಂದಕ್ಕೆ ೯೦
ಒಲ್ಲದ ಗಂಡನ ವಲ್ಲಭೆಯೆಂದು ೧೪೫
ಒಳಗಿನ ಒಳಗೆ ಬೆಳಗೆನ್ನನು ೧೧
ಒಳಗಿನ ಬಾನಿನಲ್ಲಿ ೧೧೬
ಒಳನೋಟ ಒಳನೋಟವೆಂದು ೫೫

ಕ

ಕಡಲು ತನ್ನ ಉಪ್ಪನ್ನು ೮೪
ಕಣ್ಣೀರು ಬರಿಸುವವರೇ ೭೭
ಕತ್ತಲೆ ಮೆತ್ತಗೆ ಬೆಳಕಾಗುವುದನ್ನು ೧೩೮
ಕತ್ತಲೆಯನ್ನು ಓಡಿಸಲು ೧೯
ಕಮಲದಲ್ಲಿ ಮಧುವಾಗಿ ೪೦
ಕರುಣೆಯ ಒಂದು ಕಂಬನಿ ೧೪೬
ಕಲ್ಲು ಕರಗಬಹುದು ೧೫೪
ಕಾಯಕ ಮಾಡದೆ ತಿನ್ನುವವರೂ ೧೦೮
ಕೀವು ತುಂಬಿದ ಹುಣ್ಣು ೫೦
ಕುಂದಣವ ಕೊಂಡವ ೭೯
ಕೂಸುಗಳು ಕಂಡ ಕನಸುಗಳನ್ನು ೫೪
ಕೃಷ್ಣ ಬಲರಾಮರ ೧೧೪

ಗ

ಗೆದ್ದ ಯುದ್ಧಗಳ ಸಂಖ್ಯೆಯಿಂದ ೫೨

ಚ

ಚೆನ್ನಾಗಿ ಬೆಳೆದು ತೆನೆಬಿಟ್ಟಾಗ ೧೪೩

ಜ

ಜೀವನದ ಗೌರವಿಸು ೭೪
ಜ್ಞಾನವನ್ನು ಪ್ರೀತಿಸುತ್ತೇನೆ ೨೦

ತ

ತನು ತನುಗಲ ಅಪ್ಪುಗೆಯ ೧೦
ತನುವಿನ ಒಳಗನ್ನು ಶಿಖರವಾಗಿ ೫೬
ತಾಯಿ ಮಗುವಿನ ಹಾಲಿಗೆ ೬೧
ತೆಂಬೆಲರಾಗಿ ಬಂದು ೭೮

ದ

ದುರ್ಗುಣಗಳ ಉಗ್ರಾಮವಾಗಿದ್ದರು ೪೮
ದುಡಿವ ಅಡುವ ಕೈಗಳಿಗಿಂತ ೬೭
ದುಷ್ಟ ಶಿಕ್ಷಕ ಶಿಷ್ಟ ರಕ್ಷಕರ ೬೩
ದೇಶದಲ್ಲೆಲ್ಲ ನಮ್ಮ ಮೂರ್ತಿಗಳೆ ೧೫೫
ಧ್ವಂಸನಾದ ಆಕಾಶಕಾಯಗಳಿಗೂ ೧೪೮

ನ

ನಕ್ಷತ್ರಗಳ ಈ ಲಕ್ಷ ಲಕ್ಷ ೧೩೨
ನಕ್ಷತ್ರಮಂಡಲವೇ ತೊಂಡಿಲ ಬಾಸಿಗ ೧
ನದಿಗಳ ನಿರ್ಮಲೀಕರಣ ನಡೆದಿದೆ ೧೫೧
ನನ್ನ ತಾಯಿ ಭೂಮಾತೆಯೆ ೧೦೭
ನನ್ನ ದುಃಖವನ್ನು ಸಹಿಸುವುದಿರಲಿ ೪೩
ನನ್ನನ್ನು ಎಚ್ಚರಿಸುವುದು ೩೯
ನನ್ನ ನಾಡಿನ ಶರಣರೆ, ದಾಸರೆ ೪೧
ನನ್ನೆದೆಯ ಛಾಯಾಗ್ರಾಹಕ ಯಂತ್ರ ೧೩೯
ನನ್ನೊಡನೆ ನಾನು ದಶಕಗಳನ್ನೇ ೩೩





ನಾನಾರೆಂದು ನನಗೆ ನಾನೇ ೯೩
ನಾನು ನಿನ್ನ ಮಮತೆಯ ಬಾಳ ೮೨
ನಾನು ಮೊಟ್ಟಮೊದಲು ನೋಡಿದುದು ೧೫೨
ನಿಜವಾದ ಮುತ್ತು ೧೦೨
ನಿನಗೆ ನಾಮ ರೂಪಗಳು ೭೫
ನಿನ್ನ ಅಂತರಂಗದಲ್ಲಿಯೂ ೧೦೪
ನಿನ್ನ ಅಪ್ರೀತಿಯ ತಾಳಿಕೊಳ್ಳಬಲ್ಲೆ ೧೪
ನಿನ್ನ ನೆನಪಿನ ನಾವೆ ೧೫
ನಿನ್ನ ವಚನಗಳನ್ನು ಓದುವಾಗ ೧೦೦
ನಿನ್ನ ವಾಯುಮಂಡಲದಲ್ಲಿ ೨೬
ನಿಲುಗಡೆಯಿಲ್ಲದ  ಸಂಗತಗೊಳ್ಳದ ೧೨೨
ನೀನೆ ಬಂದೆಯೆಂದು ೧೫೦
ನೆನಪುಗಳು ಕಾಡುತ್ತಿವೆ ನಲ್ಲ ೭

ಪ

ಪಶು ಪಕ್ಷಿಗಳೆ ೮೩
ಪಾಪದ ದೀಪಕ್ಕೆ ೩೪
ಪ್ರಜಾತಂತ್ರ ತನ್ನ ವಿಶ್ವಸನೀಯತೆಯನ್ನು ೫೭
ಪ್ರತಿಬಿಂಬ ಹುಸಿಯೆಂದು ೧೫೮
ಪ್ರಶ್ನಪತ್ರಿಕೆಯನ್ನು ಸಿದ್ಧಪಡಿಸುವಲ್ಲಿಯೇ ೨೪
ಪ್ರೀತಿಯ ಸೋಂಕಿಗೂ ಕರಗದೆದೆಯೇ ೧೩

ಬ

ಬಡವನೆಂದು ಬೇಯುತ್ತಿಹೆಯಾ? ೧೧೭
ಬದುಕಿಗೆ ಬದಲಿಯಿಲ್ಲ ೧೩೪
ಬರಲಿಲ್ಲ ಬರಲಿಲ್ಲವೆಂದು ೬
ಬಾನಿನಲ್ಲಿ ಮೂಡುವ ಚಿತ್ರಗಳಿಗೆ ೨
ಬಾಲರವಿಯ ಬಂಗಾರ ಕಿರಣಗಳು ೮೦
ಬಿದಿರ ಮೆಳೆಗಳನ್ನು ಅಳಿದು ೧೨೪
ಬಿಸಿಲುಗುದುರೆಗಳಲ್ಲ ಬಯಕೆಗಳು ೧೬
ಬೀಡಿನಲ್ಲಿ ತೊಟ್ಟಿಲ ಕಟ್ಟುವರೆಂದು ೧೨೦
ಬುದ್ಧಪೂರ್ಣಿಮೆಯ ದಿನ ೩೦
ಬುದ್ಧಿಯ ಅಂಗಳದಲ್ಲಿ ದಿನದಿನವೂ ೯
ಬುಲೆಟ್ ರಾಕೆಟ್ಟುಗಳು ೧೧೦
ಬೆಳಗಾಗುತ್ತಲೆ ಜಗವಿದು ಚಿತ್ರಶಾಲೆ ೮
ಬೇಡುವುದು ಬೆಳಕನ್ನು ೧೧೨
ಬೇಸಿಗೆಕಾಲ ಬಂದಿತು ೫

ಮ

ಮಕ್ಕಳ ಪ್ರೀತಿಯ ಪರೀಕ್ಷೆ ೨೩
ಮಗನಿಗೆ ಧೈರ್ಯ ಬರಲೆಂದು ೧೩೬
ಮಗಳ ಚೆಲುವಿಕೆಯನ್ನು ೧೮
ಮನಕ್ಕೆ ದೂರಾದವರು ೩೨
ಮನುಜ ಮಾನವನಾಗದಿರೆ ೨೧
ಮಲ್ಲಿಗೆಯ ನಲ್ನುಸಿರಿಗೂ ೨೨
ಮಹಾವೀರರ ಅಹಿಂಸೆ ೧೫೬
ಮಳೆಗಾಲವೂ ಮಿಲನವಿಲ್ಲದೆಯೆ ೩
ಮಾಡದಲ್ಲಿ ಮಿಣುಕಿ ಮಿಣುಕಿ ೪
ಮಿತ್ಯವ್ಯಯವನ್ನು ಕಡೆಗಣಿಸಿ ೬೮
ಮೂರ್ತೀಕರಣವೊಂದು ೮೯

ಯ

ಯಾರನ್ನೂ ಪ್ರೀತಿಸದವನೂ ೯೫
ಯಾರಾದರೂ ಕೊರಕಲು ೮೫
ಯಾರೋ ಸೋಲುವರೆಂದೇ ೧೪೧
ಯಾವುದಕ್ಕೆ ಮೇರೆಯಿದ್ದರೂ ೧೪೯

ಯಾವುದರಲ್ಲಿಯೂ ವಿಶ್ವಾಸವಿಲ್ಲದವನ ೯೭
ಯಾವುದರಲ್ಲಿಯೂ ವಿಶ್ವಾಸವಿಲ್ಲದವನ ೧೦೯
'ಯುರೇಕಾ ಯುರೇಕಾ' ಎಂದು ೧೦೬

ರ

ರಕ್ತ ಕೆಂಪಾಗಿದ್ದೂ ಕಪ್ಪು ೨೮
ರೆಪ್ಪೆ ಭಾರವಾಗಲು ನಿದ್ದೆ ೪೨

ವ

ವಿಚಾರ ಜಡ್ಡುಗಟ್ಟಿ ೭೬
ವಿಜ್ಞಾನಕ್ಕೆ ಶಾಖೆಗಳು ೧೦೩
ವಿಶ್ವವಲ್ಲಕಿಯ ಸ್ವರ ನಾನು ೧೧೮
ವೃತ್ತಿಯಂತೆ ವಿತ್ತ ೩೭
ವ್ಯರ್ಥವಾಯಿತು ಜೀವನ ೨೯
ವ್ಯಭಿಚಾರಗಳಲ್ಲಿ ಬೌದ್ಧಿಕ ವ್ಯಭಿಚಾರ ೯೧
ವೈರ ಸಾಧಿಸಲು ಬೇಕು ಸೇನೆ ೫೮

ಶ

ಶೈಶವ ಮಾಯವಾಯಿತೆಂದು ೫೯

ಸ

ಸಮೀಪದ ನೆನಪುಗಳಿಗಿಂತ ೧೦೫
ಸಾವಿರ ರೆಕ್ಕೆಗಳ ೧೭
ಸಾವಿರ ಸಾವಿರ ವಿಚಾರ ೧೪೭
ಸುಖದ ಸಾಧನಗಳು ಹೆಚ್ಚಿದಂತೆ ೧೩೧
ಸುವರ್ಣವೃಷ್ಟಿಯ ಕತೆ ೯೨
ಸುಲಭವಾಗಿ ಬದುಕಲು ೩೧
ಸುಳಿಗಾಳಿಯ ಹಾಳೆಯಲ್ಲಿ ೩೬
ಸ್ವತಂತ್ರಧೀರ ಸಿದ್ಧೇಶ್ವರಾ ೬೬
ಸ್ವಾರ್ಥವನ್ನು ಸಮರ್ಥಿಸುವ ೭೨
ಸೊಬಗೆಲ್ಲಿಯೊ ೨೫

ಹ

ಹಕ್ಕಿ ತೊರೆದ ಗೂಡಿನಂತಾಗಿಹೆನಯ್ಯ ೪೬
ಹಗಲು ಧಗೆಯಾದರೂ ಸರಿಯೆ ೧೧೯
ಹಣಕ್ಕೆ ಮಣಿಯೆನಯ್ಯ ೪೪
ಹಸಿವೆ ಜೋರಾಗಿದ್ದರೆ ೬೫
ಹಸುಗೂಸುಗಳ ತೊದಲ್ನುಡಿಯ ೮೮
ಹಾಲು ಹೆಪ್ಪುಗಟ್ಟಿದಾಗ ೫೧
ಹೂವಿನ ಕೋಮಲತೆ ೧೧೩
ಹೂವು ಚೆಲ್ಲಿದ ಹಾದಿಯಲ್ಲಿಯೇ ೭೧
ಹೂವು ಯಾವ ಬಣ್ಣದ್ದಾದರೇನು ೪೭
ಹೃದಯ ಕೊಟ್ಟವನೂ ನೀನೇ ೧೨೧
ಹೆಣ್ಣಿನ ಹೆಣ ಕೊಯ್ದು ೮೭
ಹೊರಗಿನ ಮೃಗಜಲಗಳ ೧೨೫
ಹೊರಗೆ ಸಾವಿರ ಸಾವಿರ ೧೨೭
ಹೊಲಬಿಗಾಗಿ ಹಲುಬುತ್ತಲೇ ಇದ್ದೇನೆ ೧೨
ಹೊಲಸು ಸ್ವೀಕರಿಸುವ ಕಕ್ಕಸ ೮೧

## ಟಿಪ್ಪಣಿಗಳು

ವಚನ ೮೧ — ಫೀನಿಕ್ಸ್ ಐದಾರು ಶತಮಾನಗಳ ಕಾಲ ಅರೇಬಿಯಾದ ಮರಳುಗಾಡಿನಲ್ಲಿ ಜೀವಿಸಿದ್ದು ಸುಟ್ಟು ಹೋಗಿ ತನ್ನ ಬೂದಿಯಿಂದಲೇ ಮತ್ತೆ ಹುಟ್ಟುತ್ತಿದ್ದಿತೆಂದು ಹೇಳುವ ಏಕಮಾತ್ರ ಪಕ್ಷಿ.

ವಚನ ೧೧೯ — ಓರಫಿಯಸ್ ಗ್ರೀಕ್ ಪುರಾಣದ ಕವಿಗಾಯಕ. ಅವನು 'ಲಯರ್' ಎಂಬ ತಂತ್ರೀವಾದ್ಯದ ವಾದನದಿಂದ ಮೃಗಗಳು ಪರವಶಗೊಳ್ಳುವಂತೆಯೂ, ವೃಕ್ಷಗಳೂ ಶಿಲೆಗಳೂ ಚಲಿಸುವಂತೆಯೂ ಮಾಡುತ್ತಿದ್ದನಂತೆ.

ವಚನ ೨೧೩ — ಸಂಸ್ಕೃತ ಅವತರಣಿಕೆಯ ಅರ್ಥ "ಅಗ್ನಿಯೇ, ಎಲ್ಲವನ್ನೂ ಬಲ್ಲ ನೀನು ನಮ್ಮನ್ನು ಒಳ್ಳೆಯ ದಾರಿಯಿಂದ ಸಿದ್ಧಿಗೆ ಮುಟ್ಟಿಸು; ಅನಿಷ್ಟವನ್ನೂ ಅಸಹ್ಯವನ್ನೂ ನಮ್ಮಿಂದ ದೂರವಿಡು; ನಿನ್ನನ್ನು ಬಹುವಾಗಿ ಮೆಚ್ಚಿ ಸ್ತುತಿಸುವೆವು".

ವಚನ ೨೭೯ — ಫಾರಸೀ ದ್ವಿಪದಿಯ ಅರ್ಥ "ಬುದ್ಧಿ, ಉಪಾಯ, ಜ್ಞಾನಗಳು ನಿನ್ನ ದಾಸರಾಗಿರುವಾಗ ನೀನೇಕೆ ನಿನ್ನನ್ನು ಇಷ್ಟು ಅಗ್ಗವಾಗಿ ಮಾರಿಕೊಳ್ಳುವೆ?"

ವಚನ ೨೮೧ — ಪಾಪಿಕೊಂಡ ಭದ್ರಾಚಲಂ ದಾಟಿದ ಮೇಲೆ ಗೋದಾವರೀ ನದಿಯಲ್ಲಿ ಗೋಚರಿಸುವ ಭೀಕರ ಸ್ಥಳ, ಇಲ್ಲಿ ಗೋದಾವರಿಯು ಒಮ್ಮೆಗೆ ಬಲಕ್ಕೆ ಹೊರಳುವುದರಿಂದ ಇಲ್ಲಿ ಅನೇಕ ನೌಕೆಗಳು ಎದುರು ಬಂಡೆಗೆ ಅಪ್ಪಳಿಸಿ ಅಳಿದ ಕಾರಣ ಇದಕ್ಕೆ ಪಾಪಿಕೊಂಡವೆಂಬ ಹೆಸರು ಬಂದಿದೆ.

ವಚನ " — ಪ್ಯಾಂಡೋರಳ ಪೆಟ್ಟಿಗೆ ಜ್ಯೂಪಿಟರನು ಪ್ಯಾಂಡೋರಾಳಿಗೆ ಬಹುಮಾನವಾಗಿ ಕೊಟ್ಟ ಪೆಟ್ಟಿಗೆ. ಅದರಲ್ಲಿ ಅನಿಷ್ಟಗಳೆಲ್ಲ ಇದ್ದುವೆಂದೂ, ಅವಳ ಗಂಡ ಅದನ್ನು ತೆರೆಯಲು ಅವೆಲ್ಲ ಹೊರಬಿದ್ದು ಪ್ರಪಂಚದಲ್ಲೆಲ್ಲ ಹರಡಿದುವೆಂದೂ ಕಥೆ.

ವಚನ ೩೨೪ — ತುಲಸೀದಾಸರ ಈ ಹಿಂದೀ ಚೌಪದಿಯ ಅರ್ಥ "ನೌಕೆಯಲ್ಲಿ ಏರುತ್ತಿದೆ ನೀರು; ಮನೆಯಲ್ಲಿ ಹೆಚ್ಚುತಿದೆ ಸಿರಿ. ಎರಡೂ ಕೈಗಳಿಂದ ಇವುಗಳನ್ನು ಹೊರಕ್ಕೆ ಉಗ್ಗುವುದೇ ಜಾಣ ಕೆಲಸ."

ವಚನ ೪೦೧ ಹ್ಯಾನಿಬಾಲ ಕಾರ್ಥೋಜಿಯಾದ ಕ್ರೂರ ದಂಡನಾಯಕ.

ವಚನ ೪೨೦ ಸಂಸ್ಕೃತ ಶ್ಲೋಕದ ಅರ್ಥ "ಹೃದಯದ ಹುಲ್ಲಿನ ಕುಟೀರದಲ್ಲಿ ಕಾಮ ಅಗ್ನಿ ಕಿಡಿಗೆದರಿತೆಂದರೆ ಪಂಡಿತರಾದವರಿಗೂ ಉಚಿತಾನುಚಿತ ವಿವೇಕ ಇಲ್ಲವಾಗುತ್ತದೆ."

ವಚನ ೪೬೪ ಬಿಟ್ಟುಹೋದ ಭಾಗ 'ನೇದಮಮೂಲಂ; ತಸ್ಯಕ್ವಮೂಲ?' "ಇದಕ್ಕೆ ಬೇರಿಲ್ಲದಿರದು. ಯಾವುದಿದರ ಬೇರು?"

ವಚನ ೪೭೦ ಮೋರೋಪಂತನ ಮರಾಠೀ ಚೌಪದಿಯ ಅರ್ಥ "ಮಹಾಪುರುಷರು ಯಾವುದನ್ನೂ ನಿಷ್ಪ್ರಯೋಜಕವೆಂದು ಎಸೆಯದೆ ಎಲ್ಲ ವಸ್ತುಗಳನ್ನೂ ತಮ್ಮ ಬಳಿ ಇರಿಸಿಕೊಳ್ಳುತ್ತಾರೆ."

ವಚನ ೪೭೨ ತಮಿಳು ತಿರುಕ್ಕುರುಳಿನ ದ್ವಿಪದಿಯ ಅರ್ಥ "ಒಂದು ಮೈಯಲಿ ಆಮೆಯಂತೆ ಐದನಡಗಿಸಲಾಪರೆಧಿ ಏಳು ಮೈಯಲೂ ಕಾಪು ಕೊಡುವುದು ಅಡಕ ತಾನ 'ದು ತಪ್ಪದೆಧ್ಥ ಅನುವಾದ : ಎಲ್. ಗುಂಡಪ್ಪ.

ವಚನ ೪೮೦ ಮನಸೋಲ (Mansoul)ನ ಮನೆ ಆ house divided against itself.

ವಚನ ೪೯೨ ಇಕಾರಸ ಪ್ರಾಚೀನ ಕಥೆಯೊಂದರಲ್ಲಿ ಬರುವ ವ್ಯಕ್ತಿ. ಇವನು ಹಾರಲೆಂದು ರೆಕ್ಕೆಗಳನ್ನು ನಿರ್ಮಿಸಿಕೊಂಡನಂತೆ.

ವಚನ ೪೯೪ ಫ್ರೆಂಚ್ ಪದ್ಯದ ಅರ್ಥ 'ಓ ನನ್ನ ಪ್ರಿಯ ಪ್ರಭುವೆ, ನಿನ್ನ ನಲ್ಮೆಯ ಉಪಕರಣ ವಾಗುವುದನ್ನು ನನಗೆ ಕಲಿಸು !'

## ಡಾ. ಸಿದ್ಧಯ್ಯ ಪುರಾಣಿಕರ ಜೀವನ ವಿವರ

| | |
|---|---|
| ೧೮-೬-೧೯೧೮ | ಜನನ, ರಾಯಚೂರು ಜಿಲ್ಲೆಯ ಯಲಬುರಗಿ ತಾಲ್ಲೂಕಿನ ದ್ಯಾಂಪುರದಲ್ಲಿ. ತಂದೆ ಕಲ್ಲಿನಾಥಶಾಸ್ತ್ರಿಯವರು, ತಾಯಿ ದಾನಮ್ಮನವರು. |
| ೧೯೩೨ | 'ಬೆಳಗು' ಕವನರಚನೆ |
| ೧೯೩೭ | ಹರ್ಡೇಕರ ಮಂಜಪ್ಪನವರೊಂದಿಗೆ ಆಲಮಟ್ಟಿಯಲ್ಲಿ ವಾಸ |
| ೧೯೪೩ | ತಹಸಿಲ್ದಾರ ತರಬೇತಿ, ನಾಂದೇಡ, ಹೈದರಾಬಾದ |
| ೫-೧೨-೧೯೪೩ | ವಿವಾಹ, ಗಿರಿಜಾದೇವಿಯವರೊಡನೆ |
| ೨-೮-೧೯೪೪ | ಅಸಿಸ್ಟೆಂಟ್ ಕಲೆಕ್ಟರ್, ನಾಂದೇಡ |
| ೨೨-೮-೧೯೪೫ | ಅಸಿಸ್ಟೆಂಟ್ ಕಲೆಕ್ಟರ್, ಲ್ಯಾಂಡ್ ರಿಕಾರ್ಡ್ಸ್ ವಿಭಾಗ ಗುಲ್ಬರ್ಗ |
| ೧೪-೮-೧೯೪೮ | ಅಸಿಸ್ಟೆಂಟ್ ಕಮೀಷನರ್, (ಜಾಗೀರಾತ್) |
| ೨೫-೯-೧೯೫೧ | ಅಸಿಸ್ಟೆಂಟ್ ರೆವಿನ್ಯೂ ಸೆಕ್ರೆಟರಿ, ಹೈದರಾಬಾದ್ ಸಂಸ್ಥಾನ |
| ೭-೨-೧೯೫೨ | ಸ್ಥಾನಿಕ ಸ್ವರಾಜ್ಯ ಆಡಳಿತ ಸಚಿವರ ಕಾರ್ಯದರ್ಶಿ |
| ೮-೧-೧೯೫೩ | ಕೃಷಿ ಯೋಜನೆ ಹಾಗೂ ಪೂರೈಕೆ ಇಲಾಖೆಯ ಸಚಿವರ ಕಾರ್ಯದರ್ಶಿ |
| ೯-೧೯೫೫ | ಡೆಪ್ಯೂಟಿ ಕಲೆಕ್ಟರ್, ತಾಂಡೂರು |
| ೫-೬-೧೯೫೭ | ಡೆಪ್ಯೂಟಿ ಕಲೆಕ್ಟರ್, ಯಾದಗಿರಿ |
| ೨೯-೩-೧೯೫೮ | ಭಾರತೀಯ ನಾಗರಿಕ ಸೇವೆ (ಐ.ಎ.ಎಸ್) |
| ೩೦-೩-೧೯೬೦ | ವಿದ್ಯಾ ಇಲಾಖೆಯ ಡೆಪ್ಯೂಟಿ ಸೆಕ್ರೆಟರಿ |
| ೬-೭-೧೯೬೨ | ವಾರ್ತಾ ಮತ್ತು ಪ್ರವಾಸೋದ್ಯಮ ಇಲಾಖೆ ನಿರ್ದೇಶಕರು |

| | |
|---|---|
| ೧೮-೨-೧೯೬೪ | ಅರ್ಥಶಾಖೆಯಲ್ಲಿ ಡೆಪ್ಯೂಟಿ ಸೆಕ್ರೆಟರಿ, ಚಿನ್ನ ನಿಯಂತ್ರಣಾಧಿಕಾರಿಗಳು |
| ೩-೭-೧೯೬೫ | ಡೆಪ್ಯೂಟಿ ಕಮೀಷನರ್, ಮಡಿಕೇರಿ |
| ೫-೫-೧೯೬೭ | ಸಾರಿಗೆ ಕಮೀಷನರ್, ಬೆಂಗಳೂರು |
| ೨೮-೯-೧೯೭೦ | ಡೆಪ್ಯೂಟಿ ಕಮೀಷನರ್, ಬೆಳಗಾವಿ |
| ೧-೧೨-೧೯೭೨ | ಲೇಬರ್ ಕಮೀಷನರ್, ಬೆಂಗಳೂರು |
| ೧೯೭೬ | ಕರ್ನಾಟಕ ವಿಶ್ವವಿದ್ಯಾಲಯದ ಗೌರವ ಡಾಕ್ಟರೇಟ್ ಪದವಿ |
| ೩೦-೬-೧೯೭೬ | ನಿವೃತ್ತಿ ಹಾಗೂ ವಿಶ್ರಾಂತ ಜೀವನ |
| ೧೯೭೮ | 'ವಚನೋದ್ಯಾನ'ಕ್ಕೆ ರಾಜ್ಯ ಸಾಹಿತ್ಯ ಅಕಾಡೆಮಿಯ ಅತ್ಯುತ್ತಮ ಪುಸ್ತಕ ಪುರಸ್ಕಾರ |
| ೧೯೮೦ | ಭಿಲ್ವಾರ ಪ್ರಶಸ್ತಿ (ಭಾರತೀಯ ಭಾಷಾ ಪರಿಷತ್ತು, ಕಲ್ಕತ್ತಾ) 'ವಚನೋದ್ಯಾನ' ಕೃತಿಗೆ |
| ೧೯೮೧ | ಮಾಳವಾಡ ಪ್ರಶಸ್ತಿ |
| ೧೯೮೧ | ರಾಜ್ಯಮಟ್ಟದ ಅಭಿನಂದನ ಸಮಿತಿಯ ಸತ್ಕಾರ, ಅಭಿನಂದನಗ್ರಂಥ, ನಿಧಿ ಸಮರ್ಪಣೆ |
| ೧೯೮೨ | ಕನ್ನಡ ರಾಜ್ಯೋತ್ಸವ ಪ್ರಶಸ್ತಿ |
| ೧೯೮೩ | 'ವಚನ ನಂದನ' ಪ್ರಕಟಣೆ |
| ೧೯೮೫ | ದ್ವಿತೀಯ ಮಕ್ಕಳ ಸಾಹಿತ್ಯ ಸಮ್ಮೇಳನ (ಧಾರವಾಡ)ದ ಅಧ್ಯಕ್ಷರು |
| ೧೯೮೭ | ಗುಲ್ಬರ್ಗಾದಲ್ಲಿ ನಡೆದ ಕನ್ನಡ ಸಾಹಿತ್ಯ ಪರಿಷತ್ತಿನ ೫೮ನೆಯ ಅಖಿಲ ಭಾರತ, ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರು |
| ೧೯೯೪ | 'ವಚನಬ್ರಹ್ಮ' ಬಿರುದು-ಕಲಾಜ್ಯೋತಿ ಸ್ನೇಹಿತರ ಸಂಘ ಹಾಗೂ ಸರ್ವಜ್ಞ ಕಲಾ ನಿಕೇತನ, ಬೆಂಗಳೂರು |
| ೫-೯-೧೯೯೪ | ಮರಣ. |

## ಡಾ. ಸಿದ್ಧಯ್ಯ ಪುರಾಣಿಕರ ಸಾಹಿತ್ಯಸೂಚಿ

ಕವನ ಸಂಕಲನಗಳು:

| | | |
|---|---|---|
| ೧. ಜಲಪಾತ | ಸಂಗಡಿಗರ ಸಮಿತಿ, ರಾಯಚೂರು | ೧೯೫೩, ೬೪ |
| ೨. ಕರುಣಾಶ್ರಾವಣ | ಸಹಜೀವನ ಪ್ರಕಾಶನ, ಕಾಚೀಗೂಡಾ ಹೈದರಾಬಾದ್ ದಕ್ಷಿಣ | ೧೯೫೫ |
| | ಜನಪದ ಸಾಹಿತ್ಯ ಅಕಾಡೆಮಿ, ಮೈಸೂರು-೫ | ೧೯೬೭ |
| ೩. ಮಾನಸ ಸರೋವರ | ಶಾರದಾ ಪ್ರಕಟನಾಲಯ, ಬೆಂಗಳೂರು | ೧೯೫೯ |
| ೪. ಕಲ್ಲೋಲ ಮಾಲೆ | ತಾರಾ ಗ್ರಂಥ ಪ್ರಕಾಶನ, ಧಾರವಾಡ | ೧೯೬೮ |
| ೫. ಮೊದಲು ಮಾನವನಾಗು | ತಾರಾಗ್ರಂಥ ಪ್ರಕಾಶನ, ಧಾರವಾಡ | ೧೯೬೯ |
| ೬. ಚರಗ | ಶ್ರೀಗಿರಿ ಪ್ರಕಾಶನ, ಬೆಂಗಳೂರು | ೧೯೮೭ |
| ೭. ಹಾಲ್ದೆನೆ | ಅನುಪಮ ಪ್ರಕಾಶನ, ಅಥಣಿ | ೧೯೯೦ |
| ೮. ಮರುಳಸಿದ್ಧನ ಕಂತೆ | ಶ್ರೀಗಿರಿ ಪ್ರಕಾಶನ, ಬೆಂಗಳೂರು | ೧೯೯೧ |
| ೯. ಸಮಗ್ರ ಕಾವ್ಯ | ಶ್ರೀಗಿರಿ ಪ್ರಕಾಶನ, ಬೆಂಗಳೂರು | ೨೦೦೮ |

ವಚನ ಸಂಗ್ರಹಗಳು:

| | | |
|---|---|---|
| ೧. ವಚನೋದ್ಯಾನ | ಶ್ರೀ ಗಿರಿ ಪ್ರಕಾಶನ, ಬೆಂಗಳೂರು | ೧೯೭೭, ೨೦೦೦ |
| ೨. ವಚನ ನಂದನ | ಶ್ರೀ ಗಿರಿ ಪ್ರಕಾಶನ, ಬೆಂಗಳೂರು | ೧೯೮೩, ೨೦೦೦ |
| ೩. ವಚನಾರಾಮ | ಶ್ರೀ ಅನ್ನದಾನ ವಿಜಯ ವಿದ್ಯಾ ಪ್ರಸಾರಕ | ೧೯೯೨ |

ಸಮಿತಿ, ನರೇಗಲ್ಲ

೪. ಸಮಗ್ರ ವಚನಗಳು ಶ್ರೀಗಿರಿ ಪ್ರಕಾಶನ, ಬೆಂಗಳೂರು
೨೦೦೯

ನಾಟಕಗಳು:

೧. ಆತ್ಮಾರ್ಪಣ ವೀರಶೈವ ತರುಣ ಸಂಘ ೧೯೪೨
ಹೈದರಾಬಾದು

೨. ರಜತ ರೇಖೆ ಶ್ರೀ ಎಂ.ಬಿ. ತುರಮರಿ ಕಾರ್ಯದರ್ಶಿ, ೧೯೬೨,
ಕರ್ನಾಟಕ ಸಹಕಾರಿ ಸಾಹಿತ್ಯ ಸಂಘ ಲಿಮಿಟೆಡ್, ೬೫
ಧಾರವಾಡ

೩. ಭಾರತ ವೀರ ನರೇಶ್ ಅಂಡ್ ಕಂಪನಿ, ಮೌಂಟ್ ೧೯೬೩,
ಜಾಯ್ ರಸ್ತೆ, ಬೆಂಗಳೂರು-೧೯ ೬೪,೬೭

೪. ಭಗ್ನ ನೂಪುರ ಕರ್ನಾಟಕ ಟ್ರೇಡಿಂಗ್ ಏಜನ್ಸೀಸ್, ೧೯೮೪
ಬನಶಂಕರಿ ಎರಡನೇ ಹಂತ, ಬೆಂಗಳೂರು-೭೦

೫. ಸಮಗ್ರ ನಾಟಕಗಳು ಶ್ರೀ ಗಿರಿ ಪ್ರಕಾಶನ, ಬೆಂಗಳೂರು, ೨೦೧೦

ಕಥಾ ಸಂಕಲನಗಳು:

೧. ಕಥಾಮಂಜರಿ ಸತ್ಯಾಶ್ರಯ ಪ್ರಕಾಶನ ಮಂದಿರ,
೧೯೫೧
ಹೈದ್ರಾಬಾದ್

೨. ತುಷಾರ ಹಾರ ಶ್ರೀ ಗಿರಿ ಪ್ರಕಾಶನ, ಬೆಂಗಳೂರು, ೧೯೮೭

ಕಾದಂಬರಿ:

೧. ತ್ರಿಭುವನ ಮಲ್ಲ ಗುರು ಕುಮಾರ ಪ್ರಕಾಶನ, ೨೨೨೪, ೧೯೭೪
ಬಸವೇಶ್ವರ ನಾಲ್ಕನೇ ಅಡ್ಡರಸ್ತೆ, ೮೧,೮೫
ಮೈಸೂರು-೫೭೦೦೦೪

ಮಕ್ಕಳ ಸಾಹಿತ್ಯ:

೧. ತುಪ್ಪ ರೊಟ್ಟಿ ಕರ್ನಾಟಕ ಸಹಕಾರಿ ಪ್ರಕಾಶನ ಮಂದಿರ



ಗೇ ಗೇಗೇ ಚಾಮರಾಜಪೇಟೆ, ಬೆಂಗಳೂರು ೧೯೬೪, ೭೩

೨. ಗಿಲ್ ಗಿಲ್ ಗಿಲಗಚ್ಚಿ ಭಾರತೀ ಸಾಹಿತ್ಯ ಭಂಡಾರ, ೧೯೭೮
ವಿಜಾಪೂರ

೩. ತಿರುಗೆಲೆ ತಿರುಗೆಲೆ ಭಾರತೀ ಸಾಹಿತ್ಯ ಭಂಡಾರ, ವಿಜಾಪೂರ ೧೯೮೧
ತಿರುಗುಯ್ಯಾಲೆ ೮೯

೪. ಬಣ್ಣ ಬಣ್ಣದ ಓಕುಳಿ ನಿರ್ಮಲ ಪ್ರಕಾಶನ, ರಾಮಲಕ್ಷ್ಮಣ ನಿಲಯ,
೧೯೮೭, ಕೆ.ಆರ್. ಬಡಾವಣೆ, ತಿಪಟೂರು
೯೪, ೯೧

೫. ಭಾರತವೆಲ್ಲಕೆ ಶ್ರೀ ಗಿರಿ ಪ್ರಕಾಶನ, ಬೆಂಗಳೂರು, ೧೯೯೧
ಬಾವುಟವೊಂದೇ ಬೆಂಗಳೂರು

ಮಕ್ಕಳ ನಾಟಕ:

೧. ನ್ಯಾಯ ನಿರ್ಣಯ ಭಾರತೀ ಸಾಹಿತ್ಯ ಭಂಡಾರ, ೧೯೮೬
ವಿಜಾಪೂರ

ಮಕ್ಕಳ ಪ್ರವಾಸ ಸಾಹಿತ್ಯ

೧. ಮಕ್ಕಳ ಲೋಕ ಸಂಚಾರ ಭಾರತೀ ಸಾಹಿತ್ಯ ಭಂಡಾರ ೧೯೮೯
ವಿಜಾಪುರ

ಜೀವನ ಚರಿತ್ರೆಗಳು:

೧. ಶರಣ ಚರಿತಾಮೃತ ವಯಸ್ಕರ ಶಿಕ್ಷಣ ಸಮಿತಿ, ಮೈಸೂರು ೧೯೬೪,
೭೭, ೯೨
ಕನ್ನಡ ಮತ್ತು ಸಂಸ್ಕೃತಿ ಇಲಾಖೆ
೨೦೧೦

೨. ಸಿದ್ಧರಾಮ ಭಾರತ-ಭಾರತಿ ಪುಸ್ತಕ ಸಂಪದ, ೧೯೭೪
ಬೆಂಗಳೂರು-೧೯

೩. ಬಸವಣ್ಣನವರ ಜೀವನ ಕರ್ನಾಟಕ ವಿಶ್ವವಿದ್ಯಾಲಯ, ೧೯೭೭

| | | |
|---|---|---|
| ಹಾಗೂ ಸಂದೇಶ | ಧಾರವಾಡ | |
| ೪. ನಜೀರ್ ಅಕಬರಾಬಾದಿ ೧೯೭೮ | ಸಾಹಿತ್ಯ ಅಕಾಡೆಮಿ, ನವದೆಹಲಿ | |
| ೫. ಹರ್ಡೇಕರ ಮಂಜಪ್ಪ | ವೀರಶೈವ ಅಧ್ಯಯನ ಸಂಸ್ಥೆ, ಶ್ರೀ ತೋಂಟದಾರ್ಯ ಸಂಸ್ಥಾನ ಮಠ, ಗದಗ | ೧೯೭೮ |
| ೬. ಮಿರ್ಜಾ ಗಾಲಿಬ್ | ಭಾರತ-ಭಾರತಿ ಪುಸ್ತಕ ಸಂಪದ, ಬೆಂಗಳೂರು-೧೯ | ೧೯೭೯ |
| ೭. ಮಹಾದೇವಿ | ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ ೧೯೮೨, ೨೦೦೩ | |
| ೮. ಅಲ್ಲಮ ಪ್ರಭು ೧೯೮೯ | ಬಸವ ಸಮಿತಿ, ಬೆಂಗಳೂರು | |

ಸಂಪಾದಿತ ಕೃತಿಗಳು:

| | | |
|---|---|---|
| ೧. ಸುಬೋಧ ಸಾರ | | ೧೯೩೬, ೫೧ |
| ೨. ಶ್ರೀಕಾರ | ಕರ್ನಾಟಕ ಸಾಹಿತ್ಯ ಮಂದಿರ, ಹೈದರಾಬಾದ | ೧೯೫೪ |
| ೩. ಪ್ರಬಂಧ ಮಾಲೆ | ಕರ್ನಾಟಕ ಸಾಹಿತ್ಯ ಮಂದಿರ, ಹೈದರಾಬಾದ | ೧೯೫೪ |
| ೪. ಪದ್ಯ ರತ್ನಾಕಾರ | | |
| ೫. ಮಹಾತ್ಮಾ ಕನಕದಾಸ | ರಾಜ್ಯಸಮಿತಿ, ಶ್ರೀ ಕನಕದಾಸರ ನಾಲ್ಕನೇ ಪ್ರಶಸ್ತಿ ಶತಮಾನೋತ್ಸವ, ಬೆಂಗಳೂರು | ೧೯೬೫ |
| ೬. ಶರಣ ಪ್ರಸಾದ | ನೃಪತುಂಗ ಪ್ರಕಾಶನ, ಕಲಬುರ್ಗಿ | ೧೯೬೯ |
| ೭. ಸಿದ್ಧಗಂಗಾಶ್ರೀ | ಶ್ರೀ ಮನ್ನಿರಂಜನ ಪ್ರಣವಸ್ವರೂಪಿ ಡಾ. ಶಿವಕುಮಾರ ಸ್ವಾಮಿಗಳ ಅಭಿನಂದನ ಗ್ರಂಥ ಸಮಿತಿ | ೧೯೮೧ |



| | | |
|---|---|---|
| ೮. ಮಣಿಹ | ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ (ರಿ) ೫೪ 'ಅರವಿಂದ' ಒನೆಯ ಅಡ್ಡಬೀದಿ, ಗವಿಪುರಂ ವಿಸ್ತರಣ, ಬೆಂಗಳೂರು | ೧೯೮೨ |
| ೯. ಬಸವದರ್ಶನ (ಹಿಂದಿ) | ಬಸವ ಸಮಿತಿ, ಬೆಂಗಳೂರು | ೧೯೮೩ |
| ೧೦. ಬಸವ ಮತ್ತು ದಲಿತೋದಯ | ಬಸವ ಸಮಿತಿ, ಬೆಂಗಳೂರು | ೫ |
| ೧೧. ಬಸವ ಮತ್ತು ವಿಚಾರವಾದ | ಬಸವ ಸಮಿತಿ, ಬೆಂಗಳೂರು | ೧೯೮೪ |
| ೧೨. ಮಳೆಯರಾಜ ಚಾರಿತ್ರ್ಯ ೧೯೮೯ | ಶ್ರೀಗಿರಿ ಪ್ರಕಾಶನ, ಬೆಂಗಳೂರು | |

ಇತರ ಕೃತಿಗಳು:

| | | |
|---|---|---|
| ೧. ವಿಕಾಸವಾಣಿ | ಸಹಜೀವನ ಪ್ರಕಾಶನ, ಕಾಚಿಗೂಡಾ, ಹೈದರಾಬಾದ | ೧೯೫೫ |
| ೨. ಗ್ರಾಮ ಸ್ವರಾಜ್ಯ | ಸಹ್ಯಾದ್ರಿ ಪ್ರಕಾಶನ | ೧೯೮೨ |
| ೩. ಚಿಂತನ ಲಹರಿ | ಶ್ರೀಗಿರಿ ಪ್ರಕಾಸನ, ಬೆಂಗಳೂರು, | ೧೯೮೯ |
| ೪. ಶರಣಸರಣಿ | ತರಳಬಾಳು ಪ್ರಕಾಶನ, ಸಿರಿಗೆರೆ | ೧೯೯೨ |

ಅನುವಾದಗಳು

| | | |
|---|---|---|
| ೧. ನಜೀರ್ ಅಕಬರಾಬಾದಿ | ಸಾಹಿತ್ಯ ಅಕಾಡೆಮಿ, ನವದೆಹಲಿ | ೧೯೭೮ |
| ೨. ಒಂದು ಊರಿನ ಕತೆ | | |

## ಡಾ. ಸಿದ್ಧಯ್ಯ ಪುರಾಣಿಕರ ಬಗ್ಗೆ ಪ್ರಕಟಿತ ಕೃತಿಗಳು

೧. ಕಾವ್ಯಶ್ರೀ ಕಾವ್ಯಾನಂದ — ಸತ್ಯಾನಂದ, ಮೇಘಮಿತ್ರ ಸಂಭಾವನಾ ಗ್ರಂಥ
ಕಾವ್ಯಾನಂದ ಸಮಿತಿ ಬಿಜಾಪೂರ

೧೯೬೯

೨. ಜೀವನ ವಿಕಾಸ — ಸಂ. ಸಹ ನಿರ್ದೇಶಕರು, ಶಿಕ್ಷಣ ಇಲಾಖೆ,
ವಿಶೇಷ ಸಂಚಿಕೆ — ಕಲಬುರ್ಗಿ, ಸಂಪುಟ೬, ಸಂಚಿಕೆ ೮-೯

೧೯೭೩

೩. ಕಾವ್ಯಾನಂದ — ಮಿರ್ಜಿ ಅಣ್ಣಾರಾಯ, ಕೃಷ್ಣಕೊಲ್ಲಾರ
ಕುಲಕರ್ಣಿ, ಚಂದ್ರಗಂಗಾ ಜ್ಞಾನಪೀಠ,
ಶೇಡಬಾಳ ೧೯೭೩

೪. ಕಾವ್ಯಾನಂದ — ಸಾ.ಶಿ. ಮರುಳಯ್ಯ, ಸಿದ್ಧಯ್ಯ ಪುರಾಣಿಕರ
ಅಭಿನಂದನ ಸಮಿತಿ, ಚಾಮರಾಜಪೇಟೆ,
ಬೆಂಗಳೂರು-೧೮ ೧೯೮೧

೫. ಸಹೃದಯ — ಟಿ.ಆರ್. ಮಹದೇವಯ್ಯ, ಪುರಾಣಿಕರ
ಅಭಿನಂದನಾ ಸಮಿತಿ, ಬೆಂಗಳೂರು-೧೮ ೧೯೮೧

೬. ಸಾಹಿತಿಗಳ ಸಂಗದಲ್ಲಿ — ಲೇ : ದೇಜಗೌ ೧೯೮೧

೭. ಕಾವ್ಯಾನಂದರ ಕಾವ್ಯ — ವೃಷಭೇಂದ್ರ ಅರ್ಕಸಾಲಿ, ಸಂಕ್ರಮಣ
ಪ್ರಕಾಶನ, ಧಾರವಾಡ ೧೯೮೭

೮. ಸಿದ್ಧಯ್ಯ ಪುರಾಣಿಕ — ಜಿ.ಎಸ್. ಸಿದ್ಧಲಿಂಗಯ್ಯ, ವೀರಶೈವ
ಅಧ್ಯಯನ ಸಂಸ್ಥೆ, ಗದಗ ೧೯೯೫

೯. ಡಾ. ಸಿದ್ಧಯ್ಯ ಪುರಾಣಿಕರ — ಎನ್.ಬಿ. ಬುಳ್ಳಾ, ಜ್ಯೋತಿಶ್ರೀ
ಪ್ರಕಾಶನ,
ಕೃತಿಗಳು — ಮಾಣಿಕೇಶ್ವರಿ ನಗರ, ಗುಲಬರ್ಗಾ ೧೯೯೯

೧೦. ಕಾವ್ಯಾನಂದ — ಡಾ. ಚೆನ್ನಬಸವ ಹಿರೇಮಠ